ಗುರುವಾರ, ಜೂನ್ 15, 2023 | ₹ 7.00
www.prajavani.net
prajavani.net prajavani prajavani prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ನೋಟ...
ಮುಂಬೈನಲ್ಲಿ ನಡೆದ ಕಾರ್ಯಕ್ರಮದಲ್ಲಿ ಬಾಲಿವುಡ್ ನಟಿ ತಮನ್ನಾ ಭಾಟಿಯಾ ಕಾಣಿಸಿಕೊಂಡಿದ್ದು ಹೀಗೆ.





Mokshith B L — NEET SCORE-650 — Ap. No. 230410151225
Veeresh M G — NEET SCORE-647 — Ap. No. 230410270170
Muthu Raj B K — NEET SCORE-646 — Ap. No. 230410209433
Kushal Gowda M R — NEET SCORE-645 — Ap. No. 230410265567
Sushant S Labba — NEET SCORE-643 — Ap. No. 230410124373
Prajwal K — NEET SCORE-639 — Ap. No. 230410159240
Jeevan G R — NEET SCORE-635 — Ap. No. 230410279525
Keerthan Kumar K — NEET SCORE-634 — Ap. No. 230410169874
Vilas Gowda M V — NEET SCORE-632 — Ap. No. 230410227881



Hitesh H D — NEET SCORE-631 — Ap. No. 230410263407
S Sahana — NEET SCORE-629 — Ap. No. 230410383357
Tilaka P — NEET SCORE-628 — Ap. No. 230410105072
Mahesh Gowda P M — NEET SCORE-625 — Ap. No. 230410186355
Hrushitha B — NEET SCORE-625 — Ap. No. 230410153454
Omkar M Pujeri — NEET SCORE-624 — Ap. No. 230410226425
Tejas M N — NEET SCORE-617 — Ap. No. 230410073025
Nischal K M — NEET SCORE-616 — Ap. No. 230410277435
Naveen Kumar M — NEET SCORE-615 — Ap. No. 230410027348



Shivanand M — NEET SCORE-615 — Ap. No. 230410193765
Tharun Gowtham H R — NEET SCORE-615 — Ap. No. 230410167316
Kushal G M — NEET SCORE-613 — Ap. No. 230410282307
Shashank S Patil — NEET SCORE-613 — Ap. No. 230410299986
Sanketh N T — NEET SCORE-611 — Ap. No. 230410181468
Yashaswini D — NEET SCORE-610 — Ap. No. 230410169676
Nikhil S Katageri — NEET SCORE-609 — Ap. No. 230410208120
K Sanjay — NEET SCORE-607 — Ap. No. 230410152046
Lavakumar S — NEET SCORE-607 — 230410110298



Prashant Labba — NEET SCORE-607 — Ap. No. 230410124369
Shamanthakamani — NEET SCORE-606 — Ap. No. 230410200760
Yuktha Padmanabh — NEET SCORE-605 — Ap. No. 230410148105
Harshitha H V — NEET SCORE-603 — Ap. No. 230411584163
Radhikarani K — NEET SCORE-602 — Ap. No. 230410355034
Vaibhavi — NEET SCORE-601 — 230410287950
Aryan H M — NEET SCORE-600 — Ap. No. 230410175598
Karthik K P — NEET SCORE-600 — Ap. No. 230410339512
Roshan P — NEET SCORE-600 — Ap. No. 230410089769



B Sanjay Patil — NEET SCORE-596 — Ap. No. 230410143292
Darshan G — NEET SCORE-596 — Ap. No. 230410122200
Gagandeep T P — NEET SCORE-596 — Ap. No. 230410170981
Sneha V — NEET SCORE-596 — Ap. No. 230410096612
Rajashree — NEET SCORE-595 — Ap. No. 230410345959
Marutiesh H N — NEET SCORE-595 — Ap. No. 230410273032
Meghana P — NEET SCORE-593 — Ap. No. 230410169018
Sanketh S H — NEET SCORE-593 — Ap. No. 230410180461
Shamith H G — NEET SCORE-593 — Ap. No. 230410143113



Umesh G — NEET SCORE-593 — Ap. No. 230410276863
Akarsh Reddy S — NEET SCORE-592 — Ap. No. 230410170883
Srusti S T — NEET SCORE-591 — Ap. No. 230410190243
Srujan Gowda G — NEET SCORE-590 — Ap. No. 230410204770
Yashaswini H J — NEET SCORE-589 — Ap. No. 230410261209
Chandana Nagaraj — NEET SCORE-589 — Ap. No. 230410352916
Ankitha Varsha — NEET SCORE-589 — Ap. No. 230410193983
Tarun U — NEET SCORE-587 — Ap. No. 230410159941
Bindushree M S — NEET SCORE-587 — Ap. No. 230410186015



Akash B A — NEET SCORE-587 — Ap. No. 230411405624
Chetan B — NEET SCORE-585 — Ap. No. 230410238072
Sneha Kanade — NEET SCORE-584 — Ap. No. 23041068688
Nadeem Salim Attar — NEET SCORE-584 — Ap. No. 230410173481
Badrivishal Ellur — NEET SCORE-582 — Ap. No. 230410127266
Shruthavachan K V — NEET SCORE-582 — Ap. No. 230410119460
Spoorthi H S — NEET SCORE-582 — Ap. No. 230410374626
Dhanush S Gowda — NEET SCORE-581 — Ap. No. 230410130485
Vishwanathgouda — NEET SCORE-579 — Ap. No. 230410167003



Sneha S — NEET SCORE-579 — Ap. No. 230410160549
Nagaraj V Reddy — NEET SCORE-578 — Ap. No. 230410267754
Bhoomika V — NEET SCORE-577 — Ap. No. 230410158418
Yamini B M — NEET SCORE-577 — Ap. No. 230410312165
Varsha S — NEET SCORE-577 — Ap. No. 230410134975
Nitesh Kumar — NEET SCORE-576 — Ap. No. 230410197151
Thanmayasree D M — NEET SCORE-576 — Ap. No. 230410137327
Poornashree K J — NEET SCORE-576 — Ap. No. 230410227711
Ravi Tej Gowda — NEET SCORE-575 — Ap. No. 230410163906



Abhishek H — NEET SCORE-575 — Ap. No. 230410147536
Bhuvan L — NEET SCORE-575 — Ap. No. 230410372121
Shrishail Mahamani — NEET SCORE-575 — Ap. No. 230410215199
Spoorthi G C — NEET SCORE-575 — Ap. No. 230410356470
Monalisa N — NEET SCORE-574 — Ap. No. 230410264214
Nandita S Patil — NEET SCORE-574 — Ap. No. 230410183814
Yashas M — NEET SCORE-574 — Ap. No. 230410138966
A Abhishek — NEET SCORE-574 — Ap. No. 230410172837
Shreya Aroli — NEET SCORE-574 — Ap. No. 230410199591



P Chetan — NEET SCORE-574 — Ap. No. 230410280042
Prajwal Gowda K — NEET SCORE-573 — Ap. No. 230410190966
Vikas Mulawad — NEET SCORE-573 — Ap. No. 230410245812
K Hiba — NEET SCORE-573 — Ap. No. 230410195530
Panchami L — NEET SCORE-572 — Ap. No. 230410222369
Bharath Kumar D N — NEET SCORE-572 — Ap. No. 230410204897
Sanjana Gumaste — NEET SCORE-572 — Ap. No. 230410133665
Shraddha Patil — NEET SCORE-572 — Ap. No. 230410190066
Jashwanth G B R — NEET SCORE-571 — Ap. No. 230410171726



Dhanyata S M — NEET SCORE-571 — Ap. No. 230410190255
Lipi Hegde — NEET SCORE-571 — Ap. No. 230410264507
Aparna B S — NEET SCORE-570 — Ap. No. 230410248265
Gireesh S Hiremath — NEET SCORE-569 — Ap. No. 230410093391
Vasanth Gowda N — NEET SCORE-569 — Ap. No. 230410107374
Vinitha K R — NEET SCORE-569 — Ap. No. 230410178402
Harsha G S — NEET SCORE-568 — Ap. No. 230410158138
Siddharth M M — NEET SCORE-568 — Ap. No. 230410153173
Manjunath K S — NEET SCORE-568 — Ap. No. 230410222774

Continued on Page 13...

Ap. No. (Application Number)

PARISHRAMA NEET ACADEMY ಪರಿಶ್ರಮ ನೀಟ್ ಅಕಾಡೆಮಿ

Many more students have secured above 500. Due to space constraint we are displaying limited photos of our rank holders.
Please visit our website for more details. www.parishramaneetacademy.com

Parishrama NEET Academy | parishramaneet | 080-45912222 / 080-24413400 / 97314 04974

ಗುರುವಾರ, ಜೂನ್ 15, 2023 | ₹ 7.00
www.prajavani.net
prajavani.net prajavani prajavani prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಮುಗುಳು ನಗೆ...

ಮುಂಬೈನಲ್ಲಿ ನಡೆದ ಸಿನಿಮಾ ಟ್ರೇಲರ್ ಬಿಡುಗಡೆ ಸಮಾರಂಭದಲ್ಲಿ ಬಾಲಿವುಡ್ ನಟ ಕಂಗನಾ ರನೌತ್



ಗುರುವಾರ, ಜೂನ್ 15, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 165 | ಪುಟ 20
www.prajavani.net
prajavani.net | prajavani | prajavani | prajavani

ಪ್ರಜಾವಾಣಿ @75
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
63, 228 ▲	18,756 ▲	₹61,170 (ಬೆಂಗಳೂರು) ▼	₹74,100 (ಬೆಂಗಳೂರು) ▼	82.10 ▲

ಮುಖ್ಯಮಂತ್ರಿ ಸಿದ್ದರಾಮಯ್ಯ ಆಕ್ರೋಶ • ಪ್ರತಿಭಟನಾ ಪತ್ರ ಬರೆಯುವ ಎಚ್ಚರಿಕೆ

ಅನ್ನಭಾಗ್ಯ ಹತ್ತಿಕ್ಕಲು ಕೇಂದ್ರದ ಷಡ್ಯಂತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅನ್ನಭಾಗ್ಯ' ಯೋಜನೆಯಡಿ ಹೆಚ್ಚುವರಿ ತಲಾ 5 ಕೆ.ಜಿ ಅಕ್ಕಿ ವಿತರಣೆಗಾಗಿ ತಿಂಗಳಿಗೆ 2.28 ಲಕ್ಷ ಟನ್ ಅಕ್ಕಿ ನೀಡಲು ಒಪ್ಪಿದ್ದ ಭಾರತೀಯ ಆಹಾರ ನಿಗಮ ಈಗ ಹಿಂದೇಟು ಹಾಕಿದೆ. ಇದಕ್ಕೆ ಬಿಜೆಪಿಯ ಬಡವರ ವಿರೋಧಿ ಧೋರಣೆಯೇ ಕಾರಣ. ಈ ಸಂಬಂಧ ಕೇಂದ್ರಕ್ಕೆ ಪ್ರತಿಭಟನಾ ಪತ್ರ ಬರೆಯಬೇಕಾಗುತ್ತದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಎಚ್ಚರಿಸಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ನಿಗಮವು 7 ಲಕ್ಷ ಟನ್ ಅಕ್ಕಿ ಇಟ್ಟುಕೊಂಡು ಕೊಡುವುದಿಲ್ಲ ಎನ್ನುತ್ತಿದೆ. ಅನ್ನಭಾಗ್ಯ ಯೋಜನೆಯಿಂದ ಕಾಂಗ್ರೆಸ್‌ಗೆ ಒಳ್ಳೆಯ ಹೆಸರು ಬರುತ್ತದೆ. ಬಡವರ ಕಲ್ಯಾಣ ಆಗುತ್ತದೆ. ಅದನ್ನು ತಪ್ಪಿಸಬೇಕು ಎಂದೇ ಕೇಂದ್ರ ಸರ್ಕಾರ ರಾಜಕಾರಣ ಮಾಡುತ್ತಿದೆ' ಎಂದು ದೂರಿದರು.

ಭಾರತೀಯ ಆಹಾರ ನಿಗಮ ಅಕ್ಕಿ ಕೊಡುವುದಾಗಿ ತಿಳಿಸಿದ್ದರಿಂದ ನಾವು ಜುಲೈ 1 ರಿಂದಲೇ ಬಿಪಿಎಲ್ ಮತ್ತು ಅಂತ್ಯೋದಯ ಕಾರ್ಡ್‌ದಾರರಿಗೆ ತಲಾ 10 ಕೆ.ಜಿ ಅಕ್ಕಿ ಕೊಡುವುದಾಗಿ ಹೇಳಿದ್ದೆವು. ಈಗ ಕೊಡುವುದಿಲ್ಲ ಎನ್ನುತ್ತಿದೆ.



> **ಆಹಾರ ನಿಗಮದವರು ಮೊದಲೇ ಕೊಡುವುದಿಲ್ಲ ಎಂದು ಹೇಳಿದ್ದರೆ ನಾವು ಬೇರೆ ಕಡೆಯಿಂದ ಖರೀದಿಸುತ್ತಿದ್ದೆವು. ಅವರು ಏನೇ ಮಾಡಿದರೂ ಹೆಚ್ಚುವರಿ ಅಕ್ಕಿ ಕೊಡಲು ಪ್ರಯತ್ನ ಮಾಡುತ್ತೇವೆ**
> **ಸಿದ್ದರಾಮಯ್ಯ,** ಮುಖ್ಯಮಂತ್ರಿ

9ನೇ ಪುಟ ನೋಡಿ

'ಅಕ್ಕಿ ಸ್ಥಗಿತ: ಯಾವುದೇ ರಾಜಕೀಯ ಇಲ್ಲ'

ನವದೆಹಲಿ: ಕೇಂದ್ರ ಸರ್ಕಾರವು ಮುಕ್ತ ಮಾರುಕಟ್ಟೆ ಮಾರಾಟ ಯೋಜನೆ ಅಡಿಯಲ್ಲಿ ರಾಜ್ಯ ಸರ್ಕಾರಗಳಿಗೆ ಅಕ್ಕಿ ಮತ್ತು ಗೋಧಿಯ ಮಾರಾಟ ಸ್ಥಗಿತಗೊಳಿಸಲು ಮುಂಗಾರು ವಿಳಂಬ ಕಾರಣ ಎಂದು ಆಹಾರ ಮತ್ತು ಗ್ರಾಹಕ ವ್ಯವಹಾರಗಳ ಸಚಿವಾಲಯದ ಅಧಿಕಾರಿಗಳು ತಿಳಿಸಿದ್ದಾರೆ. ಹಣದುಬ್ಬರ ಪ್ರವೃತ್ತಿ ನಿಯಂತ್ರಿಸಲು, ಗೋಧಿ ಹಾಗೂ ಅಕ್ಕಿಯ ಏರುತ್ತಿರುವ ಬೆಲೆಯನ್ನು ನಿಯಂತ್ರಿಸಲು ಸಹ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಅವರು ಸಮಜಾಯಿಷಿ ನೀಡಿದ್ದಾರೆ.

ಕೆಲವು ರಾಜ್ಯಗಳಲ್ಲಿ ಈಗಷ್ಟೇ ಮುಂಗಾರು ಪ್ರವೇಶವಾಗಿದೆ. ಇದರಿಂದಾಗಿ, ಅಕ್ಕಿ ಉತ್ಪಾದಿಸುವ ರಾಜ್ಯಗಳಲ್ಲಿ ಭತ್ತ ಬಿತ್ತನೆ ವಿಳಂಬವಾಗಿದೆ. ದೇಶದ ಒಟ್ಟು ಅಕ್ಕಿ ಉತ್ಪಾದನೆಯ ಶೇ 80ರಷ್ಟನ್ನು ಮುಂಗಾರು ಹಂಗಾಮಿನಲ್ಲೇ ಬೆಳೆಯಲಾಗುತ್ತದೆ. ದಕ್ಷಿಣದ ಕೆಲವು ರಾಜ್ಯಗಳಲ್ಲಿ ಈಗಾಗಲೇ ಬಿತ್ತನೆ ಆರಂಭವಾಗಬೇಕಿತ್ತು. ಮಳೆ ಬಾರದ ಕಾರಣ ಇನ್ನೂ ಈ ಕಾರ್ಯ ಆರಂಭವಾಗಿಲ್ಲ. ಉತ್ತರದ ರಾಜ್ಯಗಳಲ್ಲಿ ಮುಂದಿನ ತಿಂಗಳಿಂದ ಬಿತ್ತನೆ ಆರಂಭವಾಗಲಿದೆ ಎಂದು ಸಚಿವಾಲಯದ ಅಧಿಕಾರಿಯೊಬ್ಬರು ತಿಳಿಸಿದರು. 'ಈ ವರ್ಷ ಮುಂಗಾರು ಕುಂಠಿತಗೊಂಡರೆ, ಸಾರ್ವಜನಿಕ ವಿತರಣಾ ವ್ಯವಸ್ಥೆಯಡಿ ರಾಜ್ಯಗಳಿಗೆ ವಿತರಿಸಲು ಅಕ್ಕಿ ದಾಸ್ತಾನು ಮಾಡುವ ಅಗತ್ಯ ಅಗತ್ಯವಿದೆ. ಆದ್ದರಿಂದ ಮುನ್ನೆಚ್ಚರಿಕೆಯಾಗಿ, ರಾಜ್ಯಗಳಿಗೆ ಅಕ್ಕಿ ಮತ್ತು ಗೋಧಿ ಮಾರಾಟ ಸ್ಥಗಿತಗೊಳಿಸಲಾಗಿದೆ' ಎಂದು ಅವರು ಸ್ಪಷ್ಟಪಡಿಸಿದರು. ಈಶಾನ್ಯದ ರಾಜ್ಯಗಳಿಗೆ ಹೊರತುಪಡಿಸಿ ಎಲ್ಲ ರಾಜ್ಯಗಳಿಗೆ ಆಹಾರ ಧಾನ್ಯಗಳ ಮಾರಾಟ ಸ್ಥಗಿತಗೊಳಿಸಲಾಗಿದೆ. ಇದರಲ್ಲಿ ಯಾವುದೇ ರಾಜಕೀಯ ಇಲ್ಲ ಎಂದೂ ಅವರು ಹೇಳಿದರು.

ಕೇಂದ್ರ ರಾಜ್ಯಗಳಿಗೆ ಬರೆದ ಪತ್ರವೇನು?

ಜೂನ್ 13 ರಂದು ಕೇಂದ್ರ ಆಹಾರ ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆ ಪತ್ರವೊಂದನ್ನು ಬರೆದಿತ್ತು. ಅದರಲ್ಲಿ ಈಶಾನ್ಯ ರಾಜ್ಯಗಳನ್ನು ಹೊರತುಪಡಿಸಿ ಉಳಿದ ರಾಜ್ಯಗಳು ಹೆಚ್ಚುವರಿ ಅಕ್ಕಿ ಮತ್ತು ಗೋಧಿಯನ್ನು 'ಮುಕ್ತ ಮಾರುಕಟ್ಟೆಯ ಮಾರಾಟ ಯೋಜನೆ'ಯಡಿ (ಒಎಂಎಸ್‌ಎಸ್‌ಡಿ) ಖರೀದಿಸಲು ಅವಕಾಶ ಇಲ್ಲ' ಎಂದುತಿಳಿಸಿತ್ತು. ಈ ಪತ್ರವನ್ನು ಸಿದ್ದರಾಮಯ್ಯ ಪ್ರದರ್ಶಿಸಿದರು.

ಇಂದು ಸಿಇಟಿ ಫಲಿತಾಂಶ

ಬೆಂಗಳೂರು: 2023–24ನೇ ಸಾಲಿನ ವಿವಿಧ ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ಕಳೆದ ತಿಂಗಳು ನಡೆದಿದ್ದ ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಇಟಿ) ಫಲಿತಾಂಶ ಜೂನ್ 15ರಂದು ಪ್ರಕಟವಾಗಲಿದೆ.

ಸಿಇಟಿ ಪರೀಕ್ಷೆ ಮೇ 20 ಹಾಗೂ 21ರಂದು ರಾಜ್ಯದ 592 ಪರೀಕ್ಷಾ ಕೇಂದ್ರಗಳಲ್ಲಿ ನಡೆದಿತ್ತು.

2.60 ಲಕ್ಷ ವಿದ್ಯಾರ್ಥಿಗಳು ಪರೀಕ್ಷೆ ತೆಗೆದುಕೊಂಡಿದ್ದರು. ಫಲಿತಾಂಶವು ಗುರುವಾರ ಬೆಳಿಗ್ಗೆ 11ರ ನಂತರ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಜಾಲತಾಣ http://kea.kar.nic.inನಲ್ಲಿ ದೊರೆಯಲಿದೆ ಎಂದು ಕೆಇಎ ಕಾರ್ಯನಿರ್ವಾಹಕ ನಿರ್ದೇಶಕಿ ಎಸ್.ರಮ್ಯಾ ಹೇಳಿದ್ದಾರೆ.

'ಗೃಹ ಜ್ಯೋತಿ': ನೋಂದಣಿ 18ರಿಂದ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉಚಿತವಿದ್ಯುತ್‌ಪೂರೈಸುವ 'ಗೃಹಜ್ಯೋತಿ' ಯೋಜನೆಯನೋಂದಣಿ ಇದೇ 18ರಿಂದ ಆರಂಭವಾಗಲಿದೆ. ಈ ಯೋಜನೆಯ ಲಾಭ ಪಡೆಯಲು ಇಚ್ಛಿಸುವ ಫಲಾನುಭವಿಗಳು ವಿಶೇಷವಾಗಿ ಸೃಜಿಸಲಾಗಿರುವ ಸೇವಾ ಸಿಂಧು ಪೋರ್ಟಲ್‌ನಲ್ಲಿ (https://sevasindhugs.karnataka.gov.in/gruhajyothi) ನೋಂದಾಯಿಸಬೇಕು. ಈ ತಂತ್ರಾಂಶವನ್ನು ಮೊಬೈಲ್ ಫೋನ್, ಕಂಪ್ಯೂಟರ್, ಲ್ಯಾಪ್‌ಟ್ಯಾಪ್‌ನಲ್ಲಿಯೂ ಬಳಸಬಹುದಾಗಿದೆ.

ಫಲಾನುಭವಿಗಳು ಆಧಾರ್ ಕಾರ್ಡ್, ವಿದ್ಯುತ್ ಖಾತೆ ಸಂಖ್ಯೆಯ ಮಾಹಿತಿಯನ್ನು ನೋಂದಣಿ ವೇಳೆ ನೀಡಬೇಕು. ಬೆಂಗಳೂರು ಒನ್, ಗ್ರಾಮ ಒನ್, ಕರ್ನಾಟಕ ಒನ್ ಕೇಂದ್ರಗಳಲ್ಲಿ ಅಥವಾ ಯಾವುದೇ ಎಸ್ಕಾಂಗಳ ಸ್ಥಳೀಯ ಕಚೇರಿಗಳಲ್ಲಿಯೂ ನೋಂದಾಯಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಸಂಬಂಧಿಸಿದ ಎಸ್ಕಾಂಗಳ ಸ್ಥಳೀಯ ಕಚೇರಿಯನ್ನು ಸಂಪರ್ಕಿಸಬಹುದು ಅಥವಾ 24x7 ಸಹಾಯವಾಣಿ ಸಂಖ್ಯೆ 1912ಕ್ಕೆ ಕರೆ ಮಾಡಬಹುದು ಎಂದು ಇಂಧನ ಇಲಾಖೆ ತಿಳಿಸಿದೆ. ಗೃಹ ಜ್ಯೋತಿ ಯೋಜನೆಯಡಿ ಪ್ರತಿ ಮನೆಗೆ ಪ್ರತಿ ತಿಂಗಳಿಗೆ ಗರಿಷ್ಠ 200 ಯೂನಿಟ್‌ವರೆಗಿನ ಬಳಕೆಯ ಮಿತಿಯಲ್ಲಿ, ಗ್ರಾಹಕರು ಮಾಸಿಕ ಸರಾಸರಿ ಬಳಸಿದ (2022-23ರ ಆರ್ಥಿಕ ವರ್ಷದಲ್ಲಿ ವಿದ್ಯುತ್ ಬಳಕೆಯ ಆಧಾರದನ್ವಯ) ಯೂನಿಟ್‌ಗಳ ಮೇಲೆ ಶೇ 10 ರಷ್ಟು ಹೆಚ್ಚಿನ ಬಳಕೆಯ ಮಿತಿಗೆ ಅರ್ಹರಿರುತ್ತಾರೆ. ರಾಜ್ಯದ 2.14 ಕೋಟಿ ಗೃಹ ಬಳಕೆ ಗ್ರಾಹಕರಿಗೆ ಇದರಿಂದ ಅನುಕೂಲವಾಗಲಿದೆ. ಆಗಸ್ಟ್1ರಿಂದ (ಜುಲೈ ತಿಂಗಳ ಬಿಲ್) ಯೋಜನೆ ಜಾರಿಗೆ ಬರಲಿದೆ.



ಆಸರೆ ಬಿಪೊರ್‌ಜಾಯ್ ಚಂಡಮಾರುತ ಅಪ್ಪಳಿಸುವ ಮುನ್ಸೂಚನೆ ಹಿನ್ನೆಲೆಯಲ್ಲಿ ತಾತ್ಕಾಲಿಕ ಶಿಬಿರಕ್ಕೆ ಸ್ಥಳಾಂತರಗೊಳ್ಳುತ್ತಿದ್ದ ಮಗುವನ್ನು ಟ್ರ್ಯಾಕ್ಟರ್‌ನಿಂದ ಕೆಳಗಿಳಿಸಲು ಬಿಎಸ್‌ಎಫ್ ಅಧಿಕಾರಿಯೊಬ್ಬರು ನೆರವಾದರು –ಪಿಟಿಐ ಚಿತ್ರ

ತಮಿಳುನಾಡು ಸಚಿವ ಸೆಂಥಿಲ್ ನ್ಯಾಯಾಂಗ ವಶಕ್ಕೆ

ಚೆನ್ನೈ (ಪಿಟಿಐ): ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆ (ಪಿಎಂಎಲ್‌ಎ) ಅಡಿ ಜಾರಿ ನಿರ್ದೇಶನಾಲಯದಿಂದ (ಇ.ಡಿ) ಬುಧವಾರ ಬಂಧನಕ್ಕೆ ಒಳಗಾದ ತಮಿಳುನಾಡಿನ ಇಂಧನ, ಅಬಕಾರಿ ಸಚಿವ ವಿ.ಸೆಂಥಿಲ್ ಬಾಲಾಜಿ ಅವರನ್ನು ಇದೇ 28ರವರೆಗೆ ನ್ಯಾಯಾಂಗ ವಶಕ್ಕೆ ಒಪ್ಪಿಸಿ ನ್ಯಾಯಾಲಯ ಆದೇಶಿಸಿದೆ.

ಇದರೊಂದಿಗೆ ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಸಂಪುಟದ ಸಚಿವರೊಬ್ಬರು ಇದೇ ಮೊದಲ ಬಾರಿಗೆ ಕೇಂದ್ರೀಯ ತನಿಖಾ ಸಂಸ್ಥೆಯಿಂದ ಬಂಧನಕ್ಕೆ ಒಳಗಾದಂತಾಗಿದೆ. ಇ.ಡಿ ಅಧಿಕಾರಿಗಳು ಮಂಗಳವಾರ ಬೆಳಿಗ್ಗೆಯಿಂದಲೇ ಬಾಲಾಜಿ ಅವರ ಮನೆಯಲ್ಲಿ ಶೋಧ ನಡೆಸಿ, ಬುಧವಾರ ನಸುಕಿನ 1.30ರ ಸುಮಾರಿಗೆ ಬಂಧಿಸಿದರು. ಇದರ ಬೆನ್ನಲ್ಲೇ ಅನಾರೋಗ್ಯ ಕಾರಣ ಬಾಲಾಜಿ ಅವರನ್ನು ನಗರದ ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಯಿತು. ಆದಷ್ಟು ಬೇಗ ಬೈಪಾಸ್ ಶಸ್ತ್ರಚಿಕಿತ್ಸೆ ಮಾಡಿಸಿಕೊಳ್ಳುವಂತೆ ವೈದ್ಯರು ಅವರಿಗೆ ಸಲಹೆ ನೀಡಿದ್ದಾರೆ.

8ನೇ ಪುಟ ನೋಡಿ

₹500 ಕೋಟಿ ಭೂಮಿ ಖಾಸಗಿ ಪಾಲು

ಚುನಾವಣೆಗೆ ಮುನ್ನ ಆದೇಶ • ಸರ್ಕಾರಿ ಭೂಮಿ ಕೈಬಿಟ್ಟ 'ಭೂ ನ್ಯಾಯ'ಮಂಡಳಿ

• ಆರ್. ಮಂಜುನಾಥ್

ಬೆಂಗಳೂರು: 'ಸರ್ಕಾರಿ ಖರಾಬು' ಎಂದು ಸರ್ಕಾರಿ ದಾಖಲೆಗಳಲ್ಲಿ ಉಲ್ಲೇಖ ಹಾಗೂ ಹಲವಾರು ಆದೇಶಗಳಿದ್ದರೂ ಪಂತರಪಾಳ್ಯ ಬಳಿಯ ಅಂದಾಜು ₹500 ಕೋಟಿ ಮೌಲ್ಯದ ಜಮೀನನ್ನು ಭೂ ನ್ಯಾಯಮಂಡಳಿಯು ಖಾಸಗಿಯವರ ಸ್ವತ್ತು ಎಂದು ಆದೇಶ ಹೊರಡಿಸಿದೆ.

ಮೈಸೂರು ರಸ್ತೆಯ ಪಂತರಪಾಳ್ಯ ಸಮೀಪವಿರುವ 24 ಎಕರೆ 37 ಗುಂಟೆ ಜಮೀನನ್ನು ಈ ಹಿಂದೆ ಹಲವಾರು ಬಾರಿ ಸರ್ಕಾರದ ಸ್ವತ್ತೆಂದು ತೀರ್ಮಾನಿಸಲಾಗಿತ್ತು. ಅಲ್ಲದೇ, 2016ರಲ್ಲೇ ಒತ್ತುವರಿ ತೆರವು ಮಾಡಿ, ಸರ್ಕಾರದ ಸ್ವತ್ತು ಎಂದು ಫಲಕ ಹಾಕಲಾಗಿತ್ತು. ವಿಧಾನಸಭೆ ಚುನಾವಣೆಗೆ ಮುನ್ನ ಅಂದರೆ, ಫೆ.27ರಂದು ಭೂ ನ್ಯಾಯಮಂಡಳಿ ವ್ಯತಿರಿಕ್ತ ಆದೇಶ ಹೊರಡಿಸಿದೆ.

ಬೆಂಗಳೂರು ದಕ್ಷಿಣ ತಾಲ್ಲೂಕು ಭೂ ನ್ಯಾಯಮಂಡಳಿ ಅಧ್ಯಕ್ಷರಾಗಿದ್ದ ಉಪವಿಭಾಗಾಧಿಕಾರಿ ಈ ಆದೇಶ ನೀಡಿದ್ದರು. ಆದರೆ, ಬಿಜೆಪಿ ಸರ್ಕಾರದ ಅವಧಿಯಲ್ಲಿ ನಾಮನಿರ್ದೇಶಿತರಾಗಿದ್ದ 4 ಸದಸ್ಯರು ವ್ಯತಿರಿಕ್ತ ಅಭಿಪ್ರಾಯ ನೀಡಿದ್ದರು. ಬಹುಮತದ ಆಧಾರದಲ್ಲಿ ಖಾಸಗಿಯವರಿಗೆ ಈ ಜಮೀನು ನೀಡಲು ತೀರ್ಮಾನಿಸಲಾಗಿದೆ. ಕೆಂಗೇರಿ ಹೋಬಳಿ ಪಂತರಪಾಳ್ಯ ಗ್ರಾಮದ ಸರ್ವೆ ನಂ.47ರಲ್ಲಿ 24 ಎಕರೆ 37 ಗುಂಟೆ ವಿಸ್ತೀರ್ಣದ ಖರಾಬು ಭೂಮಿ ಒತ್ತುವರಿ ಬಗ್ಗೆ ದಕ್ಷಿಣ ತಾಲ್ಲೂಕು ಭೂ ನ್ಯಾಯಮಂಡಳಿ 2016 ವಿಚಾರಣೆ ನಡೆಸಿತ್ತು. ಭೂ ಕಂದಾಯ ನಿಯಮಾವಳಿ 1966ರ ಪ್ರಕಾರ ಬಿ ವರ್ಗದ ಖರಾಬು ಜಮೀನಾಗಿದ್ದು, ಸಾರ್ವಜನಿಕ ಹಿತಾಸಕ್ತಿ ಹೊಂದಿದ್ದು ಎಲ್ಲ ಹಕ್ಕುಗಳು ಸರ್ಕಾರಕ್ಕೆ ಒಳಪಟ್ಟಿರುತ್ತವೆ.



2016ರಲ್ಲಿ ಒತ್ತುವರಿ ತೆರವುಗೊಳಿಸಿದ ನಂತರ ಜಿಲ್ಲಾಡಳಿತ ಅಳವಡಿಸಿದ್ದ ಫಲಕ

ಹೊರಡಿಸಿರುವುದು ಸಂಶಯಕ್ಕೆ ಕಾರಣವಾಗಿದೆ. ಆದರೆ, ಹೊಸ ಸರ್ಕಾರ ಬಂದ ಮೇಲೆ ನಾಮನಿರ್ದೇಶಿತ ಸದಸ್ಯರಿದ್ದ ಭೂ ನ್ಯಾಯಮಂಡಳಿ ಬರ್ಖಾಸ್ತ್ ಆಗಿದೆ.

'ಜಮೀನು ಕಂದಾಯ ದಾಖಲೆ ಪ್ರಕಾರ ಖರಾಬು ಎಂಬುದಾಗಿ ವರ್ಗೀಕರಣ ಆಗಿರುವುದರಿಂದ ಮಂಜೂರು ಮಾಡಲು ಅವಕಾಶ ಇಲ್ಲ' ಎಂದು ಭೂ ನ್ಯಾಯಮಂಡಳಿ ಅಧ್ಯಕ್ಷ ಅಭಿಪ್ರಾಯ ನೀಡಿದ್ದರು.

9ನೇ ಪುಟ ನೋಡಿ

ಉನ್ನತ ತನಿಖೆಗೆ ಒತ್ತಾಯ

'ನೂರಾರು ಕೋಟಿ ಬೆಲೆಬಾಳುವ ಈ ಭೂಮಿಯನ್ನು ಜಿಲ್ಲಾಡಳಿತ 2016ರಲ್ಲಿ ತನ್ನ ವಶಕ್ಕೆ ಪಡೆದುಕೊಂಡಿತ್ತು. ಖಾಸಗಿ ವ್ಯಕ್ತಿ ಹೈಕೋರ್ಟ್‌ಗೆ ಹೋಗಿದ್ದರು. ಯಥಾಸ್ಥಿತಿ ಕಾಪಾಡಿಕೊಳ್ಳಲು ಸೂಚಿಸಿ, ಭೂ ನ್ಯಾಯಮಂಡಳಿ ವಿಚಾರಣೆಗೆ ಸೂಚಿಸಿತ್ತು. ಈ ಸಂದರ್ಭದಲ್ಲೂ ಖಾಸಗಿ ವ್ಯಕ್ತಿ ಶೆಡ್‌ಗಳನ್ನು ಹಾಕಿಕೊಂಡು ಹಣ ಮಾಡಿಕೊಂಡಿದ್ದಾರೆ. ಈ ಬಗ್ಗೆ ವಿಧಾನ ಪರಿಷತ್‌ನಲ್ಲಿ ಚರ್ಚೆಯಾಗಿತ್ತು. ಕಂದಾಯ ಇಲಾಖೆಯ ಅಂದಿನ ಸಚಿವ ಕಾಗೋಡು ತಿಮ್ಮಪ್ಪ, ಸರ್ಕಾರಿ ಖರಾಬು ಭೂಮಿಯನ್ನು ವಶಕ್ಕೆ ಪಡೆಯಲಾಗುತ್ತದೆ' ಎಂದು ಭರವಸೆ ನೀಡಿದ್ದರು. ಆದರೆ, ನಂತರ ರಾಜಕೀಯ ವ್ಯಕ್ತಿಗಳ ಹುನ್ನಾರದಿಂದ ಜಮೀನನ್ನು ಖಾಸಗಿಯವರಿಗೆ ನೀಡಲು ಆದೇಶಿಸಿರುವುದು ಕಾನೂನಿನ ಉಲ್ಲಂಘನೆ. ಈ ಬಗ್ಗೆ ಉನ್ನತ ಮಟ್ಟದ ತನಿಖೆಯಾಗಬೇಕು. ಸರ್ಕಾರ ಕೂಡಲೇ ಕ್ರಮ ಕೈಗೊಳ್ಳಬೇಕು' ಎಂದು ವಿಧಾನ ಪರಿಷತ್ ಮಾಜಿ ಸದಸ್ಯ ಪಿ.ಆರ್. ರಮೇಶ್ ಆಗ್ರಹಿಸಿದರು.

ಮೈ ಶುಗರ್ಸ್: ₹50 ಕೋಟಿ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಸ್ವಾಮ್ಯದ ಏಕೈಕ ಸಕ್ಕರೆ ಕಾರ್ಖಾನೆ ಮೈ ಶುಗರ್ಸ್‌ನ ಪುನಶ್ಚೇತನಕ್ಕೆ ಆರ್ಥಿಕ ಇಲಾಖೆ ₹ 50 ಕೋಟಿಯನ್ನು ಬುಧವಾರ ಬಿಡುಗಡೆ ಮಾಡಿದೆ.

ರೋಗಗ್ರಸ್ತವಾಗಿದ್ದ ಮೈ ಶುಗರ್ಸ್ ಕಾರ್ಖಾನೆಯನ್ನು ಪುನಶ್ಚೇತನಗೊಳಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಈ ಹಿಂದೆ ಭರವಸೆ ನೀಡಿದ್ದರು. ಅದರಂತೆ, ಪುನಶ್ಚೇತನಕ್ಕೆ ₹ 15 ಕೋಟಿ ಮತ್ತು ಕಾರ್ಖಾನೆಯ ದುಡಿಯುವ ಬಂಡವಾಳಕ್ಕೆ ₹ 35 ಕೋಟಿ ಬಿಡುಗಡೆ ಮಾಡಲು ಹಣಕಾಸು ಖಾತೆಯನ್ನೂ ಹೊಂದಿರುವ ಮುಖ್ಯಮಂತ್ರಿ ಅನುಮೋದನೆ ನೀಡಿದ್ದರು. ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ ಎನ್. ಚಲುವರಾಯಸ್ವಾಮಿ, ವಿಧಾನ ಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ನೇತೃತ್ವದ ಮಂಡ್ಯ ಜಿಲ್ಲಾ ಕಾಂಗ್ರೆಸ್ ಶಾಸಕರ ಮತ್ತು ಜನಪ್ರತಿನಿಧಿಗಳ ನಿಯೋಗ ಮೈ ಶುಗರ್ಸ್ ಪುನಶ್ಚೇತನಕ್ಕೆ ಆರ್ಥಿಕ ನೆರವು ನೀಡುವಂತೆ ಮುಖ್ಯಮಂತ್ರಿಗೆ ಮನವಿ ಮಾಡಿತ್ತು. 37 ಸಾವಿರ ಕಬ್ಬು ಬೆಳೆಗಾರರಿಂದ 5 ಲಕ್ಷ ಟನ್ ಕಬ್ಬು ಸರಬರಾಜು ಮಾಡುವ ಒಪ್ಪಂದವಾಗಿತ್ತು. ಈ ಒಪ್ಪಂದದಂತೆ ರೈತರಿಗೆ ಸಕಾಲದಲ್ಲಿ ಹಣ ಒದಗಿಸುವ ಅಗತ್ಯವಿದೆ ಎಂದು ನಿಯೋಗ ಮನವಿ ಮಾಡಿತ್ತು.

'ಇನ್ನೂ 10 ಸಾವಿರ ಎಕರೆಯಲ್ಲಿ ಸೋಲಾರ್ ಪಾರ್ಕ್'

ಪಾವಗಡ (ತುಮಕೂರು): 'ತಾಲ್ಲೂಕಿನಲ್ಲಿ ಹೆಚ್ಚುವರಿಯಾಗಿ 10 ಸಾವಿರ ಎಕರೆ ಪ್ರದೇಶದಲ್ಲಿ ಸೋಲಾರ್ ಪಾರ್ಕ್ ನಿರ್ಮಾಣ ಮಾಡಲು ಉದ್ದೇಶಿಸಲಾಗಿದೆ' ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದರು.

ತಾಲ್ಲೂಕಿನ ತಿರುಮಣಿ ಸುತ್ತಮುತ್ತಲಿನ ಸೋಲಾರ್ ಪಾರ್ಕ್‌ಗೆ ಬುಧವಾರ ಭೇಟಿ ನೀಡಿ ಪರಿಶೀಲಿಸಿದ ನಂತರ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು. 'ಕಲಬುರಗಿ ಸೇರಿದಂತೆ ರಾಜ್ಯದ ಇತರೆಡೆ ಸೋಲಾರ್ ಪಾರ್ಕ್ ನಿರ್ಮಾಣಕ್ಕೆ ಬೇಡಿಕೆ ಬಂದಿದೆ. ಕೃಷಿ ಪಂಪ್‌ಸೆಟ್‌ಗಳಿಗೆ ರೈತರೇ ವಿದ್ಯುತ್ ಉತ್ಪಾದನೆ ಮಾಡಿಕೊಳ್ಳುವ 'ಕುಸುಮ' ಯೋಜನೆಯನ್ನು ರಾಜ್ಯದಲ್ಲೆಡೆ ವಿಸ್ತರಿಸಲಾಗುವುದು' ಎಂದರು.

'ಹೈಬ್ರಿಡ್ ಪಿಂಚಣಿ' ಶಿಫಾರಸು ಸಾಧ್ಯತೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಆಂಧ್ರಪ್ರದೇಶದಲ್ಲಿ ಜಾರಿಗೊಳಿಸಿರುವ 'ಖಾತರಿ ಪಿಂಚಣಿ ಯೋಜನೆ'ಯನ್ನು (ಹೈಬ್ರಿಡ್ ಪಿಂಚಣಿ ಯೋಜನೆ) ರಾಜ್ಯಗಳು ಅಳವಡಿಸಿಕೊಳ್ಳಲು ಅನುಮತಿ ನೀಡಬೇಕು ಎಂದು ಕೇಂದ್ರ ಸರ್ಕಾರ ರಚಿಸಿರುವ ಸಮಿತಿಯು ಶಿಫಾರಸು ಮಾಡುವ ಸಾಧ್ಯತೆ ಇದೆ.

ಹಳೆ ಪಿಂಚಣಿ ಯೋಜನೆ (ಒಪಿಎಸ್) ಮತ್ತು ಹೊಸ ಪಿಂಚಣಿ ಯೋಜನೆ (ಎನ್‌ಪಿಎಸ್)ಯಲ್ಲಿನ ವೈಶಿಷ್ಟ್ಯಗಳನ್ನು ಈ 'ಹೈಬ್ರಿಡ್ ಪಿಂಚಣಿ ಯೋಜನೆ' ಹೊಂದಿರುವ ಕಾರಣ ಸಮಿತಿಯು ಇಂಥ ಶಿಫಾರಸು ಮಾಡುವ ಸಾಧ್ಯತೆ ಇದೆ ಎಂದು ತಿಳಿದು ಬಂದಿದೆ.

ಹಣಕಾಸು ಕಾರ್ಯದರ್ಶಿ ಟಿ.ವಿ. ಸೋಮನಾಥನ್ ನೇತೃತ್ವದಲ್ಲಿ ಕೇಂದ್ರ ಸರ್ಕಾರ ಕಳೆದ ಏಪ್ರಿಲ್‌ನಲ್ಲಿ ಸಮಿತಿ ರಚಿಸಿದೆ. ವಿರೋಧ ಪಕ್ಷಗಳ ಆಡಳಿತವಿರುವ ಹಲವು ರಾಜ್ಯಗಳಲ್ಲಿ ಹಳೆ ಪಿಂಚಣಿ ಯೋಜನೆಯನ್ನು ಪುನಃ ಜಾರಿಗೊಳಿಸಲಾಗಿದೆ. ಹಳೆ ಪಿಂಚಣಿ ಯೋಜನೆಯನ್ನೇ ಜಾರಿಗೊಳಿಸಬೇಕು ಎಂದು ಇತರ ರಾಜ್ಯಗಳಲ್ಲಿನ ನೌಕರರ ಸಂಘಗಳು ಆಗ್ರಹಿಸುತ್ತಿರುವ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ ಈ ಕ್ರಮ ಕೈಗೊಂಡಿತ್ತು. 'ವರದಿ ಸಲ್ಲಿಸಲು ಯಾವುದೇ ಗಡುವು ನಿಗದಿ ಮಾಡಿಲ್ಲ. ಸಮಿತಿಯು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರಿಗೆ ಜುಲೈನಲ್ಲಿ ವರದಿ ಸಲ್ಲಿಸುವ ಸಾಧ್ಯತೆ ಇದೆ' ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ಹೈಬ್ರಿಡ್ ಪಿಂಚಣಿ ಯೋಜನೆ ಕುರಿತು ಕೂಲಂಕಷ ಪರಿಶೀಲನೆ ಮಾಡುತ್ತಿದ್ದೇವೆ. ಒಪಿಎಸ್, ಎನ್‌ಪಿಎಸ್‌ನಲ್ಲಿರುವ ಉತ್ತಮ ಅಂಶಗಳನ್ನು ಒಳಗೊಂಡ ಪಿಂಚಣಿ ಯೋಜನೆ ಶಿಫಾರಸು ಮಾಡುವ ಸಾಧ್ಯತೆ ಇದೆ' ಎಂದು ಅಧಿಕಾರಿ ತಿಳಿಸಿದ್ದಾರೆ. 'ಹಳೆ ಪಿಂಚಣಿ ಯೋಜನೆಯು ರಾಜ್ಯಗಳ ಯೋಜನಾ ಗಾತ್ರವನ್ನು ಹೆಚ್ಚಿಸುತ್ತದೆ. ಇದು ರಾಜ್ಯಗಳ ಆರ್ಥಿಕ ಸ್ಥಿತಿ ಮೇಲೆ ಪರಿಣಾಮ ಬೀರುತ್ತದೆ ಎಂಬುದೇ ಕೇಂದ್ರದ ಆತಂಕ' ಎಂದಿದ್ದಾರೆ.

8ನೇ ಪುಟ ನೋಡಿ

ಸಗಟು ಹಣದುಬ್ಬರ: 7 ವರ್ಷದ ಕನಿಷ್ಠ

ನವದೆಹಲಿ (ಪಿಟಿಐ): ಸಗಟು ದರ ಸೂಚ್ಯಂಕ (ಡಬ್ಲ್ಯುಪಿಐ) ಆಧರಿಸಿದ ಹಣದುಬ್ಬರ ಪ್ರಮಾಣವು ಮೇ ತಿಂಗಳಿನಲ್ಲಿ ಶೇಕಡ (–) 3.48ಕ್ಕೆ ಕುಸಿದಿದೆ. ಇದು ಏಳು ವರ್ಷಗಳ ಕನಿಷ್ಠ ಮಟ್ಟ. 2015ರ ನವೆಂಬರ್‌ನಲ್ಲಿ ಸಗಟು ಹಣದುಬ್ಬರವು ಶೇ (–) 3.7ರಷ್ಟು ಇತ್ತು.

ಆಹಾರ, ಇಂಧನ ಮತ್ತು ತಯಾರಿಕಾ ವಸ್ತುಗಳ ದರ ಇಳಿಕೆ ಆಗಿದೆ. ಈ ನಡುವೆ, ಸಗಟು ಹಣದುಬ್ಬರ ಪ್ರಮಾಣ ಸತತ ಎರಡನೆಯ ತಿಂಗಳಿನಲ್ಲಿಯೂ ಇಳಿಕೆ ಕಂಡಿದೆ. ಇದರಿಂದಾಗಿ, ಪ್ರಸಕ್ತ ಹಣಕಾಸು ವರ್ಷದಲ್ಲಿ ಬಡ್ಡಿದರ ಏರಿಕೆಗೆ ಆರ್‌ಬಿಐ ತಡೆ ನೀಡುವ ವಾತಾವರಣ ಸೃಷ್ಟಿ ಆಗುತ್ತಿದೆ.

ಸತತ ಎರಡನೇ ತಿಂಗಳಿನಲ್ಲಿಯೂ ಸಗಟು ಹಣದುಬ್ಬರವು ನಕಾರಾತ್ಮಕ ವಲಯವನ್ನು ತಲುಪಿದಂತಾಗಿದೆ. ಏಪ್ರಿಲ್‌ನಲ್ಲಿ ಸಗಟು ಹಣದುಬ್ಬರವು ಶೇ (–) 0.92ಕ್ಕೆ ತಲುಪಿತ್ತು. ಕಳೆದ ವರ್ಷದ ಮೇ ತಿಂಗಳಿನಲ್ಲಿ ಡಬ್ಲ್ಯುಪಿಐ ಶೇ 16.63ರಷ್ಟು ಗರಿಷ್ಠ ಮಟ್ಟದಲ್ಲಿ ದಾಖಲಾಗಿತ್ತು.

11ನೇ ಪುಟ ನೋಡಿ

ಚಿನಕುರಳಿ

ಪ್ರಕಾಶ್ ಶೆಟ್ಟಿ



ಒಳ ಪುಟಗಳು

ಪತ್ನಿ ಕಳುಹಿಸದಿದ್ದಕ್ಕೆ ಅತ್ತೆಗೆ ಚಾಕು ಇರಿತ

ಬೆಂಗಳೂರು: ಪತ್ನಿಯನ್ನು ತವರೂರಿಂದ ಕಳುಹಿಸಲಿಲ್ಲವೆಂಬ ಕಾರಣಕ್ಕೆ ಅತ್ತೆಗೆ ಚಾಕುವಿನಿಂದ ಇರಿದು ಕೊಲೆಗೆ ಯತ್ನಿಸಿರುವ ಆರೋಪದಡಿ ಮನೋಜ್ ಕುಮಾರ್ (28) ಅವರನ್ನು ಬ್ಯಾಡರಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಜಾಲಹಳ್ಳಿಯಲ್ಲಿ ಜೂನ್ 8ರಂದು ನಡೆದಿರುವ ಘಟನೆಯಲ್ಲಿ ಗೀತಾ (49) ಗಾಯಗೊಂಡಿದ್ದಾರೆ. ಅವರ ಹೇಳಿಕೆ ಹಾಗೂ ಮಗಳು ವರ್ಷಿತಾ ದೂರು ಆಧರಿಸಿ ಪ್ರಕರಣ ದಾಖಲಿಸಿಕೊಂಡು ಆರೋಪಿಯನ್ನು ಬಂಧಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ವರ್ಷಿತಾ, ಕೋಣನಕುಂಟೆ ನಿವಾಸಿ ಮನೋಜ್‌ನನ್ನು ಪ್ರೀತಿಸಿ ಮದುವೆಯಾಗಿದ್ದರು. ಕ್ಯಾಬ್ ಚಾಲಕನಾಗಿದ್ದ ಈತ, ನಿತ್ಯವೂ ಕುಡಿದು ಬಂದು ಪತ್ನಿಗೆ ಹೊಡೆಯುತ್ತಿದ್ದ. ಬೇಸತ್ತ ಪತ್ನಿ, ವರ್ಷದ ಹಿಂದೆಯಷ್ಟೇ ಗಂಡನ ಮನೆ ತೊರೆದು ತವರು ಮನೆ ಸೇರಿದ್ದರು. ಅಲ್ಲಿಗೆ ಹೋಗಿದ್ದ ಮನೋಜ್, ಮದ್ಯ ಕುಡಿಯುವುದಿಲ್ಲ. ಪತ್ನಿಗೆ ಹೊಡೆಯುವುದಿಲ್ಲ ಎಂದು ಹೇಳಿ ವರ್ಷಿತಾ ಅವರನ್ನು ಬೆಂಗಳೂರಿಗೆ ಕರೆತಂದಿದ್ದ. ಆದರೆ, ಮತ್ತೆ ಹಳೇ ಚಾಳಿ ಮುಂದುವರಿಸಿದ್ದ. ವರ್ಷಿತಾ ಪುನಃ ತವರು ಮನೆಗೆ ಬಂದಿದ್ದರು. ಅಲ್ಲಿಗೆ ಬಂದಿದ್ದ ಮನೋಜ್ ಪತ್ನಿಯನ್ನು ಕಳುಹಿಸುವಂತೆ ಒತ್ತಾಯಿಸಿದ್ದ. ಆದರೆ, ಅತ್ತೆ ಗೀತಾ ಒಪ್ಪಿರಲಿಲ್ಲ. ಕೋಪಗೊಂಡ ಮನೋಜ್, ಗೀತಾ ಹೊಟ್ಟೆಗೆ ಚಾಕುವಿನಿಂದ ಇರಿದು ಪರಾರಿಯಾಗಿದ್ದ' ಎಂದು ಪೊಲೀಸರು ತಿಳಿಸಿದರು.

ಬಸ್ ಪಾಸ್ ಗಲಾಟೆ: ದಂತ ವೈದ್ಯಕೀಯ ವಿದ್ಯಾರ್ಥಿಯ ಬಂಧನ

'ಪಿಎಸ್‌ಐ ಗುಪ್ತಾಂಗಕ್ಕೆ ಒದ್ದ ವಿದ್ಯಾರ್ಥಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಸ್ ಪಾಸ್ ವಿಚಾರವಾಗಿ ನಡೆದಿದ್ದ ಗಲಾಟೆ ಬಗ್ಗೆ ವಿಚಾರಣೆ ನಡೆಸುತ್ತಿದ್ದ ಪಿಎಸ್‌ಐ ಸಿದ್ದು ಹೂಗಾರ ಅವರ ಕಪಾಳಕ್ಕೆ ಹೊಡೆದು ಹಲ್ಲೆ ಮಾಡಲಾಗಿದ್ದು, ಕೃತ್ಯ ಎಸಗಿದ್ದ ಆರೋಪದಡಿ ದಂತ ವೈದ್ಯಕೀಯ ವಿದ್ಯಾರ್ಥಿ ಮೌನೇಶ್ (20) ಅವರನ್ನು ಪೊಲೀಸರು ಬಂಧಿಸಿದ್ದಾರೆ.

'ವಿದ್ಯಾರಣ್ಯಪುರ ನಿವಾಸಿ ಮೌನೇಶ್, ಯಶವಂತಪುರ ಬಳಿಯ ದಂತ ವೈದ್ಯಕೀಯ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದಾನೆ. ಬಸ್ ನಿರ್ವಾಹಕನ ಮೇಲೆ ಹಲ್ಲೆ ನಡೆಸಿದ್ದ ಈತ, ವಿಚಾರಣೆ ಸಂದರ್ಭದಲ್ಲಿ ಪಿಎಸ್‌ಐ ಕಪಾಳಕ್ಕೆ ಹೊಡೆದು ಗುಪ್ತಾಂಗಕ್ಕೆ ಒದ್ದಿದ್ದ. ಕೃತ್ಯದ ಸಂಬಂಧ ಪ್ರಕರಣ ದಾಖಲಿಸಿಕೊಂಡು, ಮೌನೇಶ್‌ನನ್ನು ಬಂಧಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಪೊಲೀಸರ ಆರೋಪ ನಿರಾಕರಿಸಿರುವ ಮೌನೇಶ್ ಪೋಷಕರು, 'ಮಗ ಯಾವುದೇ ತಪ್ಪು ಮಾಡಿಲ್ಲ. ಕಾಲೇಜಿಗೆ ಹೋಗುತ್ತಿದ್ದ ವೇಳೆ ನಿರ್ವಾಹಕರು ಕಾಲೇಜು ಗುರುತಿನ ಚೀಟಿ ತೋರಿಸುವಂತೆ ಒತ್ತಾಯಿಸಿ ಗಲಾಟೆ ಮಾಡಿದ್ದಾರೆ. ನಂತರ, ಠಾಣೆಗೆ ಕರೆದೊಯ್ದು ಪೊಲೀಸರು ಹಲ್ಲೆ ಮಾಡಿದ್ದಾರೆ' ಎಂದು ದೂರಿದ್ದಾರೆ.

'ನೀಟ್ ಫಲಿತಾಂಶದಿಂದ ಬೇಸರದಲ್ಲಿದ್ದ ಮೌನೇಶ್'

'ಮಗ ಮೌನೇಶ್, ನೀಟ್ ಪರೀಕ್ಷೆ ಎದುರಿಸಿ ಎಂಬಿಬಿಎಸ್ ಮಾಡುವ ಆಸೆ ಇಟ್ಟುಕೊಂಡಿದ್ದ. ಮಂಗಳವಾರ ನೀಟ್ ಫಲಿತಾಂಶ ಬಂದಿತ್ತು. ಆದರೆ, ಅಂದುಕೊಂಡಿದ್ದ ರ‍್ಯಾಂಕ್ ಬಂದಿರಲಿಲ್ಲ. ಇದರಿಂದಾಗಿ, ಆತ ಬೇಸರದಲ್ಲಿದ್ದ' ಎಂದು ತಂದೆ ರಾಜ್ ಹೇಳಿದ್ದಾರೆ.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಕಾಲೇಜಿಗೆ ಹೋಗಲು ನಾನೇ ಮಗನನ್ನು ಗಂಗಮ್ಮನಗುಡಿ ತಂಗುದಾಣದವರೆಗೆ ಡ್ರಾಪ್ ಮಾಡಿದ್ದೆ. ಅಲ್ಲಿಂದ ಆತ, ಯಲಹಂಕ–ಜಾಲಹಳ್ಳಿ ಬಸ್ ಹತ್ತಿಕೊಂಡು ಕಾಲೇಜಿನತ್ತ ಹೋಗಿದ್ದ. ಠಾಣೆಗೆ ಕರೆತಂದಿರುವುದಾಗಿ ಹೇಳಿ ಅಳುತ್ತಲೇ ಕರೆ ಮಾಡಿ ತಿಳಿಸಿದ್ದ' ಎಂದು ಹೇಳಿದ್ದಾರೆ.

'ಮಗನಿಗೆ ಏನಾಯಿತೆಂದು ತಿಳಿಯಲು ಠಾಣೆಗೆ ಬಂದಿದ್ದೇವೆ. ಪೊಲೀಸರು ಆತನಿಗೆ ಹೊಡೆದಿದ್ದಾರೆ' ಎಂದು ಹೇಳಿದ್ದಾರೆ.

ಅಪರಾಧ ಸುದ್ದಿ

ಘಟನೆ ವಿವರ: 'ಆರೋಪಿ ಮೌನೇಶ್ ಬುಧವಾರ ಬೆಳಿಗ್ಗೆ ಕಾಲೇಜಿಗೆ ಹೋಗುವುದಕ್ಕಾಗಿ ಯಲಹಂಕದಿಂದ ಜಾಲಹಳ್ಳಿಗೆ ಹೊರಟಿದ್ದ ಬಿಎಂಟಿಸಿ ಬಸ್ ಹತ್ತಿದ್ದ. ನಿರ್ವಾಹಕ ಅಶೋಕ ಟಿಕೆಟ್ ಪಡೆಯುವಂತೆ ಹೇಳಿದ್ದರು. ವಿದ್ಯಾರ್ಥಿ ಪಾಸ್ ಇರುವುದಾಗಿ ಮೌನೇಶ್ ತಿಳಿಸಿದ್ದ. ಪಾಸ್ ಹಾಗೂ ಕಾಲೇಜು ಗುರುತಿನ ಚೀಟಿ ತೋರಿಸುವಂತೆ ನಿರ್ವಾಹಕ ಒತ್ತಾಯಿಸಿದ್ದ' ಎಂದು ಮೂಲಗಳು ಹೇಳಿವೆ.

'ಬಸ್ ಪಾಸ್ ಮಾತ್ರ ತೋರಿಸಿದ್ದ ಮೌನೇಶ್, ಕಾಲೇಜು ಗುರುತಿನ ಚೀಟಿ ತೋರಿಸಲು ನಿರಾಕರಿಸಿದ್ದ. ಅದೇ ವಿಚಾರವಾಗಿ ಇಬ್ಬರ ನಡುವೆ ಜಗಳವಾಗಿತ್ತು. ಕೋಪಗೊಂಡಿದ್ದ ಮೌನೇಶ್, ಅಶೋಕ್ ಅವರಿಗೆ ಹೊಡೆದಿದ್ದ. ಪರಿಸ್ಥಿತಿ ವಿಕೋಪಕ್ಕೆ ಹೋಗಿತ್ತು. ಬಳಿಕ, ಚಾಲಕ ಬಸ್ ಸಮೇತ ಆರೋಪಿಯನ್ನು ಪೀಣ್ಯ ಠಾಣೆಗೆ ಕರೆದೊಯ್ದಿದ್ದರು' ಎಂದು ತಿಳಿಸಿವೆ.

'ಮೌನೇಶ್‌ನನ್ನು ವಶಕ್ಕೆ ಪಡೆದಿದ್ದ ಪಿಎಸ್‌ಐ ಸಿದ್ದು, ಠಾಣೆಯಲ್ಲಿ ವಿಚಾರಣೆ ನಡೆಸುತ್ತಿದ್ದರು. ಕಾಲೇಜು ಗುರುತಿನ ಚೀಟಿ ಏಕೆ ಕೇಳಬೇಕು? ಎಂದು ಮೌನೇಶ್ ಪ್ರಶ್ನಿಸಿದ್ದ. ಎದುರು ಮಾತನಾಡಬೇಡವೆಂದು ಪಿಎಸ್‌ಐ ಹೇಳಿದ್ದರು. ಅಷ್ಟಕ್ಕೆ ಕೋಪಗೊಂಡ ಆರೋಪಿ, ಪಿಎಸ್‌ಐ ಅವರ ಕಪಾಳಕ್ಕೆ ಹೊಡೆದು ಗುಪ್ತಾಂಗಕ್ಕೆ ಒದ್ದಿದ್ದ. ಠಾಣೆಯಲ್ಲಿದ್ದ ಸಿಬ್ಬಂದಿ ಕೂಡಲೇ ರಕ್ಷಣೆಗೆ ಹೋಗಿದ್ದರು. ಮೌನೇಶ್‌ನನ್ನು ಹಿಡಿದು ಸೆಲ್‌ಗೆ ಹಾಕಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

ಬೌದ್ಧ ಬಿಕ್ಕುಗಳ ಮೃತದೇಹ ಪತ್ತೆ: ಚಲಿಸುತ್ತಿದ್ದ ರೈಲಿನಿಂದ ಬಿದ್ದು ಸಾವು ಶಂಕೆ

ಬೆಂಗಳೂರು: ನೆಲಮಂಗಲ ಬಳಿಯ ಬೆತ್ತನಗೆರೆ ರೈಲು ನಿಲ್ದಾಣ ಸಮೀಪದ ಹಳಿಯಲ್ಲಿ ಇಬ್ಬರು ಬೌದ್ಧ ಬಿಕ್ಕುಗಳ ಮೃತದೇಹ ಬುಧವಾರ ಪತ್ತೆಯಾಗಿದ್ದು, ಚಲಿಸುತ್ತಿದ್ದ ರೈಲಿನಿಂದ ಬಿದ್ದು ಇಬ್ಬರೂ ಮೃತಪಟ್ಟಿರುವ ಶಂಕೆ ವ್ಯಕ್ತವಾಗಿದೆ.

'ನೇಪಾಳದ ತನ್ಜಜೈನ್ ಲಾಮಾ ಮತ್ತು ವಿಗ್‌ಮಾರ್ ಶರ್ಮಾ ಮೃತರು. ಇವರಿಬ್ಬರು ಕುಶಾಲನಗರದಲ್ಲಿರುವ ಬೈಲಕುಪ್ಪೆಯ ಟಿಬೆಟಿಯನ್ ಕ್ಯಾಂಪ್‌ನಲ್ಲಿ ವ್ಯಾಸಂಗ ಮಾಡುತ್ತಿದ್ದರು. ಇವರಿಬ್ಬರ ಸಾವಿನ ಸಂಬಂಧ ಯಶವಂತಪುರ ರೈಲ್ವೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ಜೂನ್ 12ರಂದು ಕ್ಯಾಂಪ್‌ನಿಂದ ಇಬ್ಬರೂ ಯುವಕರು ನಾಪತ್ತೆಯಾಗಿದ್ದರು. ಆದರೆ, ಈ ಬಗ್ಗೆ ಸ್ಥಳೀಯ ಠಾಣೆಯಲ್ಲಿ ಯಾವುದೇ ದೂರು ದಾಖಲಾಗಿರಲಿಲ್ಲ. ಮೃತದೇಹಗಳ ಬಳಿ ರೈಲು ಟಿಕೆಟ್‌ಗಳು ಸಿಕ್ಕಿದ್ದು, ಇವರಿಬ್ಬರು ರೈಲಿನಲ್ಲಿ ಪ್ರಯಾಣಿಸುತ್ತಿದ್ದ ಬಗ್ಗೆ ಮಾಹಿತಿ ಇದೆ' ಎಂದರು.

'ತಲೆ ಹಾಗೂ ಇತರೆ ಭಾಗಕ್ಕೆ ಪೆಟ್ಟು ಬಿದ್ದು ಇಬ್ಬರೂ ಮೃತಪಟ್ಟಿದ್ದಾರೆ. ರೈಲಿನಲ್ಲಿ ಪ್ರಯಾಣಿಸುತ್ತಿದ್ದಾಗ ಬಾಗಿಲು ಬಳಿಯಿಂದ ಆಯತಪ್ಪಿ ಬಿದ್ದಿರುವ ಶಂಕೆ ಇದೆ. ಆದರೆ, ಈ ಬಗ್ಗೆ ನಿಖರ ಪುರಾವೆ ಇಲ್ಲ. ಆತ್ಮಹತ್ಯೆ ಅನುಮಾನವಿದ್ದು, ಎಲ್ಲ ಆಯಾಮದಲ್ಲಿ ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸರು ತಿಳಿಸಿದರು.

ಸುದ್ದಿ 2 ನಿಮಿಷ

ಬಿಎಂಟಿಸಿ ಬಸ್ ಗುದ್ದಿ ಕಾರ್ಮಿಕರಿಬ್ಬರು ಸಾವು

ಬೆಂಗಳೂರು: ಬಿಎಂಟಿಸಿ ಬಸ್ ಗುದ್ದಿ ಇಬ್ಬರು ಕಾರ್ಮಿಕರು ಮೃತಪಟ್ಟಿದ್ದು, ಅತೀ ವೇಗ ಹಾಗೂ ನಿರ್ಲಕ್ಷ್ಯದ ಚಾಲನೆ ಆರೋಪದಡಿ ಚಾಲಕ ರಾಜ್‌ನನ್ನು ರಾಜಾಜಿನಗರ ಸಂಚಾರ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ತುರುವೇಕೆರೆಯ ತಿಮ್ಮೇಗೌಡ (28) ಹಾಗೂ ಕೊಪ್ಪಳದ ಕಂಠೆಪ್ಪ (35) ಮೃತರು. ಕೆಲಸ ಹುಡುಕಿಕೊಂಡು ಇವರಿಬ್ಬರು ಪ್ರತ್ಯೇಕವಾಗಿ ನಗರಕ್ಕೆ ಬಂದಿದ್ದರು. ಕಟ್ಟಡ ನಿರ್ಮಾಣ ಹಾಗೂ ಇತರೆಡೆ ಕಾರ್ಮಿಕರಾಗಿ ಕೆಲಸ ಮಾಡುತ್ತಿದ್ದರು. ಕೆಲಸ ಮುಗಿಸಿ ಮನೆಗೆ ಹೊರಟಿದ್ದ ವೇಳೆ ಈ ಅವಘಡ ಸಂಭವಿಸಿದೆ' ಎಂದು ಪೊಲೀಸರು ಹೇಳಿದರು.

'ಗೊರಗುಂಟೆಪಾಳ್ಯದಿಂದ ಸುಮನಹಳ್ಳಿ ಡಿಪೊಗೆ ಬಿಎಂಟಿಸಿ ಬಸ್ ಹೊರಟಿತ್ತು. ಪ್ರಯಾಣಿಕರು ಇರಲಿಲ್ಲ. ಅದೇ ಬಸ್‌ನ ಎದುರಿಗೆ ಮತ್ತೊಂದು ಬಸ್ ತೆರಳುತ್ತಿತ್ತು. ಅದೇ ಸಂದರ್ಭದಲ್ಲಿ ತಿಮ್ಮೇಗೌಡ ಹಾಗೂ ಕಂಠೆಪ್ಪ ರಸ್ತೆ ದಾಟುತ್ತಿದ್ದರು. ಕಾರ್ಮಿಕರನ್ನು ಗಮನಿಸದ ಬಿಎಂಟಿಸಿ ಚಾಲಕ, ಅತೀ ವೇಗ ಹಾಗೂ ನಿರ್ಲಕ್ಷ್ಯದಿಂದ ಬಸ್ ಚಲಾಯಿಸಿದ್ದ. ತಿಮ್ಮೇಗೌಡ ಹಾಗೂ ಕಂಠೆಪ್ಪ ಅವರಿಗೆ ಗುದ್ದಿದ್ದ ಬಸ್, ಅವರಿಬ್ಬರನ್ನು ತಳ್ಳಿಕೊಂಡು ಹೋಗಿ ಎದುರಿಗೆ ಹೊರಟಿದ್ದ ಮತ್ತೊಂದು ಬಸ್‌ಗೆ ಡಿಕ್ಕಿ ಹೊಡೆದಿತ್ತು. ಎರಡು ಬಸ್‌ಗಳ ನಡುವೆ ಸಿಲುಕಿ ತೀವ್ರ ಗಾಯಗೊಂಡು ತಿಮ್ಮೇಗೌಡ–ಕಂಠೆಪ್ಪ ಸ್ಥಳದಲ್ಲೇ ಮೃತಪಟ್ಟದ್ದಾರೆ' ಎಂದು ಪೊಲೀಸರು ತಿಳಿಸಿದರು.



ಚಾಕುವಿನಿಂದ ಇರಿದು ತಮ್ಮನ ಕೊಲೆ

ಬೆಂಗಳೂರು: ಪುಲಿಕೇಶಿನಗರ ಠಾಣೆ ವ್ಯಾಪ್ತಿಯಲ್ಲಿ ಕಾರ್ತಿಕ್ (28) ಅವರನ್ನು ಚಾಕುವಿನಿಂದ ಇರಿದು ಕೊಲೆ ಮಾಡಲಾಗಿದ್ದು, ಕೃತ್ಯ ಎಸಗಿದ್ದ ಆರೋಪದಡಿ ಅಣ್ಣ ವಿಜಯ್‌ನನ್ನು (30) ಪೊಲೀಸರು ಬಂಧಿಸಿದ್ದಾರೆ.

'ಸ್ಥಳೀಯ ಕದಿರಪ್ಪ ಬಡಾವಣೆ ನಿವಾಸಿ ಕಾರ್ತಿಕ್ ಅವರನ್ನು ಜೂನ್ 13ರಂದು ಕೊಲೆ ಮಾಡಿ ವಿಜಯ್ ಪರಾರಿಯಾಗಿದ್ದ. ಕೊಲೆ ಪ್ರಕರಣ ದಾಖಲಿಸಿ ಆರೋಪಿಯನ್ನು ಬಂಧಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ಖಾಸಗಿ ಕಂಪನಿಯಲ್ಲಿ ಕಾರ್ತಿಕ್ ಕೆಲಸ ಮಾಡುತ್ತಿದ್ದರು. ಸಂಧ್ಯಾ ಅವರನ್ನು ಮದುವೆಯಾಗಿದ್ದರು. ಆರೋಪಿ ವಿಜಯ್, ಕಮರ್ಷಿಯಲ್ ಸ್ಟ್ರೀಟ್‌ನಲ್ಲಿರುವ ಕಂಪನಿಯೊಂದರಲ್ಲಿ ಮಾರಾಟ ಪ್ರತಿನಿಧಿ ಆಗಿದ್ದ. ಮದ್ಯವ್ಯಸನಿ ಆಗಿದ್ದ ಕಾರ್ತಿಕ್, ನಿತ್ಯವೂ ಕುಡಿದು ಬಂದು ಪತ್ನಿ ಜೊತೆ ಜಗಳ ಮಾಡುತ್ತಿದ್ದ. ಬೇಸತ್ತಿದ್ದ ಸಂಧ್ಯಾ, ಪತಿಗೆ ಬುದ್ಧಿ ಹೇಳುವಂತೆ ವಿಜಯ್ ಅವರಿಗೆ ಕರೆ ಮಾಡಿ ಹೇಳಿದ್ದರು. ಮಂಗಳವಾರ ಸಂಜೆ ಕುಡಿದ ಅಮಲಿನಲ್ಲಿ ಮನೆಗೆ ಬಂದಿದ್ದ ಕಾರ್ತಿಕ್, ಪತ್ನಿ ಮೇಲೆ ಪುನಃ ಹಲ್ಲೆ ಮಾಡಿದ್ದರು. ಆಗ ವಿಜಯ್ ಬುದ್ದಿವಾದ ಹೇಳಿದ್ದರು. ಆದರೆ, ಇಬ್ಬರ ನಡುವೆ ಜಗಳ ಶುರುವಾಗಿ ಪರಿಸ್ಥಿತಿ ವಿಕೋಪಕ್ಕೆ ಹೋಗಿತ್ತು. ಸಿಟ್ಟಾಗಿದ್ದ ವಿಜಯ್, ಚಾಕುವಿನಿಂದ ಕಾರ್ತಿಕ್ ಅವರ ಎದೆ ಹಾಗೂ ಹೊಟ್ಟೆಗೆ ಇರಿದು ಕೊಂದಿದ್ದ' ಎಂದು ಪೊಲೀಸರು ತಿಳಿಸಿದರು.


ಹೋಮ ಮಾಡಿ ಕಚೇರಿ ಉದ್ಘಾಟಿಸಿದ ಶಾಸಕ ಡಿ. ರವಿಶಂಕರ್

ಕೆ.ಆರ್.ನಗರ (ಮೈಸೂರು): ಇಲ್ಲಿನ ಲೋಕೋಪಯೋಗಿ ಇಲಾಖೆ ಕಚೇರಿ ಕಟ್ಟಡದಲ್ಲಿ ಶಾಸಕ ಡಿ.ರವಿಶಂಕರ್ ಬುಧವಾರ ಹೋಮ, ವಿಶೇಷ ಪೂಜೆ ಸಲ್ಲಿಸಿ ಶಾಸಕರ ನೂತನ ಕಚೇರಿಯನ್ನು ಉದ್ಘಾಟಿಸಿದರು.

ಬಳಿಕ ಮಾತನಾಡಿದ ಶಾಸಕರು, 'ಸಾಂಪ್ರದಾಯಿಕವಾಗಿ ಪೂಜೆ ಸಲ್ಲಿಸಿ ನೂತನ ಕಚೇರಿಯನ್ನು ಪ್ರಾರಂಭಿಸಲಾಗಿದೆ. ಸಾರ್ವಜನಿಕರು ನಿತ್ಯ ಭೇಟಿ ನೀಡಿ ಸಮಸ್ಯೆಗಳಿಗೆ ಪರಿಹಾರ ಪಡೆಯಬಹುದು' ಎಂದು ತಿಳಿಸಿದರು.

ಬಿರಿಯಾನಿ ಜಗಳ: ಕರಸೇ ಅಧ್ಯಕ್ಷ ಬಂಧನ

ಪ್ರಜಾವಾಣಿ ವಾರ್ತೆ



ರಮೇಶ್ ಗೌಡ

ಬೆಂಗಳೂರು: ಬಿರಿಯಾನಿ ನೀಡಲಿಲ್ಲವೆಂಬ ಕಾರಣಕ್ಕೆ ಹೋಟೆಲ್ ಸಿಬ್ಬಂದಿ ಮೇಲೆ ಹಲ್ಲೆ ಮಾಡಿ, ರಕ್ಷಣೆಗೆ ಬಂದ ಪೊಲೀಸರ ಕರ್ತವ್ಯಕ್ಕೆ ಅಡ್ಡಿಪಡಿಸಿ ಠಾಣೆಯಲ್ಲಿ ರಂಪಾಟ ಮಾಡಿದ್ದ ಆರೋಪದಡಿ ಕರ್ನಾಟಕ ರಕ್ಷಣಾ ಸೇನೆ (ಕರಸೇ) ಸಂಸ್ಥಾಪಕ ಅಧ್ಯಕ್ಷ ಟಿ. ರಮೇಶ್ ಗೌಡ ಅವರನ್ನು ಕೊಡಿಗೇಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಜೂನ್ 10ರಂದು ರಾತ್ರಿ ನಡೆದಿರುವ ಘಟನೆ ಸಂಬಂಧ ಹೋಟೆಲ್ ಸಹಾಯಕ ವ್ಯವಸ್ಥಾಪಕ ವಿದ್ಯಾನಂದ್ ಹಾಗೂ ಪಿಎಸ್‌ಐ ಎನ್.ವಿ. ಕೌಶಿಕ್ ಪ್ರತ್ಯೇಕ ದೂರು ನೀಡಿದ್ದಾರೆ. ಎರಡು ಎಫ್‌ಐಆರ್ ದಾಖಲಿಸಿಕೊಂಡು, ರಮೇಶ್ ಗೌಡನನ್ನು ಬಂಧಿಸಲಾಗಿದೆ. ಕೃತ್ಯದ ವೇಳೆ ಆರೋಪಿ ಜೊತೆಗಿದ್ದ ಚಂದನ್ ರೆಡ್ಡಿ ಹಾಗೂ ಸುರೇಶ್ ರೆಡ್ಡಿ ವಿರುದ್ಧವೂ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸರು ಹೇಳಿದರು.

'ರಮೇಶ್ ಹಾಗೂ ಬೆಂಬಲಿಗರು ಸಹಕಾರ ನಗರದಲ್ಲಿರುವ ಸ್ಟಾರ್ ಬಿರಿಯಾನಿ ಹೋಟೆಲ್‌ಗೆ ರಾತ್ರಿ ಹೋಗಿದ್ದರು. ಬಿರಿಯಾನಿ ಕೊಡುವಂತೆ ಹೇಳಿದ್ದರು. ಬಿರಿಯಾನಿ ಖಾಲಿ ಆಗಿರುವುದಾಗಿ ವಿದ್ಯಾನಂದ್ ಹೇಳಿದ್ದರು. ಅಷ್ಟಕ್ಕೆ ಕೋಪಗೊಂಡಿದ್ದ ರಮೇಶ್, 'ನಾನು ಕರ್ನಾಟಕ ರಕ್ಷಣಾ ಸೇನೆಯ ಅಧ್ಯಕ್ಷ. ನನಗೇ ಬಿರಿಯಾನಿ ಇಲ್ಲವೇ?' ಎಂದು ಅವಾಚ್ಯ ಶಬ್ದಗಳಿಂದ ನಿಂದಿಸಿದ್ದ. ಹೋಟೆಲ್ ಫಲಕ ಹಾಗೂ ಪೀಠೋಪಕರಣ ಧ್ವಂಸ ಮಾಡಿದ್ದ. 'ಹೋಟೆಲ್‌ನಲ್ಲಿರುವ ಎಲ್ಲರನ್ನೂ ಸುಮ್ಮನೇ ಬಿಡುವುದಿಲ್ಲ' ಎಂದು ಜೀವ ಬೆದರಿಕೆಯೊಡ್ಡಿದ್ದ. ಗಲಾಟೆ ಮಾಹಿತಿ ತಿಳಿದು ಹೊಯ್ಸಳ ಗಸ್ತು ವಾಹನದ ಸಿಬ್ಬಂದಿ ಸ್ಥಳಕ್ಕೆ ಹೋಗಿದ್ದರು. ಗಲಾಟೆ ಮಾಡದಂತೆ ರಮೇಶ್‌ಗೆ ತಾಕೀತು ಮಾಡಿದ್ದರು. ಸಿಬ್ಬಂದಿ ವಿರುದ್ಧವೂ ಜಗಳ ತೆಗೆದಿದ್ದ ಆರೋಪಿ, ಅವಾಚ್ಯ ಶಬ್ದಗಳಿಂದ ನಿಂದಿಸಿದ್ದ. ಗಸ್ತಿನಲ್ಲಿದ್ದ ಪಿಎಸ್‌ಐ ಕೌಶಿಕ್ ಸಹ ಸ್ಥಳಕ್ಕೆ ಹೋಗಿದ್ದರು. ಅವರ ಮೇಲೂ ಆರೋಪಿ ಹರಿಹಾಯ್ದಿದ್ದ' ಎಂದು ಪೊಲೀಸರು ಹೇಳಿದರು.

ಠಾಣೆಯಲ್ಲಿ ರಂಪಾಟ: 'ರಮೇಶ್‌ನನ್ನು ವಶಕ್ಕೆ ಪಡೆದಿದ್ದ ಪೊಲೀಸರು, ಹೊಯ್ಸಳ ವಾಹನದಲ್ಲಿ ಕೂರಿಸಿದ್ದರು. ಆಗ ಆರೋಪಿ, ಪಿಎಸ್‌ಐ ಸಮವಸ್ತ್ರ ಹಿಡಿದು ಎಳೆದಾಡಿದ್ದ. ಪಿಎಸ್‌ಐ ಜೊತೆ ಠಾಣೆಯಲ್ಲೂ ಜಗಳ ತೆಗೆದಿದ್ದ ನಿನ್ನನ್ನು ನಾಳೆಯೇ ಠಾಣೆಯಿಂದ ವರ್ಗಾವಣೆ ಮಾಡಿಸುತ್ತೇನೆ' ಎಂದು ನಿಂದಿಸಿದ್ದ' ಎಂದು ಪೊಲೀಸರು ಹೇಳಿದರು.

ನಗರದಲ್ಲಿ ಇಂದು

'ಈ ವೊಲ್ವ್' ಹ್ಯಾಕಥಾನ್: ಅತಿಥಿ: ಮೋನಾ ಭಾರದ್ವಾಜ್, ಅಧ್ಯಕ್ಷತೆ: ನಾರಾಯಣ್ ರಾವ್ ಆರ್. ಮಾನ್ಯ, ಆಯೋಜನೆ ಮತ್ತು ಸ್ಥಳ: ಬಿ.ಎನ್.ಎಂ. ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಬನಶಂಕರಿ 2ನೇ ಹಂತ, ಬೆಳಿಗ್ಗೆ 10

'8ನೇ ಮೈಲ್ ಟೆಕ್ನೊ ಕಲ್ಚರಲ್ ಫೆಸ್ಟ್, ಕರ್ನಾಟಕ–2023 ಕನ್ನಡ ಹಬ್ಬ': ಉದ್ಘಾಟನೆ: ಹಿರೇಮಗಳೂರು ಕಣ್ಣನ್, ಅತಿಥಿಗಳು: ಎ.ವಿ.ಎಸ್. ಮೂರ್ತಿ, ನಾಗಶ್ರೀ ತ್ಯಾಗರಾಜ್, ಅಧ್ಯಕ್ಷತೆ: ಎಂ.ಪಿ. ಶ್ಯಾಮ್, ಆಯೋಜನೆ ಮತ್ತು ಸ್ಥಳ: ಆರ್.ವಿ. ಕಾಲೇಜ್ ಆಫ್ ಎಂಜಿನಿಯರಿಂಗ್, ಮೈಸೂರು ರಸ್ತೆ, ಬೆಳಿಗ್ಗೆ 10.30ರಿಂದ



ಹಿರೇಮಗಳೂರು ಕಣ್ಣನ್

ವಿಶ್ವ ಹಿರಿಯರ ನಿಂದನೆ ಜಾಗೃತಿ ದಿನ: **'ಹಿರಿಯರ ನಿಂದನೆಯನ್ನು ಎದುರಿಸುವಲ್ಲಿ ಸಹಾಯವಾಣಿಗಳ ಪಾತ್ರ':** ರಾಧಾ ಎಸ್. ಮೂರ್ತಿ, 'ಹಿರಿಯರ ಮೇಲಿನ ದೌರ್ಜನ್ಯ ತಡೆಗಟ್ಟುವಲ್ಲಿ ಪೊಲೀಸರ ಪಾತ್ರ': ಗೋವಿಂದರಾಜ್, 'ಸೈಬರ್ ಅಪರಾಧಗಳನ್ನು ತಡೆಗಟ್ಟಲು ಕ್ರಮಗಳು': ಸಂತೋಷ್, ಭಾಷಣಕಾರ: ಬಿ. ದಯಾನಂದ, ಆಯೋಜನೆ: ನೈಟಿಂಗಲ್ಸ್ ವೈದ್ಯಕೀಯ ಟ್ರಸ್ಟ್, ಸ್ಥಳ: ಪೊಲೀಸ್ ಆಯುಕ್ತರ ಕಚೇರಿ, ಇನ್‌ಫೆಂಟ್ರಿ ರಸ್ತೆ, ಬೆಳಿಗ್ಗೆ 11

ಅಂಚೆ ಮಕ್ಕಳ ರಂಗ ಶಿಬಿರದ ಸಮಾರೋಪ ಸಮಾರಂಭ, ಸಂಚಾರಿ ವಿಜಯ್ ಸ್ಮರಣೆ: ಅತಿಥಿಗಳು: ಕೆ. ರಂಜಿತ್ ಕುಮಾರ್, ಬೇಲೂರು ರಘುನಂದನ್, ಮೈಕೊ ಮಂಜು, ಮಾಗಡಿ ಗಿರೀಶ್, ಶೋಭಾ ಶ್ರೀನಿವಾಸ್, ಆಯೋಜನೆ: ರಂಗಚಂದಿರ ಟ್ರಸ್ಟ್, ಸಮೃದ್ಧಿ, ಸ್ಥಳ: ಸಮೃದ್ಧಿ ಸಭಾಂಗಣ, ಪಿ ಆ್ಯಂಡ್ ಟಿ ಕ್ವಾಟ್ರಸ್, ಕಾವಲ್ ಬೈರಸಂದ್ರ, ಸಂಜೆ 5

ಪ್ರವಚನ ವಾಹಿನಿ: 'ವಿದುರ ನೀತಿ' ಕುರಿತು ಉಪನ್ಯಾಸ: ಆನಂದ ತೀರ್ಥಾಚಾರ್ ಮಾಳಗಿ, ಆಯೋಜನೆ ಮತ್ತು ಸ್ಥಳ: ರಾಗಿಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತ ಮಂಡಳಿ ಟ್ರಸ್ಟ್, ಜಯನಗರ, ಸಂಜೆ 6.30

ಹರಿದಾಸ ವೈಭವ: ಗಾಯನ: ದೀಪ್ತಿ ಮೋಹನ್, ಪಿಟೀಲು: ಮೈಸೂರು ಸಂಜೀವ್ ಕುಮಾರ್, ಮೃದಂಗ: ಮುರುಳಿ ನಾರಾಯಣ ರಾವ್, ಆಯೋಜನೆ: ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿಗಳ ಮಠ, 1ನೇ ಮುಖ್ಯರಸ್ತೆ, ಪವಮಾನಪುರ, ಸಂಜೆ 7



ದೀಪ್ತಿ ಮೋಹನ್

'ಪೋಲೀ ಕಿಟ್ಟೀ' ನಾಟಕ ಪ್ರದರ್ಶನ: ನಿರ್ದೇಶನ: ದಾಕ್ಷಾಯಿಣಿ ಭಟ್ ಎ., ಸಂಗೀತ: ಅಮಿತ್ ಆರ್.ಬಿ., ಆಯೋಜನೆ: ದೃಶ್ಯ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ ರಸ್ತೆ, ಸಂಜೆ 7

ದಾಸವಾಣಿ: ಗಾಯನ: ರತ್ನ ರಮೇಶ್ ಕುಲಕರ್ಣಿ, ಹಾರ್ಮೋನಿಯಂ: ಎನ್.ಜಿ. ಪಾಟೀಲ್, ತಬಲಾ: ವಸಂತ್ ಕುಲಕರ್ಣಿ, ತಾಳ: ಅರ್ಚನಾ ಲೋಕುರ್ಥಿ, ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿಗಳ ಮಠ, ಜಯನಗರ, ಸಂಜೆ 7.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ ಕಳುಹಿಸಿ nagaradalli_indu@prajavani.co.in

ಸಂಕ್ಷಿಪ್ತ ಸುದ್ದಿ

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಬೆಂಗಳೂರು: ಭೈರವೇಶ್ವರ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿಯು ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದೆ. 2022–23ನೇ ಸಾಲಿನ ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಶೇ 80 ಅಂಕಗಳಿಸಿದ ಸೊಸೈಟಿಯ ಸದಸ್ಯರ ಮಕ್ಕಳು ಜೂನ್ 16ರೊಳಗೆ ಅರ್ಜಿ ಸಲ್ಲಿಸಬಹುದು ಎಂದು ಪ್ರಕಟಣೆ ತಿಳಿಸಿದೆ. ಮಾಹಿತಿಗೆ: 080–23383530ಗೆ ಸಂಪರ್ಕಿಸಬಹುದು.

ಕೆಎಫ್‌ಸಿಸಿಗೆ ನೋಟಿಸ್

ಬೆಂಗಳೂರು: ಕರ್ನಾಟಕದ ಚಲನಚಿತ್ರ ವಾಣಿಜ್ಯ ಮಂಡಳಿಯ (ಕೆಎಫ್‌ಸಿಸಿ) ಆಡಳಿತ ಮಂಡಳಿ ಅವಧಿಯು 2023ರ ಮೇ 28ಕ್ಕೆ ಮುಕ್ತಾಯವಾಗಿರುವ ಕಾರಣ, ತಕ್ಷಣದಲ್ಲೇ ಚುನಾವಣಾ ಪ್ರಕ್ರಿಯೆ ಆರಂಭಿಸಿ ವರದಿ ಸಲ್ಲಿಸುವಂತೆ ಸಹಕಾರ ಸಂಘಗಳ ಜಿಲ್ಲಾ ನೋಂದಣಾಧಿಕಾರಿಯು ಮಂಡಳಿ ಅಧ್ಯಕ್ಷರಿಗೆ ನೋಟಿಸ್ ನೀಡಿದ್ದಾರೆ.

‘ಏಳು ದಿನಗಳ ಒಳಗಾಗಿ ಸಂಘದ ಬೈಲಾ ಅನುಸರಿಸಿ ಚುನಾವಣಾ ಪ್ರಕ್ರಿಯೆ ಪ್ರಾರಂಭಿಸಿ. ತಪ್ಪಿದಲ್ಲಿ ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960 ಕಲಂ 27(ಎ) ಅನ್ವಯ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಗೆ ಆಡಳಿತಾಧಿಕಾರಿ ನೇಮಿಸಲು ಸರ್ಕಾರಕ್ಕೆ ಶಿಫಾರಸು ಮಾಡಲಾಗುವುದು’ ಎಂದು ನೋಟಿಸ್‌ನಲ್ಲಿ ಉಲ್ಲೇಖಿಸಲಾಗಿದೆ.

ಕಳೆದ ಜೂನ್ 5ರಂದು ಸಹಕಾರ ಸಂಘಗಳ ಜಿಲ್ಲಾ ನೋಂದಣಾಧಿಕಾರಿಗೆ ಮಂಡಳಿಯ ಅಧ್ಯಕ್ಷ ಭಾ.ಮ.ಹರೀಶ್ ಪತ್ರ ಬರೆದು ಅವಧಿ ವಿಸ್ತರಿಸಲು ಮನವಿ ಮಾಡಿದ್ದರು. ಅದು ತಿರಸ್ಕೃತವಾಗಿದೆ.

ಫ್ರೇಜರ್‌ಟೌನ್ ರೈಲ್ವೆ ಮೇಲ್ಸೇತುವೆ ಉದ್ದ ವಿಸ್ತರಣೆ ಇಲ್ಲ

ನಿವಾಸಿಗಳ ಮನವಿಗೆ ಮನ್ನಣೆ

ಪ್ರಜಾವಾಣಿ ವಾರ್ತೆ


ಫ್ರೇಜರ್‌ಟೌನ್‌ನಲ್ಲಿ ನಿರ್ಮಿಸಲಾಗುತ್ತಿರುವ ರೈಲ್ವೆ ಮೇಲ್ಸೇತುವೆ ಸ್ಥಳಕ್ಕೆ ಬುಧವಾರ ಭೇಟಿ ನೀಡಿದ್ದ ಶಾಸಕ ಎ.ಸಿ. ಶ್ರೀನಿವಾಸ್ ಅವರು ನಿವಾಸಿಗಳೊಂದಿಗೆ ಮಾತುಕತೆ ನಡೆಸಿದರು

ಬೆಂಗಳೂರು: ಫ್ರೇಜರ್ ಟೌನ್‌ನಲ್ಲಿ ಮೂಲ ನಕ್ಷೆಗೆ ವ್ಯತಿರಿಕ್ತವಾಗಿ ರೈಲ್ವೆ ಮೇಲ್ಸೇತುವೆಯನ್ನು ವಿಸ್ತರಿಸುವ ಯೋಜನೆಯನ್ನು ರೈಲ್ವೆ ಇಲಾಖೆ ಕೈಬಿಟ್ಟಿದೆ. ಇದರಿಂದ ಸ್ಥಳೀಯ ನಿವಾಸಿಗಳ ಒತ್ತಾಸೆ ಈಡೇರಿದಂತಾಗಿದೆ.

ಶಾಸಕ ಎ.ಸಿ. ಶ್ರೀನಿವಾಸ್ ಹಾಗೂ ರೈಲ್ವೆ ಎಂಜಿನಿಯರ್‌ಗಳು ಮೇಲ್ಸೇತುವೆಯನ್ನು ಹಿಂದಿನ ಯೋಜನೆಯಂತೆಯೇ ಪೂರ್ಣಗೊಳಿಸುವುದಾಗಿ ಭರವಸೆ ನೀಡಿದ್ದಾರೆ.

ಮಸೀದಿ ರಸ್ತೆಯಿಂದ ರಿಚರ್ಡ್ಸ್ ಪಾರ್ಕ್‌ವರೆಗೆ ರೈಲ್ವೆ ಮೇಲ್ಸೇತುವೆಯನ್ನು ನಿರ್ಮಿಸಲಾಗುತ್ತಿದೆ. ಸುಮಾರು 80 ವರ್ಷಗಳ ಹಿಂದಿನ ಮೇಲ್ಸೇತುವೆಯನ್ನು ತೆರವು ಮಾಡಿ, ಮರು ನಿರ್ಮಾಣ ಮಾಡಲಾಗುತ್ತಿದೆ. ಆದರೆ, ಸ್ಥಳೀಯರೊಂದಿಗೆ ಚರ್ಚಿಸಿದಂತೆ ಹಾಗೂ ನಕ್ಷೆಯಲ್ಲಿರುವಂತೆ ನಿರ್ಮಾಣ ಮಾಡದೆ, ಏಕಾಏಕಿ ವಿಸ್ತರಣೆ ಕಾರ್ಯ ಆರಂಭಿಸಲಾಗಿತ್ತು. ಇದನ್ನು ವಿರೋಧಿಸಿ ಫ್ರೇಜರ್‌ಟೌನ್ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೇಷನ್ (ಎಫ್‌ಟಿಆರ್‌ಡಬ್ಲ್ಯುಎ) ಸದಸ್ಯರು ಮಂಗಳವಾರ ಪ್ರತಿಭಟನೆ ನಡೆಸಿದ್ದರು. ಶಾಸಕರು ಹಾಗೂ ಎಂಜಿನಿಯರ್‌ಗಳು ಸ್ಥಳಕ್ಕೆ ಬರಬೇಕೆಂದು ಆಗ್ರಹಿಸಿದರು.

ಇದಕ್ಕೆ ಸ್ಪಂದಿಸಿದ ಪುಲಕೇಶಿನಗರದ ಶಾಸಕ ಎ.ಸಿ. ಶ್ರೀನಿವಾಸ್ ಅವರು ಎಂಜಿನಿಯರ್‌ಗಳೊಂದಿಗೆ ಬುಧವಾರ ಸ್ಥಳಕ್ಕೆ ಬಂದು ಪರಿಶೀಲನೆ ನಡೆಸಿದರು. ನಿವಾಸಿಗಳ ಬೇಡಿಕೆಗೆ ಸ್ಪಂದಿಸಿ ಮೂಲ ನಕ್ಷೆಯಂತೆಯೇ ಮೇಲ್ಸೇತುವೆ ಕಾಮಗಾರಿ ನಡೆಸಲು ಸೂಚಿಸಿದರು. ಮೇಲ್ಸೇತುವೆ ಕೆಲಸ ನಿರ್ಮಿಸುತ್ತಿರುವ ರೈಲ್ವೆ ಹಾಗೂ ರ‍್ಯಾಂಪ್ ಕಾಮಗಾರಿ ಮಾಡುತ್ತಿರುವ ಬಿಬಿಎಂಪಿ ಎಂಜಿನಿಯರ್‌ಗಳು ಹಿಂದಿನ ಯೋಜನೆಯಂತೆಯೇ ಕಾಮಗಾರಿ ನಿರ್ವಹಿಸುವುದಾಗಿ ಭರವಸೆ ನೀಡಿದರು.

‘ರೈಲ್ವೆ ಮೇಲ್ಸೇತುವೆ ಹಾಗೂ ರ‍್ಯಾಂಪ್ ವಿಸ್ತರಣೆಯಿಂದ ಇಲ್ಲಿನ ಜನರು ಓಡಾಡುವುದಕ್ಕೆ ಸ್ಥಳಾವಕಾಶ ಕಿರಿಯದಾಗುತ್ತಿತ್ತು. ಮಕ್ಕಳು, ವೃದ್ಧರಿಗೆ ತೊಂದರೆಯಾಗುತ್ತಿತ್ತು. ಅಲ್ಲದೆ, ನೂರಾರು ವರ್ಷಗಳಿಂದ ಇರುವ ಹತ್ತಾರು ಮರಗಳನ್ನು ತೆರವು ಮಾಡಬೇಕಾಗಿತ್ತು. ಹೀಗಾಗಿ ವಿಸ್ತರಣೆ ಬೇಡ ಎಂಬುದು ನಮ್ಮ ಆಗ್ರಹವಾಗಿತ್ತು. ಇದಕ್ಕೆ ಸ್ಪಂದಿಸಿದ ಶಾಸಕರು ಹಾಗೂ ಎಂಜಿನಿಯರ್‌ಗಳು ಸ್ಥಳಕ್ಕೆ ಬಂದು, ನಿವಾಸಿಗಳೊಂದಿಗೆ ಚರ್ಚಿಸಿದರು. ನಮ್ಮ ಮನವಿಯನ್ನು ಆಲಿಸಿ, ಮೇಲ್ಸೇತುವೆ ವಿಸ್ತರಣೆಯನ್ನು ಕೈಬಿಟ್ಟಿದ್ದಾರೆ. ಇದಕ್ಕಾಗಿ ಅವರಿಗೆಲ್ಲ ಅಭಿನಂದನೆಗಳು’ ಎಂದು ಅಸೋಸಿಯೇಷನ್‌ನ ಸೌದ್ ದಸ್ತಗೀರ್ ತಿಳಿಸಿದರು.

ಚಲನಚಿತ್ರ ನಿರ್ದೇಶಕರ ಸಂಘದ ಅಧ್ಯಕ್ಷರಾಗಿ ಎನ್ನಾರ್.ಕೆ.ವಿಶ್ವನಾಥ್

ಪ್ರಜಾವಾಣಿ ವಾರ್ತೆ


ಎನ್ನಾರ್ ಕೆ. ವಿಶ್ವನಾಥ್

ಬೆಂಗಳೂರು: ಕರ್ನಾಟಕ ಚಲನಚಿತ್ರ ನಿರ್ದೇಶಕರ ಸಂಘದ ನೂತನ ಅಧ್ಯಕ್ಷರಾಗಿ ಎನ್ನಾರ್.ಕೆ.ವಿಶ್ವನಾಥ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಕಳೆದ ಸೆಪ್ಟೆಂಬರ್‌ನಲ್ಲಿ ಸಂಘದ ಚುನಾವಣೆ ನಡೆದಿದ್ದು, ಎನ್.ಆರ್. ನಂಜುಂಡೇಗೌಡರು ಸಂಘದ ಅಧ್ಯಕ್ಷರಾಗಿದ್ದರು. ಅವರು ಕಾರಣಾಂತರಗಳಿಂದ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದು, ಅಧ್ಯಕ್ಷ ಸ್ಥಾನ ಖಾಲಿಯಾಗಿತ್ತು.

ನಂತರ ಹೊಸ ಸಮಿತಿ ರಚನೆಯಾಗಿದ್ದು, ಚುನಾವಣೆಯಲ್ಲಿ ಅತ್ಯಧಿಕ ಮತಗಳಿಂದ ವಿಜೇತರಾಗಿದ್ದ ಎನ್ನಾರ್. ಕೆ.ವಿಶ್ವನಾಥ್ ಅವರನ್ನು ಅಧ್ಯಕ್ಷರಾಗಿ ಸಮಿತಿ ಆಯ್ಕೆ ಮಾಡಿದೆ. ಉಪಾಧ್ಯಕ್ಷರಾಗಿ ಎಸ್. ಕೆ.ನಾಗೇಂದ್ರ ಅರಸ್ ಮತ್ತು ಜಗದೀಶ್ ಕೊಪ್ಪ, ಕಾರ್ಯದರ್ಶಿಯಾಗಿ ವಿಶಾಲ್ ಧೀರಜ್, ಜಂಟಿ ಕಾರ್ಯದರ್ಶಿಯಾಗಿ ಮಳವಳ್ಳಿ ಸಾಯಿಕೃಷ್ಣ, ಖಜಾಂಚಿಯಾಗಿ ಆರ್. ಮಂಜುನಾಥ ದೈವಜ್ಞ ಆಯ್ಕೆಯಾಗಿದ್ದಾರೆ. ಬಿ. ರಾಮಮೂರ್ತಿ, ಜೋ ಸೈಮನ್, ಪಿ.ಉಮೇಶ್ ನಾಯಕ್, ಬಸವರಾಜ ಬಳ್ಳಾರಿ, ಎಂ.ಮಂಜುನಾಥ್ ಮಸ್ಕಲ್‌ಮಟ್ಟಿ, ಸಬಾಸ್ಟಿನ್ ಡೇವಿಡ್, ಶ್ರೀನಾಥ್ ವಸಿಷ್ಠ, ಎಂ.ಪಿ. ಆರಿಫ್ ಆದತ್, ಎಂ.ಬಿ.ರಾಮ್ ಪ್ರಸಾದ್ ಕಾರ್ಯಕಾರಿ ಸಮಿತಿಯಲ್ಲಿದ್ದಾರೆ.

ಗರ್ಭಿಣಿಯಾದ ಬಾಲಕಿ: ಮೆಕ್ಯಾನಿಕ್ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 16 ವರ್ಷದ ಬಾಲಕಿಯನ್ನು ಪುಸಲಾಯಿಸಿ ಲೈಂಗಿಕ ದೌರ್ಜನ್ಯ ಎಸಗಿ ಗರ್ಭಿಣಿಯಾಗಿಸಿದ್ದ ಆರೋಪಿಯನ್ನು ರಾಜಾಜಿನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಬಾಲಕಿ, ಪೋಷಕರ ಜೊತೆ ವಾಸವಿದ್ದಾಳೆ. 20 ವರ್ಷ ವಯಸ್ಸಿನ ಆರೋಪಿ ಮೆಕ್ಯಾನಿಕ್ ಆಗಿದ್ದು, ಬಾಲಕಿ ಮನೆ ಸಮೀಪದಲ್ಲಿ ವಾಹನ ದುರಸ್ತಿ ಅಂಗಡಿ ಇಟ್ಟುಕೊಂಡಿದ್ದಾನೆ. ಬಾಲಕಿಯ ಪೋಷಕರು ನೀಡಿರುವ ದೂರು ಆಧರಿಸಿ ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆ (ಪೋಕ್ಸೊ) ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡು ಆರೋಪಿಯನ್ನು ಬಂಧಿಸಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಶಾಲೆ ಅರ್ಧಕ್ಕೆ ಬಿಟ್ಟು ಮನೆಯಲ್ಲಿದ್ದ ಬಾಲಕಿ ಜೊತೆ ಸ್ನೇಹ ಬೆಳೆಸಿದ್ದ ಆರೋಪಿ, ಹಲವು ಬಾರಿ ಲೈಂಗಿಕ ದೌರ್ಜನ್ಯ ಎಸಗಿದ್ದ. ವಿಷಯವನ್ನು ಯಾರಿಗೂ ತಿಳಿಸದಂತೆ ಆರೋಪಿ ಬೆದರಿಸಿದ್ದ’ ಎಂದು ಮೂಲಗಳು ತಿಳಿಸಿವೆ.

ಅರ್ಜಿ ಆಹ್ವಾನ

ಬೆಂಗಳೂರು: ಮಂಜುಳಾ ಸಚ್ಚಿದಾನಂದ ಮೂರ್ತಿ ಟ್ರಸ್ಟ್‌ನಿಂದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದೆ. 2022–23ನೇ ಸಾಲಿನಲ್ಲಿ ನಡೆದ ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕಗಳಿಸಿದ ಬೆಂಗಳೂರು, ಬೆಂಗಳೂರು ಗ್ರಾಮಾಂತರ, ತುಮಕೂರು ಮತ್ತು ರಾಮನಗರ ಜಿಲ್ಲೆಯ ವಿದ್ಯಾರ್ಥಿಗಳು ಜೂನ್ 20ರೊಳಗೆ ಅರ್ಜಿ ಸಲ್ಲಿಸಬಹುದು ಎಂದು ಪ್ರಕಟಣೆ ತಿಳಿಸಿದೆ. ಮಾಹಿತಿಗೆ: 9880532006ಗೆ ಸಂಪರ್ಕಿಸಿ.

ಪುತ್ರಿ ಮೇಲೆ ಅತ್ಯಾಚಾರ ತಂದೆಗೆ 20 ವರ್ಷ ಜೈಲು

ಪ್ರಜಾವಾಣಿ ವಾರ್ತೆ

ರಾಮನಗರ: ತನ್ನ 13 ವರ್ಷದ ಪುತ್ರಿ ಮೇಲೆ ಅತ್ಯಾಚಾರ ಎಸಗಿದ 45 ವರ್ಷದ ತಂದೆಗೆ, 20 ವರ್ಷ ಜೈಲು ಶಿಕ್ಷೆ ಹಾಗೂ ದಂಡ ವಿಧಿಸಿ, ಬೆಂಗಳೂರು ಗ್ರಾಮಾಂತರ ಜಿಲ್ಲೆಯ 2ನೇ ತ್ವರಿತ ವಿಶೇಷ ನ್ಯಾಯಾಲಯ (ಎಫ್‌ಟಿಎಸ್‌ಸಿ) ಬುಧವಾರ ಆದೇಶ ಹೊರಡಿಸಿದೆ.

ಮೂಲತಃ ರಾಯಚೂರು ಜಿಲ್ಲೆಯವನಾದ ವ್ಯಕ್ತಿ, 2021ರಲ್ಲಿ ಕೃತ್ಯ ಎಸಗಿದ್ದ. ಈ ಕುರಿತು ಕಗ್ಗಲಿಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ಪುತ್ರಿಯನ್ನು ಬೆದರಿಸಿ ಅತ್ಯಾಚಾರ ಎಸಗಿದ್ದ ಆತ, ಬೆತ್ತಲೆ ಚಿತ್ರವನ್ನು ವಾಟ್ಸ್‌ಆ್ಯಪ್‌ಗೆ ಕಳಿಸುವಂತೆ ಕೇಳಿದ್ದ. ಪುತ್ರಿ ಕಳಿಸಿದ್ದ ಫೋಟೊ ಆತನ ಮೊಬೈಲ್ ಸಂಖ್ಯೆ ಬದಲು ಸ್ಟೇಟಸ್ ಹೋಗಿತ್ತು. ಇದನ್ನು ಗಮನಿಸಿದವರೊಬ್ಬರು ಕೂಡಲೇ ತಾಯಿಯ ಗಮನಕ್ಕೆ ತಂದರು. ಈ ಬಗ್ಗೆ ಪುತ್ರಿಯನ್ನು ವಿಚಾರಿಸಿದಾಗ, ಗಂಡನ ಕೃತ್ಯ ಪತ್ತೆಯಾಗಿತ್ತು. ಕೂಡಲೇ ತಾಯಿ ಪೊಲೀಸ್ ಠಾಣೆಗೆ ದೂರು ಕೊಟ್ಟಿದ್ದರು.

ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆ (ಪೋಕ್ಸೊ) ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡಿದ್ದ ಇನ್‌ಸ್ಪೆಕ್ಟರ್ ರಾಮಪ್ಪ ಬಿ. ಗುತ್ತೇರ್ ಅವರು, ವೆಂಕಟೇಶನನ್ನು ಬಂಧಿಸಿದ್ದರು. ತನಿಖೆ ನಡೆಸಿ, ಕೋರ್ಟ್‌ಗೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

ಪ್ರಕರಣದ ವಿಚಾರಣೆ ನಡೆಸಿದ್ದ ನ್ಯಾಯಾಧೀಶರಾದ ಟಿ.ಸಿ. ಶ್ರೀಕಾಂತ ಅವರು, ಆರೋಪಿ ವಿರುದ್ಧದ ಆರೋಪಗಳು ಸಾಬೀತಾದ ಹಿನ್ನೆಲೆಯಲ್ಲಿ ಅಪರಾಧಿಗೆ 20 ವರ್ಷ ಕಾರಾಗೃಹ ಶಿಕ್ಷೆ, ₹5 ಸಾವಿರ ದಂಡ ಹಾಗೂ ಸಂತ್ರಸ್ತೆಗೆ ₹5 ಲಕ್ಷ ಪರಿಹಾರ ನೀಡುವಂತೆ ಆದೇಶ ನೀಡಿದರು. ಪಬ್ಲಿಕ್ ಪ್ರಾಸಿಕ್ಯೂಟರ್ ಸಿ.ಕೆ. ವಾಣಿ ವಾದ ಮಂಡಿಸಿದ್ದರು.

ಲೋಡ್ ಶೆಡ್ಡಿಂಗ್ ಇಲ್ಲ: ಬೆಸ್ಕಾಂ ಸ್ಪಷ್ಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಸ್ಕಾಂ ವ್ಯಾಪ್ತಿಯ ಎಂಟು ಜಿಲ್ಲೆಗಳಲ್ಲಿ ಯಾವುದೇ ರೀತಿಯ ಲೋಡ್ ಶೆಡ್ಡಿಂಗ್ ಜಾರಿಯಲ್ಲಿ ಇಲ್ಲ ಎಂದು ಬೆಸ್ಕಾಂ ತಿಳಿಸಿದೆ.

‘ರಾಜ್ಯದೆಲ್ಲೆಡೆ ವಿದ್ಯುತ್ ಕಣ್ಣಾಮುಚ್ಚಾಲೆ’ ಎನ್ನುವ ಶೀರ್ಷಿಕೆ ಅಡಿಯಲ್ಲಿ ‘ಪ್ರಜಾವಾಣಿ’ ಬುಧವಾರದ ಆವೃತ್ತಿಯಲ್ಲಿ ಪ್ರಕಟವಾದ ವರದಿಗೆ ಬೆಸ್ಕಾಂ ಈ ಸ್ಪಷ್ಟನೆ ನೀಡಿದೆ.

ಬೇಡಿಕೆಗಿಂತ ಹೆಚ್ಚುವರಿ ವಿದ್ಯುತ್ ಅನ್ನು ಬೆಸ್ಕಾಂ ಹೊಂದಿದೆ. ಏಪ್ರಿಲ್‌ನಲ್ಲಿ ವಿದ್ಯುತ್ ಬೇಡಿಕೆ ಪ್ರತಿ ದಿನಕ್ಕೆ 15 ಕೋಟಿಗೂ ಹೆಚ್ಚು ಯೂನಿಟ್ ದಾಖಲಾಗಿತ್ತು. 2023ರ ಜೂನ್ 14ರಂದು ದಿನದ ವಿದ್ಯುತ್ ಬೇಡಿಕೆ 12 ಕೋಟಿ ಯೂನಿಟ್‌ಗೆ ಇಳಿದಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ರಾಜ್ಯದಲ್ಲಿ ಮುಂಗಾರು ಮಳೆ ಆರಂಭವಾಗಿರುವುದರಿಂದ ನೀರಾವರಿ ಪಂಪ್‌ಸೆಟ್‌ಗಳ ಮೇಲಿನ ವಿದ್ಯುತ್ ಬೇಡಿಕೆ ಪ್ರಮಾಣ ಗಣನೀಯವಾಗಿ ಕಡಿಮೆಯಾಗಿದೆ. ಪರೀಕ್ಷೆ ಸಮಯದಲ್ಲಿ ಯಾವುದೇ ನಿರ್ವಹಣೆ ಕಾರ್ಯವನ್ನು ಕೈಗೆತ್ತಿಕೊಳ್ಳದೆ ಬೆಸ್ಕಾಂ ನಿರಂತರ ವಿದ್ಯುತ್ ಪೂರೈಕೆ ಮಾಡಿದೆ. ಬೆಸ್ಕಾಂ ಹಾಗೂ ಕೆಪಿಟಿಸಿಎಲ್ ವತಿಯಿಂದ ಕೈಗೆತ್ತಿಕೊಳ್ಳುವ ವಿದ್ಯುತ್ ಮಾರ್ಗಗಳ ದುರಸ್ತಿ ಹಾಗೂ ನಿರ್ವಹಣೆ ಸಂದರ್ಭದಲ್ಲಿ ಸಾರ್ವಜನಿಕರಿಗೆ ದಿನಪತ್ರಿಕೆಗಳ ಮೂಲಕ ಮುಂಚಿತವಾಗಿ ಮಾಹಿತಿ ನೀಡಲಾಗುತ್ತದೆ ಎಂದು ತಿಳಿಸಿದೆ.

ಕಳೆದ ಮೇ ತಿಂಗಳಲ್ಲಿ ಸುರಿದ ಪೂರ್ವ ಮುಂಗಾರು ಗಾಳಿ-ಮಳೆಗೆ ವಿದ್ಯುತ್‌ಗೆ ಸಂಬಂಧಿಸಿದ ಮೂಲ ಸೌಕರ್ಯಗಳಿಗೆ ಸಾಕಷ್ಟು ಹಾನಿಯಾಗಿದ್ದು, ಅವುಗಳನ್ನು ತ್ವರಿತಗತಿಯಲ್ಲಿ ಸರಿಪಡಿಸುವಲ್ಲಿ ಸಿಬ್ಬಂದಿ ಯಶಸ್ವಿಯಾಗಿದ್ದಾರೆ ಎಂದೂ ತಿಳಿಸಿದೆ.

ಆಸ್ತಿ ಕಬಳಿಸಲು ಯತ್ನ: ಸಂಬರಗಿ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಲಕ್ಕೆ ಹೆಚ್ಚಿನ ಬಡ್ಡಿ ನೀಡುವಂತೆ ಒತ್ತಾಯಿಸಿ ಆಸ್ತಿ ಕಬಳಿಸಲು ಯತ್ನಿಸುತ್ತಿರುವ ಆರೋಪದಡಿ ಪ್ರಶಾಂತ್ ಸಂಬರಗಿ ವಿರುದ್ಧ ಹಲಸೂರು ಗೇಟ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

'ಬನಶಂಕರಿ 3ನೇ ಹಂತದ ನಿವಾಸಿ ವೈ.ಕೆ. ದೇವನಾಥ್ ದೂರು ನೀಡಿದ್ದಾರೆ. ಬಿಜೆಪಿಯಲ್ಲಿ ಗುರುತಿಸಿಕೊಂಡಿರುವ ಪ್ರಶಾಂತ್ ಸಂಬರಗಿ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದ್ದು, ಪುರಾವೆಗಳನ್ನು ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಉತ್ತರಹಳ್ಳಿ ಮುಖ್ಯರಸ್ತೆಯ ಸಿಂಹಾದ್ರಿ ಬಡಾವಣೆಯಲ್ಲಿ ದೇವನಾಥ್ ಅವರ ಮನೆ ಇದೆ. ಆರ್ಥಿಕ ಕಷ್ಟದಲ್ಲಿದ್ದ ದೇವನಾಥ್, ಮನೆಯ ದಾಖಲಾತಿಗಳು ಹಾಗೂ ಖಾಲಿ ಚೆಕ್‌ಗಳನ್ನು ನೀಡಿ ಪ್ರಶಾಂತ್ ಸಂಬರಗಿ ಅವರಿಂದ 2017ರ ಜುಲೈನಲ್ಲಿ ₹ 25 ಲಕ್ಷ ಸಾಲ ಪಡೆದುಕೊಂಡಿದ್ದರು' ಎಂದು ಮಾಹಿತಿ ನೀಡಿವೆ.

'2017ರ ಡಿಸೆಂಬರ್‌ನಲ್ಲಿ ₹ 25 ಲಕ್ಷವನ್ನು ದೇವನಾಥ್ ವಾಪಸು ನೀಡಿದ್ದರು. ಆದರೆ, ಸಾಲಕ್ಕೆ ಹೆಚ್ಚಿನ ಬಡ್ಡಿ ನೀಡುವಂತೆ ಪ್ರಶಾಂತ್ ಒತ್ತಾಯಿಸಿದ್ದರು. ಅದನ್ನು ಪ್ರಶ್ನಿಸಿದ್ದಕ್ಕೆ ದೇವನಾಥ್ ಮೇಲೆ ಸುಳ್ಳು ಪ್ರಕರಣ ದಾಖಲಿಸಿದ್ದಾರೆ. ಆಸ್ತಿ ಕಬಳಿಸಲು ಯತ್ನಿಸುತ್ತಿರುವ ಪ್ರಶಾಂತ್ ವಿರುದ್ಧ ಕ್ರಮ ಕೈಗೊಳ್ಳುವಂತೆ ದೇವನಾಥ್ ಒತ್ತಾಯಿಸಿದ್ದಾರೆ' ಎಂದು ಮೂಲಗಳು ತಿಳಿಸಿವೆ.

ಪ್ರಕರಣದ ಬಗ್ಗೆ ಪ್ರತಿಕ್ರಿಯೆ ಪಡೆಯಲು ಪ್ರಶಾಂತ್ ಸಂಬರಗಿ ಲಭ್ಯರಾಗಲಿಲ್ಲ.

ಸಿ.ಸಿ. ಟಿ.ವಿ. ಕ್ಯಾಮೆರಾ, ದೀಪ ಅಳವಡಿಸಲು ಕ್ರಮ: ಬಿಬಿಎಂಪಿ

ಅಂಡರ್‌ಪಾಸ್‌ಗಳಲ್ಲಿ ಮೀಟರ್ ಗೇಜ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿರುವ ಅಂಡರ್‌ಪಾಸ್‌ಗಳಲ್ಲಿ ಸಿ.ಸಿ ಟಿ.ವಿ ಕ್ಯಾಮೆರಾ, ದೀಪ ಹಾಗೂ ಮಳೆ ನೀರಿನ ಮೀಟರ್ ಗೇಜ್ ಅಳವಡಿಸಲಾಗುತ್ತದೆ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದ್ದಾರೆ.

ನಗರದಲ್ಲಿ ಮಳೆಗಾಲದ ಸಿದ್ಧತೆ ಕುರಿತು ಅಧಿಕಾರಿಗಳೊಂದಿಗೆ ಬುಧವಾರ ಸಭೆ ನಡೆಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದರು.

ಬಿಬಿಎಂಪಿ ವ್ಯಾಪ್ತಿಯಲ್ಲಿ ಒಟ್ಟು 53 ಅಂಡರ್‌ಪಾಸ್‌ಗಳಿವೆ. ಇದರಲ್ಲಿ 41 ಅಂಡರ್‌ಪಾಸ್‌ಗಳಲ್ಲಿ ಈಗಾಗಲೇ ತುರ್ತು ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಉಳಿದ 12 ಅಂಡರ್‌ಪಾಸ್‌ಗಳಲ್ಲಿ ತುರ್ತು ಕಾಮಗಾರಿಗಳನ್ನು ಕೂಡಲೇ ಆರಂಭಿಸಲು ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದರು.

ನಗರದಲ್ಲಿ 198 ಪ್ರವಾಹ ಪೀಡಿತ ಸೂಕ್ಷ್ಮ ಪ್ರದೇಶಗಳಿವೆ. ಅದರಲ್ಲಿ 122 ಪ್ರವಾಹ ಪೀಡಿತ ಸೂಕ್ಷ್ಮ ಪ್ರದೇಶಗಳಲ್ಲಿ ಶಾಶ್ವತ ಪರಿಹಾರ ನೀಡಲಾಗಿದೆ. 76 ಸ್ಥಳಗಳಲ್ಲಿ ತಾತ್ಕಾಲಿಕವಾಗಿ ಪರಿಹಾರ ಕಂಡುಕೊಳ್ಳಲಾಗಿದೆ. ಎಲ್ಲಾ ಸೂಕ್ಷ್ಮ ಪ್ರದೇಶಗಳಲ್ಲಿ ಮುನ್ನೆಚ್ಚರಿಕೆ ವಹಿಸಿ ಪರಿಶೀಲಿಸಿ ಸಮಸ್ಯೆಯಾಗದಂತೆ ನೋಡಿಕೊಳ್ಳಲು ತಿಳಿಸಲಾಗಿದೆ ಎಂದು ಹೇಳಿದರು.

ವಲಯ ವ್ಯಾಪ್ತಿಯ ಸೂಕ್ಷ್ಮ ಪ್ರದೇಶಗಳಲ್ಲಿ ಹೆಚ್ಚು ನೀರು ನಿಲ್ಲುವಂತಹ ಪ್ರದೇಶದಲ್ಲಿ ಪಂಪ್‌ಗಳ ವ್ಯವಸ್ಥೆ ಮಾಡಿಕೊಳ್ಳಬೇಕು. ಅರಣ್ಯ ವಿಭಾಗದಿಂದ ಮರಗಳು ಬಿದ್ದಿರುವ ಸ್ಥಳಕ್ಕೆ ತ್ವರಿತವಾಗಿ ಹೋಗಲು ತಂಡಗಳು ಸದಾ ಸನ್ನದ್ಧವಾಗಿರಬೇಕು. ನಗರದಲ್ಲಿ ಮೆಟ್ರೊ, ಜಲಮಂಡಳಿ, ಬೆಸ್ಕಾಂ, ಕೆ.ಪಿ.ಟಿ.ಸಿ.ಎಲ್, ಗೇಲ್ ಸೇರಿದಂತೆ ಇನ್ನಿತರ ಇಲಾಖೆಗಳು ಕೈಗೆತ್ತಿಕೊಳ್ಳುವ ಕಾಮಗಾರಿಗಳಿಂದ ರಸ್ತೆ ಬದಿಯ ಚರಂಡಿಗಳು, ರಸ್ತೆ ಮೇಲ್ಮೈ ಹಾಳಾಗಿ ಮಳೆಗಾಲದಲ್ಲಿ ರಸ್ತೆಗಳ ಮೂಲಕ ನೀರು ನುಗ್ಗುವುದು, ನೀರು ನಿಲ್ಲುವ ಸಮಸ್ಯೆಯಾಗುತ್ತಿದೆ.

ಶೀಘ್ರವಾಗಿ ನಗರಾಭಿವೃದ್ಧಿ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಆಡಳಿತಗಾರರ ಅಧ್ಯಕ್ಷತೆಯಲ್ಲಿ ಎಲ್ಲಾ ಇಲಾಖೆಗಳ ಜೊತೆ ಸಮನ್ವಯ ಸಭೆ ನಡೆಸಿ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲಾಗುವುದು. ವಲಯಗಳ ಹಿರಿಯ ಅಧಿಕಾರಿಗಳು ಮಳೆಗಾಲದಲ್ಲಿ ರಾಜಕಾಲುವೆ ಕಾಮಗಾರಿ, ಪ್ರವಾಹ ಪೀಡಿತ ಪ್ರದೇಶಗಳು, ಕೆಳಸೇತುವೆ ಹಾಗೂ ಮೇಲ್ಸೇತುವೆಗಳ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಬೇಕು. ಸಮಸ್ಯೆಗಳನ್ನು ಕೂಡಲೇ ಬಗೆಹರಿಸಬೇಕು ಎಂದು ಸೂಚಿಸಲಾಗಿದೆ ಎಂದು ತುಷಾರ್ ಗಿರಿನಾಥ್ ಹೇಳಿದರು.

ಅಂಕಿ-ಅಂಶ

198 ಪ್ರವಾಹ ಪೀಡಿತ ಸ್ಥಳಗಳು

122 ತುರ್ತು ಕಾಮಗಾರಿ ನಡೆಸಲಾಗಿರುವ ಸ್ಥಳಗಳು

ಪ್ರವಾಹ ಪೀಡಿತ ಸ್ಥಳಗಳು

ವಲಯ	ಅತಿಸೂಕ್ಷ್ಮ	ಸೂಕ್ಷ್ಮ	ಒಟ್ಟು
ಪೂರ್ವ	5	15	20
ಪಶ್ಚಿಮ	5	33	38
ದಕ್ಷಿಣ	0	6	6
ಕೋರಮಂಗಲ ಕಣಿವೆ	5	0	5
ಯಲಹಂಕ	8	3	11
ಮಹದೇವಪುರ	11	47	58
ಬೊಮ್ಮನಹಳ್ಳಿ	17	11	28
ಆರ್‌.ಆರ್‌. ನಗರ	4	19	23
ದಾಸರಹಳ್ಳಿ	0	9	9
ಒಟ್ಟು	55	143	198

ಸುದ್ದಿ 2 ನಿಮಿಷ

ನೀಟ್: ಅಲೆನ್ ಕೆರಿಯರ್‌ನ ಇಬ್ಬರಿಗೆ 705 ಅಂಕ

ಬೆಂಗಳೂರು: ವೈದ್ಯಕೀಯ ಕೋರ್ಸ್‌ಗಳ ಪ್ರವೇಶಕ್ಕಾಗಿ ರಾಷ್ಟ್ರೀಯ ಪರೀಕ್ಷಾ ಸಂಸ್ಥೆ ನಡೆಸುವ ರಾಷ್ಟ್ರೀಯ ಅರ್ಹತಾ ಮತ್ತು ಪ್ರವೇಶ ಪರೀಕ್ಷೆಯಲ್ಲಿ (ನೀಟ್) ಅಲೆನ್ ಕೆರಿಯರ್ ಇನ್‌ಸ್ಟಿಟ್ಯೂಟ್‌ನ ಹಲವು ವಿದ್ಯಾರ್ಥಿಗಳು ಸಾಧನೆ ಮಾಡಿದ್ದಾರೆ.

ಬೆಂಗಳೂರಿನ ಎಸ್. ಕವಿಯರಸು, ಸಂಪದ ಗುಹಾ ತಲಾ 705 (720ಕ್ಕೆ) ಅಂಕ ಗಳಿಸಿದ್ದಾರೆ. ಬೆಂಗಳೂರಿನ ಅಹಾನ ಘೋಷ್, ಬೆಂಗಳೂರಿನ ಅಬ್ದುಲ್ ವಜೀದ್ ಕೊತ್ವಾಲ್, ಕೊಚ್ಚಿಯ ಗೌರಿ ಬಿನು, ಪಾಂಡಿಚೇರಿಯ ಡಿ.ಅಶೋಕ್ ಕುಮಾರ್ ತಲಾ 700 ಅಂಕಗಳನ್ನು ಪಡೆದಿದ್ದಾರೆ. ಅಲೆನ್‌ನಲ್ಲಿ ತರಬೇತಿ ಪಡೆದ ವಿದ್ಯಾರ್ಥಿಗಳಲ್ಲಿ 6 ವಿದ್ಯಾರ್ಥಿಗಳು 700ಕ್ಕೂ ಹೆಚ್ಚು ಅಂಕ, 14 ವಿದ್ಯಾರ್ಥಿಗಳು 690ರಿಂದ 699 ಅಂಕ, 11 ವಿದ್ಯಾರ್ಥಿಗಳು 685ರಿಂದ 675 ಅಂಕ ಗಳಿಸಿದ್ದಾರೆ.

ಅಲೆನ್ ದಕ್ಷಿಣ ಭಾರತದ ಶೈಕ್ಷಣಿಕ ಮುಖ್ಯಸ್ಥ ಮಹೇಶ್ ಯಾದವ್ ಸಾಧಕ ವಿದ್ಯಾರ್ಥಿಗಳನ್ನು ಅಭಿನಂದಿಸಿದ್ದಾರೆ.

ಧ್ರುವ ಅಡ್ವಾಣಿಗೆ ಸನ್ಮಾನ



ಬೆಂಗಳೂರು: 'ವೈದ್ಯಕೀಯ ಕೋರ್ಸ್‌ಗಳ ಪ್ರವೇಶಕ್ಕಾಗಿ ನಡೆದ ರಾಷ್ಟ್ರೀಯ ಅರ್ಹತಾ ಮತ್ತು ಪ್ರವೇಶ ಪರೀಕ್ಷೆಯಲ್ಲಿ (ನೀಟ್) ಬೆಂಗಳೂರಿನ ಆಕಾಶ್ ಬೈಜೂಸ್‌ನ ಧ್ರುವ್ ಅಡ್ವಾಣಿ ಅಖಿಲ ಭಾರತ ಮಟ್ಟದಲ್ಲಿ 5ನೇ ರ್‍ಯಾಂಕ್ ಪಡೆದಿದ್ದು, ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದಿರುವುದು ಹೆಮ್ಮೆಯ ಸಂಗತಿ' ಎಂದು ಆಕಾಶ್ ಬೈಜೂಸ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಅಭಿಷೇಕ ಮಹೇಶ್ವರಿ ತಿಳಿಸಿದ್ದಾರೆ.

'ಆಕಾಶ್ ಬೈಜೂಸ್‌ನಲ್ಲಿ ವಿದ್ಯಾರ್ಥಿಗಳಲ್ಲಿರುವ ಸಾಮರ್ಥ್ಯವನ್ನು ಗುರುತಿಸಿ ಅವರಿಗೆ ಸರಿಯಾದ ಮಾರ್ಗದರ್ಶನ ನೀಡಲಾಗುತ್ತದೆ. ಆದ್ದರಿಂದ ನೀಟ್‌ನಂತಹ ಪರೀಕ್ಷೆಗಳಲ್ಲಿ ಉತ್ತಮ ಅಂಕಗಳನ್ನು ಪಡೆಯಲು ಅವರಿಗೆ ಸಹಕಾರಿಯಾಗುತ್ತದೆ. ಸಂಸ್ಥೆಯಲ್ಲಿ ಉತ್ತಮ ಗುಣಮಟ್ಟದ ಜ್ಞಾನಾರ್ಜನೆ ಮಾಡಲಾಗುತ್ತದೆ. ಧ್ರುವ್ ಅವರ ಸಾಧನೆ ಎಲ್ಲರಿಗೂ ಮಾದರಿಯಾಗಿದೆ' ಎಂದರು.

ಆಕಾಶ್ ಬೈಜೂಸ್‌ನ ಪ್ರಾದೇಶಿಕ ನಿರ್ದೇಶಕ ಧೀರಜ್ ಮಿಶ್ರಾ, 'ಧ್ರುವ ಅಡ್ವಾಣಿ ನೀಟ್ ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡಲು ಅವರ ಕಠಿಣ ಪರಿಶ್ರಮವೇ ಕಾರಣವಾಗಿದೆ' ಎಂದು ಶ್ಲಾಘನೆ ಮಾಡಿದರು.

'ನಮ್ಮಜ್ಜ ಗುಜರಾತ್‌ನಲ್ಲಿ ಹೃದಯ ಶಸ್ತ್ರ ಚಿಕಿತ್ಸಕರಾಗಿ ಸಮಾಜ ಸೇವೆ ಮಾಡುತ್ತಿದ್ದಾರೆ. ಅದು ನನ್ನ ಮೇಲೆ ಗಾಢ ಪ್ರಭಾವ ಬೀರಿತ್ತು. ಆದ್ದರಿಂದ ನಾನು ಚಿಕ್ಕ ವಯಸ್ಸಿನಿಂದಲೂ ವೈದ್ಯನಾಗಬೇಕೆಂಬ ಕನಸು ಕಂಡಿದ್ದೆ. ನರವಿಜ್ಞಾನ ಮತ್ತು ಅಂಕೊಲಾಜಿಯಲ್ಲಿ ಆಸಕ್ತಿ ಹೊಂದಿದ್ದು, ದೆಹಲಿಯ ಅಖಿಲ ಭಾರತೀಯ ವೈದ್ಯಕೀಯ ವಿಜ್ಞಾನ ಸಂಸ್ಥೆಯಲ್ಲಿ (ಏಐಎಸ್‌ಸಿ) ಅಧ್ಯಯನ ಮಾಡುವ ಗುರಿ ಹೊಂದಿದ್ದೇನೆ' ಎಂದು ಧ್ರುವ ಅಡ್ವಾಣಿ ತಿಳಿಸಿದ್ದಾರೆ. ಕಾರ್ಯಕ್ರಮದಲ್ಲಿ ಧ್ರುವ ಅಡ್ವಾಣಿ ಅವರನ್ನು ಸನ್ಮಾನಿಸಿ ಟ್ರೋಫಿ ನೀಡಲಾಯಿತು.

ಹೆಲ್ಪ್‌ಏಜ್ ಇಂಡಿಯಾ ಸಂಸ್ಥೆ ಸಿದ್ಧಪಡಿಸಿರುವ ವರದಿ • ಸಮೀಕ್ಷೆಯಲ್ಲಿ 7,911 ಮಹಿಳೆಯರು

ಸಾಮಾಜಿಕ ತಾರತಮ್ಯ: ಸಂಕಷ್ಟದಲ್ಲಿ ವೃದ್ಧೆಯರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೃದ್ಧ ಮಹಿಳೆಯರು ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಸಂಕಷ್ಟಕ್ಕೆ ಸಿಲುಕುತ್ತಿದ್ದಾರೆ. ಶೇ 16ರಷ್ಟು ವೃದ್ಧ ಮಹಿಳೆಯರು, ಮಕ್ಕಳು ಮತ್ತು ಸೊಸೆಯಂದಿರು ಹಾಗೂ ಸಂಬಂಧಿಕರಿಂದ ನಿಂದನೆಗೆ ಒಳಾಗುತ್ತಿದ್ದಾರೆ ಎಂದು 'ಹೆಲ್ಪ್‌ಏಜ್ ಇಂಡಿಯಾ ಸಂಸ್ಥೆ ವರದಿ ತಿಳಿಸಿದೆ.

ವಿಶ್ವಸಂಸ್ಥೆಯು ಜೂನ್ 15 ಅನ್ನು 'ವಿಶ್ವ ಹಿರಿಯರ ನಿಂದನೆ ಜಾಗೃತಿ ದಿನ'ವಾಗಿ ಗುರುತಿಸಿರುವುದರಿಂದ ಹೆಲ್ಪ್‌ಏಜ್ ಇಂಡಿಯಾ ಸಂಸ್ಥೆ ಸಿದ್ಧಪಡಿಸಿರುವ ವರದಿಯನ್ನು ಬುಧವಾರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಕಾರ್ಯದರ್ಶಿ ಡಾ. ಎನ್. ಮಂಜುಳಾ ಬಿಡುಗಡೆ ಮಾಡಿದರು.

ವೃದ್ಧ ಮಹಿಳೆಯರು ದಿನನಿತ್ಯವೂ ಎದುರಿಸುತ್ತಿರುವ ನಾನಾ ಸಮಸ್ಯೆಗಳನ್ನು ಈ ವರದಿಯಲ್ಲಿ ವಿಶ್ಲೇಷಿಸಲಾಗಿದೆ. ಪ್ರಮುಖ ಎಂಟು ಮಾನದಂಡಗಳನ್ನು ಅನುಸರಿಸಿ ವರದಿ ಸಿದ್ಧಪಡಿಸಲಾಗಿದೆ. ದೈಹಿಕವಾಗಿ ಮತ್ತು ಮಾನಸಿಕವಾಗಿ ವೃದ್ಧ ಮಹಿಳೆಯರು ಅನುಭವಿಸುತ್ತಿರುವ ತೊಂದರೆಗಳು, ಸಾಮಾಜಿಕ ತಾರತಮ್ಯಗಳನ್ನು ವರದಿಯಲ್ಲಿ ಉಲ್ಲೇಖಿಸಲಾಗಿದೆ.

60ರಿಂದ 90 ವಯೋಮಾನದ 7,911 ಮಹಿಳೆಯರ ಸ್ಥಿತಿಗತಿ ಕುರಿತು ಸಮೀಕ್ಷೆ ನಡೆಸಲಾಗಿದೆ. ಕರ್ನಾಟಕ ಸೇರಿದಂತೆ 20 ರಾಜ್ಯಗಳು ಮತ್ತು ಎರಡು ಕೇಂದ್ರಾಡಳಿತ ಪ್ರದೇಶಗಳಲ್ಲಿ ಈ ಸಮೀಕ್ಷೆ ಕೈಗೊಳ್ಳಲಾಗಿದೆ. ಕರ್ನಾಟಕದಲ್ಲಿ ಬೆಂಗಳೂರು ಸೇರಿದಂತೆ 578 ವೃದ್ಧ ಮಹಿಳೆಯರನ್ನು ಸಮೀಕ್ಷೆಗೆ ಒಳಪಡಿಸಲಾಗಿತ್ತು.

ವೃದ್ಧ ಮಹಿಳೆಯರು ಮಕ್ಕಳಿಂದ ಶೇ 40ರಷ್ಟು ಮತ್ತು ಸೊಸೆಯಿಂದ ಶೇ 27ರಷ್ಟು ಹಾಗೂ ಸಂಬಂಧಿಕರಿಂದ ಶೇ 31ರಷ್ಟು ನಿಂದನೆಗೆ ಒಳಗಾಗುತ್ತಿದ್ದಾರೆ. ಆದರೆ, ಭಯದಿಂದಾಗಿ ಬಹುತೇಕ ಮಹಿಳೆಯರು ಪೊಲೀಸರಿಗೆ ದೂರು ಸಲ್ಲಿಸುತ್ತಿಲ್ಲ ಎಂದು ವರದಿ ತಿಳಿಸಿದೆ.

'ಮಹಿಳೆಯರು ವಯಸ್ಸಾದಂತೆ ನಿರ್ಲಕ್ಷ್ಯಕ್ಕೆ ಒಳಗಾಗುತ್ತಿದ್ದಾರೆ. ಹೀಗಾಗಿ, ಆರ್ಥಿಕ ಮತ್ತು ಸಾಮಾಜಿಕ ಭದ್ರತೆ ಒದಗಿಸುವ ಮೂಲಕ ಗೌರವದಿಂದ ಕಾಣಬೇಕು. ಸರ್ಕಾರದ ಯೋಜನೆಗಳ ಬಗ್ಗೆಯೂ ಜಾಗೃತಿ ಮೂಡಿಸುವುದು ಅಗತ್ಯವಿದೆ. ಪಿಂಚಣಿ, ಆರೋಗ್ಯ ರಕ್ಷಣೆ ಸೇರಿದಂತೆ ವಿವಿಧ ಸೌಲಭ್ಯಗಳು ಸಮರ್ಪಕವಾಗಿ ದೊರೆಯಬೇಕು' ಎಂದು ಹೆಲ್ಪ್‌ಏಜ್ ಇಂಡಿಯಾ ಸಿಇಒ ರೋಹಿತ್ ಪ್ರಸಾದ್ ತಿಳಿಸಿದ್ದಾರೆ.



ಬೆಂಗಳೂರಿನಲ್ಲಿ ಬುಧವಾರ 'ಹೆಲ್ಪ್‌ಏಜ್ ಇಂಡಿಯಾ ಸಂಸ್ಥೆ ವರದಿಯನ್ನು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ ಇಲಾಖೆಯ ಕಾರ್ಯದರ್ಶಿ ಡಾ.ಎನ್. ಮಂಜುಳಾ ಬಿಡುಗಡೆ ಮಾಡಿದರು. ಹೆಲ್ಪ್‌ಏಜ್ ಇಂಡಿಯಾ ಸಂಸ್ಥೆಯ ಸಲಹಾ ಸದಸ್ಯೆ ಡಾ. ಇಂದಿರಾ ಜೈ ಪ್ರಕಾಶ್, ಕರ್ನಾಟಕ ರಾಜ್ಯ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಜೈಶಂಕರ್ ಮತ್ತು ಹೆಲ್ಪ್‌ಏಜ್ ಇಂಡಿಯಾದ ಸಲಹೆಗಾರ ಸ್ವಾಮಿ ಕಮಲಾ ಮನೋಹರ್ ಪರಮಕುಶಂ ಇದ್ದರು

ಪ್ರಮುಖ ಸಲಹೆಗಳು

- ವೃದ್ಧರಿಗೆ ಅನುಕೂಲವಾಗುವ ವಾತಾವರಣ ಸೃಷ್ಟಿಸಬೇಕು.
- ವೃದ್ಧ ಮಹಿಳೆಯರು ಮತ್ತು ಅವರ ಕುಟುಂಬಗಳಲ್ಲಿ ದೈಹಿಕ ಮತ್ತು ಮಾನಸಿಕ ಆರೋಗ್ಯದ ಬಗ್ಗೆ ಅರಿವು ಮೂಡಿಸಬೇಕು.
- ವಯಸ್ಸಾದ ಮಹಿಳೆಯರಿಗೆ ಡಿಜಿಟಲ್ ತರಬೇತಿ ಕಾರ್ಯಾಗಾರಗಳನ್ನು ಆಯೋಜಿಸಬೇಕು.
- ವೃದ್ಧರ ನಿಂದನೆ ತಡೆಗಟ್ಟುವ ಜಾಗೃತಿ ಮೂಡಿಸಬೇಕು.
- ವೃದ್ಧ ಮಹಿಳೆಯರ ಹಕ್ಕುಗಳು ಮತ್ತು ಸವಲತ್ತುಗಳ ಬಗ್ಗೆ ಅರಿವು ಮೂಡಿಸಬೇಕು.
- ವೃದ್ಧ ಮಹಿಳೆಯರಿಗೆ ಸರ್ಕಾರದ ಕಲ್ಯಾಣ ಯೋಜನೆಗಳಿಗೆ ಅರ್ಜಿ ಸಲ್ಲಿಸುವ ಪ್ರಕ್ರಿಯೆಗಳನ್ನು ಸರಳಗೊಳಿಸಬೇಕು.

ವೃದ್ಧ ಮಹಿಳೆಯರ ಸಮಸ್ಯೆಗಳು

ಸರ್ಕಾರದ ಕಲ್ಯಾಣ ಯೋಜನೆಗಳ ಬಗ್ಗೆ ಮಾಹಿತಿ ಇಲ್ಲದವರು	ಶೇ 78ರಷ್ಟು
ಸಾಮಾಜಿಕ ತಾರತಮ್ಯಕ್ಕೆ ಒಳಗಾಗುವವರು	ಶೇ 64ರಷ್ಟು
ಹಣಕಾಸಿನ ಕೊರತೆ ಎದುರಿಸುತ್ತಿರುವವರು	ಶೇ 53ರಷ್ಟು
ಯಾವುದೇ ಆಸ್ತಿಗಳು ಇಲ್ಲದವರು	ಶೇ 66ರಷ್ಟು
ಯಾವುದೇ ಉಳಿತಾಯ ಹೊಂದಿಲ್ಲದವರು	ಶೇ 75ರಷ್ಟು
ಡಿಜಿಟಲ್ ಉಪಕರಣಗಳನ್ನು ಬಳಸಿಯೇ ಇಲ್ಲದವರು	ಶೇ 60ರಷ್ಟು
ಸ್ಮಾರ್ಟ್‌ಫೋನ್ ಹೊಂದಿಲ್ಲದವರು	ಶೇ 59ರಷ್ಟು
ಆರೋಗ್ಯ ವಿಮೆ ಹೊಂದಿಲ್ಲದವರು	ಶೇ 64ರಷ್ಟು
ಪೂರ್ಣಾವಧಿ ಅಥವಾ ಅರೆಕಾಲಿಕ ಉದ್ಯೋಗದಲ್ಲಿರುವವರು	ಶೇ 33ರಷ್ಟು

ಚೇತನ್ ಬದಲು ಕುಲಪತಿಗೆ ಆಹ್ವಾನ

ಯುವಜನೋತ್ಸವ ಉದ್ಘಾಟನೆ; ಅತಿಥಿ ದಿಢೀರ್ ಬದಲು

ಪ್ರಜಾವಾಣಿ ವಾರ್ತೆ



ಚೇತನ್

ಹುಬ್ಬಳ್ಳಿ: ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ ಯುವಜನೋತ್ಸವದ ಉದ್ಘಾಟನೆಗೆ ಅತಿಥಿಯಾಗಿ ನಟ ಚೇತನ್ ಅವರನ್ನು ಆಹ್ವಾನಿಸಿದ್ದಕ್ಕೆ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ (ಎಬಿವಿಪಿ) ವಿರೋಧ ವ್ಯಕ್ತಪಡಿಸಿದ ಹಿನ್ನೆಲೆಯಲ್ಲಿ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಸಿ.ಬಸವರಾಜ ಅವರು ದಿಢೀರ್ ನಿರ್ಧಾರ ಕೈಗೊಂಡು ಚೇತನ್ ಬದಲು ಧಾರವಾಡ ಕೃಷಿ ವಿಶ್ವವಿದ್ಯಾಲಯದ ಕುಲಪತಿ ಡಾ.ಪಿ.ಎಲ್. ಪಾಟೀಲ ಅವರನ್ನು ಅತಿಥಿಯನ್ನಾಗಿ ಆಹ್ವಾನಿಸಿದ್ದಾರೆ.

'ಹುಬ್ಬಳ್ಳಿಯ ನವನಗರದಲ್ಲಿ ಇರುವ ವಿಶ್ವವಿದ್ಯಾಲಯದ ಆವರಣದಲ್ಲಿ ಜೂನ್ 16 ಮತ್ತು 17ರಂದು ವಲಯ ಮಟ್ಟದ ಯುವಜನೋತ್ಸವದ ಉದ್ಘಾಟನೆಗೆ ನಟ ಚೇತನ್ ಅವರನ್ನು ಆಹ್ವಾನಿಸಲಾಗಿದೆ' ಎಂದು ಕುಲಪತಿ ಪ್ರೊ. ಸಿ.ಬಸವರಾಜ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದ್ದರು.

ಪತ್ರಿಕಾಗೋಷ್ಠಿ ಮುಗಿದ ಕೆಲ ಹೊತ್ತಿನಲ್ಲೇ ಕುಲಪತಿಯವರ ಕೊಠಡಿಗೆ ತೆರಳಿದ ಎಬಿವಿಪಿ ಸದಸ್ಯರು, 'ಚೇತನ್ ಅವರನ್ನು ಯುವಜನೋತ್ಸವ ಉದ್ಘಾಟನೆಗೆ ಆಹ್ವಾನಿಸಬಾರದು. ದೇಶದ ನ್ಯಾಯಾಂಗ ವ್ಯವಸ್ಥೆ ಬಗ್ಗೆ ನಂಬಿಕೆ ಇಲ್ಲದ, ನ್ಯಾಯಾಧೀಶರ ಬಗ್ಗೆ ಟೀಕೆ ಮಾಡಿದ ಹಾಗೂ ಪ್ರಕರಣವೊಂದಕ್ಕೆ ಸಂಬಂಧಿಸಿದಂತೆ ಜಾಮೀನಿನ ಮೇಲಿರುವ ಅವರನ್ನು ಆಹ್ವಾನಿಸಿದ್ದು ಖಂಡನೀಯ. ಅವರನ್ನು ಬದಲಿಸದಿದ್ದರೆ, ಪ್ರತಿಭಟನೆ ನಡೆಸುತ್ತೇವೆ' ಎಂದು ಎಚ್ಚರಿಕೆ ನೀಡಿದರು.

'ನ್ಯಾಯಾಂಗ ನಿಂದನೆ ಪ್ರಕರಣ ಎದುರಿಸುತ್ತಿರುವವರನ್ನು ಕಾನೂನು ವಿಶ್ವವಿದ್ಯಾಲಯವು ಕಾರ್ಯಕ್ರಮಕ್ಕೆ ಆಹ್ವಾನಿಸಿದ್ದು ಸರಿಯಲ್ಲ. ಅದಕ್ಕೆ ನಮ್ಮ ವಿರೋಧವಿದೆ' ಎಂದು ಎಬಿವಿಪಿ ರಾಜ್ಯ ಘಟಕದ ಕಾರ್ಯದರ್ಶಿ ಮಣಿಕಂಠ ಕಳಸ ಹೇಳಿದರು.

'ಎಬಿವಿಪಿ ಮನವಿಗೆ ಸ್ಪಂದಿಸಿರುವೆ. ವಿವಾದಕ್ಕೆ ಆಸ್ಪದ ಮಾಡಿಕೊಡುವುದು ಬೇಡವೆಂದು ಚೇತನ್ ಬದಲು ಧಾರವಾಡ ಕೃಷಿ ವಿಶ್ವವಿದ್ಯಾಲಯದ ಕುಲಪತಿ ಡಾ.ಪಿ.ಎಲ್. ಪಾಟೀಲ ಅವರನ್ನು ಉದ್ಘಾಟಕರನ್ನಾಗಿ ಆಹ್ವಾನಿಸಿದ್ದೇವೆ' ಎಂದು ಪ್ರೊ. ಸಿ.ಬಸವರಾಜ 'ಪ್ರಜಾವಾಣಿ'ಗೆ ತಿಳಿಸಿದರು.



ಗೋಡೆ ಕುಸಿತ ನಗರದ ಕಾಟನ್‌ಪೇಟೆಯ ಗೂಡ್ಸ್ ಶೆಡ್ ರಸ್ತೆಗೆ ಹೊಂದಿಕೊಂಡಿರುವ ರೈಲ್ವೆ ಇಲಾಖೆಯ ಕಾಂಪೌಂಡ್ ಕುಸಿದು ಬಿದ್ದಿದೆ –ಪ್ರಜಾವಾಣಿ ಚಿತ್ರ/ಕಿಶೋರ್ ಕುಮಾರ್ ಬೋಳಾರ್

ಮಾವಿನ ಹಣ್ಣಿನ ಮೇಳ ಇಂದಿನಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮದ ಸಹಯೋಗದಲ್ಲಿ ವಾಸವಿ ಕಾಂಡಿಮೆಂಟ್ಸ್ ಜೂನ್ 15ರಿಂದ 19ರವರೆಗೆ ಮಾವಿನ ಹಣ್ಣಿನ ಮೇಳವನ್ನು ಆಯೋಜಿಸಿದೆ.

'2023ನೇ ಸಾಲಿನ ಮಾವಿನ ಮೇಳವು ಜಯನಗರದ ಶಾಲಿನಿ ಮೈದಾನದಲ್ಲಿ ನಡೆಯಲಿದೆ. ಕೋಲಾರ, ಶ್ರೀನಿವಾಸಪುರ, ಮಧುಗಿರಿ, ಮಂಡ್ಯ, ಶ್ರೀರಂಗಪಟ್ಟಣ, ರಾಮನಗರದ ಜಿಲ್ಲೆಗಳಲ್ಲಿ ರೈತರು ಬೆಳೆದ ವಿವಿಧ ತಳಿಯ ಮಾವು ಗ್ರಾಹಕರಿಗೆ ನೇರವಾಗಿ ಮಾರಾಟ ಮಾಡಲಾಗುವುದು. ಜೊತೆಗೆ ಮಾವಿನ ಹಣ್ಣು ಮತ್ತು ಅದರ ವಿವಿಧ ಬಗೆಯ ಖಾದ್ಯಗಳ ಸವಿಯಬಹುದು' ಎಂದು ವಾಸವಿ ಕಾಂಡಿಮೆಂಟ್ಸ್‌ನ ಸ್ವಾತಿ ತಿಳಿಸಿದ್ದಾರೆ.

ಮಾಜಿ ಮೇಯರ್ ಕೊಲೆ ಆರೋಪಿಗೆ ಜಾಮೀನು

ಪ್ರಜಾವಾಣಿ ವಾರ್ತೆ



ಬೆಂಗಳೂರು: 'ಜಾಮೀನು ಅರ್ಜಿ ವಿಚಾರಣೆ ಸಂದರ್ಭದಲ್ಲಿ ಆರೋಪಿಯ ಗುರುತು ಪತ್ತೆಗಾಗಿ ನಡೆಸುವ ಪರೇಡ್ ಅಂಶಗಳಿಗೆ ಹೆಚ್ಚಿನ ಮಹತ್ವ ನೀಡಲು ಸಾಧ್ಯವಾಗುವುದಿಲ್ಲ' ಎಂದು ಅಭಿಪ್ರಾಯಪಟ್ಟಿರುವ ಹೈಕೋರ್ಟ್, ಕೊಲೆ ಪ್ರಕರಣವೊಂದರಲ್ಲಿ ಆರೋಪಿಗೆ ಷರತ್ತುಬದ್ಧ ಜಾಮೀನು ಮಂಜೂರು ಮಾಡಿದೆ.

ಮಾಜಿ ಮೇಯರ್ ಸಾವಿಗೆ ಕಾರಣವಾದ ಆರೋಪಕ್ಕೆ ಸಂಬಂಧಿಸಿದಂತೆ ನ್ಯಾಯಾಂಗ ಬಂಧನದಲ್ಲಿರುವ ರಾಜಾಜಿನಗರ ನಿವಾಸಿ ರಘು ಅಲಿಯಾಸ್ ಚಿಯಾ (26) ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಶ್ರೀನಿವಾಸ್ ಹರೀಶ್ ಕುಮಾರ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಪುರಸ್ಕರಿಸಿದೆ.

'ಆರೋಪಿಯ ಗುರುತು ಪತ್ತೆಗಾಗಿ ನಡೆಸಲಾಗುವ ಪರೇಡ್ ಅಂಶಗಳ ಬಗ್ಗೆ ವಿಚಾರಣಾ ನ್ಯಾಯಾಲಯದಲ್ಲಿ ದೃಢಪಡಬೇಕಿದೆ. ಈ ಪಕರಣದಲ್ಲಿ ಅರ್ಜಿದಾರ ಅಪರಾಧದಲ್ಲಿ ಭಾಗಿಯಾಗಿರುವುದನ್ನು ಮೇಲ್ನೋಟಕ್ಕೇ ದೃಢಪಡಿಸುವ ಅಂಶಗಳು ಕಂಡುಬರುತ್ತಿಲ್ಲ. ಹೀಗಾಗಿ, ಜಾಮೀನು ಮಂಜೂರು ಮಾಡಲಾಗುತ್ತಿದೆ' ಎಂದು ನ್ಯಾಯಪೀಠ ಹೇಳಿದೆ.

ಪ್ರಕರಣವೇನು?: ತುಮಕೂರಿನ ಬಟವಾಡಿ ಸರ್ವೀಸ್ ರಸ್ತೆಯಲ್ಲಿ 2018ರ ಸೆಪ್ಟೆಂಬರ್ 30ರಂದು ಎಚ್.ಆರ್. ರವಿಕುಮಾರ್ ಎಂಬುವರ ಸಾವಿಗೆ ಕಾರಣವಾದ ಆರೋಪದಡಿ ಮೃತನ ಪತ್ನಿ ಸವಿತಾ ಪೊಲೀಸರಿಗೆ ದೂರು ನೀಡಿದ್ದರು. ಈ ದೂರು ಆಧರಿಸಿ ಕ್ಯಾತಸಂದ್ರ ಠಾಣೆ ಪೊಲೀಸರು ರಘುವನ್ನು ಬಂಧಿಸಿದ್ದರು. ಪ್ರಕರಣದಲ್ಲಿ ರಘು ಎಂಟನೇ ಆರೋಪಿ.

ರಘು ಸಲ್ಲಿಸಿದ್ದ ಜಾಮೀನು ಅರ್ಜಿಯನ್ನು ಬೆಂಗಳೂರು ಪ್ರಧಾನ ಸಿಟಿ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯ ನಿರಾಕರಿಸಿತ್ತು. ಈ ಆದೇಶ ಪ್ರಶ್ನಿಸಿ ರಘು ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದರು. ಅರ್ಜಿದಾರರ ಪರ ವಕೀಲ ಎಸ್.ಸುನೀಲ್ ಕುಮಾರ್ ವಾದ ಮಂಡಿಸಿದ್ದರು.

ಯೂಟ್ಯೂಬ್‌ನಲ್ಲಿ ವಿಡಿಯೊ ಅಪ್‌ಲೋಡ್ ಮಾಡಿ ಆತ್ಮಹತ್ಯೆ

ಬೆಂಗಳೂರು: 'ಹಿರಿಯ ಅಧಿಕಾರಿಗಳು ಕಿರುಕುಳ ನೀಡುತ್ತಿದ್ದಾರೆ' ಎಂದು ಆರೋಪಿಸಿ ಯೂಟ್ಯೂಬ್‌ನಲ್ಲಿ ವಿಡಿಯೊ ಅಪ್‌ಲೋಡ್ ಮಾಡಿ ಕಂಪನಿಯೊಂದರ ಉದ್ಯೋಗಿ ವಿವೇಕ್ ಆತ್ಮಹತ್ಯೆ ಮಾಡಿಕೊಂಡಿದ್ದು, ಎಚ್‌ಎಎಲ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬೀದಿ ನಾಯಿ ದಾಳಿ: ಸುಪ್ರೀಂ ಕೋರ್ಟ್ ಮೊರೆ ಹೋಗಲು ಕೇರಳ ನಿರ್ಧಾರ

ತಿರುವನಂತಪುರ (ಪಿಟಿಐ): ಬೀದಿ ನಾಯಿಗಳು ಜನರ ಮೇಲೆ ದಾಳಿ ನಡೆಸುತ್ತಿರುವ ಪ್ರಕರಣಗಳು ಹೆಚ್ಚುತ್ತಿರುವ ಕಾರಣ ಬೀದಿ ನಾಯಿಗಳ ನಿರ್ವಹಣೆಗೆ ಸಂಬಂಧಿಸಿದ ನಿಯಮಗಳಲ್ಲಿ ಬದಲಾವಣೆ ತರುವಂತೆ ಕೋರಿ ಸುಪ್ರೀಂಕೋರ್ಟ್ ಮೆಟ್ಟಿಲೇರುವುದಾಗಿ ಕೇರಳ ಸರ್ಕಾರ ಬುಧವಾರ ತಿಳಿಸಿದೆ.

ರಾಜ್ಯ ಸರ್ಕಾರ ಜಾರಿಗೆ ತಂದಿರುವ ಕುಟುಂಬಶ್ರೀ ಯೋಜನೆಯಲ್ಲಿ ಇರುವ ನಿರ್ಬಂಧಗಳನ್ನು ತೆರವು ಮಾಡುವಂತೆಯೂ ನ್ಯಾಯಾಲಯದ ಎದುರು ಮನವಿ ಮಾಡಲಾಗುತ್ತದೆ ಎಂದು ಸಚಿವ ಎಂ.ಬಿ.ರಾಜೇಶ್ ತಿಳಿಸಿದರು.

ಅಪಘಾತ: ನಗರದ ಮೂವರು ಸಾವು

ಪ್ರಜಾವಾಣಿ ವಾರ್ತೆ

ಚನ್ನಪಟ್ಟಣ: ತಾಲ್ಲೂಕಿನ ದೇವರಹೊಸಹಳ್ಳಿ ಬಳಿ ಬೆಂಗಳೂರು– ಮೈಸೂರು ಎಕ್ಸ್‌ಪ್ರೆಸ್ ಹೆದ್ದಾರಿಯಲ್ಲಿ ಬುಧವಾರ ಸಂಜೆ ಕಾರೊಂದು ಮುಂದೆ ಹೋಗುತ್ತಿದ್ದ ಲಾರಿಗೆ ಹಿಂದಿನಿಂದ ಡಿಕ್ಕಿ ಹೊಡೆದು ಇಬ್ಬರು ಯುವತಿಯರು ಸೇರಿದಂತೆ ಮೂವರು ಮೃತಪಟ್ಟಿದ್ದಾರೆ.

ಬೆಂಗಳೂರಿನ ನಿಶಾ (14), ನಿಧಿ (17), ಕೃಷ್ಣಮೂರ್ತಿ (50) ಮೃತಪಟ್ಟವರು. ಎಚ್.ಡಿ. ಕೋಟೆಯಲ್ಲಿ ನಡೆದ ಮದುವೆ ಮುಗಿಸಿಕೊಂಡು ವಾಪಸ್ ಬೆಂಗಳೂರಿಗೆ ತೆರಳುವಾಗ ಈ ದುರ್ಘಟನೆ ನಡೆದಿದೆ.

ಹಿಂದಿನಿಂದ ವೇಗವಾಗಿ ಲಾರಿಗೆ ಡಿಕ್ಕಿ ಹೊಡೆದಿರುವ ತೀವ್ರತೆಗೆ ಕಾರು ನಜ್ಜುಗುಜ್ಜಾಗಿದೆ. ಅಪಘಾತದ ತೀವ್ರತೆಗೆ ಇಬ್ಬರು ಯುವತಿಯರು ಸ್ಥಳದಲ್ಲೆ ಸಾವನ್ನಪ್ಪಿದರು. ಕಾರು ಚಾಲನೆ ಮಾಡುತ್ತಿದ್ದ ಕೃಷ್ಣಮೂರ್ತಿ ಅವರು ಆಸ್ಪತ್ರೆಗೆ ಸಾಗಿಸುವ ವೇಳೆ ಕೊನೆಯುಸಿರೆಳೆದರು. ಕಾರಿನಲ್ಲಿದ್ದ ಇನ್ನೂ ಇಬ್ಬರಿಗೆ ಗಾಯಗಳಾಗಿದ್ದು ಇವರನ್ನು ನಗರದ ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ವಿಷಯ ತಿಳಿದು ಪೊಲೀಸರು ಸ್ಥಳಕ್ಕೆ ಆಗಮಿಸಿ ಮೃತದೇಹಗಳು ಹಾಗೂ ಗಾಯಾಳುಗಳನ್ನು ಸಾರ್ವಜನಿಕ ಆಸ್ಪತ್ರೆಗೆ ಸಾಗಿಸಿದರು. ಮೃತದೇಹಗಳನ್ನು ಆಸ್ಪತ್ರೆಯ ಶವಾಗಾರದಲ್ಲಿ ಇಡಲಾಗಿದೆ. ನಗರದ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

6 ಮೇಕೆಗಳಿಗೆ ಚಿಕಿತ್ಸೆ • ಆ್ಯಸಿಡ್‌ನಿಂದ ನೀರಿನ ತೊಟ್ಟಿ ತೊಳೆದ ಪರಿಣಾಮ

ಕಲುಷಿತ ನೀರು: 18 ಮೇಕೆಗಳು ಸಾವು

ಪ್ರಜಾವಾಣಿ ವಾರ್ತೆ


ದೇವನಹಳ್ಳಿ: ತಾಲ್ಲೂಕಿನ ಚನ್ನರಾಯಪಟ್ಟಣ ಹೋಬಳಿಯ ಯಲಿಯೂರು ಗ್ರಾಮದ ಹೊರವಲಯದಲ್ಲಿ ಕಲುಷಿತ ನೀರು ಕುಡಿದು ಮೇಕೆಗಳು ಸಾವನ್ನಪ್ಪಿರುವ ಘಟನೆ ನಡೆದಿದೆ.

ದೊಡ್ಡತತ್ತಮಂಗಲ ಗ್ರಾಮದ ರೈತ ಮುನಿಶಾಮಪ್ಪ ಅಂಗವಿಕಲರು. ಮೇಕೆ ಸಾಕಾಣಿಕೆಯೇ ಜೀವನಾಧಾರವಾಗಿತ್ತು.

ಎಂದಿನಂತೆ ಮೇಕೆಗಳನ್ನು ಅರಣ್ಯ ಪ್ರದೇಶಕ್ಕೆ ಮೇಯಿಸಲು ಹೊಡೆದುಕೊಂಡು ಹೋಗಿ ಬರುವಾಗ, ಅಲ್ಲೆ ಇದ್ದ ತೊಟ್ಟಿಯಲ್ಲಿ ಮೇಕೆಗಳು ನೀರು ಕುಡಿದಿವೆ. ನೀರು ಕುಡಿದ ಸ್ವಲ್ಪ ಹೊತ್ತಲ್ಲೇ ಮೇಕೆಗಳು ಅಸ್ವಸ್ಥವಾಗಿ ಕುಸಿದು ಬಿದ್ದಿವೆ.

₹4 ಲಕ್ಷ ಬೆಲೆ ಬಾಳುವ 18 ಮೇಕೆಗಳು ಸಾವನ್ನಪ್ಪಿವೆ. ಮೇಕೆಗಳು ಕುಡಿದ ನೀರಿನ ತೊಟ್ಟಿಯನ್ನು ಆ್ಯಸಿಡ್‌ನಿಂದ ತೊಳೆದಿದ್ದು, ಹೊಸ ನೀರು ಬಿಟ್ಟಾಗ ಕೆಮಿಕಲ್ ಮಿಶ್ರಣದ ನೀರಿನಿಂದ ಸಂಭವಿಸಿರಬಹುದು ಎಂದು ಶಂಕಿಸಲಾಗಿದೆ.

ಸ್ಥಳಕ್ಕೆ ಪಶು ಸಂಗೋಪನಾ ಇಲಾಖೆ ಅಧಿಕಾರಿಗಳು ಹಾಗೂ ದೇವನಹಳ್ಳಿ ತಹಶೀಲ್ದಾರ್ ಶಿವರಾಜ್ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಪರೀಕ್ಷೆಗಾಗಿ ಒಂದು ಸಾವನ್ನಪ್ಪಿರುವ ಮೇಕೆಯನ್ನು ಪ್ರಯೋಗಾಲಯಕ್ಕೆ ಕಳುಹಿಸಿಕೊಟ್ಟಿದ್ದಾರೆ. ಜೊತೆಗೆ ಸಂಬಂಧಪಟ್ಟ ಅಧಿಕಾರಿಗಳ ಜೊತೆ ಮಾತನಾಡಿ ರೈತನಿಗೆ ಸೂಕ್ತ ಪರಿಹಾರ ಒದಗಿಸಿಕೊಡುವ ಭರವಸೆಯನ್ನು ತಹಶೀಲ್ದಾರ್ ನೀಡಿದ್ದಾರೆ.



ಮೇಕೆಗಳು ಸಾವನ್ನಪ್ಪಿರುವ ಸ್ಥಳಕ್ಕೆ ಪೊಲೀಸ್ ಇಲಾಖೆ, ಪಶು ವೈದ್ಯಕೀಯ ಹಾಗೂ ತಹಶೀಲ್ದಾರ್ ಸೇರಿದಂತೆ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದರು

ನಿತ್ಯ ಮೇಕೆಗಳನ್ನು ಮೇಯಿಸಿಕೊಂಡು ಬಂದು ತೊಟ್ಟಿಯಲ್ಲಿ ನೀರು ಕುಡಿಸುತ್ತಿದ್ದೆ, ಇಂದು ಸಹ ಮೇಕೆಗಳು ನೀರು ಕುಡಿದು ಸ್ವಲ್ಪ ದೂರ ಸಾಗಿದ ನಂತರ ಅಸ್ವಸ್ಥಗೊಂಡು ಸಾವನ್ನಪ್ಪಿವೆ

ಮುನಿಶಾಮಪ್ಪ, ರೈತ

ಪರಿಹಾರಕ್ಕೆ ಪರಿಶೀಲನೆ

18 ಮೇಕೆಗಳು ಸಾವನ್ನಪ್ಪಿದ್ದು, 6 ಮೇಕೆಗಳಿಗೆ ಹೆಚ್ಚುವರಿ ಚಿಕಿತ್ಸೆ ನೀಡಲಾಗುತ್ತಿದೆ. ಪ್ರಯೋಗಾಲಯದ ವರದಿ ನಂತರ ಮರಣಕ್ಕೆ ಕಾರಣ ತಿಳಿಯಲಿದೆ. ಪರಿಹಾರ ನೀಡಲು ಅವಕಾಶವಿದೆಯೇ ಪರಿಶೀಲಿಸಲಾಗುತ್ತಿದೆ.

ವಿಚಾರಣೆ ನಂತರ ಪೊಲೀಸರು, ಪಶು ವೈದ್ಯಕೀಯ ಇಲಾಖೆಯೂ ವರದಿ ಸಲ್ಲಿಸಿದ ನಂತರ ಕ್ರಮ ಕೈಗೊಳ್ಳಲಾಗುತ್ತದೆ ಎಂದು ತಹಶೀಲ್ದಾರ್ ಶಿವರಾಜ್ ಅವರು ತಿಳಿಸಿದರು.

'ಟ್ರ್ಯಾಕ್ಟರ್, ಟಿಪ್ಪರ್ ಸಂಚಾರಕ್ಕೆ ಸಮಯ ನಿಗದಿಪಡಿಸಿ'

ಬೆಂಗಳೂರು: ನಗರದಲ್ಲಿ ಟ್ರ್ಯಾಕ್ಟರ್, ಟಿಪ್ಪರ್, ಜೆಸಿಬಿ ಹಾಗೂ ಲಾರಿ ಸಂಚರಿಸಲು ಬಿಬಿಎಂಪಿಯಿಂದ ಪರವಾನಿಗೆ ಪಡೆದುಕೊಳ್ಳಬೇಕೆಂಬ ಆದೇಶವನ್ನು ಕೂಡಲೇ ಹಿಂಪಡೆಯಬೇಕು ಎಂದು ನಮ್ಮ ಕರ್ನಾಟಕ ಸೇನೆ ಆಗ್ರಹಿಸಿದೆ.

ಬುಧವಾರ ಸುದ್ದಿಗೋಷ್ಠಿಯಲ್ಲಿ ಟ್ರ್ಯಾಕ್ಟರ್ ಹಾಗೂ ಲಾರಿ ಮಾಲೀಕರ ಸಂಘದ ಉಪಾಧ್ಯಕ್ಷ ನಾಗರಾಜ್ 'ಬೆಂಗಳೂರು ನಗರದಲ್ಲಿ 40 ಸಾವಿರಕ್ಕೂ ಅಧಿಕ ಟ್ರ್ಯಾಕ್ಟರ್, ಟಿಪ್ಪರ್, ಜೆಸಿಬಿ ವಾಹನಗಳು ಕೃಷಿ ಉತ್ಪನ್ನ, ಕಟ್ಟಡ ತ್ಯಾಜ್ಯ ಸೇರಿ ವಿವಿಧ ರೀತಿಯ ಸರಕು ಸಾಗಣೆಕೆ ಕಾರ್ಯದಲ್ಲಿ ತೊಡಗಿಸಿಕೊಂಡಿವೆ. ಆದರೆ, ಬಿಬಿಎಂಪಿಯ ಈ ಅವೈಜ್ಞಾನಿಕ ಆದೇಶದಿಂದ ವಾಹನ ಚಾಲಕರ ಮತ್ತು ಮಾಲಕರ ಜೀವನ ದುಸ್ತರವಾಗಿದೆ' ಎಂದು ಆರೋಪಿಸಿದರು.

'ನಿಗದಿತ ಸಮಯದಲ್ಲಿ ಟ್ರ್ಯಾಕ್ಟರ್, ಟಿಪ್ಪರ್ ಹಾಗೂ ಜೆಸಿಬಿ ವಾಹನಗಳ ಸಂಚಾರಕ್ಕೆ ಅವಕಾಶ ಕಲ್ಪಿಸಬೇಕು. ಕೃಷಿ ಉತ್ಪನ್ನಗಳನ್ನು ಸಾಗಾಟ ಮಾಡುವ ಟ್ರ್ಯಾಕ್ಟರ್‌ಗಳಿಗೆ ಮುಕ್ತ ಅವಕಾಶ ನೀಡಬೇಕು' ಎಂದು ಒತ್ತಾಯಿಸಿದರು.

ಸಾರಿಗೆ ಬಸ್‌ಗಳಲ್ಲೇ ಹೆಚ್ಚು ಓಡಾಡುತ್ತಿರುವ ಮಹಿಳೆಯರು • ರೈಲ್ವೆ ಪ್ರಯಾಣದಲ್ಲಿಲ್ಲ ವ್ಯತ್ಯಾಸ

ರಾಜಹಂಸ, ವೋಲ್ವೊ ಬಸ್‌ಗಳಿಗೆ ಹೊಡೆತ

• ಬಾಲಕೃಷ್ಣ ಪಿ.ಎಚ್.


ಬೆಂಗಳೂರಿನ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲ್ವೆ ನಿಲ್ದಾಣದಲ್ಲಿ ಜನರು ಸಾಗುತ್ತಿರುವ ದೃಶ್ಯ –ಪ್ರಜಾವಾಣಿ ಚಿತ್ರ

ಬೆಂಗಳೂರು: 'ಶಕ್ತಿ' ಯೋಜನೆ ಜಾರಿಯಾಗಿ ಮಹಿಳೆಯರಿಗೆ ಉಚಿತ ಪ್ರಯಾಣದ ಅವಕಾಶ ಕಲ್ಪಿಸಿದ ಬಳಿಕ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಬಸ್‌ಗಳಲ್ಲಿ ಸಂಚರಿಸುವವರ ಸಂಖ್ಯೆ ಹೆಚ್ಚಾಗಿದೆ. ಆದರೆ, ರಾಜಹಂಸ, ವೋಲ್ವೊ ಬಸ್‌ಗಳಲ್ಲಿ ಇಳಿಮುಖವಾಗಿದೆ.

ಬೆಂಗಳೂರು–ಮೈಸೂರು ಕಡೆಗೆ 5 ನಿಮಿಷಕ್ಕೊಂದು ಬಸ್ ಇದ್ದರೂ ಪ್ರಯಾಣಿಕರ ಕೊರತೆ ಇರಲಿಲ್ಲ. ರಾಜಹಂಸ ಬಸ್ ಮಾತ್ರ ಖಾಲಿಯಾಗಿತ್ತು. ಪ್ರಯಾಣಿಕರನ್ನು ಕರೆದು ಕರೆದು ಚಾಲಕ, ನಿರ್ವಾಹಕರು ಸುಸ್ತಾಗಿದ್ದರು.

'ಕೊಳ್ಳೇಗಾಲ ಬಸ್‌ನಲ್ಲಿ ದಿನಕ್ಕೆ ಹಿಂದೆಲ್ಲ ₹ 14,000ದಿಂದ ₹ 15,000 ವರೆಗೆ ಸಂಗ್ರಹವಾಗುತ್ತಿತ್ತು. ಶಕ್ತಿ ಯೋಜನೆ ಜಾರಿಯಾದ ಮೇಲೆ ಪ್ರಯಾಣಿಕರ ಸಂಖ್ಯೆ ಹೆಚ್ಚಿದೆ. ಇಂದು ₹ 17,000 ಸಂಗ್ರಹವಾಗಿದೆ. ಅದರಲ್ಲಿ ₹ 7,900 ಮಾತ್ರ ಹಣ ನೀಡಿ ಬಂದವರು. ಉಳಿದವರು ಉಚಿತ ಪ್ರಯಾಣ ಮಾಡಿದವರು' ಎಂದು ಬೆಂಗಳೂರು–ಕೊಳ್ಳೇಗಾಲ ಬಸ್ ನಿರ್ವಾಹಕ ತಿಳಿಸಿದರು.

'ಹುಣಸೂರು ಮಾರ್ಗದಲ್ಲಿ ₹ 7,000ರಿಂದ 8,000 ಸಂಗ್ರಹವಾಗುತ್ತಿತ್ತು. ಬುಧವಾರ ₹12,000 ಆಗಿದೆ. ಅದರಲ್ಲಿ ಅರ್ಧದಷ್ಟು ಮಹಿಳೆಯರು. ಉಚಿತ ಯೋಜನೆ ಜಾರಿಯಾದ ಮೇಲೆ ಮಹಿಳೆಯರು ಬೇರೆ ವಾಹನಗಳನ್ನು ಅವಲಂಬಿಸುವುದನ್ನು ಕಡಿಮೆ ಮಾಡಿ ನಮ್ಮ ಬಸ್‌ಗಳಿಗೆ ಬರುತ್ತಿದ್ದಾರೆ' ಎಂದು ಬೆಂಗಳೂರು–ಹುಣಸೂರು ಸಾರಿಗೆ ಬಸ್ ನಿರ್ವಾಹಕ ಸಂತಸ ವ್ಯಕ್ತಪಡಿಸಿದರು.

ಪವರ್ ಪ್ಲಸ್, ಐರಾವತ ಕ್ಲಬ್ ಕ್ಲಾಸ್ ಬಸ್‌ಗಳಲ್ಲಿ ಪ್ರಯಾಣಿಕರ ಪ್ರಮಾಣ ಇಳಿಕೆಯಾಗಿಲ್ಲ. ಹವಾನಿಯಂತ್ರಣ ಪ್ರಯಾಣ ಬಯಸುವವರು ಈಗಲೂ ಈ ಬಸ್‌ಗಳನ್ನೇ ಆಯ್ಕೆ ಮಾಡಿಕೊಳ್ಳುತ್ತಿದ್ದಾರೆ. ಸಾರಿಗೆ ಬಸ್‌ಗಳಿಗಿಂತ ಹೆಚ್ಚು ಸುಖಾಸೀನವಾದ ರಾಜಹಂಸ, ಓಲ್ವೊ ಬಸ್‌ಗಳಲ್ಲಿ ಮಾತ್ರ ಭಾರಿ ಪ್ರಮಾಣದಲ್ಲಿ ಪ್ರಯಾಣಿಕರ ಸಂಖ್ಯೆ ಇಳಿಕೆಯಾಗಿದೆ.

'39 ಸೀಟಿನ ನಮ್ಮ ಬಸ್‌ನಲ್ಲಿ 25–30 ಪ್ರಯಾಣಿಕರು ಯಾವಾಗಲೂ ಇರುತ್ತಿದ್ದರು. ಈಗ ಒಂದು ತಾಸು ಕೂಗಿದರೂ 20 ಪ್ರಯಾಣಿಕರೂ ಬಂದಿಲ್ಲ. ಮಹಿಳೆಯರಿಗೆ ಉಚಿತ ಆಗಿರುವುದರಿಂದ ಅವರ ಜತೆಗೆ ಬರುವ ಪುರುಷರೂ ಸಾರಿಗೆ ಬಸ್‌ನಲ್ಲಿಯೇ ಹೋಗುತ್ತಿದ್ದಾರೆ' ಎಂದು ಬೆಂಗಳೂರು–ಮೈಸೂರು ರಾಜಹಂಸ ಬಸ್ ನಿರ್ವಾಹಕ ಬೇಸರ ವ್ಯಕ್ತಪಡಿಸಿದರು.

'ರಾಜಹಂಸದಲ್ಲಿ ಪ್ರಯಾಣಿಸುವವರು ಹೆಚ್ಚು ದಿನ ಆ ಬಸ್‌ಗಳಲ್ಲಿ ಹೋಗಲು ಸಾಧ್ಯವಾಗುವುದಿಲ್ಲ. ನಾಲ್ಕು ದಿನ ಈ ಉತ್ಸಾಹ ಇರುತ್ತದೆ. ಆಮೇಲೆ ನಮ್ಮ ಬಸ್‌ಗೆ ಬಂದೇ ಬರುತ್ತಾರೆ' ಎಂದು ಅದೇ ಬಸ್ ಚಾಲಕ ಆಶಾವಾದ ವ್ಯಕ್ತಪಡಿಸಿದರು.

> **ಶಕ್ತಿ ಯೋಜನೆ ಜಾರಿಯಾದ ಮೇಲೂ ರೈಲಿನಲ್ಲಿ ಪ್ರಯಾಣಿಕರ ಸಂಖ್ಯೆ ಕಡಿಮೆಯಾಗಿಲ್ಲ. ನಮ್ಮಲ್ಲಿ ಹಿಂದೆ ಇದ್ದಷ್ಟೇ ಪ್ರಮಾಣದಲ್ಲಿ ಪ್ರಯಾಣಿಕರಿದ್ದಾರೆ.**
> **ನರೇಂದ್ರ,** ಭಾರತೀಯ ರೈಲ್ವೆ ಸಾರ್ವಜನಿಕ ಸಂಪರ್ಕ ಅಧಿಕಾರಿ

ರೈಲಿನಲ್ಲಿ ಕಡಿಮೆಯಾಗದ ದಟ್ಟಣೆ

ಸಾರಿಗೆ ಬಸ್‌ಗಳಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣ ಆರಂಭಗೊಂಡ ಬಳಿಕವೂ ರೈಲಿನಲ್ಲಿ ಪ್ರಯಾಣಿಸುವವರ ಸಂಖ್ಯೆ ಕ್ಷೀಣಿಸಿಲ್ಲ. ದೂರದ ಊರಿಗೆ ಹೋಗುವವರು, ನಿತ್ಯ ರೈಲಿನಲ್ಲಿ ಸಂಚರಿಸುತ್ತಿದ್ದವರು ಈಗಲೂ ರೈಲಿನಲ್ಲಿಯೇ ಪ್ರಯಾಣಿಸುತ್ತಿದ್ದಾರೆ.

'ನಾವು ಹಿರಿಯೂರಿನಿಂದ ಇಲ್ಲಿಗೆ ಬಸ್‌ನಲ್ಲಿ ಬಂದೆವು. ಕುಳಿತುಕೊಳ್ಳಲೂ ಜಾಗ ಇರಲಿಲ್ಲ. ಇಲ್ಲಿಂದ ಉಡುಪಿಗೆ ಹೋಗಬೇಕು. ರೈಲಿನಲ್ಲಿ ಟಿಕೆಟ್ ಬುಕ್ ಮಾಡಿ ಹೊರಟಿದ್ದೇವೆ. ಟಿಕೆಟ್ ಬುಕ್ ಮಾಡದೇ ಇದ್ದರೂ ಕೆಎಸ್‌ಆರ್‌ಟಿಸಿ ಬಸ್‌ನಲ್ಲಿ ಹೋಗುವುದು ಕಷ್ಟ. ಅಕ್ಕಪಕ್ಕದ ಊರುಗಳಿಗಷ್ಟೇ ಈ ಬಸ್‌ಗಳಲ್ಲಿ ಓಡಾಡಬಹುದು' ಎಂದು ಹಿರಿಯೂರಿನ ಕುಸುಮಾ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

'ನಾವು ಸಂಬಂಧಿಕರೆಲ್ಲ ಸೇರಿಕೊಂಡು ಗೋಕರ್ಣಕ್ಕೆ ಹೊರಟಿದ್ದೇವೆ. ತಿಂಗಳ ಹಿಂದೆಯೇ ಟಿಕೆಟ್ ಬುಕ್ ಮಾಡಿದ್ದೆವು. ಇಲ್ಲದೇ ಇದ್ದರೆ ಬಸ್ಸಲ್ಲೇ ಹೋಗುತ್ತಿದ್ದೆವು' ಎಂದು ಚಿಕ್ಕಬಳ್ಳಾಪುರದ ಸಾವಿತ್ರಮ್ಮ, ಶ್ರೀನಿವಾಸನಗರದ ಗೌರಮ್ಮ ತಿಳಿಸಿದರು.

50 ಲಕ್ಷ ದಾಟಿದ ಮಹಿಳಾ ಪ್ರಯಾಣಿಕರ ಸಂಖ್ಯೆ

ಬೆಂಗಳೂರು: ಶಕ್ತಿ ಯೋಜನೆಯಡಿ ರಾಜ್ಯದಲ್ಲಿ ಮಂಗಳವಾರ ಪ್ರಯಾಣಿಸಿದ ಮಹಿಳೆಯರ ಸಂಖ್ಯೆ 50 ಲಕ್ಷ ದಾಟಿದೆ. ಶಕ್ತಿ ಯೋಜನೆ ಉದ್ಘಾಟನೆಗೊಂಡ ಭಾನುವಾರ 5,71,023 ಮಹಿಳೆಯರು ಇದರ ಉಪಯೋಗ ಪಡೆದುಕೊಂಡಿದ್ದರು. ಸೋಮವಾರ 41,34,726 ಮಹಿಳೆಯರು ಪ್ರಯಾಣಿಸಿದ್ದರು.

ಮಂಗಳವಾರ ಸಾರಿಗೆ ಸಂಸ್ಥೆಯ ನಾಲ್ಕು ವಿಭಾಗಗಳಾದ ಕೆಎಸ್‌ಆರ್‌ಟಿ, ಬಿಎಂಟಿಸಿ, ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ, ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಗಳಲ್ಲಿ ಒಂದೇ ದಿನ 51,52,769 ಮಹಿಳೆಯರು ಪ್ರಯಾಣಿಸಿದ್ದಾರೆ. ಅವರು ಪ್ರಯಾಣಿಸಿದ ಟಿಕೆಟ್ ಮೌಲ್ಯ ₹ 10.82 ಕೋಟಿ ಆಗಿದೆ.

ಕನಕಪುರ ರಸ್ತೆ ಎಲಿವೇಟೆಡ್ ಕಾರಿಡಾರ್: ಡಿಸಿಎಂಗೆ ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಕನಕಪುರ ಮುಖ್ಯರಸ್ತೆಯಲ್ಲಿ ಕೃಷ್ಣರಾವ್ ಪಾರ್ಕ್‌ನಿಂದ ಬನಶಂಕರಿ ಜಂಕ್ಷನ್‌ವರೆಗೆ ಎಲಿವೇಟೆಡ್ ಕಾರಿಡಾರ್ ನಿರ್ಮಿಸಬೇಕೆಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಪದ್ಮನಾಭನಗರ ವಿಧಾನಸಭೆ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿಯಾಗಿದ್ದ ವಿ. ರಘುನಾಥ ನಾಯ್ಡು ಮನವಿ ಮಾಡಿಕೊಂಡಿದ್ದಾರೆ.

'ಕನಕಪುರ ಮುಖ್ಯರಸ್ತೆ ಅತ್ಯಂತ ವಾಹನ ಸಂಚಾರದ ಕಾರಿಡಾರ್ ಆಗಿದ್ದು, ಮೆಜೆಸ್ಟಿಕ್, ಕೆ.ಆರ್. ಮಾರುಕಟ್ಟೆಯಿಂದ ಬೆಂಗಳೂರು ದಕ್ಷಿಣ ಹಾಗೂ ಕನಕಪುರ, ಹಾರೋಹಳ್ಳಿ, ಕಗ್ಗಲಿಪುರ, ತಲಘಟ್ಟಪುರಕ್ಕೆ ಸಂಪರ್ಕಿಸುವ ಮಾರ್ಗವಾಗಿದೆ. ಭಾರಿ ವಾಹನ ಹಾಗೂ ಬಸ್ಸುಗಳ ಸಂಚಾರವಿದ್ದು, ದಟ್ಟಣೆ ಹೆಚ್ಚಿರುತ್ತದೆ. ಹೀಗಾಗಿ ಎಲಿವೇಟೆಡ್ ಕಾರಿಡಾರ್ ನಿರ್ಮಿಸಬೇಕು' ಎಂದು ಪತ್ರ ಬರೆದಿದ್ದಾರೆ.

ಎಲಿವೇಟೆಡ್ ಕಾರಿಡಾರ್ ನಿರ್ಮಾಣದಿಂದ ಜಯನಗರ, ಜೆ.ಪಿ.ನಗರ, ಕುಮಾರಸ್ವಾಮಿ ಲೇಔಟ್ ಕಡೆಗೆ ಸಂಚರಿಸುವವರಿಗೆ ಸಿಗ್ನಲ್ ಫ್ರೀಯಾಗುತ್ತದೆ. 2.5 ಕಿ.ಮೀ ಉದ್ದದ ಎಲಿವೇಟೆಡ್ ಕಾರಿಡಾರ್ ನಿರ್ಮಿಸುವುದರಿಂದ ವಾಹನ ದಟ್ಟಣೆ ಕಡಿಮೆಯಾಗುತ್ತದೆ. ಆದ್ದರಿಂದ ಈ ಯೋಜನೆಯನ್ನು ಬಜೆಟ್‌ನಲ್ಲಿ ಸೇರಿಸಬೇಕೆಂದು ಕೇಳಿಕೊಂಡಿದ್ದಾರೆ.

'ಡಿ.ಕೆ. ಶಿವಕುಮಾರ್ ಅವರು ಪದ್ಮನಾಭನಗರ ವಿಧಾನಸಭೆ ಕ್ಷೇತ್ರಕ್ಕೆ ಚುನಾವಣೆ ಪ್ರಚಾರಕ್ಕೆ ಬಂದಿದ್ದಾಗ, ಇಲ್ಲಿನ ಸಂಚಾರ ದಟ್ಟಣೆ ನಿವಾರಿಸಲು ಸೂಕ್ತ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದ್ದರು. ಕನಕಪುರ ರಸ್ತೆ, ಬನಶಂಕರಿ ಜಂಕ್ಷನ್, ಜಯನಗರ, ಜೆ.ಪಿ.ನಗರ, ಪದ್ಮನಾಭನಗರಗಳಲ್ಲಿ ದಟ್ಟಣೆ ಕಡಿಮೆ ಮಾಡಲು ಮೇಲ್ಸೇತುವೆ ನಿರ್ಮಿಸಲಾಗುತ್ತದೆ ಎಂದು ಹೇಳಿದ್ದರು. ಅದರಂತೆಯೇ ಎಲಿವೇಟೆಡ್ ಕಾರಿಡಾರ್ ನಿರ್ಮಿಸುವಂತೆ ಮನವಿ ಮಾಡಿಕೊಳ್ಳಲಾಗಿದೆ' ಎಂದು ರಘುನಾಥ ನಾಯ್ಡು ತಿಳಿಸಿದರು.

ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರಿಗೂ ಈ ಬಗ್ಗೆ ಮನವಿ ಸಲ್ಲಿಸಲಾಗಿದ್ದು, ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸುವಂತೆ ಕೋರಲಾಗಿದೆ ಎಂದರು.

ವಸತಿ ಯೋಜನೆ ವ್ಯಾಜ್ಯ ಇತ್ಯರ್ಥ

ಸಮಾಲೋಚನೆ ಅದಾಲತ್

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ವಸತಿ ಸಚಿವ ಜಮೀರ್ ಅಹಮದ್‌ಖಾನ್ ಮಾಹಿತಿ
- ರೈತರು ಹಾಗೂ ಜಮೀನು ಮಾಲೀಕರ ಜತೆ ಸಮಾಲೋಚನೆ
- ಪ್ರಗತಿ ಪರಿಶೀಲನೆ ಸಭೆ ನಡೆಸಿದ ಸಚಿವರು

ಬೆಂಗಳೂರು: ಸೂರ್ಯ ನಗರ ಯೋಜನೆ ಸೇರಿದಂತೆ ಗೃಹಮಂಡಳಿಯ 10 ಯೋಜನೆಗಳಿಗೆ ವೇಗ ನೀಡಲು ಭೂಸ್ವಾಧೀನಕ್ಕೆ ಸಂಬಂಧಿಸಿದಂತೆ ರೈತರು, ಭೂಮಾಲೀಕರೊಂದಿಗೆ 'ಸಮಾಲೋಚನೆ ಅದಾಲತ್' ನಡೆಸಲಾಗುವುದು ಎಂದು ವಸತಿ ಸಚಿವ ಜಮೀರ್ ಅಹಮದ್‌ಖಾನ್ ತಿಳಿಸಿದರು.

ಕರ್ನಾಟಕ ಗೃಹ ಮಂಡಳಿಯಲ್ಲಿ ಗುರುವಾರ ಪ್ರಗತಿ ಪರಿಶೀಲನೆ ಸಭೆ ನಡೆಸಿದ ಅವರು ಮಾತನಾಡಿದರು.

ಸೂರ್ಯನಗರ ಯೋಜನೆ ಸೇರಿದ ಯೋಜನೆಗಳಿಗೆ 4,615 ಎಕರೆ ಜಮೀನು ಸ್ವಾಧೀನ ಪಡಿಸಿಕೊಳ್ಳಲಾಗಿದೆ. ಈ ಪೈಕಿ ಸೂರ್ಯ ನಗರ ನಾಲ್ಕನೇ ಹಂತದ 700 ಎಕರೆ ಸೇರಿದಂತೆ ಒಟ್ಟು ಒಂದು ಸಾವಿರ ಎಕರೆಗೆ ಸಂಬಂಧಿಸಿದ ವ್ಯಾಜ್ಯದಿಂದ ಯೋಜನೆಗಳಿಗೆ ಗ್ರಹಣ ಹಿಡಿದಂತಾಗಿದೆ. ಹೀಗಾಗಿ ರೈತರು ಹಾಗೂ ಜಮೀನು ಮಾಲೀಕರ ಜತೆ ಸಮಾಲೋಚನೆ ನಡೆಸಿ ಇತ್ಯರ್ಥ ಪಡಿಸಿ ಯೋಜನೆಗಳಿಗೆ ವೇಗ ನೀಡಲು ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಜಮೀನು ಸ್ವಾಧೀನ ಸೇರಿ ನ್ಯಾಯಾಲಯಗಳಲ್ಲಿ ಇರುವ ಪ್ರಕರಣ ವರ್ಷಗಟ್ಟಲೆ ನಡೆಯುತ್ತಿದೆ. ಇದಕ್ಕೆ ಕಾರಣ ಏನು ಎಲ್ಲಿ ಲೋಪ ಆಗುತ್ತಿದೆ ಎಂಬ ಬಗ್ಗೆ ಮಾಹಿತಿ ಪಡೆಯಲು ಕಾನೂನು ವಿಭಾಗದ ಜತೆ ಸಭೆ ನಡೆಸಲಾಗುವುದು ಎಂದು ಹೇಳಿದರು.

ರಾಜ್ಯದ ಹಲವೆಡೆ ಗೃಹ ಮಂಡಳಿ ವತಿಯಿಂದ ರಚಿಸಿರುವ ಬಡಾವಣೆಗಳಲ್ಲಿ ಅಗತ್ಯವಾದರೆ ಕೆಲವು ರಿಯಾಯಿತಿ ಸಹ ನೀಡಿ ಗೃಹ ಮಂಡಳಿ ನಿವೇಶನ, ಮನೆಗಳಿಗೆ ಬೇಡಿಕೆ ಬರುವಂತೆ ಮಾಡಲಾಗುವುದು. ಸರ್ಕಾರಿ ನೌಕರರ ಸಂಘ ಸೇರಿದಂತೆ ಸಂಘ ಸಂಸ್ಥೆಗಳಿಗೆ ಸಗಟು ಹಂಚಿಕೆ ಬಗ್ಗೆಯೂ ಚಿಂತನೆ ನಡೆಸಲಾಗುವುದು ಎಂದು ಹೇಳಿದರು.

ಗೃಹಮಂಡಳಿ, ರಾಜೀವ್ ಗಾಂಧಿ ವಸತಿ ನಿಗಮ ಹಾಗೂ ಕೊಳೆಗೇರಿ ಅಭಿವೃದ್ಧಿ ಮಂಡಳಿಯಡಿ ಅನುಷ್ಠಾನದಲ್ಲಿರುವ ಯೋಜನೆ, ಮುಂದಿನ ಹೊಸ ಯೋಜನೆಗಳ ಬಗ್ಗೆ ಮಾಹಿತಿ ಪಡೆದು ಅಗತ್ಯ ಇರುವ ಅನುದಾನದ ಬೇಡಿಕೆ ಬಗ್ಗೆ ಪ್ರಸ್ತಾವನೆ ಸಿದ್ದಪಡಿಸಲು ಸೂಚಿಸಿದರು.

ಕೇಂದ್ರದಿಂದ ಬರಬೇಕಿರುವ ಅನುದಾನದ ಮಾಹಿತಿ ನೀಡಿ, ಸದ್ಯದಲ್ಲೇ ದೆಹಲಿಗೆ ತೆರಳಿ ಸಂಬಂಧಪಟ್ಟ ಸಚಿವರ ಜತೆ ಚರ್ಚಿಸಲಾಗುವುದು ಎಂದು ಹೇಳಿದರು.

ಕೊಡವರಿಗೆ ಸ್ವಾಯತ್ತತೆ: ಆಕ್ಷೇಪಣೆ ಸಲ್ಲಿಸಲು ನಿರ್ದೇಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೊಡವ ಸಮುದಾಯದರಿಗೆ ಭೌಗೋಳಿಕ ರಾಜಕೀಯ ಸ್ವಾಯತ್ತತೆಯ ಸ್ಥಾನಮಾನ ಕಲ್ಪಿಸಬೇಕು ಎಂದು ಕೊಡವ ನ್ಯಾಷನಲ್ ಕೌನ್ಸಿಲ್ (ಸಿಎನ್‌ಸಿ) ಸಲ್ಲಿಸಿರುವ ಬೇಡಿಕೆಯ ಬಗ್ಗೆ ಪರಿಶೀಲಿಸಲು ಆಯೋಗವೊಂದನ್ನು ರಚಿಸಬೇಕು ಎಂದು ಕೋರಲಾದ ಅರ್ಜಿಗೆ ಸಂಬಂಧಿಸಿದಂತೆ ನಾಲ್ಕು ವಾರಗಳಲ್ಲಿ ಆಕ್ಷೇಪಣೆ ಸಲ್ಲಿಸಿ' ಎಂದು ಹೈಕೋರ್ಟ್, ಕೇಂದ್ರ ಮತ್ತು ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿದೆ.

ಈ ಸಂಬಂಧ ರಾಜ್ಯಸಭಾ ಸದಸ್ಯರೂ ಆದ ಸುಬ್ರಮಣಿಯನ್ ಸ್ವಾಮಿ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲರು, ನ್ಯಾಯಾಲಯ ಕಳೆದ ಬಾರಿ ನೀಡಿದ್ದ ನಿರ್ದೇಶನದಂತೆ ಅರ್ಜಿಯಲ್ಲಿ ಕೊಡವ ನ್ಯಾಷನಲ್ ಕೌನ್ಸಿಲ್ ಅನ್ನು ಪಕ್ಷಗಾರರನ್ನಾಗಿ ಮಾಡಲಾಗಿದೆ. ಈ ಕುರಿತು ಅರ್ಜಿಯಲ್ಲಿ ತಿದ್ದುಪಡಿ ಮಾಡಿ ಅದರ ಪ್ರತಿಯನ್ನು ಪ್ರತಿವಾದಿಗಳಿಗೆ ತಲುಪಿಸಲಾಗಿದೆ ಎಂದರು. ಇದಕ್ಕೆ ಪ್ರತಿಯಾಗಿ, ಸಿಎನ್‌ಸಿ ಪರ ವಕೀಲರು, ಅರ್ಜಿದಾರರ ವಾದವನ್ನು ಬೆಂಬಲಿಸಿ ಆ ಕುರಿತು ಪ್ರಮಾಣಪತ್ರ ಸಲ್ಲಿಸಲಾಗುವುದು ಎಂದರು.

ಅಂತೆಯೇ, ಕೇಂದ್ರ ಮತ್ತು ರಾಜ್ಯ ಸರ್ಕಾರದ ಪರ ವಕೀಲರು, ಅರ್ಜಿಗೆ ಆಕ್ಷೇಪಣೆ ಸಲ್ಲಿಸಲು ಸಮಯಾವಕಾಶ ಕೋರಿದ ಹಿನ್ನೆಲೆಯಲ್ಲಿ ನ್ಯಾಯಾಲಯ ವಿಚಾರಣೆಯನ್ನು ಆಗಸ್ಟ್ 3ಕ್ಕೆ ಮುಂದೂಡಿತು. ನಾಲ್ಕು ವಾರಗಳಲ್ಲಿ ಆಕ್ಷೇಪಣೆ ಸಲ್ಲಿಸುವಂತೆ ಸೂಚಿಸಿತು.

'ಬಿಬಿಎಂಪಿ ವಿಭಜನೆ ಬೇಡ'

ಪ್ರಜಾವಾಣಿ ವಾರ್ತೆ



ಬೆಂಗಳೂರು: ನಾಡಪ್ರಭು ಕೆಂಪೇಗೌಡರು ನಿರ್ಮಿಸಿರುವ ಬೆಂಗಳೂರು ಮಹಾನಗರ ಅಥವಾ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯನ್ನು ಯಾವುದೇ ಕಾರಣಕ್ಕೂ ವಿಭಜನೆ ಮಾಡಬಾರದು ಎಂದು ಬೆಂಗಳೂರು ದಕ್ಷಿಣ ಜಿಲ್ಲಾ ಬಿಜೆಪಿ ಘಟಕದ ಅಧ್ಯಕ್ಷ ರಮೇಶ್ ಎನ್.ಆರ್. ಮನವಿ ಮಾಡಿಕೊಂಡಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಅವರಿಗೆ ಪತ್ರ ಬರೆದಿದ್ದಾರೆ.

ಒಂದು ಸುಂದರ- ಸುಸಜ್ಜಿತ ನಗರವನ್ನು ನಿರ್ಮಾಣ ಮಾಡಬೇಕೆಂಬುದು ನಾಡಪ್ರಭು ಕೆಂಪೇಗೌಡರ ಮಹತ್ವಾಕಾಂಕ್ಷೆಯಾಗಿತ್ತು. ವಿಜಯನಗರ ಸಾಮ್ರಾಜ್ಯದ ಅರಸ ಅಚ್ಯುತರಾಯರು ನಾಡಪ್ರಭು ಕೆಂಪೇಗೌಡರಿಗೆ ಬೆಂಗಳೂರು ಮಹಾನಗರ ನಿರ್ಮಾಣಕ್ಕೆಂದು 12 ಹೋಬಳಿಗಳನ್ನು (ಹಳೇ ಬೆಂಗಳೂರು, ವರ್ತೂರು, ಯಲಹಂಕ, ಬೇಗೂರು, ಹಲಸೂರು, ಕೆಂಗೇರಿ, ತಲಘಟ್ಟಪುರ, ಜಿಗಣಿ, ಕುಂಬಳಗೋಡು, ಕಾಗಳ್ಳಿ, ಬಾಣಾವಾರ ಮತ್ತು ಹೆಸರುಘಟ್ಟ) ಜಹಗೀರಾಗಿ ನೀಡಿರುವುದು ಇತಿಹಾಸದಲ್ಲಿ ದಾಖಲಾಗಿರುತ್ತದೆ.


ಮುಂದೆ ಬೆಂಗಳೂರು ಮಹಾನಗರ ಬೃಹದಾಕಾರವಾಗಿ ಬೆಳೆಯುವ ಮುನ್ಸೂಚನೆಯನ್ನು ಅರಿತಿದ್ದ ಕೆಂಪೇಗೌಡರು ಎಲ್ಲ 12 ಹೋಬಳಿಗಳ ವ್ಯಾಪ್ತಿಯಲ್ಲಿ 40ಕ್ಕೂ ಹೆಚ್ಚು ಕೆರೆ - ಕುಂಟೆಗಳನ್ನು, ಗಡಿ ಗೋಪುರಗಳನ್ನು ನಿರ್ಮಿಸಿರುತ್ತಾರೆ. ಇಂತಹ ಬೆಂಗಳೂರನ್ನು ವಿಭಜಿಸುವುದು ಅಥವಾ ಆಡಳಿತಾತ್ಮಕವಾಗಿ ಸರಿಯಲ್ಲ ಎಂದು ರಮೇಶ್ ಹೇಳಿದ್ದಾರೆ.


'ದೆಹಲಿ ಮಹಾನಗರ ಪಾಲಿಕೆಯನ್ನು ಆಡಳಿತಾತ್ಮಕವಾಗಿ ಮೂರು ಭಾಗಗಳಾಗಿ ವಿಭಜಿಸಿ ಆಗಿರುವ ಅನಾಹುತಗಳ ಬಗ್ಗೆ ತಮಗೆ ಅರಿವು ಇದೆ ಎಂದು ಭಾವಿಸುತ್ತೇನೆ. ತಾವು ಈ ರೀತಿ ವಿಭಜನೆ ಮಾಡಿದರೆ, ಪ್ರಾದೇಶಿಕವಾಗಿ ಆರ್ಥಿಕ ಅಸಮತೋಲನ ಹೆಚ್ಚಾಗುತ್ತದೆಯೇ ಹೊರತು ಇದರಿಂದ ಬೆಂಗಳೂರಿಗೆ ಒಳಿತಾಗುವ ಕೆಲಸ ಕಾರ್ಯಗಳಾಗುವುದಿಲ್ಲ' ಎಂದಿದ್ದಾರೆ.

'ಕನ್ನಡಿಗರಿಗೆ ವಿಶೇಷವಾದ ಭಾವನಾತ್ಮಕ ಸಂಬಂಧ ಇರುವ ಹಾಗೂ ನಾಡಪ್ರಭು ಕೆಂಪೇಗೌಡರು ಕಟ್ಟಿರುವ ಬೆಂಗಳೂರು ಮಹಾನಗರವನ್ನು ವಿಭಜಿಸುವುದು ಮಾನ್ಯ ಕೆಂಪೇಗೌಡರಿಗೆ ಮಾಡಿದ ಅವಮಾನವಾಗುತ್ತದೆ ಹಾಗೂ ಕನ್ನಡಿಗರ ಭಾವನೆಗಳನ್ನು ಕೆಣಕಿದಂತಾಗುತ್ತದೆ. ಬೆಂಗಳೂರಿನ ಸಮಾಜದ ಸ್ವಾಸ್ಥ್ಯವನ್ನು ಹಾಳುಗೆಡವುವ ಕಾರ್ಯಕ್ಕೆ ಕೈಹಾಕಬಾರದು. 'ಏಕ ಬೆಂಗಳೂರು ಮಹಾನಗರ'ವನ್ನಾಗಿಯೇ ಉಳಿಸಿಕೊಳ್ಳಬೇಕು' ಎಂದು ಮನವಿ ಮಾಡಿದ್ದಾರೆ.

ಚಿತ್ರಾವಳಿ



ನಗರದ ಕರ್ನಾಟಕ ಚಿತ್ರಕಲಾ ಪರಿಷತ್ತಿನಲ್ಲಿ ಪ್ರಭಾಕರ್ ಅವರ 'ಕಂಪನಿ ಮನೆ ಶಿಲ್ಪಿಗಳು' ಪುಸ್ತಕವನ್ನು ನಿವೃತ್ತ ಐಎಎಸ್ ಅಧಿಕಾರಿ ಚಿರಂಜೀವಿ ಸಿಂಗ್ ಬಿಡುಗಡೆಗೊಳಿಸಿದರು. ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದ ತಗಡೂರು, ಪ್ರಭಾಕರ್ ಇದ್ದಾರೆ.


ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಆವರಣದಲ್ಲಿ ನಿರ್ಮಾಣವಾಗುತ್ತಿರುವ ಕೆಂಪೇಗೌಡ ಅಧ್ಯಯನ ಭವನದ ಕಾಮಗಾರಿಯನ್ನು ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷರಾದ ನಿರ್ಮಲಾನಂದನಾಥ ಸ್ವಾಮೀಜಿ ಬುಧವಾರ ವೀಕ್ಷಿಸಿದರು. ಕುಲಪತಿ ಪ್ರೊ. ಜಯಕರ ಎಸ್‌.ಎಂ., ಕುಲಸಚಿವ ಸಿ. ಶ್ರೀನಿವಾಸ್, ಪ್ರೊ. ಪುಟ್ಟಸ್ವಾಮಯ್ಯ ಇದ್ದರು.



ಬೆಂಗಳೂರಿನ ಸುದಯಾ ಫೌಂಡೇಷನ್ ವತಿಯಿಂದ ಸುಶ್ರುತ ಸ್ವಯಂಪ್ರೇರಿತ ರಕ್ತ ಕೇಂದ್ರದ ಸಹಯೋಗದಲ್ಲಿ ಬೃಹತ್ ರಕ್ತದಾನ ಶಿಬಿರ ಆಯೋಜಿಸಲಾಯಿತು. ಸುದಯ ಫೌಂಡೇಶನ್‌ನ ಸಂಸ್ಥಾಪಕಿ ಡಾ.ದಿವ್ಯಾ ರಂಗೇನಹಳ್ಳಿ, ಸ್ವಯಂ ಸೇವಕರು ಇದ್ದರು. 60ಕ್ಕೂ ಅಧಿಕ ಜನರು ರಕ್ತದಾನ ಮಾಡಿದರು.

ಜಿಎಸ್‌ಟಿ ಮಂಡಳಿ: ಕೃಷ್ಣ ಬೈರೇಗೌಡ ಸಿಎಂ ಪ್ರತಿನಿಧಿ



ಬೆಂಗಳೂರು: ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರನ್ನು ಜಿಎಸ್‌ಟಿ ಮಂಡಳಿಗೆ ಮುಖ್ಯಮಂತ್ರಿಯವರ ಪ್ರತಿನಿಧಿಯನ್ನಾಗಿ ನೇಮಿಸಲಾಗಿದ್ದು, ಈ ಸಂಬಂಧ ಕೇಂದ್ರ ಸರ್ಕಾರಕ್ಕೂ ಪತ್ರ ಬರೆಯಲಾಗಿದೆ.

ಈ ಹಿಂದೆ ಸಿದ್ದರಾಮಯ್ಯ ಮುಖ್ಯಮಂತ್ರಿ ಆಗಿದ್ದಾಗಲೂ ಕೃಷ್ಣ ಬೈರೇಗೌಡ ಅವರನ್ನು ಮುಖ್ಯಮಂತ್ರಿ ಪ್ರತಿನಿಧಿಯನ್ನಾಗಿ ನೇಮಿಸಲಾಗಿತ್ತು.

ಕಂದಾಯ ನಿರೀಕ್ಷಕನ ಸೋಗು: ನಿವೇಶನ ಆಮಿಷವೊಡ್ಡಿ ವಂಚನೆ

ಬೆಂಗಳೂರು: ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ ಅಭಿವೃದ್ಧಿಪಡಿಸಲಾಗಿರುವ ನಿವೇಶನ ಕೊಡಿಸುವುದಾಗಿ ಹೇಳಿ ₹ 4.18 ಲಕ್ಷ ಪಡೆದು ವಂಚಿಸಿರುವ ಆರೋಪದಡಿ ಧನಂಜಯ್ ವಿರುದ್ಧ ರಾಜಾಜಿನಗರ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

'ಸ್ಥಳೀಯ ನಿವಾಸಿ ಸುರೇಶ್ ವಂಚನೆ ಬಗ್ಗೆ ದೂರು ನೀಡಿದ್ದರು. ಧನಂಜಯ್ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ. ಸದ್ಯ ಆರೋಪಿ ತಲೆಮರೆಸಿಕೊಂಡಿದ್ದಾನೆ' ಎಂದು ಪೊಲೀಸರು ಹೇಳಿದರು.

'ದೂರುದಾರ ಸುರೇಶ್, ಕಂಪ್ಯೂಟರ್ ಮಾರಾಟ ಮಳಿಗೆ ಇಟ್ಟುಕೊಂಡಿದ್ದಾರೆ. ಮಳಿಗೆಯಲ್ಲಿ ಕೆಲಸಕ್ಕಿದ್ದ ಎಂಜಿನಿಯರ್ ಮೂಲಕ ಧನಂಜಯ್ ಪರಿಚಯವಾಗಿತ್ತು. ತಾನು ಬಿಬಿಎಂಪಿ ಕಂದಾಯ ನಿರೀಕ್ಷಕನೆಂದು ಹೇಳಿದ್ದ ಆರೋಪಿ, 'ಕೆಂಗೇರಿ ಬಳಿಯ ಕೊಮ್ಮಘಟ್ಟ ಬಳಿ ಅಂಬೇಡ್ಕರ್ ಅಭಿವೃದ್ಧಿ ನಿಗಮದ ನಿವೇಶನಗಳು ಮಾರಾಟಕ್ಕಿವೆ. ₹ 50 ಸಾವಿರದಿಂದ ₹ 55 ಸಾವಿರಕ್ಕೆ ಒಂದು ನಿವೇಶನ ಕೊಡಿಸುತ್ತೇನೆ' ಎಂದಿದ್ದ.

'ಆರೋಪಿ ಮಾತು ನಂಬಿದ್ದ ಸುರೇಶ್, ತಮಗೆ ಹಾಗೂ ಸ್ನೇಹಿತರಿಗೆ ಸೇರಿ 9 ನಿವೇಶನ ಖರೀದಿಸುವುದಾಗಿ ಹೇಳಿದ್ದರು. ಬಳಿಕ ಆರೋಪಿ, ನಿವೇಶನ ಮೌಲ್ಯ ಮತ್ತು ಶುಲ್ಕ ಸೇರಿ ₹ 4.18 ಲಕ್ಷ ಪಡೆದುಕೊಂಡಿದ್ದ. ನಂತರ, ಮೊಬೈಲ್ ಸ್ವಿಚ್ ಆಫ್ ಮಾಡಿ ಪರಾರಿಯಾಗಿದ್ದಾನೆ' ಎಂದು ಪೊಲೀಸರು ತಿಳಿಸಿದರು.

'ಆರೋಪಿ ಬಗ್ಗೆ ಬಿಬಿಎಂಪಿ ಕಚೇರಿಯಲ್ಲಿ ವಿಚಾರಿಸಿದಾಗ, ಆತ ಸುಳ್ಳು ಹೇಳಿದ್ದನೆಂಬುದು ಗೊತ್ತಾಗಿತ್ತು. ಬಳಕವೇ ಸುರೇಶ್ ಠಾಣೆಗೆ ಬಂದು ದೂರು ನೀಡಿದ್ದಾರೆ' ಎಂದರು.

ಇನ್ನೆರಡು ದಿನ ಬಿರುಗಾಳಿ ಸಹಿತ ಮಳೆ: ಇಲಾಖೆ ಮಾಹಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ವಿವಿಧೆಡೆ ಮುಂದಿನ ಎರಡು ದಿನಗಳಲ್ಲಿ ಬಿರುಗಾಳಿ, ಗುಡುಗು, ಮಿಂಚು ಸಹಿತ ಮಳೆಯಾಗಲಿದೆ. ಗಾಳಿಯ ವೇಗವು 40–50 ಕಿಲೋಮೀಟರ್ ಇರಲಿದೆ.

ಕರಾವಳಿಯ ಹಲವೆಡೆ ಹಾಗೂ ಒಳನಾಡಿನ ಕೆಲವೆಡೆ ಮುಂದಿನ 48 ಗಂಟೆಗಳಲ್ಲಿ ಗುಡುಗು ಸಹಿತ ಭಾರಿ ಮಳೆಯಾಗುವ ಸಾಧ್ಯತೆ ಇದೆ. ಬೆಂಗಳೂರು ಸುತ್ತಮುತ್ತ ಮೋಡ ಕವಿದ ವಾತಾವರಣ ಇರಲಿದ್ದು, ಸಂಜೆ ಅಥವಾ ರಾತ್ರಿ ಸಣ್ಣ ಪ್ರಮಾಣದಲ್ಲಿ ಮಳೆ ಬೀಳಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಬಸ್ ಪಾಸ್ ಅವಧಿ ವಿಸ್ತರಣೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: ವಿದ್ಯಾರ್ಥಿಗಳಿಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಕಾಲಾವಕಾಶವನ್ನು ನೀಡಲಾಗಿದೆ. ಹಾಗಾಗಿ ಸದ್ಯ ವಿದ್ಯಾರ್ಥಿಗಳು 2022–23ನೇ ಸಾಲಿನ ಬಸ್‌ಪಾಸ್ ಅಥವಾ ಈ ಸಾಲಿನಲ್ಲಿ ಶಾಲಾ, ಕಾಲೇಜುಗಳಲ್ಲಿ ಪಾವತಿಸಿದ ಶುಲ್ಕದ ರಸೀದಿ ಹಾಜರುಪಡಿಸಿ ಬಸ್‌ಗಳಲ್ಲಿ ಜೂನ್ 30ರವರೆಗೆ ಪ್ರಯಾಣಿಸಬಹುದು.

ವಿದ್ಯಾರ್ಥಿನಿಯರು ಶಕ್ತಿ ಯೋಜನೆಯಡಿ ಶೂನ್ಯ ಟಿಕೆಟ್ ಪಡೆದು ಪ್ರಯಾಣಿಸಬಹುದು ಎಂದು ಕೆಎಸ್‌ಆರ್‌ಟಿಸಿ ಪ್ರಕಟಣೆ ತಿಳಿಸಿದೆ.

ಕನಕಗಿರಿ: ಉಸಿರುಗಟ್ಟಿ ಬಾಲಕ ಸಾವು

ಪ್ರಜಾವಾಣಿ ವಾರ್ತೆ

ಕನಕಗಿರಿ: ಊಟ ಮಾಡುವಾಗ ಅನ್ನದ ತುತ್ತು ಸಿಲುಕಿ ಬಾಲಕನೊಬ್ಬ ಮೃತಪಟ್ಟ ಘಟನೆ ಬುಧವಾರ ಪಟ್ಟಣದಲ್ಲಿ ನಡೆದಿದೆ.

ಇಲ್ಲಿನ ಗೊಲ್ಲರ ಓಣಿಯ ನಿವಾಸಿ ನಿರುಪಾದಿ ಗೊಲ್ಲರ ಅವರ ಪುತ್ರ ಆಂಜನೇಯ (14) ಮೃತ ಬಾಲಕ. ಬೆಳಿಗ್ಗೆ ಮನೆಯಲ್ಲಿ ಊಟ ಮಾಡುವಾಗ ಅನ್ನದ ತುತ್ತು ಗಂಟಲಲ್ಲಿ ಸಿಲುಕಿದ್ದನ್ನು ಗಮನಿಸಿ ಅದನ್ನು ತೆಗೆಯಲು ಪ್ರಯತ್ನಿಸಲಾಯಿತು. ಉಸಿರಾಡಲು ತೊಂದರೆಯಿಂದ ತೀರಿಕೊಂಡಿತು ಎಂದು ಮೃತ ಬಾಲಕನ ತಂದೆ ನಿರುಪಾದಿ ಗೊಲ್ಲರ ತಿಳಿಸಿದರು.



❦ ಸುಭಾಷಿತ ❦

ಭಕ್ತಿಯು ಒಳ್ಳೆಯ ಮಾತುಗಳನ್ನು ಆಡಿಸಿದರೆ ಸಾಲದು, ಅದು ಒಳ್ಳೆಯ ಕೆಲಸಗಳನ್ನೂ ಮಾಡಿಸಬೇಕು.

–ಡಿ.ವಿ.ಜಿ.

ಆರೋಗ್ಯ ವ್ಯವಸ್ಥೆಯ ಸುಧಾರಣೆಗೆ ಹೆಜ್ಜೆ ಉತ್ತಮ ಆರಂಭ, ಕಾಳಜಿ ಹೀಗೇ ಇರಲಿ

ರಾಜ್ಯದ ಸರ್ಕಾರಿ ಆಸ್ಪತ್ರೆಗಳ ಅವ್ಯವಸ್ಥೆಯನ್ನು ಸರಿಪಡಿಸಲು ಆರೋಗ್ಯ ಇಲಾಖೆಯ ಹಿರಿಯ ಅಧಿಕಾರಿಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮೂರು ತಿಂಗಳ ಗಡುವು ನೀಡಿದ್ದಾರೆ. ಈ ಅವಧಿಯಲ್ಲಿ ವ್ಯವಸ್ಥೆ ಸರಿಹೋಗದಿದ್ದರೆ ಅಧಿಕಾರಿಗಳನ್ನೇ ಹೊಣೆಯಾಗಿಸುವುದಾಗಿ ಎಚ್ಚರಿಕೆಯನ್ನೂ ನೀಡಿದ್ದಾರೆ. ನಗರ ಪ್ರದೇಶವೇ ಆಗಿರಲಿ, ಗ್ರಾಮಾಂತರ ಪ್ರದೇಶವೇ ಆಗಿರಲಿ ಬಡವರು ಚಿಕಿತ್ಸೆಗಾಗಿ ಸರ್ಕಾರಿ ಆಸ್ಪತ್ರೆಗಳನ್ನೇ ಬಹುವಾಗಿ ಅವಲಂಬಿಸಿದ್ದಾರೆ. ಕಾಯಿಲೆಪೀಡಿತರ ಚಿಕಿತ್ಸೆಗೆ, ಆರೈಕೆಗೆ ಬೇಕಾದಂತಹ ಸಾಮರ್ಥ್ಯವಿಲ್ಲದ ಆರೋಗ್ಯ ಕೇಂದ್ರಗಳು ಸೊರಗಿ ಕೃಶವಾಗಿರುವುದು ಎದ್ದು ಕಾಣುವ ವಿದ್ಯಮಾನ. ಆರೋಗ್ಯ ಸೌಲಭ್ಯವನ್ನು ಕಲ್ಪಿಸುವುದು ಎಂದರೆ ಕಟ್ಟಡವನ್ನು ನಿರ್ಮಿಸುವುದಷ್ಟೇ ಅಲ್ಲ. ಅಲ್ಲಿ ಚಿಕಿತ್ಸೆಗೆ ಸಾಧನ, ಸಲಕರಣೆಗಳು ಇರಬೇಕು. ರೋಗ ಪತ್ತೆಗೆ ಅಗತ್ಯ ಪರೀಕ್ಷಾ ಸೌಲಭ್ಯ ಇರಬೇಕು. ರೋಗಿಗಳ ಆರೈಕೆಗೆ ಒಂದಿಷ್ಟು ಹಾಸಿಗೆಗಳು, ನಾಜೂಕಿನ ಸ್ಥಿತಿ ನಿಭಾಯಿಸಲು ತೀವ್ರ ನಿಗಾ ಘಟಕ ಮತ್ತು ತುರ್ತು ಅಗತ್ಯಕ್ಕೊಂದು ಶಸ್ತ್ರಚಿಕಿತ್ಸಾ ಕೊಠಡಿ ಬೇಕು. ಔಷಧಿಯ ದಾಸ್ತಾನು ಸಹ ಅಗತ್ಯ ಪ್ರಮಾಣದಲ್ಲಿರಬೇಕು. ಎಲ್ಲಕ್ಕಿಂತ ಹೆಚ್ಚಾಗಿ ಚಿಕಿತ್ಸೆ ನೀಡಲು ವೈದ್ಯರು ಇರಬೇಕು. ಆದರೆ, ಆರೋಗ್ಯ ಇಲಾಖೆಯೇ ನೀಡಿರುವ ಅಂಕಿ ಅಂಶದ ಪ್ರಕಾರ, ಸರ್ಕಾರಿ ಆಸ್ಪತ್ರೆಗಳಲ್ಲಿ ತಜ್ಞ ವೈದ್ಯರ ಕೊರತೆ ಶೇ 52ರಷ್ಟಿದೆ. ಗ್ರಾಮೀಣ ಪ್ರದೇಶಗಳಲ್ಲಿ ವೈದ್ಯರಿಗಾಗಿ ಕಟ್ಟಿರುವ ವಸತಿಗೃಹಗಳು ಖಾಲಿಯಾಗಿಯೇ ಉಳಿದಿವೆ. ನರ್ಸ್‌ಗಳು, ವೈದ್ಯಕೀಯ ಸಹಾಯಕರ ಕೊರತೆಯೂ ತೀವ್ರವಾಗಿ ಕಾಡುತ್ತಿದೆ. ತಾಲ್ಲೂಕು ಆಸ್ಪತ್ರೆಗಳಲ್ಲಿ ತಜ್ಞ ವೈದ್ಯರಿಲ್ಲದೆ ಜಿಲ್ಲಾಸ್ಪತ್ರೆಗಳಿಗೋ ಖಾಸಗಿ ಆಸ್ಪತ್ರೆಗಳಿಗೋ ಕಾಯಿಲೆಪೀಡಿತರನ್ನು ಸಾಗಹಾಕುವುದು ನಡೆದೇ ಇದೆ. ಗಂಭೀರವಾದ ಆರೋಗ್ಯ ಸಮಸ್ಯೆಯನ್ನು ಎದುರಿಸುವ ರೋಗಿಯು ಹೀಗೆ ಒಂದು ಆಸ್ಪತ್ರೆಯಿಂದ ಮತ್ತೊಂದು ಆಸ್ಪತ್ರೆಗೆ ಅಲೆದಾಡುವಷ್ಟರಲ್ಲೇ ಆತನ ಚಿಕಿತ್ಸೆಗಾಗಿ ಇದ್ದ 'ಸುವರ್ಣ ಸಮಯ' ಕಳೆದುಹೋಗಿರುತ್ತದೆ ಎಂದು ಆರೋಗ್ಯ ಕ್ಷೇತ್ರದ ತಜ್ಞರು ಕಳವಳ ವ್ಯಕ್ತಪಡಿಸಿದ್ದಾರೆ. ಒಂದು ಪ್ರಾಥಮಿಕ ಆರೋಗ್ಯ ಕೇಂದ್ರವೆಂದರೆ (ಪಿಎಚ್‌ಸಿ) ಹೀಗಿರಬೇಕು ಎಂದು ಸರ್ಕಾರವೇ ಮಾನದಂಡವೊಂದನ್ನು ರೂಪಿಸಿದೆ. ಆ ಮಾನದಂಡದ ಪ್ರಕಾರ, ನೂರಕ್ಕೆ ನೂರರಷ್ಟು ಸನ್ನದ್ಧವಾದ ಒಂದು ಪಿಎಚ್‌ಸಿಯೂ ರಾಜ್ಯದ ಗ್ರಾಮಾಂತರ ಭಾಗದಲ್ಲಿ ಸಿಗುವುದಿಲ್ಲ. ಇಂತಹ ಗಂಭೀರ ಸಮಸ್ಯೆಯ 'ಬಲೆ'ಯಲ್ಲಿ ಆರೋಗ್ಯ ವ್ಯವಸ್ಥೆಯು ಸಿಲುಕಿರುವ ಹೊತ್ತಿನಲ್ಲಿ ಮುಖ್ಯಮಂತ್ರಿಯವರ ಈಗಿನ ಒಂದು ಸಕಾಲಿಕ ಹೆಜ್ಜೆ ಸಂಜೀವಿನಿಯ ರೂಪ ಪಡೆಯಬಲ್ಲದು.



ಹೊಣೆ ಮರೆತ ಅಧಿಕಾರಿಗಳ ಮೇಲೆ ಮುಲಾಜಿಲ್ಲದೆ ಚಾಟಿ ಬೀಸಿದರೆ ವ್ಯವಸ್ಥೆಯಲ್ಲಿ ಒಂದಿಷ್ಟು ಬದಲಾವಣೆ ಸಾಧ್ಯವಾದೀತು

ಸಂಸತ್ತಿನಲ್ಲಿ ಈ ಹಿಂದೆ ಸ್ಥಾಯಿ ಸಮಿತಿ ಮಂಡಿಸಿದ ವರದಿಯಲ್ಲಿ, 'ಗ್ರಾಮಾಂತರ ಭಾಗದ ಆರೋಗ್ಯ ಸೇವಾ ವ್ಯವಸ್ಥೆ ಶೋಚನೀಯ ಸ್ಥಿತಿಯಲ್ಲಿದ್ದು, ಮೂಲಸೌಕರ್ಯ ಹೆಚ್ಚಿಸುವ ಕೆಲಸವನ್ನು ಸಮರೋಪಾದಿಯಲ್ಲಿ ಕೈಗೆತ್ತಿಕೊಳ್ಳಬೇಕು' ಎಂದು ಶಿಫಾರಸು ಮಾಡಲಾಗಿತ್ತು. ಆದರೆ, ಈ ಶಿಫಾರಸಿನ ಮಹತ್ವವನ್ನು ಗ್ರಹಿಸುವಲ್ಲಿ ಕೇಂದ್ರ ಸರ್ಕಾರ ಸಂಪೂರ್ಣವಾಗಿ ಸೋತಿತ್ತು. ರಾಜ್ಯದಲ್ಲಿ ಆಡಳಿತ ನಡೆಸಿದ ಬಿಜೆಪಿ ನೇತೃತ್ವದ ಸರ್ಕಾರ, ಕೋವಿಡ್‌ನಂತಹ ಆರೋಗ್ಯ ತುರ್ತು ಪರಿಸ್ಥಿತಿಯ ಕಾಲಘಟ್ಟದಲ್ಲೂ ಸರ್ಕಾರಿ ಆಸ್ಪತ್ರೆಗಳನ್ನೆಲ್ಲ ಮೇಲ್ದರ್ಜೆಗೆ ಏರಿಸುವ, ಸಿಬ್ಬಂದಿ ಕೊರತೆಯನ್ನು ನೀಗಿಸುವ ನೈಜ ಇಚ್ಛಾಶಕ್ತಿಯನ್ನು ಪ್ರದರ್ಶಿಸಿರಲಿಲ್ಲ. ಪ್ರತೀ ಹತ್ತು ಸಾವಿರ ಜನರಿಗೆ ಒಂಬತ್ತು ವೈದ್ಯರ ಸೇವೆ ಲಭ್ಯವಿರುವುದು ದೇಶದ ಸರಾಸರಿ. ಅದೇ ಕಲ್ಯಾಣ ಕರ್ನಾಟಕದ ಹಿಂದುಳಿದ ತಾಲ್ಲೂಕುಗಳಲ್ಲಿ ಪ್ರತೀ ಹತ್ತು ಸಾವಿರ ಜನಸಂಖ್ಯೆಗೆ ಕೇವಲ ಒಬ್ಬ ವೈದ್ಯ ಲಭ್ಯರಿರುವುದು ನಮ್ಮ ವ್ಯವಸ್ಥೆಗೆ ಹಿಡಿದ ಕನ್ನಡಿ. ರಾಜ್ಯದ ಪ್ರತಿ ಪ್ರಜೆಗೂ ಚಿಕಿತ್ಸೆ ಸಿಗುವುದನ್ನು ಖಚಿತಪಡಿಸುವ ತಮಿಳುನಾಡಿನ ಆರೋಗ್ಯ ವಿಮೆ ಯೋಜನೆಯ ಕುರಿತು ಅಧ್ಯಯನ ನಡೆಸಿ, ವರದಿ ಕೊಡುವಂತೆ ಮುಖ್ಯಮಂತ್ರಿ ಆದೇಶಿಸಿದ್ದಾರೆ. ಇದು, ಆರೋಗ್ಯ ವ್ಯವಸ್ಥೆಯ ಸುಧಾರಣೆಗೆ ಅವರಲ್ಲಿರುವ ತಹತಹವನ್ನು ಸೂಚಿಸುತ್ತದೆ. ಆದರೆ, ಈ ಕ್ರಮ ಕೇವಲ ಆರಂಭಶೂರತ್ವವಾಗಬಾರದು. ಮುಖ್ಯಮಂತ್ರಿಯವರೇ ಹೇಳಿರುವಂತೆ, ಮೂರು ತಿಂಗಳ ಬಳಿಕ ಏನೇನು ಸುಧಾರಣೆ ಆಗಿದೆ ಎಂಬುದನ್ನು ಖುದ್ದು ಪರಿಶೀಲಿಸಿ, ಹೊಣೆಮರೆತ ಅಧಿಕಾರಿಗಳ ಮೇಲೆ ಮುಲಾಜಿಲ್ಲದೆ ಚಾಟಿ ಬೀಸಿದರೆ ವ್ಯವಸ್ಥೆಯಲ್ಲಿ ಒಂದಿಷ್ಟು ಬದಲಾವಣೆ ಆದೀತು.

ಮುಖ್ಯಮಂತ್ರಿ ಮತ್ತು ಆರೋಗ್ಯ ಸಚಿವರಿಗೆ ಆರೋಗ್ಯ ವ್ಯವಸ್ಥೆಯಲ್ಲಿ ಏನಾದರೂ ಬದಲಾವಣೆ ತರಬೇಕು ಎನ್ನುವ ತೀವ್ರ ಹಂಬಲವಿದ್ದರೆ ಏನೇನು ಕೆಲಸಗಳು ಆಗಬೇಕಿವೆ ಎಂಬುದರ ನೀಲನಕ್ಷೆಯೊಂದನ್ನು ಹಾಕಿಕೊಳ್ಳಬೇಕು. ಎಲ್ಲ ಗ್ರಾಮಗಳ ಆರೋಗ್ಯ ಸೌಲಭ್ಯದ ಸ್ಥಿತಿಗತಿ ಕುರಿತು ವೈಜ್ಞಾನಿಕ ಸಮೀಕ್ಷೆ ನಡೆಸಿ, ಎಲ್ಲೆಲ್ಲಿ, ಏನೇನು ಅಗತ್ಯವಿದೆ ಎನ್ನುವುದನ್ನು ಪಟ್ಟಿ ಮಾಡಬೇಕು. ಆ ಕೊರತೆಗಳನ್ನು ನೀಗಿಸಲು ಕಾಲಮಿತಿಯನ್ನು ನಿಗದಿಪಡಿಸಬೇಕು. ತಾಲ್ಲೂಕು ಆಸ್ಪತ್ರೆಗಳಲ್ಲಿ ಒಳರೋಗಿಗಳನ್ನಾಗಿ ಸೇರ್ಪಡೆ ಮಾಡಿಕೊಳ್ಳಲು ಹಿಂದೇಟು ಹಾಕಲಾಗುತ್ತದೆ ಎನ್ನುವ ದೂರುಗಳು ವ್ಯಾಪಕವಾಗಿವೆ. ಅಲ್ಲಿನ ಹಾಸಿಗೆಗಳ ಸಾಮರ್ಥ್ಯವನ್ನು ಉನ್ನತೀಕರಿಸಬೇಕು. ಪಿಎಚ್‌ಸಿಗಳ ಸಂಖ್ಯೆಯನ್ನು ಹೆಚ್ಚಿಸುವತ್ತ ಗಮನಹರಿಸಬೇಕು. ಔಷಧ ಖರೀದಿ ಪ್ರಕ್ರಿಯೆಯಲ್ಲಿ ವ್ಯತ್ಯಯವಾಗದಂತೆ ನೋಡಿಕೊಳ್ಳಲು, ಅಲ್ಲಿ ಭ್ರಷ್ಟಾಚಾರ ಸುಳಿಯದಂತೆ ಮಾಡಲು ಪಾರದರ್ಶಕ ವ್ಯವಸ್ಥೆಯೊಂದನ್ನು ರೂಪಿಸಬೇಕು. ಮುಖ್ಯವಾಗಿ ವೈದ್ಯರ ಕೊರತೆಯನ್ನು ನೀಗಿಸಬೇಕು ಮತ್ತು ಸರ್ಕಾರಿ ಆಸ್ಪತ್ರೆಗಳ ಕಡೆಗೆ ವೈದ್ಯರು, ವೈದ್ಯಕೀಯ ಸಹಾಯಕರು ಮುಖ ಮಾಡುವಂತೆ ಉತ್ತೇಜನಕಾರಿ ಕ್ರಮಗಳನ್ನೂ ಕೈಗೊಳ್ಳಬೇಕು. ಏಕೆಂದರೆ, ಆಸ್ಪತ್ರೆಗಳಿಗೆ ಅವರೇ ಜೀವತಂತುಗಳು. ಆರೋಗ್ಯ ಕ್ಷೇತ್ರದ ಸುಧಾರಣೆ ಸರ್ಕಾರದ ಹೊಣೆ. ಆ ಕೆಲಸವನ್ನು ಸಮರ್ಪಕವಾಗಿ ಮಾಡಿ, ಚುನಾಯಿಸಿದ ಮತದಾರನ ವಿಶ್ವಾಸ ಉಳಿಸಿಕೊಳ್ಳುವ ಕೆಲಸವನ್ನು ಸಿದ್ದರಾಮಯ್ಯ ಮಾಡಬೇಕು.

ದಿನದ ಟ್ವೀಟ್


ಪೂರಕವಾದ ವ್ಯವಸ್ಥೆ



ಸಮಯವನ್ನು ಪಾಲಿಸುವ ಮತ್ತು ಸಬ್ಸಿಡಿ ಇರುವ ಸಾರ್ವಜನಿಕ ಸಾರಿಗೆಯು ಹವಾಮಾನ ಬದಲಾವಣೆ ಹಾಗೂ ಸಂಚಾರ ದಟ್ಟಣೆಯನ್ನು ಎದುರಿಸಲು ಒಂದು ಪೂರಕ ಹೂಡಿಕೆ. ಇದು ಯಾವುದೇ ಸ್ಪಂದನಶೀಲ ನಗರದ ಬೆನ್ನೆಲುಬು. ನಿಜವಾದ ಸಾಮಾಜಿಕ ಅಭಿವೃದ್ಧಿಯೆಂದರೆ ಪ್ರತಿಯೊಬ್ಬರೂ ಕಾರು ಹೊಂದುವುದಲ್ಲ. ಶ್ರೀಮಂತರು ಸೇರಿದಂತೆ ಎಲ್ಲರೂ ಸಾರ್ವಜನಿಕ ಸಾರಿಗೆಯನ್ನು ಬಳಸುವುದೇ ಸಾಮಾಜಿಕ ಅಭಿವೃದ್ಧಿ.

ಅದ್ವೈತ್, ಇತಿಹಾಸಕಾರ

ಕಿಡಿನುಡಿ



ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು ಬೆಂಗಳೂರು- ಮೈಸೂರು ಎಕ್ಸ್‌ಪ್ರೆಸ್ ಹೆದ್ದಾರಿಯ ಟೋಲ್ ದರವನ್ನು ಯಾರಿಗೂ ಗೊತ್ತಿಲ್ಲದಂತೆ ಶೇ 22ರಷ್ಟು ಏರಿಸಿರುವುದು ಅನ್ಯಾಯದ ಪರಮಾವಧಿ. ಇದು ಖಂಡನೀಯ. ಕೇಂದ್ರದ ಬಿಜೆಪಿ ನೇತೃತ್ವದ ಸರ್ಕಾರ ಮತ್ತು ರಾಜ್ಯದ ಕಾಂಗ್ರೆಸ್ ನೇತೃತ್ವದ ಸರ್ಕಾರ ಈ ಎರಡೂ ಸೇರಿ ಜನರ ಮೇಲೆ ಮತ್ತಷ್ಟು ಭಾರ ಹೊರಿಸಿವೆ. #ಹೆದ್ದಾರಿಯಲ್ಲಿ_ಹಗಲು_ದರೋಡೆ

ಎಚ್.ಡಿ.ಕುಮಾರಸ್ವಾಮಿ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

25 ವರ್ಷಗಳ ಹಿಂದೆ

ಸೋಮವಾರ, 15-6-1998

● ನಾಲ್ವರು ಹೊಸಬರಿಗೆ ಸ್ಥಾನ: ಇಬ್ಬರಿಗೆ ಕ್ಯಾಬಿನೆಟ್ ದರ್ಜೆ

ಬೆಂಗಳೂರು, ಜೂನ್ 14– ಇಬ್ಬರು ಸಂಪುಟ ದರ್ಜೆ ಸಚಿವರೂ ಸೇರಿದಂತೆ ಆರು ಮಂದಿ ಸಚಿವರನ್ನು ಹೊಸದಾಗಿ ಸೇರಿಸಿಕೊಳ್ಳುವ ಮೂಲಕ ಮುಖ್ಯಮಂತ್ರಿ ಜೆ.ಎಚ್.ಪಟೇಲ್ ಅವರು ತಮ್ಮ ಸಚಿವ ಸಂಪುಟವನ್ನು ಇಂದು ವಿಸ್ತರಿಸಿದರು. ಹೊಸ ಸಚಿವರ ಸೇರ್ಪಡೆಯೊಂದಿಗೆ ಪಟೇಲ್ ಸಂಪುಟ ಸದಸ್ಯರ ಸಂಖ್ಯೆ ಈಗ 46ಕ್ಕೆ ಏರಿದೆ.

ಬಸವರಾಜ ಪಾಟೀಲ್ ಅಟ್ಟೂರು (ಬಸವಕಲ್ಯಾಣ) ಮತ್ತು ಎ.ಬಿ.ಪಾಟೀಲ್ (ಸಂಕೇಶ್ವರ) ಅವರು ಸಂಪುಟ ದರ್ಜೆ ಸಚಿವರಾಗಿ ಪ್ರಮಾಣವಚನ ಸ್ವೀಕರಿಸಿದರೆ, ಎಚ್.ಶಿವಪ್ಪ (ಹರಿಹರ), ಎಂ.ಸಿ.ಮನಗೂಳಿ (ಸಿಂದಗಿ), ನಾಗಪ್ಪ ಸಾಲೋಣಿ (ಕನಕಗಿರಿ) ಮತ್ತು ಪಿ.ಎಸ್.ಜಯವಂತ್ (ಸಿರ್ಸಿ) ಅವರು ರಾಜ್ಯ ಸಚಿವರಾಗಿ ಪ್ರಮಾಣವಚನ ಸ್ವೀಕರಿಸಿದರು.

ಭುಗಿಲೆದ್ದ ಅಸಮಾಧಾನ: ಸಂಪುಟ ವಿಸ್ತರಣೆಗೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಜೆ.ಎಚ್.ಪಟೇಲ್ ಅವರು ಕೈಗೊಂಡಿರುವ 'ಏಕಪಕ್ಷೀಯ' ನಿರ್ಧಾರದಿಂದ ತೀವ್ರ ಅಸಮಾಧಾನಗೊಂಡಿರುವ ಉಪಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಹಲವಾರು ಸಚಿವರು, ಪ್ರತಿಭಟನಾ ಸೂಚಕವಾಗಿ ಸಂಪುಟಕ್ಕೆ ಸಾಮೂಹಿಕ ರಾಜೀನಾಮೆ ನೀಡುವ ಸಾಧ್ಯತೆಯಿದೆ.

50 ವರ್ಷಗಳ ಹಿಂದೆ

ಶುಕ್ರವಾರ, 15-6-1973

● ನಗರ ಆಸ್ತಿ ಮೇಲೆ ಮಿತಿ ತರದಿದ್ದರೆ ಗ್ರಾಮಾಂತರ ಜನರಿಂದ ದಂಗೆ ಖಚಿತ

ಬೆಂಗಳೂರು, ಜೂನ್ 14– ರೈತರ ಮೇಲೆ ಭೂಹಿಡುವಳಿ ಮಿತಿ ಹೇರಲು ಹೊರಟಿರುವ ಸರ್ಕಾರವು ನಗರ ಆಸ್ತಿಯ ಮೇಲೂ ಮಿತಿ ವಿಧಿಸಲು ಕ್ರಮ ಕೈಗೊಳ್ಳದಿದ್ದರೆ ರೈತರು ದಂಗೆ ಎದ್ದಾರು ಎಂದು ಸಂಸ್ಥಾ ಕಾಂಗ್ರೆಸ್ಸಿನ ಕೆ.ಚನ್ನಬಸವನ ಗೌಡ ಅವರು ಇಂದು ವಿಧಾನ ಪರಿಷತ್ತಿನಲ್ಲಿ ಎಚ್ಚರಿಕೆ ನೀಡಿದರು.

ಪಟ್ಟಣ ಪ್ರದೇಶಗಳಲ್ಲಿ ಹೋಟೆಲು, ಚಿತ್ರಮಂದಿರ ಹಾಗೂ ಕೈಗಾರಿಕೆಗಳ ಮೂಲಕ ಲಕ್ಷಾಧೀಶರಾಗಲು ಅವಕಾಶ ಕೊಡುವುದನ್ನು ಮುಂದುವರಿಸಿ, ಭೂ ಹಿಡುವಳಿಯ ಮೇಲೆ ಮಾತ್ರ ಮಿತಿ ವಿಧಿಸುವುದನ್ನು ರೈತರು ಸಹಿಸಲಾರರು. ವರಮಾನದ ಮೇಲೂ ಮಿತಿ ವಿಧಿಸಬೇಕೆಂದು ಅವರು ಸೂಚಿಸಿದರು.

ವಿದ್ಯುತ್ ಉತ್ಪಾದನೆ, ಸಾಗಣೆ, ಬಳಕೆಯಲ್ಲಿ ಕ್ಷಮತೆ ಹೆಚ್ಚಿಸುವತ್ತ ಗಮನಹರಿಸಬೇಕಿದೆ

ಪ್ರತಿ ಯೂನಿಟ್ ಮೇಲಿದೆ ಭವಿಷ್ಯದ ನೆರಳು!



ವಿಶ್ಲೇಷಣೆ

ಡಾ. ಕೇಶವ ಎಚ್. ಕೊರ್ಸೆ

ದೇಶದಲ್ಲಿ ಆರ್ಥಿಕ ಉದಾರೀಕರಣ ಆರಂಭಗೊಂಡ ತೊಂಬತ್ತರ ದಶಕದ ಆದಿಭಾಗದಲ್ಲಿ, ಲಂಗು ಲಗಾಮಿಲ್ಲದೆ ಜಾಗತೀಕರಣ ನೀತಿಯನ್ನು ಅಪ್ಪಿಕೊಳ್ಳುವುದನ್ನು ವಿರೋಧಿಸುವ ಜನಾಂದೋಲನದ ಮುಂಚೂಣಿಯಲ್ಲಿದ್ದ ಪ್ರೊ. ಎಂ.ಡಿ.ನಂಜುಂಡಸ್ವಾಮಿ ಅವರು ಪ್ರತಿಪಾದಿಸುತ್ತಿದ್ದ ಮಾತೊಂದಿತ್ತು. 'ಮುಕ್ತ ಮಾರುಕಟ್ಟೆ ನೀತಿಯು ಸಂಪತ್ತನ್ನು ಹೆಚ್ಚಿಸಬಹುದು. ಆದರೆ, ಬಡವರು ಇನ್ನಷ್ಟು ಬಡವರಾದಾರು, ಕೃಷಿಯ ನೆಲೆಗಟ್ಟಾದ ನೈಸರ್ಗಿಕ ಪರಿಸರ ಇನ್ನಷ್ಟು ಕುಸಿಯಬಹುದು' ಎಂದು.

ಉದಾರೀಕರಣ ನೀತಿಗಳು ಜಾರಿಯಾಗಿ ಮೂರು ದಶಕಗಳ ನಂತರದ ಈಗಿನ ಪರಿಸ್ಥಿತಿಯನ್ನೊಮ್ಮೆ ಅವಲೋಕಿಸಿದರೆ, ಅವರ ಮಾತು ಬಹುಪಾಲು ನಿಜವಾಗಿರುವುದು ತೋರುತ್ತದಲ್ಲವೇ? ದೇಶದ ಆರ್ಥಿಕತೆ ಮೂರೂವರೆ ಟ್ರಿಲಿಯನ್ ಡಾಲರ್ (ಅಂದಾಜು ₹ 287 ಲಕ್ಷ ಕೋಟಿ) ಮೀರಿ ಬೆಳೆಯುತ್ತಿದ್ದರೂ, ಬಡವರ ಸಂಖ್ಯೆ ಮಾತ್ರ ಹೆಚ್ಚುತ್ತಲೇ ಇದೆ. ನೈಸರ್ಗಿಕ ಸಂಪನ್ಮೂಲಗಳು ನಾಶವಾಗುತ್ತ ಆರ್ಥಿಕತೆಯ ಬುಡವೇ ಅಲ್ಲಾಡುತ್ತಿದೆ!

ಮುಕ್ತ ಮಾರುಕಟ್ಟೆ ಆರ್ಥಿಕತೆ ರೂಪುಗೊಂಡರೆ, ಸಂಪತ್ತು ಸೃಷ್ಟಿ ಅಧಿಕಗೊಂಡು, ಕೆಳಮುಖವಾಗಿ ಹರಿದು ಬಡವರ ಜೀವನ ಸುಧಾರಿಸಬಲ್ಲದು ಎಂಬ ನಂಬಿಕೆ ಅರ್ಥಶಾಸ್ತ್ರಜ್ಞರದ್ದು. ಆದರೆ, ಇಂದಿನ ಅಭಿವೃದ್ಧಿ ಮಾದರಿಯಲ್ಲಿ ಸಾಕಷ್ಟು ಉದ್ಯೋಗಗಳೇ ಸೃಷ್ಟಿಯಾಗದಿರುವುದರಿಂದ, ಸಂಪತ್ತೆಲ್ಲ ಸೀಮಿತ ಜನಸಂಖ್ಯೆಯಲ್ಲಿ ಕ್ರೋಡೀಕರಣವಾಗುತ್ತಿದೆ. ಈ ಸನ್ನಿವೇಶದಲ್ಲಿ, ಕಲ್ಯಾಣರಾಜ್ಯದ ಹೊಣೆಯಿರುವ ಸರ್ಕಾರವು ನಾಗರಿಕರಿಗೆ ಸಹಾಯಹಸ್ತ ಚಾಚುವುದು ಅನಿವಾರ್ಯವಾಗುತ್ತದೆ. ರಾಜ್ಯದ ನೂತನ ಸರ್ಕಾರವು ಈಗ ಜಾರಿ ಮಾಡುತ್ತಿರುವ 'ಗ್ಯಾರಂಟಿ' ಯೋಜನೆಗಳನ್ನು ಈ ಹಿನ್ನೆಲೆಯಲ್ಲಿ ಪರಿಶೀಲಿಸಬೇಕಿದೆ.


ಈಗ ಜಾರಿಗೆ ಬರುತ್ತಿರುವ ಈ ಐದು ಯೋಜನೆಗಳನ್ನು ಮೂರು ಪ್ರಕಾರಗಳಲ್ಲಿ ವಿಂಗಡಿಸಬಹುದು. ಮೊದಲಿನದು, ಬಡತನರೇಖೆಗಿಂತ ಕೆಳಗಿರುವವರಿಗೆ ಆಹಾರಧಾನ್ಯ ನೀಡುವ 'ಅನ್ನಭಾಗ್ಯ' ಕಾರ್ಯಕ್ರಮ. ಹಸಿವು ನೀಗಿಸುವ ಈ ಪ್ರಯತ್ನ ನಿಜಕ್ಕೂ ಅಗತ್ಯವಾದದ್ದು. ಎರಡನೇ ಬಗೆಯದು, ನಿರುದ್ಯೋಗಿ ಪದವೀಧರರು ಹಾಗೂ ಕುಟುಂಬ ಮುನ್ನಡೆಸುವ ಮಹಿಳೆಯರಿಗೆ ಆರ್ಥಿಕ ಸಹಾಯ ನೀಡುವ 'ಯುವನಿಧಿ' ಹಾಗೂ 'ಗೃಹಲಕ್ಷ್ಮಿ' ಯೋಜನೆಗಳು. ದೈನಂದಿನ ಬದುಕಿಗೆ ಸಹಾಯವಾಗುವಂತೆ 'ನೇರ ಹಣ ಸಂದಾಯ' ತತ್ವದಡಿ ಕನಿಷ್ಠ ಮೊತ್ತವನ್ನು ಕೊಡಮಾಡುವ ಈ ಯೋಜನೆಗಳೂ ಸ್ವಾಗತಾರ್ಹ. ಅವು ಅರ್ಹರಿಗಷ್ಟೇ ತಲುಪುವಂತೆ ಖಚಿತಪಡಿಸಬೇಕಾದ ಜವಾಬ್ದಾರಿ ಮಾತ್ರ ಸರ್ಕಾರಕ್ಕಿದೆ.

ಇನ್ನು, ಮೂರನೇ ವಿಧದ್ದೆಂದರೆ, ಮಹಿಳೆಯರಿಗೆ ಉಚಿತ ಪ್ರಯಾಣ ಹಾಗೂ ಕುಟುಂಬವೊಂದಕ್ಕೆ ಎರಡು ನೂರು ಯೂನಿಟ್‌ವರೆಗೆ ಉಚಿತ ವಿದ್ಯುತ್ ಒದಗಿಸುವ 'ಸೌಕರ್ಯ ಯೋಜನೆಗಳು'. ಸರ್ಕಾರಿ ಸ್ವಾಮ್ಯದ ರಸ್ತೆ ಸಾರಿಗೆ ನಿಗಮಗಳ ಸ್ವಾಯತ್ತತೆ ಹಾಗೂ ಸಾರ್ವಜನಿಕ ಸಾರಿಗೆಯ ಸುಸ್ಥಿರತೆ- ಇವೆರಡನ್ನೂ ನಿರ್ವಹಿಸಬೇಕಾದ ಸವಾಲು ಈ 'ಉಚಿತ ಪ್ರಯಾಣ' ಯೋಜನೆಯ ಹೆಗಲಿಗಿದೆ. ಹೀಗಾಗಿ, ಈ ಸಂಕೀರ್ಣ ವಿಷಯದ ವಿಶ್ಲೇಷಣೆಗೆ ಪ್ರತ್ಯೇಕ ಚಿಂತನೆಯೇ ಬೇಕು. ಉಚಿತ ವಿದ್ಯುತ್ ಯೋಜನೆ ಜಾರಿಗೊಳ್ಳುತ್ತಿರುವುದರಿಂದ, ಭವಿಷ್ಯದಲ್ಲಿ ವಿದ್ಯುತ್ ಸೌಕರ್ಯವನ್ನು ಸುಸ್ಥಿರವಾಗಿಸಲು ಕೈಗೊಳ್ಳಬೇಕಾದ ಅಗತ್ಯದ ಅಂಶಗಳನ್ನು ಮಾತ್ರ ಪ್ರಸ್ತುತ ಲೇಖನದಲ್ಲಿ ಚರ್ಚಿಸಲಾಗಿದೆ.

ಮೊದಲಿನದು, ಅತ್ಯಗತ್ಯ ಸಂಪನ್ಮೂಲವಾದ ವಿದ್ಯುತ್ತಿನ ಸ್ವರೂಪದ ಕುರಿತು ಜನಮಾನಸದಲ್ಲಿ ಕನಿಷ್ಠ ಅರಿವನ್ನಾದರೂ ಮೂಡಿಸುವ ಕುರಿತು. ವಿದ್ಯುತ್ತನ್ನು ಶೇಖರಿಸಿಡುವ ತಂತ್ರಜ್ಞಾನ ಇನ್ನೂ ಬಳಕೆಯ ಮಟ್ಟಕ್ಕಿಳಿದಿಲ್ಲ. ಹೀಗಾಗಿ, ನಾವು ವಿದ್ಯುತ್ ಬಳಸುವ ಕ್ಷಣಗಳಲ್ಲೆಲ್ಲ, ಯಾವುದೋ ವಿದ್ಯುತ್ ಉತ್ಪಾದನಾ ಘಟಕದಲ್ಲಿ ಅದು ಉತ್ಪಾದನೆಯಾಗುತ್ತಿದೆಯೆಂದೇ ಅರ್ಥ. ಮನೆಯ ಹಳೆಯ ವಿದ್ಯುತ್ ತಂತಿಗಳನ್ನು ಬದಲಾಯಿಸುವುದರ ಜೊತೆಗೆ ಸಿಎಫ್‌ಎಲ್ ಹಾಗೂ ಎಲ್‌ಇಡಿ ಬಲ್ಬ್ ಬಳಸಿದರೆ ವಿದ್ಯುತ್ ಬಳಕೆ ಕಡಿಮೆಯಾಗುತ್ತದೆ. ಹೀಟರ್, ರೆಫ್ರಿಜರೇಟರ್, ಇಸ್ತ್ರಿಪೆಟ್ಟಿಗೆ- ಯಾವುದೇ ಇರಲಿ, ಕಡಿಮೆ ವಿದ್ಯುತ್ತಿನಲ್ಲಿ ಹೆಚ್ಚು ಕ್ಷಮತೆಯಿಂದ ಕೆಲಸ ಮಾಡುವ 'ಐದು ನಕ್ಷತ್ರ' ಗುಣಮಟ್ಟದ ವಿದ್ಯುತ್ ಉಪಕರಣಗಳನ್ನೇ ಬಳಸಬೇಕು. ಸ್ಥಳೀಯವಾಗಿ ಉತ್ಪಾದಿಸಲು ಸಾಧ್ಯವಿರುವ ಸೌರಶಕ್ತಿ, ಜೈವಿಕ ಅನಿಲದಂತಹ ಪರಿಸರಸ್ನೇಹಿ ಇಂಧನಮೂಲಗಳನ್ನು ಸಾಧ್ಯವಿದ್ದಲ್ಲೆಲ್ಲ ಬಳಸಬೇಕು.

ಇಂಥ ಅಗತ್ಯದ ಅಂಶಗಳೆಲ್ಲ ಶಾಲಾ ಕಾಲೇಜು ವಿದ್ಯಾರ್ಥಿಗಳ ಪಠ್ಯಕ್ಕೆ ಮಾತ್ರ ಸೀಮಿತವಾಗದೆ, ದೈನಂದಿನ ಜೀವನದಲ್ಲಿ ಅಳವಡಿಸಿಕೊಳ್ಳಬೇಕಾದ ಜೀವನಸೂತ್ರಗಳಾಗಬೇಕಿದೆ. ಈ ಜನಜಾಗೃತಿಯನ್ನು ವ್ಯಾಪಕವಾಗಿಸಲು ಸರ್ಕಾರ ಸೂಕ್ತ ಕಾರ್ಯಕ್ರಮವನ್ನು ರೂಪಿಸಬೇಕು.

ಎರಡನೆಯದು, ಸಾಗಣೆಯಲ್ಲಾಗುವ ವಿದ್ಯುತ್ ನಷ್ಟದ ಕುರಿತು. ಉತ್ಪಾದನೆಯ ಕನಿಷ್ಠ ಶೇ 20ಕ್ಕೂ ಮಿಕ್ಕಿ ವಿದ್ಯುತ್, ಸಾಗಣೆಯ ಹಂತದಲ್ಲೇ ನಷ್ಟವಾಗುತ್ತಿರುವುದು ನಿರೂಪಿತ ಸಂಗತಿ. ಹಳೆಯ ತಂತಿಮಾರ್ಗಗಳು, ಕ್ಷಮತೆ ಇರದ ವಿದ್ಯುತ್ ಪರಿವರ್ತಕಗಳು, ನಿರ್ವಹಣೆಯಿರದ ಗ್ರಿಡ್, ನುರಿತ ಸಿಬ್ಬಂದಿಯ ಕೊರತೆ, ವಿದ್ಯುತ್ ನಿಗಮಗಳ ಅದಕ್ಷತೆ- ಎಷ್ಟೆಲ್ಲ ಕಾರಣಗಳು! ಸೂಕ್ತ ಆಡಳಿತತಂತ್ರ ಹಾಗೂ ತಂತ್ರಜ್ಞಾನಗಳೊಂದಿಗೆ ಇವನ್ನು ಸರಿಪಡಿಸಲೇಬೇಕಿದೆ. ಈಗಾಗಲೇ ಅಳವಡಿಸಿಕೊಂಡಿರುವ ಸಮಗ್ರ ಮೇಲ್ವಿಚಾರಣಾ ವ್ಯವಸ್ಥೆಯನ್ನು ಪರಿಣಾಮಕಾರಿಯಾಗಿ ಬಳಸಿಕೊಂಡು, ವಿದ್ಯುತ್ ಕಳ್ಳತನ ಹಾಗೂ ಸೋರಿಕೆಯನ್ನೂ ತಡೆಯಬೇಕಿದೆ.



ಅಂತಿಮವಾಗಿ, ವಿದ್ಯುತ್ ಉತ್ಪಾದನಾ ಸಾಮರ್ಥ್ಯವನ್ನು ಸುಸ್ಥಿರಗೊಳಿಸುವ ಕುರಿತು. ರಾಜ್ಯದ ಒಟ್ಟೂ ವಾರ್ಷಿಕ ಬಳಕೆ ಸುಮಾರು 75 ಸಾವಿರ ಗಿಗಾವಾಟ್ ತಲುಪುತ್ತಿದ್ದು, ವಾರ್ಷಿಕ ಸುಮಾರು ಶೇ 10ರ ವೇಗದಲ್ಲಿ ಹೆಚ್ಚುತ್ತಿದೆ. ರಾಜ್ಯದ ದೈನಂದಿನ ವಿದ್ಯುತ್ ಉತ್ಪಾದನಾ ಸಾಮರ್ಥ್ಯ ಸುಮಾರು 32 ಸಾವಿರ ಮೆಗಾವಾಟ್‌ನಷ್ಟಿದ್ದರೂ, ಹಲವಾರು ತಾಂತ್ರಿಕ ಕಾರಣಗಳಿಂದಾಗಿ ಆ ಉತ್ಪಾದನೆಯ ಗುರಿ ತಲುಪಲು ಸಾಧ್ಯವಾಗುತ್ತಿಲ್ಲ. ಇದನ್ನು ಮೊದಲು ಸಾಧಿಸಬೇಕಿದೆ. ಈ ಹಿಂದೆ ಜಾರಿ ಮಾಡಿದ್ದ 'ಉಜಾಲಾ' ಯೋಜನೆಯನ್ನು ಪುನಃ ಅನುಷ್ಠಾನಗೊಳಿಸಿ, ಎಲ್‌ಇಡಿ ದೀಪ ಬಳಕೆಯನ್ನು ಪ್ರೋತ್ಸಾಹಿಸಬೇಕಿದೆ.

ಈಗಾಗಲೇ ಸರ್ಕಾರ ಒಪ್ಪಿಕೊಂಡಿರುವ 'ಕರ್ನಾಟಕ ಇಂಧನ ನೀತಿ: 2022- 27'ರ ಅನ್ವಯ, 2030ರ ವೇಳೆಗೆ ಬಳಕೆಯ ಕನಿಷ್ಠ ಶೇ 50ರಷ್ಟನ್ನಾದರೂ ನವೀಕರಿಸಬಹುದಾದ ಇಂಧನಮೂಲಗಳಾದ ಸೌರಶಕ್ತಿ, ಪವನಶಕ್ತಿ, ಜೈವಿಕ ಇಂಧನದಂತಹವುಗಳಿಂದ ಪಡೆಯುವ ದಾರಿ ಕಂಡುಕೊಳ್ಳಬೇಕಿದೆ. ಮನೆಯ ಮೇಲ್ಚಾವಣಿಯಲ್ಲಿ ಸೌರಫಲಕ ಇರಿಸಿ ವಿದ್ಯುತ್ ಉತ್ಪಾದಿಸಿ 'ಗ್ರಿಡ್'ಗೆ ಮಾರುವ ಯೋಜನೆಯೊಂದನ್ನು ರಾಜ್ಯ ಸರ್ಕಾರವು ಹಿಂದಿನ ದಶಕದಲ್ಲೇ ದೇಶಕ್ಕೇ ಮಾದರಿಯಾಗಿ ಜಾರಿಗೆ ತಂದಿತ್ತು. ಆದರೆ, ತಾಂತ್ರಿಕದೋಷ ಹಾಗೂ ಆಡಳಿತ ವೈಫಲ್ಯದಿಂದಾಗಿ ಬೇಸತ್ತಿರುವ ಜನರು, ಈ ಯೋಜನೆಯಿಂದಲೇ ಈಗ ಹಿಂದೆ ಸರಿಯುತ್ತಿರುವುದು ವಿಷಾದದ ಸಂಗತಿ. ಈ ನ್ಯೂನತೆಯನ್ನು ಶೀಘ್ರ ಸರಿಪಡಿಸಬೇಕಿದೆ.

ಉಚಿತವಾಗಿ ನೀಡುವ ವಿದ್ಯುತ್, ನಿಜಕ್ಕೂ ಉಚಿತವಾಗಿ ದೊರಕದು ತಾನೇ? ಯೂನಿಟ್ ಒಂದರ ಸರಾಸರಿ ಉತ್ಪಾದನಾ ವೆಚ್ಚ ಈಗಾಗಲೇ ಆರು ರೂಪಾಯಿಗೂ ಮೀರಿದೆ. ಇದು ನೇರ ವೆಚ್ಚ. ಇನ್ನು, ವಿದ್ಯುತ್ ಉತ್ಪಾದಿಸಲೆಂದು ಕಡಿದ ಕಾಡು, ಜಲಾಶಯಗಳು ಮುಳುಗಿಸಿದ ನದಿಕಣಿವೆಗಳು, ಯೋಜನೆಯ ಸಂತ್ರಸ್ತ ಕುಟುಂಬಗಳ ಸಂಕಷ್ಟ, ಉಷ್ಣವಿದ್ಯುತ್ ಸ್ಥಾವರದಲ್ಲಿ ಕಲ್ಲಿದ್ದಲು ಸುಡುವಾಗ ಉಂಟಾಗುವ ವಾಯು ಹಾಗೂ ಜಲಮಾಲಿನ್ಯ- ಇವನ್ನೆಲ್ಲ ಲೆಕ್ಕ ಹಾಕಿದರೆ, ಒಂದು ಯೂನಿಟ್ ವಿದ್ಯುತ್ ಮೌಲ್ಯ ಎಷ್ಟಾದೀತು? ಊಹಿಸಿ.

ಬಳಸಿದ ವಿದ್ಯುತ್ ಉಚಿತದ್ದಾಗಲಿ ಅಥವಾ ಹಣ ನೀಡಿದ್ದಾಗಲಿ- ಒಂದೊಂದು ಯೂನಿಟ್ ಮೇಲೂ ಭವಿಷ್ಯದ ಆರ್ಥಿಕತೆ ಹಾಗೂ ಪರಿಸರದ ಸುರಕ್ಷತೆಗೆ ಭಂಗ ತರುವ ನಮ್ಮ ಹೆಜ್ಜೆ ಗುರುತಿದೆ ಎಂಬುದನ್ನು ಮರೆಯದಿರೋಣ! ವಿದ್ಯುತ್ತನ್ನು ಕೊಳ್ಳುಬಾಕ ಸಂಸ್ಕೃತಿಯ ಸರಕಾಗಿ ಪೋಲುಮಾಡದೆ, ನೀರು, ಆಹಾರದಂತೆಯೇ ಅತ್ಯಗತ್ಯ ಸಂಪನ್ಮೂಲವಾಗಿ ಜತನದಿಂದ ಬಳಸಬೇಕಿದೆ. ಅಧಿಕಾರ ರಾಜಕಾರಣದ ಭರದಲ್ಲಿ ಸರ್ಕಾರವಾಗಲಿ ಅಥವಾ ಉಚಿತದ ಆಕರ್ಷಣೆಯಲ್ಲಿ ಜನಮಾನಸವಾಗಲಿ ಇದನ್ನು ಮರೆಯಬಾರದಲ್ಲವೇ?

ನೇರ ನಡೆನುಡಿಯ ಪ್ರೊ. ನಂಜುಂಡಸ್ವಾಮಿ ಅವರು ಇಂದು ಇದ್ದಿದ್ದರೆ, ಖಂಡಿತಾ ಗಟ್ಟಿಧ್ವನಿಯಲ್ಲಿ ಈ ಎಚ್ಚರಿಕೆ ನುಡಿಯನ್ನು ಹೇಳುತ್ತಿದ್ದರೇನೋ.

ಸರ್ಕಾರ ಹಾಗೂ ಸಮಾಜ- ಎರಡಕ್ಕೂ ಈ ವಿವೇಕ ಇರಲೆಂದು ಆಶಿಸೋಣ.

ಲೇಖಕ: ನಿರ್ದೇಶಕ, ಸಂರಕ್ಷಣಾ ಜೀವಶಾಸ್ತ್ರ ಮತ್ತು ಸುಸ್ಥಿರ ಅಭಿವೃದ್ಧಿ ಅಧ್ಯಯನ ಕೇಂದ್ರ, ಶಿರಸಿ

ಚುರುಮುರಿ



ನೆಟ್- ಫ್ಲೈಟ್ ಫ್ರೀ!

● ಗುರು ಪಿ.ಎಸ್.

ಎಲೆಕ್ಷನ್ ರಿಸಲ್ಟ್ ಬಂದು, ರಾಜಕಾರಣಿಗಳೇ ಒಬ್ಬರ ಮೇಲೊಬ್ರು ಕೈ ಹಾಕ್ಕೊಂಡು ಓಡಾಡ್ತಿದ್ರೂ 'ಅ' ಪಕ್ಷದ ಸಪೋರ್ಟರ್ ಮುದ್ದಣ್ಣ, 'ಈ' ಪಕ್ಷದ ಸಪೋರ್ಟರ್ ವಿಜಿ ನಡುವಿನ ವಾದವಿವಾದ ಮಾತ್ರ ನಿಂತಿರಲಿಲ್ಲ.

'ಗ್ಯಾರಂಟಿ, ಗ್ಯಾರಂಟಿ ಅಂತ ಹೇಳಿ, ಈಗ ಒಂದೊಂದೇ ಕಂಡೀಷನ್ ಹಾಕ್ತಿದಾರಲ್ಲಪ್ಪ ನಿಮ್ಮ ಪಕ್ಷದವರು' ತಗಾದೆ ತೆಗೆದ ಮುದ್ದಣ್ಣ.

'ಮತ್ತೆ, ಸರ್ಕಾರದ ಹಣ ಸುಮ್ ಸುಮ್ನೆ ಕೊಡೋಕಾಗುತ್ತಾ, ಲೆಕ್ಕ ಬೇಡ್ವೇನಪ್ಪ' ಸಮರ್ಥಿಸಿಕೊಂಡ ವಿಜಿ.

'ಕರೆಂಟ್ ಫ್ರೀ ಅಂದ್ರಿ, ಈಗ ನೋಡಿದ್ರೆ, ಎರಡು ವರ್ಷದ ಬಿಲ್ ದುಡ್ಡನ್ನ ಒಂದೇ ತಿಂಗಳಲ್ಲಿ ವಸೂಲಿ ಮಾಡ್ತಿದೀರಲ್ಲಪ್ಪ'.

'ಅದನ್ನ ನಿಮ್ಮ ಪಕ್ಷದವರೇ ಜಾಸ್ತಿ ಮಾಡಿದ್ದಪ್ಪ, ನಾವಲ್ಲ'.

'ಏನೇನೋ ವಾಪಸ್ ತಗೊಂಡ್ರಿ, ಇದನ್ನೂ ವಾಪಸ್ ತಗೊಳ್ರಪ್ಪ'.

'ಜುಲೈನಿಂದ ಎಲ್ಲ ಫ್ರೀ ಆಗುತ್ತೆ ಸುಮ್ನಿರಪ್ಪ'.

'ಫ್ರೀ ಫ್ರೀ ಅಂತ ಹೇಳ್ತಾ, 'ಕರೆಂಟ್ ಫ್ರೀ' (ವಿದ್ಯುತ್‌ಮುಕ್ತ) ಮಾಡ್ತಿದೀರಲ್ಲಪ್ಪ, ಅಘೋಷಿತ ಲೋಡ್‌ಶೆಡ್ಡಿಂಗ್ ಮೂಲಕ'.

'ನಮ್ಮ ಪಕ್ಷವನ್ನೇ ಆಡಿಕೊಳ್ತೀಯ, ನೀನು ಬಡವರ ವಿರೋಧಿ...'

'ನಮ್ಮ ಪಕ್ಷವನ್ನ ಆಡಿಕೊಳ್ತೀಯಲ್ಲ, ನೀನು ದೇಶದ್ರೋಹಿ'.

'ಹೋಗ್ಲಿ ಬಿಡು, ನಮ್ಮ ನಮ್ಮಲ್ಲೇ ಯಾಕ್ ಜಗಳ? ನಾವು ಮುಂದಿನ ಎಲೆಕ್ಷನ್‌ನಲ್ಲಾದರೂ ಗೆಲ್ಲಬೇಕು. ನಮಗೊಂದು ಐಡಿಯಾ ಕೊಡು' ಎಂದ ಮುದ್ದಣ್ಣ.

'ಗ್ಯಾರಂಟಿಗಳನ್ನ ಅನೌನ್ಸ್ ಮಾಡಿಬಿಡಿ. ನೆಟ್ ಮತ್ತು ಫ್ಲೈಟ್ ಫ್ರೀ ಮಾಡಿಬಿಡಿ'.

'ಯಪ್ಪಾ, ಗೆದ್ದುಬಿಟ್ರೆ, ಅದಕ್ಕೆಲ್ಲ ದುಡ್ಡು ಹೇಗೆ ಹೊಂದಿಸೋದು?'

'ನಿಮ್ಮ ಲೀಡರ್‌ಗಳು ಭಾಷಣ ಮಾಡಿರೋದ್ರಲ್ಲಿ ಎಷ್ಟು ಸುಳ್ಳುಗಳಿವೆ ಅಂತ ಪತ್ತೆ ಹಚ್ಚೋದು, ಸಾಬೀತಾದ್ರೆ ಒಂದು ಸುಳ್ಳಿಗೆ ಒಂದು ಲಕ್ಷ ರೂಪಾಯಿಯನ್ನ ಸರ್ಕಾರದ ಖಜಾನೆಗೆ ಜಮೆ ಮಾಡಿಸೋದು, ಅಷ್ಟೇ' ನಕ್ಕ ವಿಜಿ.

'ಹಾಗಾದರೆ, ರಾಜಕಾರಣಿಗಳು ಮತ್ತು ಅವರ ಪಕ್ಷಗಳ ಹತ್ತಿರ ಠೇವಣಿ ಕಟ್ಟೋಕೂ ದುಡ್ಡು ಉಳಿಯಲ್ಲ...'

ಇಬ್ಬರೂ ನಗ್ತಾ ಹೋಟೆಲ್‌ನತ್ತ ಹೆಜ್ಜೆ ಹಾಕಿದರು.

ಸಂಗತ

ಮಾರುತ ಸಂಗ್ರಹ: ಜಾಣ್ಮೆಯ ನಡೆ

ಶಕ್ತಿ ಸಂಪನ್ಮೂಲಗಳ ಎಗ್ಗಿಲ್ಲದ ವ್ಯಯವೇ ನಾಗರಿಕತೆಯ ನಾಗಾಲೋಟವಲ್ಲ!

● ಬಿ.ಎಸ್.ಭಗವಾನ್

ಗಾಳಿಗೂ ತೂಕವುಂಟು ಎನ್ನುವುದು ಶಾಲಾ ವಿದ್ಯಾರ್ಥಿಗಳು ಕಲಿಯುವ ಮೊದಲ ಪ್ರಾಯೋಗಿಕ ಪಾಠ. ಗಾಳಿಯು ನವೀಕರಿಸಬಹುದಾದ ಶಕ್ತಿಮೂಲ. ಈ ಪರಿಸರಸ್ನೇಹಿ ನಮಗೆ ಪ್ರಕೃತಿ ನೀಡಿರುವ ಅತ್ಯಮೂಲ್ಯ ಉಡುಗೊರೆ. ಮನುಷ್ಯನನ್ನು ದೋಣಿಗೆ, ಜ್ಞಾನವನ್ನು ಯಾನಕ್ಕೆ, ಚಿಂತನೆಯನ್ನು ಗಾಳಿಗೆ ಹೋಲಿಸುವ ಕವಿವಾಣಿಯಿದೆ. ವಿಮಾನವು ಚಂದ್ರನಲ್ಲಿ ಹಾರಲಾಗದು. ರೆಕ್ಕೆಗಳನ್ನು ಮೇಲೆತ್ತಲು ಹಾಗೂ ಎಂಜಿನ್ನಿನಲ್ಲಿ ಗ್ಯಾಸೊಲಿನ್ ಉರಿಯಲು ಗಾಳಿ ಬೇಕು. ಗಾಳಿಯ ಹಿರಿಮೆಯನ್ನು ಮನಗಾಣಲು ಈ ಒಂದು ನಿದರ್ಶನವೇ ಸಾಕು.

ಇದೀಗ ಭಾರತದ ಪವನ ವಿದ್ಯುತ್‌ನ ಒಟ್ಟು ಉತ್ಪಾದನಾ ಸಾಮರ್ಥ್ಯ ವರ್ಷಕ್ಕೆ 42,633 ಮೆಗಾವಾಟ್‌ಗಳು. ಜಾಗತಿಕ ಮಟ್ಟದಲ್ಲಿ ಭಾರತ ಈ ದಿಸೆಯಲ್ಲಿ ನಾಲ್ಕನೆಯ ಸ್ಥಾನದಲ್ಲಿದೆ. ಇದು ಹೆಮ್ಮೆಯ ಸಂಗತಿ. ಕರ್ನಾಟಕದಲ್ಲಿ ಪವನ ವಿದ್ಯುತ್ ಘಟಕಗಳಿಂದ ವರ್ಷಕ್ಕೆ 5,500 ಮೆಗಾವಾಟ್‌ಗಳಷ್ಟು ಪ್ರಮಾಣದ ವಿದ್ಯುತ್ ಲಭಿಸುತ್ತಿದೆ. ಜಾಗತಿಕವಾಗಿ ದಿನವಹಿ ಪ್ರವಹಿಸುವ ಗಾಳಿಯಿಂದ ಆಯಾದಿನ ಇಡೀ ಭೂಗ್ರಹ ಬಳಸುವ ವಿದ್ಯುತ್ತಿನ 35 ಪಟ್ಟು ವಿದ್ಯುಚ್ಛಕ್ತಿ ಉತ್ಪಾದಿಸಲು ಸಾಧ್ಯವಿದೆ.

ಕೊರೊನಾ ಬಾಧಿಸುತ್ತಿದ್ದವರನ್ನು ವೆಂಟಿಲೇಟರ್ ದೊರಕುವತನಕ ಅವರ ಆಪ್ತರು ಟವೆಲ್‌ನಿಂದ ಗಾಳಿ ಬೀಸಿಯೊ ಅಥವಾ ಮೂಗಿನ ಮೂಲಕ ಉಸಿರು ಊದಿಯೊ ಉಪಚರಿಸುತ್ತಿದ್ದ ದೃಶ್ಯ ಕಣ್ಣಿಗೆ ಕಟ್ಟಿದಂತಿದೆ. ಈ ಪರಿಚಾರಿಕೆಗಳ ಫಲಾಫಲಗಳು ಹಾಗಿರಲಿ. ಗಾಳಿಯ ಅಮೂಲ್ಯ ಹಿರಿಮೆಯನ್ನಂತೂ ಅವು ಎತ್ತಿಹಿಡಿಯುತ್ತವೆ. ಬಿಗಡಾಯಿಸುತ್ತಿರುವ 'ಶಕ್ತಿ ಬಡತನ' ನೀಗುವ ದಿಸೆಯಲ್ಲಿ ಕಳಕಳಿಯಿಂದ ಗಾಳಿಯ ಬಾಗಿಲು ತಟ್ಟುವುದು ಮಹತ್ವದ ಹೆಜ್ಜೆ. ಬೀಸುವ ಗಾಳಿಯಲ್ಲಿ ನಿಹಿತವಾಗಿರುವ ಚೈತನ್ಯ ವಿಶಿಷ್ಟ. ಇತರ ವಿದ್ಯುಚ್ಛಕ್ತಿ ಮೂಲಗಳಿಗೆ ಇಂಧನ ಅಗತ್ಯ, ಆದರೆ ವಾಯುಶಕ್ತಿಗೆ ಇಂಧನವೂ ಬೇಡ, ಸ್ಥಳೀಯವಾಗಿ ಅದು ಲಭ್ಯವಿರುವುದರಿಂದ ಸಾಗಾಣಿಕೆಯ ಸಮಸ್ಯೆಯೂ ಇಲ್ಲ. ಗಣಿಗಾರಿಕೆಯ ಹಂಗಿಲ್ಲ.

ಮೂಲತಃ ಗಾಳಿಯು ವಾತಾವರಣದಲ್ಲಿರುವ ಅನಿಲಗಳ ಪ್ರವಾಹ. ಉಳಿದ ಶಕ್ತಿಮೂಲಗಳಾದ ಪೆಟ್ರೋಲ್, ಕಲ್ಲಿದ್ದಲು, ನೈಸರ್ಗಿಕ ಅನಿಲ, ಕಟ್ಟಿಗೆ ಉರಿಸಿದರೆ ಅಪಾರ ಪ್ರಮಾಣದ ಇಂಗಾಲದ ಡೈಆಕ್ಸೈಡ್ ವಾತಾವರಣವನ್ನು ಸೇರುತ್ತದೆ. ಇಂದಿಗೆ ವಿಶ್ವದ ತೊಂಬತ್ತೊಂದು ದೇಶಗಳು ವಿದ್ಯುಚ್ಛಕ್ತಿಗೆ ಮಾರುತವನ್ನೇ ನಂಬಿವೆ. ಇದರ ಫಲವಾಗಿ, ವರ್ಷಕ್ಕೆ ಕೋಟ್ಯಂತರ ಟನ್ನುಗಳಷ್ಟು ಇಂಗಾಲದ ಡೈ ಆಕ್ಸೈಡ್ ವಾತಾವರಣವನ್ನು ಸೇರುವುದು ತಪ್ಪಿದೆ. ಶಕ್ತಿ ಸಂಪನ್ಮೂಲಗಳ ಎಗ್ಗಿಲ್ಲದ ವ್ಯಯವೇ ನಾಗರಿಕತೆಯ ನಾಗಾಲೋಟವಲ್ಲ! ಕಳೆದ ಅರ್ಧ ಶತಮಾನದಲ್ಲಿ ಸರಾಸರಿ ಜಾಗತಿಕ ತಾಪಮಾನದ ಏರಿಕೆ 0.5 ಡಿಗ್ರಿ ಸೆಲ್ಸಿಯಸ್. ಒಟ್ಟು ಬಳಕೆಯಾಗುವ ಶಕ್ತಿ ಸಂಪನ್ಮೂಲಗಳ ಪೈಕಿ ಅರ್ಧದಷ್ಟು ವಾಯುವಿನದೇ ಕಾರುಬಾರಾದರೆ 2050ರ ವೇಳೆಗೆ ಜಾಗತಿಕ ತಾಪಮಾನದ ಏರಿಕೆಯ ಪ್ರಮಾಣವನ್ನು ಶೂನ್ಯಕ್ಕಿಳಿಸಲು ಸಾಧ್ಯ.

2007ರಲ್ಲಿ 'ಯುರೋಪಿಯನ್ ವಿಂಡ್ ಪವರ್ ಅಸೋಸಿಯೇಷನ್' ಪ್ರತಿವರ್ಷ ಜೂನ್ 15ನ್ನು 'ಜಾಗತಿಕ ವಾಯುಶಕ್ತಿ ದಿನ' ಎಂದು ಸಾರಿತು. ವಾಯುಶಕ್ತಿಯ ಸಾಮರ್ಥ್ಯ ಮಾಪನ ಮತ್ತು ಅದು ಶಕ್ತಿ ಉತ್ಪಾದಕ ವ್ಯವಸ್ಥೆಯನ್ನು ಪುನರ್‌ರೂಪಿಸುವ ಸಾಧ್ಯತೆಗಳ ಮರುಶೋಧ, ಇಂಗಾಲಮುಕ್ತ ಅರ್ಥವ್ಯವಸ್ಥೆ, ಉದ್ಯೋಗಾವಕಾಶಗಳ ಕುರಿತು ಚರ್ಚೆ ನಡೆಸುವುದು ಆಚರಣೆಯ ಉದ್ದೇಶ. 1951ರಲ್ಲೇ ಭಾರತದಲ್ಲಿ ಗಾಳಿಗಿರಣಿಗಳ ಸ್ಥಾಪನೆ ಆರಂಭಗೊಂಡಿತು.

ಗಾಳಿಗಿರಣಿಗಳ ಯೋಜನೆ ಅಕ್ಷರಶಃ ಪರಿಸರಸ್ನೇಹಿ. ಬೆಟ್ಟ, ಗುಡ್ಡಗಳನ್ನು ನೆಲಸಮ ಮಾಡಬೇಕಿಲ್ಲ. ಮರಗಳನ್ನು ಉರುಳಿಸಬೇಕಿಲ್ಲ, ಸಮುದಾಯಗಳನ್ನು ಗುಳೆಯೆಬ್ಬಿಸುವ ಅಗತ್ಯವಿಲ್ಲ. ಗಾಳಿಗೆ ಕಾಸು ತೆರಬೇಕಿಲ್ಲ. ಪೆಟ್ರೋಲ್, ಡೀಸೆಲ್, ಅನಿಲದ ಏರುಬೆಲೆಗಳನ್ನು ಶಪಿಸುವ ಬದಲು ಸರಳವೂ ಸರಾಗವೂ ಆದ ಮಾರುತ ಸಂಗ್ರಹಕ್ಕೆ ಮತ್ತೂ ಹೆಚ್ಚು ಕಾಳಜಿಯಿಂದ ಮುಂದಾಗುವುದು ಜಾಣತನ.



2020ರ ಅಂಕಿ ಅಂಶದಂತೆ, ಜಗತ್ತಿನಾದ್ಯಂತ ಸ್ಥಾಪಿತ ಗಾಳಿಯಂತ್ರಗಳ ಒಟ್ಟು ಸಾಮರ್ಥ್ಯ 7.40 ಲಕ್ಷ ಮೆಗಾವಾಟ್. ಗಾಳಿಗಿರಣಿಯ ರೆಕ್ಕೆಗಳು ವಿದ್ಯುತ್ ಉತ್ಪಾದಿಸುವ ಎಂಜಿನ್ನಿನ ತಿರುಬಾನಿಯನ್ನು ಚಾಲೂಗೊಳಿಸುತ್ತವೆ. ತಿರುಬಾನಿಯ ಆವರ್ತನ ವೇಗ ತಾಸಿಗೆ 300 ಕಿ.ಮೀ. ಭಾರತದಲ್ಲಿ ಸಾಮಾನ್ಯವಾಗಿ ಗಾಳಿಯ ವೇಗ ತಾಸಿಗೆ 5ರಿಂದ 15 ಕಿ.ಮೀ. ತಾಸಿಗೆ 10 ಕಿ.ಮೀ. ವೇಗದಲ್ಲಿ ಬೀಸುವ ಗಾಳಿಯಿಂದ ಒಂದು ಅಶ್ವಶಕ್ತಿಯಷ್ಟು ವಿದ್ಯುಚ್ಛಕ್ತಿ ಉತ್ಪಾದಿಸಬಹುದು.

ಇಷ್ಟಾದರೂ ವಾಯುಶಕ್ತಿ ನೆಚ್ಚುವಲ್ಲಿ ಎರಡು ವಿವಾದಾತ್ಮಕ ಸಂಗತಿಗಳಿವೆ. ರೆಕ್ಕೆಗಳಿಗೆ ಪಕ್ಷಿಗಳು, ಬಾವಲಿಗಳು ಆಕಸ್ಮಿಕವಾಗಿ ಸಿಕ್ಕಿ ಮೃತಪಡುವುದು. ಇನ್ನೊಂದು, ತಿರುಬಾನಿಗಳ ಸದ್ದು. ಅಂದಹಾಗೆ ವಾಯುಶಕ್ತಿಯು ಗಾಳಿಯ ರಭಸವನ್ನು ಅವಲಂಬಿಸುವುದರಿಂದ ಬಿಟ್ಟು ಬಿಟ್ಟು ಅದು ಒದಗುತ್ತದೆ. ಆದ್ದರಿಂದ ನಿರಂತರ ವಿದ್ಯುತ್ ಉತ್ಪಾದನೆಗೆ ಈ ನ್ಯೂನತೆ ತುಂಬಲು ಇನ್ನೊಂದು ಶಕ್ತಿಮೂಲದ ಅಗತ್ಯವಿದೆ. ರೈಲೊಂದನ್ನು ಹೊರತುಪಡಿಸಿ ವಿಮಾನವನ್ನೂ ಒಳಗೊಂಡಂತೆ ಎಲ್ಲ ವಾಹನಗಳ ಚಕ್ರಗಳಿಗೆ ಗಾಳಿಯೇ ಆಧಾರ!

ಗಾಳಿ ಬಿರುಸಾಗಿ ಬೀಸಿ ಕಾಡು ಉರಿಸೀತು, ಮೆಲ್ಲಗೆ ಬೀಸಿ ದೀಪ ಆರಿಸೀತು ಕೂಡ. ಅದನ್ನು ಮಣಿಸುವುದು ನಮ್ಮ ವಿವೇಕಕ್ಕೆ ಬಿಟ್ಟದ್ದು. ಒಂದು ಅರ್ಥದಲ್ಲಿ ವಾಯುಶಕ್ತಿ ಆಚಂದ್ರಾರ್ಕವಾಗಿ ಸಿಗುವಂಥದ್ದು.

ವಾಚಕರ ವಾಣಿ

ಮೌಢ್ಯ ನಿಷೇಧ ಇಲ್ಲವೇ ಇಲ್ಲ!

ಸಚಿವರು ತಮ್ಮ ಕಾರಿನ ಸಂಖ್ಯೆಯಲ್ಲಿ 9 ಇರಬೇಕು ಎಂದು ಒತ್ತಾಯಿಸುವ ಮೂಢನಂಬಿಕೆಯ ಕುರಿತು ವಿ.ತಿಪ್ಪೇಸ್ವಾಮಿ ಅವರು ವಿಷಾದಿಸಿದ್ದಾರೆ (ವಾ.ವಾ., ಜೂನ್ 14). ಇವರ ಅಭಿಪ್ರಾಯ ಸರಿಯೇ. ಆದರೆ, ಇವರು ಉಲ್ಲೇಖಿಸಿರುವ ಮೌಢ್ಯ ನಿಷೇಧ ಕಾಯ್ದೆಯ ಹೆಸರು ವಾಸ್ತವವಾಗಿ ಇರುವುದು, 'ಅಮಾನವೀಯ, ದುಷ್ಟ ಪದ್ಧತಿಗಳು ಮತ್ತು ವಾಮಾಚರ ಪ್ರತಿಬಂಧನೆ ಮತ್ತು ನಿರ್ಮೂಲನೆ ಕಾಯ್ದೆ, 2017' ಎಂದು.

2020ರಲ್ಲಿ ನಿಯಮಾವಳಿಗಳನ್ನೂ ಪಡೆದುಕೊಂಡು ಜಾರಿಗೆ ಬಂದ ಈ ಕಾಯ್ದೆಯಲ್ಲಿ ಜ್ಯೋತಿಷ, ಸಂಖ್ಯಾಶಾಸ್ತ್ರ, ವಾಸ್ತು, ಹಸ್ತಸಾಮುದ್ರಿಕದಂತಹ ಮೂಢನಂಬಿಕೆಗಳನ್ನು ಸೇರಿಸಲಾಗಿಲ್ಲ. ನಮ್ಮಲ್ಲಿ ಪಕ್ಷಾತೀತವಾಗಿ ಶಾಸಕರು, ಪ್ರಾಧ್ಯಾಪಕರು, ಲೇಖಕರು, ಅಷ್ಟೇ ಏಕೆ ವಿಜ್ಞಾನಿಗಳೂ ಇಂಥ ಮೂಢನಂಬಿಕೆಗಳನ್ನು ಅನುಸರಿಸುವವರೇ. ಆದ್ದರಿಂದ, ಮೌಢ್ಯ ನಿಷೇಧ ಕಾಯ್ದೆ ನಮ್ಮಲ್ಲಿ ಸಾಧ್ಯವಿಲ್ಲವೆಂದು ಕಾಣಿಸುತ್ತದೆ.

ಪ್ರೊ. ಎಂ.ಅಬ್ದುಲ್ ರೆಹಮಾನ್ ಪಾಷ, ಬೆಂಗಳೂರು

ಉಚಿತ ವಿದ್ಯುತ್: ಸಾಮಾಜಿಕ ನ್ಯಾಯ ಸಿಗಲಿ

200 ಯೂನಿಟ್‌ವರೆಗೆ ಉಚಿತ ವಿದ್ಯುತ್ ನೀಡುವ ಯೋಜನೆಯ ಜಾರಿಗೆ ರಾಜ್ಯ ಸರ್ಕಾರ ಮುಂದಾಗಿರುವುದು ಸ್ವಾಗತಾರ್ಹ. ಆದರೆ ಈ ಯೋಜನೆಯಡಿ 200 ಯೂನಿಟ್‌ಗಿಂತ ಹೆಚ್ಚು ಬಳಸಿದವರನ್ನು ಯೋಜನೆಯಿಂದ ಹೊರಗಿಡುವುದು ಒಪ್ಪತಕ್ಕದ್ದಲ್ಲ. ಹೆಚ್ಚಿನ ಪ್ರಮಾಣದ ವಿದ್ಯುತ್ ಬಳಸಿ ಶುಲ್ಕ ಪಾವತಿಸುವವರು ವಿದ್ಯುತ್ ಇಲಾಖೆಗೆ ಆಸ್ತಿ ಇದ್ದಂತೆ. ಆದರೆ ಇವರಿಗೆ ಯಾವ ರಿಯಾಯಿತಿಯೂ ಇಲ್ಲದಿರುವುದು ಸರಿಯಲ್ಲ. ವಿದ್ಯುತ್ ಪ್ರಸರಣ ನಿಗಮ ಮತ್ತು ಸರ್ಕಾರ ಈ ಬಗ್ಗೆ ಚಿಂತನೆ ನಡೆಸಿ, ಇಂತಹವರಿಗೆ ಕನಿಷ್ಠ 100 ಯೂನಿಟ್‌ಗಳನ್ನಾದರೂ ಉಚಿತವಾಗಿ ನೀಡುವುದು ಸಾಮಾಜಿಕ ನ್ಯಾಯವಾಗುತ್ತದೆ.

ಬಿ.ಮಂಜುನಾಥ್, ಕೆ.ಆರ್.ಪೇಟೆ

ಭಿಕ್ಷೆಯಲ್ಲ, ಸ್ವಾವಲಂಬಿಯಾಗಿಸುವ ಯೋಜನೆ

'ನಮ್ಮಲ್ಲೂ ಆತ್ಮಗೌರವ ಇರಬೇಡವೇ?' ಎಂದು ಮಾಲತಿ ಪಟ್ಟಣಶೆಟ್ಟಿ ಕೇಳಿದ್ದಾರೆ (ವಾ.ವಾ., ಜೂನ್ 14). ಸರ್ಕಾರಿ ಬಸ್ಸುಗಳಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣ ಸೌಲಭ್ಯದಡಿ, ಅರ್ಧ ಬಸ್ ಚಾರ್ಜ್ ಕೊಟ್ಟು ಪ್ರಯಾಣಿಸಿದರೆ ಮಹಿಳೆಯರು ಆತ್ಮಗೌರವ ಉಳಿಸಿಕೊಳ್ಳಬಹುದು ಎಂದಿದ್ದಾರೆ. ಮೇಡಂ, ಅದರ ಬದಲು ಪೂರ್ಣ ಚಾರ್ಜ್ ಕೊಟ್ಟು ಪ್ರಯಾಣಿಸುವಂತೆ ಕರೆ ಕೊಡಿ. ಆಗ ಮಹಿಳೆಯರ ಆತ್ಮಗೌರವ ಮತ್ತು ಸ್ವಾಭಿಮಾನ ಇನ್ನೂ ಹೆಚ್ಚಾಗುತ್ತದೆ. ಬಸ್ಸುಗಳಲ್ಲಿ ಮಹಿಳೆಯರು ಟಿಕೆಟ್ ತೆಗೆದುಕೊಳ್ಳುವುದಕ್ಕೂ ಅವಕಾಶವಿದೆ. ಇದು ಸರ್ಕಾರವು ಮಹಿಳೆಯರ ಸಬಲೀಕರಣ ಮತ್ತು ಆರ್ಥಿಕ ಸ್ವಾವಲಂಬನೆಗಾಗಿ ತಂದಿರುವ ಯೋಜನೆಯೇ ವಿನಾ ಸರ್ಕಾರವು ಮಹಿಳೆಯರಿಗೆ ಕೊಡುವ 'ಭಿಕ್ಷೆ'ಯಲ್ಲ. ಉಚಿತವಾಗಿ ಪ್ರಯಾಣಿಸುವ ಹೆಂಗಸರು ಭಿಕ್ಷುಕರೂ ಅಲ್ಲ.

ಆರ್ಥಿಕವಾಗಿ ಸಬಲರಾಗಿರುವ ಮಹಿಳೆಯರು ಸರ್ಕಾರಿ ಬಸ್ಸುಗಳಲ್ಲಿ ಉಚಿತವಾಗಿ ಪ್ರಯಾಣಿಸಿದರೆ ತಮ್ಮ ಗೌರವಕ್ಕೆ ಚ್ಯುತಿ ಎಂದುಕೊಂಡಿದ್ದರೆ, ಪೂರ್ಣ ಬಸ್‌ಚಾರ್ಜ್ ಕೊಟ್ಟು ಪ್ರಯಾಣಿಸಲಿ. ಇನ್ನು ಗ್ಯಾರಂಟಿ ಯೋಜನೆಗಳಲ್ಲಿ, 5 ಕೆ.ಜಿ, ಅಕ್ಕಿ ಕೊಡಿ, ಇನ್ನೈದು ಕೆ.ಜಿ. ಅನಾಥಾಶ್ರಮಕ್ಕೆ ಕೊಡಿ, 200 ಯೂನಿಟ್ ಬದಲು 100 ಯೂನಿಟ್ ಕೊಡಿ ಎಂದಿದ್ದೀರಿ. ಸರ್ಕಾರವನ್ನು ಇಷ್ಟು ಕೊಡಿ ಎಂದು ಯಾರೂ ಕೇಳಿರಲಿಲ್ಲ. ಸರ್ಕಾರವೇ ಜನರ ಮನೆ ಬಾಗಿಲಿಗೆ ಬಂದು, ಗ್ಯಾರಂಟಿ ಕೊಟ್ಟಿರುವಾಗ ಅದಕ್ಕೆ ಅಡ್ಡಿಪಡಿಸುವುದೇಕೆ? ಅದನ್ನು ಪಡೆಯುವುದು ಇಷ್ಟವಿಲ್ಲದಿದ್ದರೆ ಬಿಟ್ಟುಬಿಡಿ.

ಬೂಕನಕೆರೆ ವಿಜೇಂದ್ರ, ಮೈಸೂರು

ಹೊಸಬರಿಗೆ ಅವಕಾಶ ಕೊಡುವುದು ಅಪರಾಧವೇ?

ಈ ಬಾರಿಯ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಯಲ್ಲಿ ಹೊಸಬರಿಗೆ ಟಿಕೆಟ್ ನೀಡಲು ಹೇಳಿದವರನ್ನು ನೇಣಿಗೆ ಹಾಕಿ ಅಥವಾ ಕಾಲನ್ನಾದರೂ ಕಡಿಯಿರಿ ಎಂದು ಸಂಸದ ರಮೇಶ್ ಜಿಗಜಿಣಗಿ ಅವರು ಹೇಳಿರುವುದು ಎಷ್ಟರಮಟ್ಟಿಗೆ ಸರಿ? ಅವರ ಪ್ರಕಾರ ಹೊಸಬರಿಗೆ ಅವಕಾಶ ಕೊಡುವುದೇ ಒಂದು ದೊಡ್ಡ ಅಪರಾಧವೇ?

ಈ ಬಾರಿಯ ಚುನಾವಣೆಯಲ್ಲಿ 70ಕ್ಕೂ ಹೆಚ್ಚು ಮಂದಿ ಹೊಸಬರಿಗೆ ಟಿಕೆಟ್ ಕೊಟ್ಟಿದೆ ಬಿಜೆಪಿ ಹೈಕಮಾಂಡ್. ಹಾಗಾದರೆ ಅವರನ್ನು ನೇಣಿಗೆ ಹಾಕಿ, ಕಾಲು ಕಡಿಯುವಿರಾ? ಹಿಂದೆ ಇದ್ದ ಬಿಜೆಪಿ ನೇತೃತ್ವದ ಸರ್ಕಾರದ ಭ್ರಷ್ಟ ಆಡಳಿತದಿಂದ ಸೋತು ಸುಣ್ಣವಾಗಿದ್ದ ಜನ, ಯಾವ ಹಿರಿಯ ತಲೆಗಳನ್ನು ಚುನಾವಣೆಯಲ್ಲಿ ನಿಲ್ಲಿಸಿದ್ದರೂ ಬಿಜೆಪಿಗೆ ಮತ ಹಾಕುತ್ತಿರಲಿಲ್ಲ. ಹಾಗಾಗಿ ಈ ಬಾರಿಯ ಚುನಾವಣೆಯಲ್ಲಿ, ಬಿಜೆಪಿಯು 224 ಕ್ಷೇತ್ರಗಳಲ್ಲೂ ಹಿರಿಯರಿಗೇ ಟಿಕೆಟ್ ಕೊಟ್ಟಿದ್ದರೂ ಅಧಿಕಾರಕ್ಕೆ ಬರಲಾಗುತ್ತಿರಲಿಲ್ಲ.

ನಾಗಾರ್ಜುನ್ ಎಂ.ವಿ., ದಾವಣಗೆರೆ

ವಿಕೃತಿಗೆ ಕಡಿವಾಣ ಹಾಕಬೇಕಿದೆ


'ಮೃತದೇಹ ಮತ್ತು ಘನತೆಯ ಹಕ್ಕು' ಎಂಬ ಸಿ.ಎಚ್.ಹನುಮಂತರಾಯ ಅವರ ಲೇಖನವು (ಪ್ರ.ವಾ., ಜೂನ್ 14) ನಮ್ಮನ್ನು ಆತ್ಮಾವಲೋಕನಕ್ಕೆ ಈಡುಮಾಡುವಂತಿದೆ. ವಿಕೃತ ಮನಸ್ಸುಗಳು ನಡೆಸುತ್ತಿರುವ ಕುಕೃತ್ಯಗಳು ಈ ದಿನಗಳಲ್ಲಿ ಹೆಚ್ಚಾಗಿ ಬೆಳಕಿಗೆ ಬರುತ್ತಿವೆ. ವ್ಯಕ್ತಿಯನ್ನು ಕೊಂದು ಮೃತದೇಹವನ್ನು ತುಂಡು ತುಂಡಾಗಿ ಕತ್ತರಿಸಿ ಕುಕ್ಕರಿನಲ್ಲಿ ಬೇಯಿಸುವುದು, ಫ್ರಿಜ್ಜಿನಲ್ಲಿ ಇರಿಸುವುದು, ಮೂಟೆ ಕಟ್ಟಿ ಬಿಸಾಕುವುದು, ಗುರುತು ಪತ್ತೆಯಾಗದಂತೆ ದೇಹದ ಭಾಗಗಳನ್ನು ವಿರೂಪಗೊಳಿಸುವುದು ಕಂಡುಬರುತ್ತಿದೆ. ಮೃತದೇಹದ ಮೇಲೆ ಲೈಂಗಿಕ ದೌರ್ಜನ್ಯ ಎಸಗುವ ವಿಕೃತಿಯನ್ನು ಕಠಿಣ ಶಿಕ್ಷೆಯ ಪರಿಧಿಯೊಳಗೆ ಸೇರಿಸಬೇಕಾಗಿದೆ.

'ಮೃತದೇಹದ ಘನತೆ ಕಾಪಾಡುವುದು ರಾಜ್ಯ ಸರ್ಕಾರದ ಕರ್ತವ್ಯ' ಎಂದು ಸುಪ್ರೀಂ ಕೋರ್ಟ್ ತೀರ್ಪು ನೀಡಿರುವಾಗ, 'ಘನತೆ ಮತ್ತು ನ್ಯಾಯಯುತ ನಡವಳಿಕೆಯ ಹಕ್ಕು ಜೀವಂತ ವ್ಯಕ್ತಿಗಷ್ಟೇ ಅಲ್ಲದೆ ಆತನ ಮೃತದೇಹಕ್ಕೂ ಲಭ್ಯವಿದೆ' ಎಂಬುದನ್ನು ಎತ್ತಿಹಿಡಿದಿರುವಾಗ, ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗವು 'ಸತ್ತವರ ಘನತೆ, ಹಕ್ಕುಗಳನ್ನು ಗೌರವಿಸಬೇಕು' ಎಂದು ಉಲ್ಲೇಖಿಸಿರುವಾಗ, ನಾವು ಈ ವಿಷಯದಲ್ಲಿ ಎಚ್ಚೆತ್ತುಕೊಳ್ಳಬೇಕಾಗಿದೆ. ನಮ್ಮ ದೇಶದಲ್ಲಿ ಇಂಥ ಅಪರಾಧಗಳು ಸಾಬೀತಾಗಿದ್ದರೂ ಅಪರಾಧಿಗಳಿಗೆ ತಕ್ಕ ಶಿಕ್ಷೆ ವಿಧಿಸಲು ಕಾನೂನಿನಲ್ಲಿ ಅವಕಾಶವೇ ಇಲ್ಲದಿರುವುದು ಅಪರಾಧ ಹೆಚ್ಚಾಗಲು ಕಾರಣವಾಗಿರಬಹುದು. ಇನ್ನು ಮೇಲಾದರೂ ಭಾರತೀಯ ದಂಡಸಂಹಿತೆಗೆ ತಿದ್ದುಪಡಿ ತಂದು, ಶವಸಂಭೋಗವನ್ನು ಅಪರಾಧ ಎಂದು ಪರಿಗಣಿಸುವ ಮೂಲಕ ಇಂತಹ ವಿಕೃತಿಗೆ ಕಡಿವಾಣ ಹಾಕಬೇಕಾಗಿದೆ.

ಡಾ. ರಾಜಶೇಖರ ಸಿ.ಡಿ., ಹಾವೇರಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಟ್ವಿಟರ್ ಫೇಸ್‌ಬುಕ್‌ಗಳ 33,299 ಖಾತೆ ಪೋಸ್ಟ್‌ಗಳ ಸ್ಥಗಿತ



ಕೇಂದ್ರ ಸರ್ಕಾರದ ಕೃಷಿ ಕಾಯ್ದೆಗಳ ವಿರುದ್ಧ ರೈತರು ಪ್ರತಿಭಟನೆ ನಡೆಸುತ್ತಿದ್ದ ವೇಳೆ, ಆ ಹೋರಾಟಕ್ಕೆ ಸಂಬಂಧಿಸಿದ ಟ್ವಿಟರ್ ಖಾತೆ ಮತ್ತು ಟ್ವೀಟ್‌ಗಳನ್ನು ಸ್ಥಗಿತಗೊಳಿಸುವಂತೆ ನರೇಂದ್ರ ಮೋದಿ ನೇತೃತ್ವದ ಭಾರತ ಸರ್ಕಾರ ನಮ್ಮ ಮೇಲೆ ಒತ್ತಡ ಹೇರಿತ್ತು ಎಂದು ಟ್ವಿಟರ್‌ನ ಮಾಜಿ ಸಿಇಒ ಜಾಕ್ ಡೋರ್ಸಿ ಈಚೆಗೆ ಆರೋಪಿಸಿದ್ದಾರೆ. 2014ರಿಂದ 2022ರವರೆಗೆ ಕೇಂದ್ರ ಸರ್ಕಾರವು 4.5 ಲಕ್ಷಕ್ಕೂ ಹೆಚ್ಚು ಖಾತೆಗಳ ವಿವರ ನೀಡುವಂತೆ ಟ್ವಿಟರ್ ಮತ್ತು ಫೇಸ್‌ಬುಕ್‌ನ ಮಾತೃಸಂಸ್ಥೆ ಮೆಟಾಗೆ ಸೂಚನೆ ನೀಡಿದೆ

● ಜಯಸಿಂಹ ಆರ್., ಸುಕೃತ ಎಸ್.

'**ಸರ್ಕಾರವನ್ನು** ಟೀಕಿಸುವ ಕೆಲವು ಪತ್ರಕರ್ತರ ಮತ್ತು ರೈತರ ಪ್ರತಿಭಟನೆಗೆ ಸಂಬಂಧಿಸಿದ ಟ್ವಿಟರ್ ಖಾತೆಗಳು ಮತ್ತು ಟ್ವೀಟ್‌ಗಳನ್ನು ತೆಗೆದುಹಾಕುವಂತೆ ಭಾರತವು ಹಲವು ಸೂಚನೆಗಳನ್ನು ನೀಡಿತ್ತು. ಅದನ್ನು ಪಾಲಿಸದಿದ್ದರೆ ಭಾರತದಲ್ಲಿ ಟ್ವಿಟರ್ ಕಾರ್ಯನಿರ್ವಹಣೆ ತಡೆಯುತ್ತೇವೆ ಎಂದು ಬೆದರಿಕೆ ಹಾಕುವ ಮಟ್ಟಿಗೂ ಭಾರತ ಸರ್ಕಾರ ಹೋಗಿತ್ತು'. ಇದು ಟ್ವಿಟರ್‌ನ ಮಾಜಿ ಸಿಇಒ ಜಾಕ್ ಡೋರ್ಸಿ ಅವರು ಅಮೆರಿಕದ ಯುಟ್ಯೂಬ್ ಚಾನೆಲ್ ಒಂದಕ್ಕೆ ಈಚೆಗೆ ನೀಡಿದ್ದ ಸಂದರ್ಶನದಲ್ಲಿ ಮಾಡಿದ್ದ ಆರೋಪ.

ಡೋರ್ಸಿ ಅವರ ಈ ಆರೋಪವು ಭಾರತದಲ್ಲಿ ಆಡಳಿತಾರೂಢ ಬಿಜೆಪಿ ಮತ್ತು ವಿರೋಧ ಪಕ್ಷಗಳ ನಡುವಣ ವಾಗ್ವಾದಕ್ಕೆ ಕಾರಣವಾಗಿದೆ. ಆದರೆ, ಕೇಂದ್ರದಲ್ಲಿ ಬಿಜೆಪಿ ನೇತೃತ್ವದ ಸರ್ಕಾರವು ರಚನೆಯಾದ ನಂತರ, ಕೆಲವು ಖಾತೆಗಳ ಮಾಹಿತಿ ನೀಡುವಂತೆ ಮತ್ತು ಅವುಗಳನ್ನು ಸ್ಥಗಿತಗೊಳಿಸುವಂತೆ ಟ್ವಿಟರ್ ಮತ್ತು ಫೇಸ್‌ಬುಕ್‌ಗೆ 4.5 ಲಕ್ಷಕ್ಕೂ ಹೆಚ್ಚು ಬಾರಿ ಸೂಚನೆ ನೀಡಿದೆ. ಟ್ವಿಟರ್ ಮತ್ತು ಫೇಸ್‌ಬುಕ್‌ನ ವರದಿಗಳಲ್ಲಿ ಈ ಮಾಹಿತಿ ಇದೆ.


2014ರಿಂದ 2021ರ ಅಂತ್ಯದವರೆಗೆ ಒಟ್ಟು 67,710 ಟ್ವಿಟರ್ ಖಾತೆಗಳನ್ನು ಸ್ಥಗಿತಗೊಳಿಸುವಂತೆ ಮತ್ತು ಅವುಗಳಲ್ಲಿನ ಟ್ವೀಟ್‌ಗಳನ್ನು ಅಳಿಸುವಂತೆ ಕೇಂದ್ರ ಸರ್ಕಾರವು ಟ್ವಿಟರ್‌ಗೆ ಸೂಚನೆ ನೀಡಿದೆ. ಆದರೆ, ಟ್ವಿಟರ್ ಕೇವಲ 1,686 ಟ್ವಿಟರ್ ಖಾತೆಗಳನ್ನು ಸ್ಥಗಿತಗೊಳಿಸಿದೆ ಮತ್ತು 4,106 ಟ್ವೀಟ್‌ಗಳನ್ನು ಅಳಿಸಿದೆ. ಉಳಿದ ಎಲ್ಲಾ ಟ್ವಿಟರ್ ಖಾತೆಗಳು ಮತ್ತು ಟ್ವೀಟ್‌ಗಳ ವಿರುದ್ಧ ಟ್ವಿಟರ್ ಕ್ರಮ ತೆಗೆದುಕೊಂಡಿಲ್ಲ. ಟ್ವಿಟರ್ ಪ್ರತಿ ಆರು ತಿಂಗಳಿಗೊಮ್ಮೆ ಪ್ರಕಟಿಸುವ 'ರಿಮೂವಲ್ ರಿಕ್ವೆಸ್ಟ್' ವರದಿಯಲ್ಲಿ ಈ ಮಾಹಿತಿ ಇದೆ. ಭಾರತ ಸರ್ಕಾರ ನೀಡಿದ್ದ ಎಲ್ಲಾ ಸೂಚನೆಗಳು ಕಾನೂನುಬದ್ಧವಾಗಿರಲಿಲ್ಲ. ಹೀಗಾಗಿ ಎಲ್ಲಾ ಸೂಚನೆಗಳನ್ನು ಪಾಲಿಸಿಲ್ಲ ಎಂದು ಟ್ವಿಟರ್ ಈ ವರದಿಗಳಲ್ಲಿ ಹೇಳಿಕೊಂಡಿದೆ.

ದೇಶದ ಸಾರ್ವಭೌಮತೆ ಮತ್ತು ಏಕತೆ, ದೇಶದ ಭದ್ರತೆ, ಭಾರತದ ಮಿತ್ರ ರಾಷ್ಟ್ರಗಳ ನಡುವಣ ಸ್ನೇಹ ಸಂಬಂಧ, ಸಾರ್ವಜನಿಕ ಸುವ್ಯವಸ್ಥೆಗೆ ಧಕ್ಕೆ ತರುವಂತಹ ಹಾಗೂ ಮೇಲಿನ ಎಲ್ಲಾ ವಿಷಯಗಳಿಗೆ ಸಂಬಂಧಿಸಿದಂತೆ ಕೃತ್ಯ ಎಸಗಲು ಯತ್ನಗಳನ್ನು ನಡೆಸಿದ, ಅದಕ್ಕೆ ಸಂಬಂಧಿಸಿದ ಬರಹಗಳು, ಸಾಮಾಜಿಕ ಜಾಲತಾಣಗಳ ಪೋಸ್ಟ್‌ಗಳು, ಪೋಸ್ಟರ್‌ಗಳನ್ನು ಸಾರ್ವಜನಿಕರಿಗೆ ಗೋಚರಿಸುವುದನ್ನು ತಡೆಯಲು ಅವಕಾಶವಿದೆ. ಮಾಹಿತಿ ತಂತ್ರಜ್ಞಾನ ಕಾಯ್ದೆಯ 69ಎ ಸೆಕ್ಷನ್ ಮತ್ತು ಮಾಹಿತಿ ತಂತ್ರಜ್ಞಾನ ಸೂಚನೆಯು ಕೇಂದ್ರ ಸರ್ಕಾರಕ್ಕೆ ಈ ಅಧಿಕಾರ ನೀಡುತ್ತದೆ. ಈ ಎರಡೂ ಕಾನೂನುಗಳ ಅನ್ವಯ ಕೇಂದ್ರ ಸರ್ಕಾರವು ನೀಡುವ ಸೂಚನೆಯನ್ನು ಸಾಮಾಜಿಕ ಜಾಲತಾಣ ಮಧ್ಯವರ್ತಿ ಕಂಪನಿಗಳು ಪಾಲಿಸಬೇಕು ಎಂದು ಈ ಕಾನೂನುಗಳು ಹೇಳುತ್ತವೆ.

ಆದರೆ, ಅಂತಹ ಸೂಚನೆಗಳನ್ನು ನೀಡಲು ಕೆಲವು ಪ್ರಕ್ರಿಯೆಗಳನ್ನು ಸರ್ಕಾರ ಪಾಲಿಸಲೇಬೇಕು ಎಂದೂ ಕಾನೂನುಗಳು ಹೇಳುತ್ತವೆ. ಸಾಮಾಜಿಕ ಜಾಲತಾಣಗಳ ವಿರುದ್ಧ ಬರುವ ಯಾವುದೇ ದೂರನ್ನು ತಜ್ಞರ ಸಮಿತಿಯು ಪರಿಶೀಲಿಸಬೇಕು. ಮಾಹಿತಿ ತಂತ್ರಜ್ಞಾನ ಕಾಯ್ದೆಯ 69ಎ ಸೆಕ್ಷನ್‌ನಲ್ಲಿ ಹೇಳಲಾದ ವಿಷಯಗಳನ್ನು ಆ ಪೋಸ್ಟ್‌ಗಳು ಉಲ್ಲಂಘಿಸಿದ್ದರೆ ಮಾತ್ರ, ಅಂತಹ ಪೋಸ್ಟ್‌ಗಳನ್ನು ತೆಗೆದುಹಾಕಬೇಕು. ಇಲ್ಲದಿದ್ದಲ್ಲಿ, ಕ್ರಮ ತೆಗೆದುಕೊಳ್ಳಬಾರದು ಎಂದು ಈ ಕಾನೂನುಗಳು ಹೇಳುತ್ತವೆ.

ಭಾರತ ಸರ್ಕಾರವು ನೀಡಿದ ಸೂಚನೆಗಳಲ್ಲಿ, ಆ ಖಾತೆಗಳು ಮತ್ತು ಟ್ವೀಟ್‌ಗಳನ್ನು ಏಕೆ ತೆಗೆದುಹಾಕಬೇಕು ಎಂಬುದನ್ನು ವಿವರಿಸಿರಲಿಲ್ಲ. ಹೀಗಾಗಿ ಆ ಸೂಚನೆ ಪ್ರಕಾರ ಕ್ರಮ ತೆಗೆದುಕೊಂಡಿಲ್ಲ ಎಂದು ಟ್ವಿಟರ್ ಈ ಹಿಂದೆ ಭಾರತದ ವಿವಿಧ ನ್ಯಾಯಾಲಯಗಳಿಗೆ ಪ್ರಮಾಣ ಪತ್ರ ಸಲ್ಲಿಸಿತ್ತು. ಇದು ಟ್ವಿಟರ್ ಮತ್ತು ಭಾರತ ಸರ್ಕಾರದ ನಡುವಣ ಜಟಾಪಟಿಗೂ ಕಾರಣವಾಗಿತ್ತು. ಟ್ವಿಟರ್ ಪ್ರಕಟಿಸಿರುವ 'ರಿಮೂವಲ್ ರಿಕ್ವೆಸ್ಟ್' ವರದಿಗಳಲ್ಲೂ ಇದನ್ನೇ ಹೇಳಲಾಗಿದೆ. ಆಯಾ ದೇಶಗಳಲ್ಲಿನ ಕಾನೂನಿನ ಅನ್ವಯ ನೀಡಲಾಗಿರುವ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಮೊಟಕುಗೊಳಿಸುವಂತಹ ಯಾವ ಸೂಚನೆಗಳನ್ನೂ ನಾವು ಪಾಲಿಸಿಲ್ಲ. ಆ ಮೂಲಕ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಎತ್ತಿಹಿಡಿದಿದ್ದೇವೆ ಎಂದು ಟ್ವಿಟರ್ ತನ್ನ ವರದಿಗಳಲ್ಲಿ ಹೇಳಿಕೊಂಡಿದೆ.

ಆಧಾರ: ಮಾಹಿತಿ ತಂತ್ರಜ್ಞಾನ ಕಾಯ್ದೆ–2000, ಮಾಹಿತಿ ತಂತ್ರಜ್ಞಾನ ನಿಯಮಗಳು–2009, ಲೋಕಸಭೆ ಮತ್ತು ರಾಜ್ಯಸಭೆಯಲ್ಲಿ ಕೇಂದ್ರ ಮಾಹಿತಿ ತಂತ್ರಜ್ಞಾನ ಸಚಿವಾಲಯ ನೀಡಿದ ಲಿಖಿತ ಉತ್ತರಗಳು, ಟ್ವಿಟರ್ ಮತ್ತು ಫೇಸ್‌ಬುಕ್ ವರದಿಗಳು, ಬಿಬಿಸಿ, ಪಿಟಿಐ



4.34 ಲಕ್ಷ ಖಾತೆಗಳ ಬಳಕೆದಾರರ ಮಾಹಿತಿ ನೀಡುವಂತೆ ಕೇಂದ್ರ ಸರ್ಕಾರವು ಫೇಸ್‌ಬುಕ್‌ಗೆ ಸೂಚನೆ ನೀಡಿದೆ

13,848 ಖಾತೆಗಳ ಬಳಕೆದಾರರ ಮಾಹಿತಿ ನೀಡುವಂತೆ ಕೇಂದ್ರ ಸರ್ಕಾರವು ಟ್ವಿಟರ್‌ಗೆ ಸೂಚನೆ ನೀಡಿದೆ

ನಿಷೇಧದ ಕ್ರೊನಾಲಜಿ

ಕೇಂದ್ರದಲ್ಲಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ ರಚನೆಯಾಗಿದ್ದು 2014ರಲ್ಲಿ. ಅಲ್ಲಿಂದ ಇಲ್ಲಿಯವರೆಗೆ (2023ರ ಮಾರ್ಚ್ ಅಂತ್ಯದವರೆಗೆ) ಹಲವು ಕಾರಣಗಳಿಗಾಗಿ ಸುಮಾರು 33,299 ಸಾಮಾಜಿಕ ಜಾಲತಾಣಗಳ ಖಾತೆಗಳು/ಯುಆರ್‌ಎಲ್‌ಗಳನ್ನು ಕೇಂದ್ರ ಸರ್ಕಾರವು ನಿಷೇಧಿಸಿದೆ. ಮಾಹಿತಿ ತಂತ್ರಜ್ಞಾನ ಕಾಯ್ದೆಯ ಸೆಕ್ಷನ್ 69ಎ ಅಡಿಯಲ್ಲಿ ಸರ್ಕಾರವು ಈ ನಿಷೇಧಗಳನ್ನು ಮಾಡಿದೆ. ಹೀಗೆ ಸಾಮಾಜಿಕ ಜಾಲತಾಣ ಖಾತೆಗಳನ್ನು ಮತ್ತು ಯುಆರ್‌ಎಲ್‌ಗಳನ್ನು ನಿಷೇಧಿಸುವುದರ ಕ್ರೊನಾಲಜಿಯಲ್ಲಿ ಕೆಲವು ಅಂಶಗಳನ್ನು ಗಮನಿಸಬಹುದಾಗಿದೆ. ಕೇಂದ್ರ ಸರ್ಕಾರದ ವಿರುದ್ಧ ಇರುವ ಎಲ್ಲ ಮಾಹಿತಿಯನ್ನು, ಸರ್ಕಾರದ ವಿರುದ್ಧದ ಧ್ವನಿಯನ್ನು ಹತ್ತಿಕ್ಕಲು ಕೇಂದ್ರ ಸರ್ಕಾರವು 'ನಿಷೇಧ'ದ ಕ್ರಮವನ್ನು ಅನುಸರಿಸಿ ಎನ್ನುವ ಆರೋಪವೂ ಸರ್ಕಾರದ ಮೇಲಿದೆ.

ಪ್ರಧಾನಿ ಮೋದಿ ಅವರು 2016ರ ನವೆಂಬರ್‌ನಲ್ಲಿ ನೋಟು ರದ್ದತಿಯನ್ನು ಘೋಷಿಸಿದರು. ಈ ಬಳಿಕ ಸಾಮಾಜಿಕ ಜಾಲತಾಣಗಳಲ್ಲಿ ಸರ್ಕಾರದ ವಿರುದ್ಧ ಧ್ವನಿ ಜೋರಾಗಿತ್ತು. ಸುಮಾರು 650ರ ಹತ್ತಿರ ಇದ್ದ 'ನಿಷೇಧ'ದ ಸಂಖ್ಯೆಯು 2017ರ ಹೊತ್ತಿಗೆ 1,385 ಅನ್ನು ತಲುಪಿತು. 2019ರಿಂದ 2022ರವರೆಗೆ ಕೇಂದ್ರ ಸರ್ಕಾರವು ಪೌರತ್ವ ತಿದ್ದುಪಡಿ ಕಾಯ್ದೆ ವಿರುದ್ಧದ ಪ್ರತಿಭಟನೆ, ಕೃಷಿ ಕಾಯ್ದೆ ವಿರುದ್ಧದ ರೈತರ ದೆಹಲಿಯಲ್ಲಿ ಒಂದು ವರ್ಷ ನಡೆಸಿದ ಪ್ರತಿಭಟನೆ, ದೆಹಲಿ ಗಲಭೆ ಸೇರಿ ಹಲವು ವಿರೋಧಗಳನ್ನು ಎದುರಿಸಿದೆ. ಈ ಅವಧಿಯಲ್ಲೇ 2019ರಲ್ಲಿ 3,635ರಷ್ಟಿದ್ದ 'ನಿಷೇಧ'ದ ಸಂಖ್ಯೆಯು 2020ರ ಹೊತ್ತಿಗೆ 9,849ಕ್ಕೆ ಏರಿಕೆಯಾಗಿದೆ. 2021ರ ವೇಳೆಯಲ್ಲಿ ರೈತರ ಪ್ರತಿಭಟನೆ ಮುಂದುವರೆದಿತ್ತು, ಕೋವಿಡ್‌ನ ಎರಡನೇ ಅಲೆಯಲ್ಲಿ ಜನರಿಗೆ ಆಮ್ಲಜನಕ ಲಭ್ಯತೆಯ ಕೊರತೆ, ಶವಸಂಸ್ಕಾರಕ್ಕೂ ಜಾಗ ಸಿಗದಂಥ ಸ್ಥಿತಿಗಳ ಫೋಟೊ, ವರದಿಗಳು ಸಾಮಾಜಿಕ ಜಾಲತಾಣಗಳಲ್ಲಿ ಹೆಚ್ಚು ಹೆಚ್ಚು ಸದ್ದು ಮಾಡಿದವು. ಈ ಕಾರಣಕ್ಕೂ 'ನಿಷೇಧ'ದ ಸಂಖ್ಯೆಯಲ್ಲಿ ಏರಿಕೆಯಾಗಿತ್ತು.


ಪತ್ರಕರ್ತರ ದೃಢೀಕೃತ ಟ್ವಿಟರ್ ಖಾತೆ ವಿರುದ್ಧ ಕ್ರಮಕ್ಕೆ ಸೂಚನೆ

ವಿಶ್ವದ ಐದಾರು ದೇಶಗಳು ಅಲ್ಲಿನ ಪತ್ರಕರ್ತರ ದೃಢೀಕೃತ ಟ್ವಿಟರ್ ಖಾತೆಗಳ ವಿರುದ್ಧ ಕ್ರಮ ತೆಗೆದುಕೊಳ್ಳುವಂತೆ ಟ್ವಿಟರ್‌ಗೆ ಆದೇಶ ಮತ್ತು ಸೂಚನೆ ನೀಡುತ್ತವೆ. ಈಚಿನ ವರ್ಷಗಳಲ್ಲಿ ಈ ರೀತಿ ಅತಿಹೆಚ್ಚು ಸೂಚನೆ ನೀಡಿದ್ದು ಭಾರತ ಸರ್ಕಾರ ಎಂದು ಟ್ವಿಟರ್ ತನ್ನ ವರದಿಯಲ್ಲಿ ಹೇಳಿಕೊಂಡಿದೆ.ಪತ್ರಕರ್ತರ ದೃಢೀಕೃತ ಟ್ವಿಟರ್ ಖಾತೆಗಳ ವಿರುದ್ಧ ಕ್ರಮ ತೆಗೆದುಕೊಳ್ಳುವಂತೆ ಆರಂಭದ ವರ್ಷಗಳಲ್ಲಿ ಭಾರತ ಸರ್ಕಾರವು ಸೂಚನೆ ನೀಡುತ್ತಿದ್ದದ್ದು ವಿರಳ. 2020ರ ನಂತರ ಅಂತಹ ಆದೇಶ ಮತ್ತು ಸೂಚನೆಗಳ ಸಂಖ್ಯೆ ಹೆಚ್ಚಾಯಿತು ಎಂಬುದನ್ನು ಟ್ವಿಟರ್‌ನ 'ರಿಮೂವಲ್ ರಿಕ್ವೆಸ್ಟ್' ವರದಿಯಲ್ಲಿನ ದತ್ತಾಂಶಗಳು ಹೇಳುತ್ತವೆ. ಸರ್ಕಾರ ಹೀಗೆ ಆದೇಶ ನೀಡಿದರೂ, ಅಂತಹ ಟ್ವೀಟ್‌ಗಳು ಮತ್ತು ಟ್ವಿಟರ್ ಖಾತೆಯ ಬಳಕೆದಾರರು ಯಾವುದೇ ಕಾನೂನು ಮತ್ತು ನಿಯಮ ಉಲ್ಲಂಘಿಸಿರುವುದಿಲ್ಲ. ಈ ಕಾರಣದಿಂದ ಅಂತಹ ಎಲ್ಲಾ ಸೂಚನೆಗಳನ್ನು ಮಾನ್ಯ ಮಾಡಲು ಸಾಧ್ಯವಾಗಿಲ್ಲ ಎಂದು ಟ್ವಿಟರ್ ತನ್ನ ವರದಿಯಲ್ಲಿ ಹೇಳಿಕೊಂಡಿದೆ.

2022ರಲ್ಲಿ ಹಲವು ಪತ್ರಕರ್ತರು, ರಾಜಕಾರಣಿಗಳು ಮತ್ತು ಸಾಮಾಜಿಕ ಕಾರ್ಯಕರ್ತರ 250 ಟ್ವಿಟರ್ ಖಾತೆಗಳನ್ನು ಕೇಂದ್ರ ಸರ್ಕಾರದ ಆದೇಶದನ್ವಯ ಸ್ಥಗಿತಗೊಳಿಸಲಾಗಿತ್ತು. ಅದಕ್ಕೆ ವ್ಯಾಪಕ ವಿರೋಧ ವ್ಯಕ್ತವಾದ ಕಾರಣ ಟ್ವಿಟರ್ ಆ ಎಲ್ಲಾ ಖಾತೆಗಳನ್ನು ಕೆಲವೇ ಗಂಟೆಗಳಲ್ಲಿ ಮರುಸ್ಥಾಪಿಸಿತ್ತು.

277 ಕ್ರಮ ತೆಗೆದುಕೊಳ್ಳುವಂತೆ ಭಾರತ ಸರ್ಕಾರವು 2020ರಲ್ಲಿ ನೀಡಿದ ಸೂಚನೆಗಳಲ್ಲಿದ್ದ ಪತ್ರಕರ್ತರ ದೃಢೀಕೃತ ಖಾತೆಗಳ ಸಂಖ್ಯೆ

206 ಕ್ರಮ ತೆಗೆದುಕೊಳ್ಳುವಂತೆ ಭಾರತ ಸರ್ಕಾರವು 2021ರಲ್ಲಿ ನೀಡಿದ ಸೂಚನೆಗಳಲ್ಲಿದ್ದ ಪತ್ರಕರ್ತರ ದೃಢೀಕೃತ ಖಾತೆಗಳ ಸಂಖ್ಯೆ



ಪ್ರಜಾವಾಣಿ ಗ್ರಾಫಿಕ್ಸ್: ಶಿಲ್ಪಾ ಕಬ್ಬಿಣಕಂತಿ

'ಟೋಬಿ– ಮಾರಿಗೆ ದಾರಿ' ಬಿಡಿ!



ಚಿತ್ರದ ಪೋಸ್ಟರ್

'**ಶಂಕರದ** ಕುರಿಯೂ ಮಾರಿಯಾಗಬಲ್ಲದು!' ಎನ್ನುತ್ತಾ ಇತ್ತೀಚೆಗೆ ತಮ್ಮ ಹೊಸ ಪ್ರಾಜೆಕ್ಟ್ ಬಗ್ಗೆ ಸುಳಿವು ನೀಡಿದ್ದ ನಟ ರಾಜ್ ಬಿ.ಶೆಟ್ಟಿ, ಮಂಗಳವಾರ(ಜೂನ್ 13) ತಮ್ಮ ಹೊಸ ಚಿತ್ರದ ಶೀರ್ಷಿಕೆ ಹಾಗೂ ಬಿಡುಗಡೆ ದಿನಾಂಕ ಘೋಷಿಸಿದ್ದಾರೆ.

'ಟೋಬಿ–ಮಾರಿ ಮಾರಿ, ಮಾರಿಗೆ ದಾರಿ' ಎಂಬ ಶೀರ್ಷಿಕೆ ಹೊತ್ತ ಈ ಸಿನಿಮಾವನ್ನು ರಾಜ್ ಅವರೇ ಬರೆದಿದ್ದು, ಲೀಡ್ ರೋಲ್‌ನಲ್ಲೂ ನಟಿಸಿದ್ದಾರೆ. ಚಿತ್ರಕ್ಕೆ ಬಾಸಿಲ್ ಅಲ್ಚಲಕ್ಕಲ್ ಆ್ಯಕ್ಷನ್ ಕಟ್ ಹೇಳಿದ್ದಾರೆ. ಶೀರ್ಷಿಕೆ ಅನಾವರಣದ ಸಂದರ್ಭದಲ್ಲಿ ಚಿತ್ರ ಬಿಡುಗಡೆ ದಿನಾಂಕವನ್ನೂ ಘೋಷಿಸಲಾಗಿದ್ದು, ಸಿನಿಮಾ ಇದೇ ಆಗಸ್ಟ್ 25ರಂದು ತೆರೆಕಾಣಲಿದೆ. ಬಾಸಿಲ್ ಈ ಹಿಂದೆ ರಾಜ್ ಅವರ ಸಿನಿಮಾಗಳಲ್ಲಿ ಕೆಲಸ ಮಾಡಿದ ಅನುಭವವನ್ನು ಹೊಂದಿದ್ದಾರೆ.

ಈ ಹಿಂದೆ 'ಲೈಟರ್ ಬುದ್ಧ ಫಿಲ್ಮ್ಸ್' ನಡಿ ನಿರ್ಮಾಣವಾದ ರಾಜ್ ಬಿ.ಶೆಟ್ಟಿ ನಟನೆಯ 'ಗರುಡ ಗಮನ ವೃಷಭ ವಾಹನ' ಸಿನಿಮಾವನ್ನು ನಿರ್ಮಾಣ ಮಾಡಿದ್ದ ರವಿ ರೈ ಕಳಸ ಅವರೇ 'ಟೋಬಿ' ನಿರ್ಮಾಣ ಮಾಡಿದ್ದಾರೆ. ಅಗಸ್ತ್ಯ ಫಿಲ್ಮ್ಸ್ ಹಾಗೂ ಕಾಫಿ ಗ್ಯಾಂಗ್ ಸ್ಟುಡಿಯೊ ಲಾಂಛನದಲ್ಲಿ ಈ ಚಿತ್ರ ನಿರ್ಮಾಣವಾಗಿದೆ. ಶಾಮಿಲ್ ಬಂಗೇರ ಈ ಚಿತ್ರದ ಕಾರ್ಯಕಾರಿ ನಿರ್ಮಾಪಕರು.

ಚಿತ್ರದ ಮೂಲಕಥೆ ನಿರ್ದೇಶಕ ಟಿ.ಕೆ ದಯಾನಂದ್ ಅವರದು. ಚಿತ್ರವನ್ನು ಕೆವಿಎನ್ ಪ್ರೊಡಕ್ಷನ್ಸ್ ರಾಜ್ಯದಾದ್ಯಂತ ವಿತರಣೆ ಮಾಡಲಿದೆ. ಚಿತ್ರಕ್ಕೆ ಮಿದುನ್ ಮುಕುಂದನ್ ಸಂಗೀತ ನಿರ್ದೇಶನವಿದ್ದು, ಪ್ರವೀಣ್ ಶ್ರೀಯನ್ ಛಾಯಾಗ್ರಹಣವಿದೆ. 'ಗರುಡ ಗಮನ..' ಸಿನಿಮಾದ ತಾಂತ್ರಿಕ ವಿಭಾಗದಲ್ಲಿ ಇದೇ ತಂಡ ಕಾರ್ಯನಿರ್ವಹಿಸಿತ್ತು. ನಟಿಯರಾದ ಚೈತ್ರ ಜೆ.ಆಚಾರ್ ಹಾಗೂ ಸಂಯುಕ್ತ ಹೊರನಾಡು, ಗೋಪಾಲಕೃಷ್ಣ ದೇಶಪಾಂಡೆ, ದೀಪಕ್ ರಾಜ್ ಶೆಟ್ಟಿ ಮುಂತಾದವರು ತಾರಾಬಳಗದಲ್ಲಿದ್ದಾರೆ. ಇದೊಂದು 'ಮಾಸ್' ಜಾನರ್ ಸಿನಿಮಾ ಎಂದು ರಾಜ್ ಈ ಹಿಂದೆಯೇ ತಿಳಿಸಿದ್ದರು.

'ಗಣ'ಕ್ಕೆ ಸಿನಿತಾರೆಯರ ಬೆಂಬಲ

ಪ್ರಜ್ವಲ್ ದೇವರಾಜ್ ನಟನೆಯ 'ಗಣ' ಚಿತ್ರದ ಮೊದಲ ಪೋಸ್ಟರ್ ಇತ್ತೀಚೆಗಷ್ಟೆ ಬಿಡುಗಡೆಗೊಂಡಿದೆ. ಶರಣ್, ರಾಗಿಣಿ ದ್ವಿವೇದಿ, ವಿಜಯ ರಾಘವೇಂದ್ರ, ಶೃತಿ ಹರಿಹರನ್, ಮೇಘನರಾಜ್, ನಿರ್ದೇಶಕ ಸಿಂಪಲ್ ಸುನಿ ಸೇರಿ ಚಿತ್ರರಂಗದ ಅನೇಕರು ತಮ್ಮ ಸಾಮಾಜಿಕ ಮಾಧ್ಯಮ ಖಾತೆಗಳಲ್ಲಿ ಪೋಸ್ಟರ್ ಹಂಚಿಕೊಂಡು ಪ್ರಜ್ವಲ್‌ಗೆ ಶುಭ ಕೋರಿದ್ದಾರೆ.



ಪ್ರಜ್ವಲ್ ದೇವರಾಜ್

ಚೆರಿ ಕ್ರಿಯೇಷನ್ಸ್ ಲಾಂಛನದಲ್ಲಿ ಪಾರ್ಥು ಅವರು ನಿರ್ಮಿಸಿರುವ ಈ ಚಿತ್ರವನ್ನು ಹರಿಪ್ರಸಾದ್ ಜಕ್ಕ ನಿರ್ದೇಶಿಸಿದ್ದಾರೆ. ಇದೊಂದು ಆ್ಯಕ್ಷನ್–ಮಾಸ್ ಸಿನಿಮಾ ಆಗಿದ್ದು, ದುಷ್ಟರನ್ನು ಸದೆಬಡಿಯುವ ಅವತಾರದಲ್ಲಿ ಪ್ರಜ್ವಲ್ ಕಾಣಿಸಿಕೊಂಡಿದ್ದಾರೆ. ಬೆಂಗಳೂರು, ಮೈಸೂರಿನ ಸುತ್ತಮುತ್ತ ಚಿತ್ರದ ಚಿತ್ರೀಕರಣ ನಡೆದಿದೆ. ಜೈ ಆನಂದ್ ಛಾಯಾಗ್ರಹಣ, ಅನೂಪ್ ಸೀಲಿನ್ ಸಂಗೀತ ನಿರ್ದೇಶನ, ಹರೀಶ್ ಕೊಮ್ಮೆ ಸಂಕಲನ ಚಿತ್ರಕ್ಕಿದೆ.

ಯಶಾ ಶಿವಕುಮಾರ್, ವೇದಿಕಾ ಕುಮಾರ್, ಕೃಷಿ ತಾಪಂಡ, ವಿಶಾಲ್ ಹೆಗಡೆ, ರವಿ ಕಾಳೆ, ಸಂಪತ್ ರಾಜ್, ಶಿವರಾಜ್ ಕೆ.ಆರ್ ಪೇಟೆ, ರಮೇಶ್ ಭಟ್ ಮುಂತಾದವರು ಚಿತ್ರದ ತಾರಾಬಳಗದಲ್ಲಿದ್ದಾರೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net


ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

'ಮನೆಗೆ ಮೀಟರ್ ಅಳವಡಿಸಿದರೆ, ಒಂದೋ ನಿನ್ನನ್ನು ಸಾಯಿಸುತ್ತೇನೆ. ಇಲ್ಲ ನೀನೇ ನನ್ನನ್ನು ಕೊಂದುಬಿಡು' ಎಂದು ಮುಸ್ಲಿಂ ವ್ಯಕ್ತಿಯೊಬ್ಬರು ಎಲೆಕ್ಟ್ರೀಷಿಯನ್ ಒಬ್ಬರಿಗೆ ಹೇಳಿದ ವಿಡಿಯೊವೊಂದು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೆಯಾಗಿದೆ. ಸುಮಾರು 33 ಸೆಕೆಂಡಿನಷ್ಟಿರುವ ಈ ವಿಡಿಯೊದಲ್ಲಿ ವ್ಯಕ್ತಿಗಳು ಹಿಂದಿಯಲ್ಲಿ ಮಾತುಕತೆ ನಡೆಸಿದ್ದಾರೆ. ಮುಸ್ಲಿಂ ವ್ಯಕ್ತಿಯು ವಿದ್ಯುತ್ ಅನ್ನು ಕದಿಯುತ್ತಿದ್ದು, ಮನೆಗೆ ಮೀಟರ್ ಅಳವಡಿಸಲು ಬಂದ ಎಲೆಕ್ಟ್ರೀಷಿಯನ್‌ನೊಂದಿಗೆ ಮಾತಿನ ಚಕಮಕಿ ನಡೆಸಿದ್ದಾರೆ. ಇದು ಕರ್ನಾಟಕದಲ್ಲಿ ನಡೆದ ಘಟನೆ ಎಂದು ಈ ವಿಡಿಯೊವನ್ನು ಹಂಚಿಕೊಂಡುವವರು ಹೇಳಿದ್ದಾರೆ. 'ಕಾಂಗ್ರೆಸ್ ನೀಡಿದ ಭರವಸೆಯನ್ನು ಪೂರ್ಣಗೊಳಿಸಲು ಕರ್ನಾಟಕ ವಿದ್ಯುತ್ ಇಲಾಖೆ ಕಷ್ಟ ಅನುಭವಿಸುತ್ತಿದೆ' ಎಂದು ವಿಡಿಯೊ ಹಂಚಿಕೊಂಡವರು ಬರೆದುಕೊಂಡಿದ್ದಾರೆ. ಆದರೆ, ಇದು ಪಾಕಿಸ್ತಾನದ ವಿಡಿಯೊ.

ಇದು ಪಾಕಿಸ್ತಾನದ ವಿಡಿಯೊವಾಗಿದ್ದು, ಈ ಘಟನೆಯು 2020ರಲ್ಲಿ ಕರಾಚಿಯಲ್ಲಿ ನಡೆದಿದೆ. ಕೆ-ಎಲೆಕ್ಟ್ರಿಕ್ ಎನ್ನುವ ಪಾಕಿಸ್ತಾನದ ಇಂಧನ ಸಂಸ್ಥೆಯೊಂದು ಈ ವಿಡಿಯೊವನ್ನು ಮೊದಲು ಹಂಚಿಕೊಂಡಿದೆ. 'ವಿದ್ಯುತ್ ಕದಿಯುವ ವೇಳೆಯಲ್ಲೇ ವ್ಯಕ್ತಿಯೊಬ್ಬರನ್ನು ಹಿಡಿಯಲಾಗಿದೆ' ಎಂದು ಬರೆದುಕೊಳ್ಳಲಾಗಿದೆ. ಎಆರ್‌ವೈ ಎನ್ನುವ ಪಾಕಿಸ್ತಾನದ ಸುದ್ದಿ ಸಂಸ್ಥೆಯೊಂದು ಈ ಬಗ್ಗೆ ವರದಿಯನ್ನೂ ಮಾಡಿದೆ. ಆದ್ದರಿಂದ ಈ ವಿಡಿಯೊ ಕರ್ನಾಟಕಕ್ಕೆ ಸಂಬಂಧಿಸಿದ್ದಲ್ಲ ಎಂದು ದಿ ಲಾಜಿಕಲ್ ಇಂಡಿಯನ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ



ತತ್ವ ಸಾಕ್ಷಾತ್ಕಾರ ಮಾರ್ಗ

ತತ್ತ್ವ ಸಾಕ್ಷಾತ್ಕಾರ ಚಿತ್ತ ಶುದ್ಧಿಯಿನಹುದು |
ಚಿತ್ತ ಶೋಧನೆ ಮತಿಚಮತ್ಕಾರವಲ್ಲ ||
ಬಿತ್ತರದ ಲೋಕಪರಿಪಾಕದಿಂ ಸತ್ಕರ್ಮ |
ಸಕ್ತಿಯಿಂ ಶುದ್ಧತೆಯೊ – ಮಂಕುತಿಮ್ಮ || **906** ||

ಪದ-ಅರ್ಥ: ಚಿತ್ತ ಶುದ್ಧಿಯಿನಹುದು = ಚಿತ್ತ ಶುದ್ಧಿಯಿನ್ + ಅಹುದು (ಆಗುತ್ತದೆ), ಬಿತ್ತರದ = -ವಿಸ್ತಾರವಾದ, ಲೋಕಪರಿಪಾಕದಿಂ = ಲೋಕ + ಪ-ರಿಪಾಕದಿಂ(ಅನುಭವದಿಂದ), ಸಕ್ತಿಯಿಂ = ಆಸಕ್ತಿ-ಯಿಂದ, ಭಾಗವಹಿಸುವುದರಿಂದ.

ವಾಚ್ಯಾರ್ಥ: ತತ್ವದ ಅರಿವು ಮನಸ್ಸಿನ ಶುದ್ಧತೆಯಿಂದ.ಮನಸ್ಸನ್ನು ಶುದ್ಧಮಾಡಿಕೊಳ್ಳು-ವುದು ಬುದ್ಧಿಯಚಮತ್ಕಾರವಲ್ಲ. ವಿಸ್ತಾರವಾದ ಲೋಕಾನುಭವದಿಂದ, ಒಳ್ಳೆಯಕರ್ಮಗಳಲ್ಲಿ ಭಾಗ-ವಹಿಸುವುದರಿಂದ ಶುದ್ಧತೆ ಸಾಧ್ಯವಾಗುತ್ತದೆ.

ವಿವರಣೆ: ತತ್ವದ ಅರಿವು ನಮಗೆ ಆಗಬೇಕಾದರೆ ಮನಸ್ಸುಶುದ್ಧವಾಗಿರಬೇಕು. ಕೊಳಕಾದ, ಕಲಕಿದ ನೀರಿನಲ್ಲಿ ಮುಖ ಕಾಣುವುದಿಲ್ಲ. ಕನ್ನಡಕದ ಮೇಲೆ ಧೂಳು ಕುಳಿತಿದ್ದರೆ ಮುಂದಿರುವ ಚಿತ್ರ ಸ್ಪಷ್ಟವಾಗಿ ಕಾಣದಂತೆ, ಶುದ್ಧವಾಗಿಲ್ಲದ ಮನಸ್ಸಿಗೆ ತತ್ವದರ್ಶನವಾಗಲಾರದು. ಅದನ್ನು ಶುದ್ಧಮಾಡಿ-ಕೊಳ್ಳುವುದು ಹೇಗೆ? ಕಗ್ಗ ಹೇಳುತ್ತದೆ ಚಿತ್ತಶುದ್ಧಿ ಎನ್ನುವುದು ಬುದ್ಧಿಯ ಚಮತ್ಕಾರವಲ್ಲ. ಬೆಡಗಿನ ಮಾತುಗಳನ್ನಾಡಿ ತತ್ವವನ್ನು ಅರಿಯುವುದು ಅಸಾಧ್ಯ. ಅದಕ್ಕೆ ಶೋಧನೆಯಾಗಬೇಕು, ಚಿಂತನೆ ನಡೆಯಬೇಕು. ಈ ಪೃಥ್ವಿ, ರವಿ, ಚಂದ್ರ, ತಾರೆಗಳು, ಗ್ರಹಗಳು ಎಲ್ಲವೂ ಸತ್ಯ. ಕಣ್ಣಿಗೆ ಕಾಣಿಸುತ್ತವೆ. ಆದರೆ ಅವು ಪರಮ ಸತ್ಯವಲ್ಲ. ನಾವಿರುವ ಭೂಮಿ ಸಸ್ಯಶ್ಯಾಮಲೆ, ಎಲ್ಲ ಜೀವಗಳಿಗೆ ಆಶ್ರಯತಾಣ. ಆದರೆ ಅದರ ಆಯುಷ್ಯ ಬಹುಶ: ಇನ್ನೊಂದು ನಾಲ್ಕು ನೂರಾ ಐವತ್ತು ಕೋಟಿ ವರ್ಷಗಳು. ಆಮೇಲೆ ಇದು ಇರುವುದಿಲ್ಲ. ಸೂರ್ಯನಿಗೂ ಒಂದು ಆಯುಷ್ಯ ಎಂದಿದೆ. ಆದ್ದರಿಂದ ನಮ್ಮ ಕಣ್ಣಿಗೆ ಶಾಶ್ವತವೆಂದು ಕಂಡ ಯಾವ ವಸ್ತುವೂ ಶಾಶ್ವತವಲ್ಲ. ಹಾಗಾದರೆ ಈ ಅಶಾಶ್ವತವಾದ ಜಗತ್ತಿನಲ್ಲಿ ಶಾಶ್ವತವಾದದ್ದು ಏನಾದರೂ ಇದೆಯೇ ಎಂದು ಮನಸ್ಸು ಚಿಂತಿತವಾಗುತ್ತದೆ. ಈ ಚಿಂತೆ ಆಳವಾದಂತೆ, ಏಕಾಗ್ರವಾದಂತೆ ಪರಮಸತ್ಯವಾದ ತತ್ವದ ಸಾಕ್ಷಾತ್ಕಾರವಾಗುತ್ತದೆ. ಈ ಸತತವಾದ, ಏಕಾಗ್ರವಾದ ಚಿಂತನೆಯೇ ಚಿತ್ತ ಶೋಧನೆ. ಅದರಿಂದ ತತ್ವ ಸಾಕ್ಷಾತ್ಕಾರ. ಹಾಗಾದರೆ ಪ್ರಪಂಚದ ಎಲ್ಲ ಕಾರ್ಯಗಳನ್ನು ತೊರೆದು ಕೇವಲ ಧ್ಯಾನದಲ್ಲಿ ಕುಳಿತುಕೊಳ್ಳಬೇಕೇ? ಇಲ್ಲ. ಕಗ್ಗ ಹೇಳುತ್ತದೆ, ವಿಸ್ತಾರವಾದ ಲೋಕದಲ್ಲಿ ನಿನಗಾಗುವ ಅನುಭವ, ಸತ್ಕರ್ಮಗಳಲ್ಲಿ ನೀನು ತೋರುವ ಆಸಕ್ತಿ ಕೂಡ ಚಿತ್ತಶೋಧನೆಯೇ. ಬದುಕಿನಲ್ಲಿ ಬೀಳುವ ಪೆಟ್ಟು, ದು:ಖ, ಸುಖ, ಇವೆಲ್ಲ ಚಿತ್ತ ಶುದ್ಧಿಯ ಮಾರ್ಗಗಳು. ಅದಿರಿನಿಂದ ಕಬ್ಬಿಣವನ್ನು ಹೊರತೆಗೆದಾಗ ಅದು ಬೀಡು ಕಬ್ಬಿಣ. ತುಂಬ ಬಿರುಸಾಗಿದೆ, ನೆಲಕ್ಕೆ ಬಿದ್ದರೆ ಒಡೆಯುತ್ತದೆ. ಆಗ ಅದನ್ನು ಬೆಂಕಿಯಲ್ಲಿ ಕೆಂಪಗಾಗುವಂತೆ ಕಾಯಿಸಿ, ಸುತ್ತಿಗೆಯಿಂದ ಹೊಡೆಯುತ್ತಾರೆ. ಕಬ್ಬಿಣದಲ್ಲಿದ್ದ ಇಂಗಾಲ ಹೊರಗೆ ಕಿಟ್ಟವಾಗಿ ಬಿದ್ದು ಪುಡಿಯಾಗುತ್ತದೆ. ಹೀಗೆ ಹತ್ತಾರು ಬಾರಿ ಕಾಯಿಸಿ, ಕುಟ್ಟಿದಾಗ ಕಬ್ಬಿಣದ ಒಳಗಿದ್ದ ಅಶುದ್ಧ ವಸ್ತುಗಳು ಹೊರಗೆ ಬಂದು ಕಬ್ಬಿಣ ಶುದ್ಧ-ವಾಗುತ್ತದೆ. ಆಗ ಅದು ಮೆದುವಾಗಿ ಉದ್ದವಾದ ಎಳೆಯನ್ನು ತೆಗೆಯಲೂ ಅರ್ಹವಾಗುತ್ತದೆ. ಅಂದರೆ, ಕಾಯಿಸಿ, ಕುಟ್ಟಿದಾಗ ಕಬ್ಬಿಣಕ್ಕೇನೂ ಆಗಲಿಲ್ಲ, ಅದರೊಳಗಿದ್ದ ಅಶುದ್ಧತೆ ಕಳೆದು ಹೋಯಿತು. ಕಗ್ಗ ಅದನ್ನೇ ಹೇಳುತ್ತದೆ, ಜೀವನದ ಸತ್ಕರ್ಮಗಳಲ್ಲಿ ಆಸಕ್ತಿಯಿಂದ ಭಾಗವಹಿಸಿದಾಗ ಅಶುದ್ಧತೆ ಕರಗಿ ಶುದ್ಧತೆ ಬರುತ್ತದೆ. ಅದರಿಂದ ಚಿತ್ತಪರಿಪಾಕ. ಅದರಿಂದ ತತ್ವ ಸಾಕ್ಷಾತ್ಕಾರ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಗುರುವಾರ ಜೂನ್ 15, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯನ ಗ್ರೀಷ್ಮ ಋತು ತಿಥಿ: ಜ್ಯೇಷ್ಠ ಕೃಷ್ಣದ್ವಾದಶಿ ಗಂ. 08-33ನಕ್ಷತ್ರ: ಭರಣಿ ಗಂ. 14-22 ಯೋಗ: ಸುಕರ್ಮ 26-02
ಕರಣ: ತೈತಿಲ,ಗಂ. 08-33, ವೃಷಭ ಮಾಸದ 31 ನೇ ದಿನ,ಮಳೆನಕ್ಷತ್ರ: ಮೃಗಶಿರ
2.ರಾಹುಕಾಲ : ಮಧ್ಯಾಹ್ನ 01-30 – 03-00,ಸೂರ್ಯೋದಯ : 06-07 ಸೂರ್ಯಾಸ್ತ : 06-54,ಮುಸ್ಲಿಂ ದಿನಾಂಕ : 26 ಜುಲ್ಖಾಯದ್
ದಿನ ವಿಶೇಷ : ರಜಸ್ ಸಂಕ್ರಾಂತಿ (ಒರಿಸ್ಸಾ)
ಅದೃಷ್ಟ ಸಂಖ್ಯೆ : 10, 5

ಮೇಷ: ಏನನ್ನಾದರೂ ಸಾಧಿಸಲೇಬೇಕೆಂದಿರುವ ನಿಮಗೆ,ಆತ್ಮವಿಶ್ವಾಸದ ಕೊರತೆಯಂತೂ ಕಾಣಿಸದು. ಕೌಟುಂಬಿಕವಿಷಯಗಳತ್ತ ಹೆಚ್ಚು ಗಮನಹರಿಸ ಬೇಕಾಗುವುದು. ಶುಭ ಫಲಗಳಿಗಾಗಿ ಸುಬ್ರಹ್ಮಣ್ಯ ಸ್ವಾಮಿಯ ಆರಾಧನೆ ಮಾಡಿ.

ವೃಷಭ: ಕಾರ್ಯಕ್ಷೇತ್ರದಲ್ಲಿ ನೀತಿ-ನಿಯಮಗಳಿಗೆ ಬದ್ಧರಾದಲ್ಲಿ ಆಡಳಿತ ವರ್ಗದ ಸಹಾಯ ಹಸ್ತ ಅನುಭವಕ್ಕೆ ಬರಲಿದೆ.ಕಾರ್ಖಾನೆ ಕೆಲಸಗಾರರ ಬೇಡಿಕೆ ಇತ್ಯರ್ಥವಾಗುವುದು. ನ್ಯಾಯಾಂಗ ಇಲಾಖೆಯವರಿಗೆ ಸೌಲಭ್ಯ ಸಿಗುತ್ತದೆ

ಮಿಥುನ: ರಾಜಕೀಯ ವಿಭಾಗದಲ್ಲಿ ಶ್ರಮಸಹಿತ ಜಯಸಾಧನೆ ಮನಸ್ಸಿಗೆ ತೃಪ್ತಿತರುವುದು. ಉದ್ಯೋಗದಲ್ಲಿ ಬದಲಾವಣೆಗೆ ಪೂರಕವಾದ ಸನ್ನಿವೇಶ ಈ ದಿನದಲ್ಲಿ ಕಂಡುಬರುತ್ತದೆ. ಸಾಲದ ಬಾಕಿ ಬಾಬ್ತು ಹಿಂದಿರುಗಿಸುವರು.

ಕರ್ಕಾಟಕ: ಮನೆಯವರ ಆರೋಗ್ಯದಲ್ಲಿ ಹೊಟ್ಟೆಗೆ ಸಂಬಂಧಿಸಿದಂತೆ ವ್ಯತ್ಯಾಸ ಕಂಡುಬಂದಲ್ಲಿ ವೈದ್ಯರನ್ನು ಭೇಟಿ ಮಾಡಿ ತಪಾಸಣೆ ಮಾಡಿಸಿಕೊಳ್ಳಿ. ಮನೆ ಕಟ್ಟುವ ಕೆಲಸ ದೇವರ ಕೃಪೆಯಿಂದ ನಿರ್ವಿಘ್ನ ಮುಂದುವರಿಯಲಿದೆ.

ಸಿಂಹ: ಸಹೋದರರ ಆಗಮನ ಸಂತೋಷಕ್ಕೆ ಕಾರಣವಾಗುತ್ತದೆ. ವೃತ್ತಿ ಮತ್ತು ಪ್ರವೃತ್ತಿಗಳಲ್ಲಿ ಸಮತೋಲನ ಕಾಯ್ದುಕೊಳ್ಳಿ. ಯಾವುದೇ ವಿಚಾರಗಳಿಗೂ ಚಿಂತಿತರಾಗುವ ಪ್ರಮೇಯ ಇಲ್ಲದ್ದರಿಂದ ಮನಸ್ಸು ನಿರಾಳ.

ಕನ್ಯಾ: ಜೀವನದಲ್ಲಿ ಬಯಸಿದ ನೆಲೆಯನ್ನು ಗಟ್ಟಿಗೊಳ್ಳಿಸಿಕೊಂಡ ಸಂತೃಪ್ತಿ ತುಂಬಿರುತ್ತದೆ. ನೂತನ ಉದ್ಯೋಗ ದೊರೆತು ಸಮಾಧಾನವಾಗುವುದು. ವಿಮಾ ಸಲಹೆಗಾರರಿಗೆ ಅತ್ಯುತ್ತಮವಾದ ದಿನವಾಗಲಿದೆ.

ತುಲಾ: ಕುಟುಂಬದ ಹಿರಿಯರು ಮಾಡಿದ ಪುಣ್ಯದ ಫಲಗಳು ಸಿಗಲಿದೆ. ದಾಂಪತ್ಯದಲ್ಲಿ ತಗ್ಗಿ-ಬಗ್ಗಿ ನಡೆಯುವುದನ್ನು ಕಲಿಯಿರಿ ಇಲ್ಲವಾದಲ್ಲಿ ವಿರಸಕ್ಕೆ ಕಾರಣವಾಗುವುದು. ವಾಣಿಜ್ಯ ಬೆಳೆಗಾರರಿಗೆ ಉತ್ತಮ ಬೆಲೆ ದೊರಕಲಿದೆ.

ವೃಶ್ಚಿಕ: ವ್ಯಾವಹಾರಿಕ ಪ್ರಯಾಣದಿಂದ ಆದಾಯದಲ್ಲಿ ಕೊಂಚ ವೃದ್ಧಿ ಕಂಡುಬರಲಿದೆ. ವಾಹನ ಖರೀದಿಯಂತಹ ವಿಚಾರದಲ್ಲಿ ಕೈಯನ್ನು ಖಾಲಿ ಮಾಡಿಕೊಳ್ಳಬೇಡಿ. ಹಣಕಾಸಿನ ತಾಪತ್ರಯಗಳು ಶೀಘ್ರದಲ್ಲಿ ಪರಿಹಾರ.

ಧನು: ಯೋಜನೆ ಹಾಗೂ ಅವುಗಳ ಬೆಳವಣಿಗೆಯ ಬಗ್ಗೆ ಸಂಬಂಧ ಪಟ್ಟವರಲ್ಲಿ ಚರ್ಚೆ ನಡೆಸಿ ಮುಂದಿನ ಹಂತವನ್ನು ಮುಟ್ಟುವಿರಿ. ಯಾವುದೇ ವಾದ ವಿವಾದಗಳು ನಡೆದರೂ ಕಾರ್ಯ ಸಾಧನೆಗೆ ಯಾವುದೇ ಅಡ್ಡಿಯಾಗದು.

ಮಕರ: ತಾಂತ್ರಿಕ ಕ್ಷೇತ್ರದಲ್ಲಿ ಹೆಚ್ಚಿನ ಪರಿಣತಿ ಹೊಂದಿರುವವರಿಗೆ ಉತ್ತಮ ಅವಕಾಶಗಳ ಜೊತೆಗೆ ಸ್ವಂತ ಉದ್ಯಮ ಸ್ಥಾಪಿಸುವ ಚೈತನ್ಯವು ಮೂಡಿ ಬರಲಿದೆ. ವೃತ್ತಿ ಹಾಗೂ ವೈಯಕ್ತಿಕ ಜೀವನ ಎರಡೂ ಸಹ ತೃಪ್ತಿ ಎನಿಸಲಿದೆ.

ಕುಂಭ: ಸಾಮರ್ಥ್ಯ, ದಕ್ಷತೆ, ಸೇವಾ ಮನೋಭಾವಗಳಿಂದಾಗಿ ಸಂಸ್ಥೆಯಲ್ಲಿ ಜವಾಬ್ದಾರಿಯುತ ಹುದ್ದೆ ನಿಮ್ಮದಾಗಲಿದೆ. ಹೊಸ ವಾಹನ ಖರೀದಿಸುವ ನಿಮ್ಮ ಬಯಕೆ ಈಡೇರಲಿದೆ. ಹಿರಿಯರ ಶುಶ್ರೂಷೆಯ ಬಗ್ಗೆ ಗಮನಹರಿಸಿ.

ಮೀನ: ಮುಂದಾಲೋಚನೆಯಿಂದ ನಿಮ್ಮ ಬಹು ಸಮಯದಿಂದ ಉಳಿದಿದ್ದ ಹೆಚ್ಚಿನ ಕೆಲಸಗಳು ಕಾರ್ಯಗತಗೊಳ್ಳುವುದು. ಮೇಲಧಿಕಾರಿಗಳಿಗೆ ನಿಮ್ಮ ಜವಾಬ್ದಾರಿಯುತ ನಡೆಯಿಂದಾಗಿ ನಿಮ್ಮ ಮೇಲಿನ ನಂಬಿಕೆ ಹೆಚ್ಚಾಗಲಿದೆ.

ಪದಬಂಧ 5350 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಗಿಲಿ ಗಿಲಿ ಶಬ್ದಮಾಡುವ ಮಕ್ಕಳಾಟಿಕೆ (3)
2.ಜಲದಲ್ಲಿ ಹುಟ್ಟಿರುವ ತಾವರೆ (3)
4.ಆರೋಹದ ನಂತರ ಇಳಿಯುವಿಕೆ (4)
7.ಮಾಡಿದ ಕೆಲಸಕ್ಕೆ ಪ್ರತಿಯಾಗಿ ದೊರೆತ ಲಾಭ (4)
9.ವನದಲ್ಲಿದ್ದವನದು ಹೊಸಪ್ರಾಯ! (5)
12.ಸ್ವಾಮಿಗಿರುವ ಆತ್ಮಾಭಿಮಾನ (4)
13.ಶುರುವಿನಲ್ಲೇ ಕೇಳಿದ ಲಂಚ! (4)
15.ಕ್ಷಾತ್ರದವನಿಗೆ ಗೋಚರಿಸಿದ ತಾರೆ! (3)
16.ಮನದಿಂದ ಮಾಡಿಕೊಂಡ ಅರಿಕೆ (3)

ಮೇಲಿಂದ ಕೆಳಕ್ಕೆ
1.ಅಂಗಿ ಅರ್ಧ ತೊಟ್ಟುಕೊಳ್ಳುವಾಗ ಪತ್ನಿ ತಿರುಗಿದಳೇ? (3)
3.ಕುಟಿಲತೆ ತೋರುವಲ್ಲಿನ ಸಂಕೀರ್ಣ (3)
5.ವಠಾರದಲ್ಲಿರುವ ಮದುವೆ ಗಂಡು (2)
6.ಕುದುರೆಯ ಮುಖ (5)
7.ಪ್ರತಿಭಾವಂತನಿಗೆ ವರ್ಚಸ್ಸು ಬೀರು! (5)
8.ಫಲಕದ ಹತ್ತಿರವಿರುವ ಹಣ್ಣು (2)
10.ಅಭಿನಯಿಸುವವಳು ತೋರಿಸಿದ ಹೊಕ್ಕುಳು! (2)
11.ಮನವನ್ನು ಸೆಳೆದ ಹೊಸತು (2)
12.ವಶ ಅಥವಾ ಅಂಕೆ! (3)
14.ಆ ಹೊತ್ತು ಆದ ತೊಂದರೆಯಿಲ್ಲಿ ಉಲ್ಟಾ! (3)

1			■	■	■	2		3
	■	■	■	■	■	■	■	
4	5		6	■	7		8	
■		■		■		■		■
■	■	9					■	■
■	10	■		■		■	11	■
12				■	13			14
	■	■	■	■	■	■	■	
15			■	■	■	16		

5349ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
3.ರಣರಂಗ 5.ಜಾಯಮಾನ
6.ದಾರಿಹೋಕ
8.ಕಳಕಳಿ
11.ಮಕರಂದ 13.ಸವಿಸ್ತಾರ
15.ಪ್ರಕರಣ 16.ಕರಗತ

ಮೇಲಿಂದ ಕೆಳಕ್ಕೆ:
1.ಹಜಾರ 2.ಪ್ರಾಮಾಣಿಕ
3.ರಸದಾಳಿ 4.ಗಣಕ
7.ಹೋಲಿಕೆ 9.ಕಳಂಕ
10.ಹರವಿ 11.ಮರಕತ
12.ದಸಕತ್ತು
13.ಸರೀಕ 14.ಪ್ರಣಯ

ಸುಡೊಕು 5736

	8			9		5		
6		5					1	
			1		5		7	6
		4	8		3		5	
	5					1		9
2				5			6	
1			9					
	3					6		1
8		6		3	1		9	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5735 ಸುಡೊಕು

4	9	3	7	2	8	6	5	1
8	6	2	1	4	5	7	9	3
5	7	1	9	3	6	2	4	8
2	4	6	3	5	1	8	7	9
1	3	7	2	8	9	4	6	5
9	8	5	4	6	7	3	1	2
7	2	8	5	1	4	9	3	6
6	1	9	8	7	3	5	2	4
3	5	4	6	9	2	1	8	7



ಸಾಂದರ್ಭಿಕ ಚಿತ್ರ

ಪ್ರಚಲಿತ ವಿದ್ಯಮಾನಗಳು

ಯುಪಿಎಸ್‌ಸಿ -ಪ್ರಿಲಿಮ್ಸ್ ಮತ್ತು ಸಾಮಾನ್ಯ ಅಧ್ಯಯನ ಪತ್ರಿಕೆ- 2, ಕೆಪಿಎಸ್‌ಸಿ -ಪ್ರಿಲಿಮ್ಸ್ ಮತ್ತು ಸಾಮಾನ್ಯ ಅಧ್ಯಯನ ಪತ್ರಿಕೆ-2 ಮತ್ತು ಇತರ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅಗತ್ಯವಿರುವ ರಾಷ್ಟ್ರೀಯ ಪ್ರಚಲಿತ ವಿದ್ಯಮಾನಗಳ ಕುರಿತ ಮಾಹಿತಿ ಇಲ್ಲಿದೆ.



1. ವಿಶ್ವ ಆಹಾರ ಸುರಕ್ಷತಾ ದಿವಸ

- ಪ್ರತಿ ವರ್ಷ ಜೂನ್ 7ರಂದು ವಿಶ್ವ ಆಹಾರ ಸುರಕ್ಷತಾ ದಿವಸವನ್ನು ಆಚರಿಸಲಾಗುತ್ತದೆ. ಈ ವರ್ಷ ನಡೆದ ದಿನಾಚರಣೆಯಲ್ಲಿ ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು 5 ನೇ ರಾಜ್ಯಮಟ್ಟದ ಆಹಾರ ಸುರಕ್ಷತಾ ಸೂಚ್ಯಂಕವನ್ನು ಬಿಡುಗಡೆ ಮಾಡಿದರು.
- ಇದು, ಆಹಾರ ಸುರಕ್ಷತೆಗೆ ಸಂಬಂಧಿಸಿದಂತೆ ದೇಶದ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಪ್ರಸ್ತುತ ಪರಿಸ್ಥಿತಿಯನ್ನು ಪರಾಮರ್ಶಿಸುವ ವರದಿಯಾಗಿದೆ. ಈ ವರದಿ ತಯಾರಿಸಲು ಕೆಲ ಮಾನದಂಡಗಳನ್ನು ಅಳವಡಿಸಲಾಗುತ್ತದೆ.

ಮಾನದಂಡಗಳು

- ಆಹಾರ ಸುರಕ್ಷತೆಗೆ ಸಂಬಂಧಿಸಿದಂತೆ ಕಾರ್ಯನಿರ್ವಹಿಸಲು ಲಭ್ಯವಿರುವ ಮಾನವ ಸಂಪನ್ಮೂಲದ ಪ್ರಮಾಣ
- ಆಹಾರ ಸುರಕ್ಷತೆ ಕುರಿತು ಸರ್ಕಾರದಲ್ಲಿರುವ ದತ್ತಾಂಶದ ಮಾಹಿತಿ
- ಸುರಕ್ಷಿತ ಆಹಾರವನ್ನು ಕಲ್ಪಿಸುವುದಕ್ಕಾಗಿ ಆಹಾರ ಉತ್ಪನ್ನಗಳನ್ನು ಪರೀಕ್ಷಿಸಲು ರಾಜ್ಯ ಸರ್ಕಾರಗಳ ಮತ್ತು ಕೇಂದ್ರಾಡಳಿತ ಪ್ರದೇಶಗಳ ಬಳಿಯಿರುವ ಮೂಲ ಸವಲತ್ತುಗಳು
- ದೇಶದಾದ್ಯಂತ ಗ್ರಾಹಕರ ಸಬಲೀಕರಣಕ್ಕೆ ಕೈಗೊಂಡಿರುವ ಕ್ರಮಗಳು
- ಸರ್ಕಾರದಿಂದ ಹಮ್ಮಿಕೊಂಡಿರುವ ತರಬೇತಿ ಹಾಗೂ ಸಾಮರ್ಥ್ಯ ಅಭಿವೃದ್ಧಿ ಕಾರ್ಯಕ್ರಮಗಳು.

ಈ ಎಲ್ಲ ಮಾನದಂಡಗಳ ಆಧಾರದ ಮೇಲೆಯೇ 2018–19 ರಿಂದ ಆಹಾರ ಸುರಕ್ಷತಾ ಸೂಚ್ಯಂಕವನ್ನು ಬಿಡುಗಡೆ ಮಾಡಲಾಗುತ್ತಿದೆ ರಾಷ್ಟ್ರ ಮಟ್ಟದಲ್ಲಿ ಆಹಾರ ಸುರಕ್ಷತೆಗೆ ಸಂಬಂಧಿಸಿದಂತೆ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸುವುದು, ರಾಜ್ಯಗಳ ನಡುವೆ ಆರೋಗ್ಯಕರ ಸ್ಪರ್ಧೆಗೆ ಅವಕಾಶ ಕಲ್ಪಿಸುವುದು ಹಾಗೂ ಆಹಾರ ಸುರಕ್ಷತಾ ವಲಯದಲ್ಲಿ ಸಕಾರಾತ್ಮಕ ಬದಲಾವಣೆಗಳನ್ನು ತರುವುದು ಈ ಸೂಚ್ಯಂಕದ ಪ್ರಮುಖ ಉದ್ದೇಶಗಳು.

- ಪ್ರಸಕ್ತ ಸಾಲಿನಲ್ಲಿ ಬಿಡುಗಡೆಯಾದ ಸೂಚ್ಯಂಕದಲ್ಲಿ ಕೇರಳ ಮೊದಲ ಸ್ಥಾನ ಹಾಗೂ ಪಂಜಾಬ್ ಮತ್ತು ತಮಿಳುನಾಡು ಕ್ರಮವಾಗಿ ಎರಡು, ಮೂರನೇ ಸ್ಥಾನ ಪಡೆದುಕೊಂಡಿವೆ.
- ಸಣ್ಣರಾಜ್ಯಗಳ ವಿಭಾಗದಲ್ಲಿ ಗೋವಾ ಮೊದಲು, ಮಣಿಪುರ ಮತ್ತು ಸಿಕ್ಕಿಂ ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನ ಪಡೆದುಕೊಂಡಿವೆ.
- ಕೇಂದ್ರಾಡಳಿತ ಪ್ರದೇಶಗಳಲ್ಲಿ, ಜಮ್ಮು ಕಾಶ್ಮೀರ ಮೊದಲು, ದೆಹಲಿ, ಚಂಡೀಗಡ ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನದಲ್ಲಿವೆ.
- ಸೂಚ್ಯಂಕ ಬಿಡುಗಡೆಯಾದ ನಂತರ ತ್ವರಿತ ಆಹಾರ ಪರೀಕ್ಷಾ ಕಿಟ್ ಪೋರ್ಟಲ್ ಅನ್ನು ಅನಾವರಣಗೊಳಿಸಲಾಯಿತು. ಈ ಪೋರ್ಟಲ್, ಭಾರತದ ಆಹಾರ ಉತ್ಪನ್ನಗಳ ಸುರಕ್ಷತೆಯ ವಿಚಾರದಲ್ಲಿ ಪಾರದರ್ಶಕತೆ ಮತ್ತು ಉತ್ತರದಾಯಿತ್ವವನ್ನು ಕಾಪಾಡಿಕೊಳ್ಳಲು ಸಹಕಾರಿಯಾಗಲಿದೆ.

ವಿಶೇಷ ಸೂಚನೆ: ಜಾಗತಿಕ ಮಟ್ಟದಲ್ಲಿ 2019 ರಿಂದ ವಿಶ್ವ ಆಹಾರ ಸುರಕ್ಷತಾ ದಿವಸವನ್ನು ಆಚರಿಸಲಾಗುತ್ತಿದೆ.

2. 'ಮಹಿರ್' (MAHIR) ಯೋಜನೆ

- ಇತ್ತೀಚೆಗೆ ಕೇಂದ್ರ ಶಕ್ತಿ ಸಚಿವಾಲಯ ನವೀಕರಿಸಬಹುದಾದ ಇಂಧನ ವಲಯದಲ್ಲಿ ಹೊರ ಹೊಮ್ಮುತ್ತಿರುವ ಹೊಸ ತಂತ್ರಜ್ಞಾನವನ್ನು ಗುರುತಿಸಿ, ಅಂಥ ತಂತ್ರಜ್ಞಾನಗಳನ್ನು ಭಾರತದಲ್ಲಿಯೇ ಅಭಿವೃದ್ಧಿ ಪಡಿಸಲು 'ಮಹಿರ್' ಎಂಬ ನೂತನ ಯೋಜನೆ ಜಾರಿಗೆ ತಂದಿದೆ.
- ಮಹಿರ್ – ಮಿಷನ್ ಆನ್ ಅಡ್ವಾನ್ಸ್ ಆ್ಯಂಡ್ ಹೈ ಇಂಪ್ಯಾಕ್ಟ್ ರೀಸರ್ಚ್ (**MAHIR - Mission on Advanced and High impact Research**)
- ಈ ಯೋಜನೆಯನ್ನು 2023-24ರಿಂದ 2027-28ರ ಅವಧಿಯಲ್ಲಿ ಜಾರಿಗೊಳಿಸಲಾಗುತ್ತಿದೆ.
- ಕೇಂದ್ರ ಸರ್ಕಾರ 2070ರ ಒಳಗಾಗಿ ಇಂಗಾಲದ ಡೈ ಆಕ್ಸೈಡ್ ಶೂನ್ಯ ಹೊರಸೂಸುವಿಕೆ ಗುರಿ ತಲುಪುವುದಾಗಿ ಸ್ವಯಂ ಘೋಷಿಸಿದೆ. ಈ ಗುರಿ ಸಾಧಿಸಲು ಮಹಿರ್ ಯೋಜನೆ ಹೆಚ್ಚು ಉಪಯುಕ್ತವಾಗಲಿದೆ.
- ಯೋಜನೆಯನ್ನು ಜಾರಿಗೆ ತರಲು ಸಾರ್ವಜನಿಕ ವಲಯ ಹಾಗೂ ಖಾಸಗಿ ವಲಯಗಳ ಸ್ಟಾರ್ಟ್‌ಅಪ್‌ಗಳು ಕೈಜೋಡಿಸುವುದಲ್ಲದೆ, ಭಾರತದ ಪ್ರಮುಖ ವಿಶ್ವವಿದ್ಯಾಲಯಗಳು, ಐಐಟಿ, ಐಐಎಂ, ಎನ್‌ಐಟಿ ಹಾಗೂ ಇನ್ನಿತರೆ ಪ್ರಮುಖ ಕೈಗಾರಿಕೆಗಳು ಮುಂದಾಗಿವೆ.
- ದೇಶೀಯ ಸಂಸ್ಥೆಗಳ ಜೊತೆಗೆ, ಅಂತರರಾಷ್ಟ್ರೀಯ ಮಟ್ಟದ ಉತ್ತಮ ಪ್ರಯೋಗಾಲಯಗಳೊಂದಿಗೂ ಕೈಜೋಡಿಸಲಾಗುತ್ತಿದೆ. ಪ್ರಸ್ತುತ ಉನ್ನತ ಗುಣಮಟ್ಟವನ್ನು ಹೊಂದಿರುವ ಅಂತರರಾಷ್ಟ್ರೀಯ ಪ್ರಯೋಗಾಲಯಗಳೊಂದಿಗೆ, ಜಂಟಿಯಾಗಿ ನೂತನ ತಂತ್ರಜ್ಞಾನಗಳ ಅಭಿವೃದ್ಧಿ ಮಾಡಲು ಯೋಜನೆಯಡಿ ಅವಕಾಶ ಕಲ್ಪಿಸಲಾಗಿದೆ.
- ಅಂತಿಮವಾಗಿ ಭವಿಷ್ಯದಲ್ಲಿ ಭಾರತ ಇಂಧನ ಕ್ಷೇತ್ರದಲ್ಲಿ ಸ್ವಾವಲಂಬಿಯಾಗುವ ಉದ್ದೇಶದಿಂದ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ ಎಂದು ಕೇಂದ್ರ ಸರ್ಕಾರ ವರದಿಯಲ್ಲಿ ಉಲ್ಲೇಖಿಸಿದೆ.



3. ನವೀಕರಿಸಬಹುದಾದ ಇಂಧನ ಮೂಲ ಪತ್ತೆ, ಮತ್ತು ಅಭಿವೃದ್ಧಿಗಾಗಿ ಸಹಭಾಗಿತ್ವದ ಒಪ್ಪಂದ

- ಇತ್ತೀಚೆಗೆ ಮಹಾರಾಷ್ಟ್ರ ಸರ್ಕಾರದ ಇಂಧನ ಇಲಾಖೆ ಹಾಗೂ ರಾಷ್ಟ್ರೀಯ ಜಲ ವಿದ್ಯುತ್ ನಿಗಮ ಸಂಸ್ಥೆಗಳು ಮಹಾರಾಷ್ಟ್ರದಲ್ಲಿ ನವೀಕರಿಸಬಹುದಾದ ಇಂಧನ ಮೂಲಗಳನ್ನು ಪತ್ತೆಹಚ್ಚಲು ಹಾಗೂ ಅಭಿವೃದ್ಧಿಪಡಿಸುವ ಜಂಟಿ ಒಪ್ಪಂದಕ್ಕೆ ಸಹಿ ಹಾಕಿವೆ.
- ಮಹಾರಾಷ್ಟ್ರ ಸರ್ಕಾರ ಹಲವು ಜಲ ಸಂಗ್ರಹಣಾ ಅಭಿವೃದ್ಧಿ ಯೋಜನೆಗಳನ್ನು ಹಮ್ಮಿಕೊಂಡಿದ್ದು ಈ ಒಪ್ಪಂದದ ಅನ್ವಯ ರಾಷ್ಟ್ರೀಯ ಜಲ ವಿದ್ಯುತ್ ನಿಗಮ ಒಟ್ಟಾರೆಯಾಗಿ 7350 ಮೆಗಾವಾಟ್ ವಿದ್ಯುತ್ ಉತ್ಪಾದನೆಯ ಯೋಜನೆಗಳನ್ನು ಅಭಿವೃದ್ಧಿಪಡಿಸಲಿದೆ.

ರಾಷ್ಟ್ರೀಯ ಜಲ ವಿದ್ಯುತ್ ಯೋಜನೆಗಳು

- 'ಕಾಲ್' ಜಲವಿದ್ಯುತ್ ಯೋಜನೆ: 1,150 ಮೆ.ವಾ ಉತ್ಪಾದನೆ
- ಸಾವಿತ್ರಿ ಜಲವಿದ್ಯುತ್ ಯೋಜನೆ : 2,250 ಮೆ.ವಾ ಉತ್ಪಾದನೆ
- ಜಲಾಂದ್ ಜಲವಿದ್ಯುತ್ ಯೋಜನೆ: 2,400 ಮೆ.ವಾ ಉತ್ಪಾದನೆ
- ಕೆನ್ ಗಾಡಿ ಜಲವಿದ್ಯುತ್ ಯೋಜನೆ : 1,550 ಮೆವಾ ಉತ್ಪಾದನೆ
- ಕೇಂದ್ರ ಸರ್ಕಾರದ ಉದ್ದೇಶಿತ ಗುರಿಯ ಅನ್ವಯ 2030ರ ವೇಳೆಗೆ ನವೀಕರಿಸಬಹುದಾದ ಇಂಧನ ಮೂಲಗಳಿಂದ 500 ಗಿಗಾ ವಾಟ್ ವಿದ್ಯುತ್ ಉತ್ಪಾದಿಸುವ ಗುರಿಹೊಂದಲಾಗಿದೆ. ಈ ಗುರಿ ಸಾಧಿಸಲು ಪ್ರಸ್ತುತದ ಈ ಒಪ್ಪಂದ ಹೆಚ್ಚು ಸಹಕಾರಿಯಾಗಲಿದೆ.
- ರಾಷ್ಟ್ರೀಯ ಜಲ ವಿದ್ಯುತ್ ನಿಗಮ, ಭಾರತದ ಅತಿ ದೊಡ್ಡ ಜಲವಿದ್ಯುತ್ ಉತ್ಪಾದನಾ ವಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಂಸ್ಥೆಯಾಗಿದೆ. ಜಲವಿದ್ಯುತ್ ಯೋಜನೆಗಳನ್ನು ಅನುಷ್ಠಾನಗೊಳಿಸುವಲ್ಲಿ ಈ ನಿಗಮ ಕಾರ್ಯನಿರ್ವಹಿಸುತ್ತದೆ.
- ಇತ್ತೀಚಿನ ವರ್ಷಗಳಲ್ಲಿ ರಾಷ್ಟ್ರೀಯ ಜಲ ವಿದ್ಯುತ್ ನಿಗಮ, ಜಲ ವಿದ್ಯುತ್ ಉತ್ಪಾದನಾ ವಲಯಕ್ಕೆ ಮಾತ್ರ ಸೀಮಿತವಾಗಿರದೆ ಸೌರವಿದ್ಯುತ್ ಹಾಗೂ ಪವನ ವಿದ್ಯುತ್ ಅಭಿವೃದ್ಧಿ ಯೋಜನೆಗಳನ್ನು ಕೂಡ ಅನುಷ್ಠಾನಗೊಳಿಸುತ್ತಿದೆ.

ಯುಪಿಎಸ್‌ಸಿ ಟಾಪರ್ಸ್ ಟಿಪ್ಸ್



ಶ್ರುತಿ ಯರಗಟ್ಟಿ

'ಅಭ್ಯಾಸ ಪರೀಕ್ಷೆ' ಎದುರಿಸಿದರೆ ಮುಖ್ಯಪರೀಕ್ಷೆ ಸಲೀಸು

ಇಮಾಮ್‌ಹುಸೇನ್ ಗೂಡುನವರ

ಬೆಳಗಾವಿ ಜಿಲ್ಲೆಯ ಮೂಡಲಗಿ ತಾಲ್ಲೂಕಿನ ಅರಭಾವಿಯ ಶ್ರುತಿ ಯರಗಟ್ಟಿ, 2022ನೇ ಸಾಲಿನ ಕೇಂದ್ರ ಲೋಕಸೇವಾ ಆಯೋಗದ (ಯುಪಿಎಸ್‌ಸಿ) ನಾಗರಿಕ ಸೇವಾ ಪರೀಕ್ಷೆಯಲ್ಲಿ 362ನೇ ರ‍್ಯಾಂಕ್ ಪಡೆದಿದ್ದಾರೆ. ಆರನೇ ಪ್ರಯತ್ನದಲ್ಲಿ ಪರೀಕ್ಷೆಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿರುವ ಅವರು, ಸ್ಪರ್ಧಾತ್ಮಕ ಪರೀಕ್ಷೆ ಎದುರಿಸಲು ನಡೆಸಿದ ಸಿದ್ಧತೆ ಕುರಿತು 'ಸ್ಪರ್ಧಾವಾಣಿ'ಯೊಂದಿಗೆ ತಮ್ಮ ಅನುಭವ ಹಂಚಿಕೊಂಡಿದ್ದಾರೆ.

• ನಿಮ್ಮ ಕುಟುಂಬ, ಶಿಕ್ಷಣದ ಬಗ್ಗೆ ಹೇಳಿ

ನನ್ನ ತಂದೆ ಶಿವಾನಂದ. ನಿವೃತ್ತ ಶಿಕ್ಷಕಕರು. ತಾಯಿ ಮಹಾನಂದಾ ಗೃಹಿಣಿ. 5ನೇ ತರಗತಿಯಿಂದ ಇಂಗ್ಲಿಷ್ ಮಾಧ್ಯಮದಲ್ಲಿ ಓದಿದೆ. ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಶೇ 96.48, ಪಿಯುಸಿಯಲ್ಲಿ ಶೇ 95 ಹಾಗೂ ಪದವಿಯಲ್ಲಿ ಶೇ 97 ಅಂಕ ಗಳಿಸಿದ್ದೆ. ಬಿ.ಎಸ್ಸಿಯಲ್ಲಿ ಏಳು ಚಿನ್ನದ ಪದಕಗಳನ್ನು ಪಡೆದಿದ್ದೇನೆ.

• ಮುಖ್ಯಪರೀಕ್ಷೆಗಾಗಿ ಮಾಡಿಕೊಂಡ ಸಿದ್ಧತೆ ಬಗ್ಗೆ ಹೇಳಿ

ಮುಖ್ಯಪರೀಕ್ಷೆಯಲ್ಲಿ ಮಾನವಶಾಸ್ತ್ರ ವಿಷಯ ಆಯ್ಕೆ ಮಾಡಿಕೊಂಡಿದ್ದೆ. ಇದರಲ್ಲಿ ಉತ್ತರವನ್ನು ಹೇಗೆ ಪ್ರಸ್ತುತಪಡಿಸುತ್ತೇವೆ ಎಂಬುದೇ ಮುಖ್ಯ. ಹಾಗಾಗಿ ನಾಲ್ಕು ಜನರ ಗುಂಪು ರಚಿಸಿಕೊಂಡಿದ್ದೆವು. ವಿವಿಧ ಮೂಲಗಳಿಂದ ಪ್ರಶ್ನೆಗಳನ್ನು ಆಯ್ದುಕೊಂಡು ಕಿರುಪರೀಕ್ಷೆ ಮಾಡಿಕೊಳ್ಳುತ್ತಿದ್ದೆವು. ಒಬ್ಬರಿಗೊಬ್ಬರು ಮೌಲ್ಯಮಾಪನ ಮಾಡಿಕೊಳ್ಳುತ್ತಿದ್ದೆವು. ನಾನು, ಕಿರುಪರೀಕ್ಷೆಗಳಲ್ಲಿ ಆದ ತಪ್ಪುಗಳನ್ನು ಸರಿಪಡಿಸಿಕೊಳ್ಳುತ್ತ ಹೋದೆ. ಅದು ಮುಖ್ಯಪರೀಕ್ಷೆಯನ್ನು ಸಮರ್ಥವಾಗಿ ಎದುರಿಸಲು ಸಾಧ್ಯವಾಯಿತು. ಜತೆಗೆ ಕೋಚಿಂಗ್ ಸೆಂಟರ್‌ನಲ್ಲಿ ಹೆಸರು ನೋಂದಾಯಿಸಿಕೊಂಡಿದ್ದೆ. ಅಲ್ಲಿ ಪ್ರತಿ ಭಾನುವಾರ ಪರೀಕ್ಷೆ ಸರಣಿ (ಟೆಸ್ಟ್ ಸಿರೀಸ್) ಬರೆಯುತ್ತಿದ್ದೆ. ಹಾಗಾಗಿ ವಿಷಯದ ಮೇಲೆ ಹಿಡಿತ ಸಿಗುವ ಜತೆಗೆ ಆತ್ಮವಿಶ್ವಾಸಗಳಿಸಲು ಸಾಧ್ಯವಾಯಿತು.

• ಸಂದರ್ಶನ ಹೇಗಿತ್ತು?

ಮೊದಲ ಮೂರು ಪರೀಕ್ಷೆಗಳಲ್ಲಿ ಪೂರ್ವಭಾವಿ ಪರೀಕ್ಷೆ(ಪ್ರಿಲಿಮ್ಸ್) ಪಾಸ್ ಮಾಡಲಾಗಿರಲಿಲ್ಲ. ಆದರೆ, 4 ಮತ್ತು 5ನೇ ಬಾರಿ ಪರೀಕ್ಷೆಯಲ್ಲಿ ಸಂದರ್ಶನ ಹಂತದವರೆಗೆ ಹೋಗಿದ್ದೆ. ಎರಡು ಬಾರಿ ಸಂದರ್ಶನಕ್ಕೆ ಹಾಜರಾಗಿದ್ದರೂ ಕೆಲವೇ ಅಂಕಗಳಿಂದ ಅವಕಾಶ ಕೈತಪ್ಪಿತ್ತು. ಈ ಬಾರಿ ಸಂದರ್ಶನ ಉತ್ತಮವಾಗಿತ್ತು. ಪ್ರಚಲಿತ ವಿದ್ಯಮಾನಗಳು, ಸಾಮಾನ್ಯ ಜ್ಞಾನಕ್ಕೆ ಸಂಬಂಧಿಸಿದ ಹಲವು ಪ್ರಶ್ನೆಗಳಿದ್ದವು. ಅವುಗಳಿಗೆಲ್ಲ ಸ್ಪಷ್ಟ, ನಿಖರವಾಗಿ ಉತ್ತರಿಸಿದೆ. ಹಿಂದಿನ ಎರಡು ಪ್ರಯತ್ನಕ್ಕಿಂತ ಈ ಸಲ ಉತ್ತಮ ಅಂಕ ಸಿಕ್ಕವು.

• ಈ ಬಾರಿ ಯಶಸ್ಸಿನ ಮೆಟ್ಟಿಲೇರಿದ್ದು ಹೇಗೆ?

ಈ ಹಿಂದೆ ಮಾಡಿದ್ದ ಪ್ರಯತ್ನಗಳಲ್ಲಿ ಹಿಂದಿನ ವರ್ಷಗಳ ಪ್ರಶ್ನೆಪತ್ರಿಕೆಗಳನ್ನು ಹೆಚ್ಚಾಗಿ ಗಮನಿಸುತ್ತಿರಲಿಲ್ಲ. ಐದು ಪರೀಕ್ಷೆಗಳಲ್ಲಿ ಸೋತ ನಂತರ ಇದು ಮನದಟ್ಟಾಯಿತು. ಈ ಬಾರಿ ಆದ್ಯತೆ ಮೇಲೆ ಕಳೆದ ವರ್ಷಗಳ ಹಿಂದಿನ ಪ್ರಶ್ನೆ ಪತ್ರಿಕೆಗಳಿಗೆ ಉತ್ತರಿಸುತ್ತಾ ಹೋದೆ. ಮಾರುಕಟ್ಟೆಯಲ್ಲಿ ಮತ್ತು ಕೋಚಿಂಗ್ ಸೆಂಟರ್‌ಗಳಿಂದ ಲಭ್ಯವಾದ ವಿವಿಧ ಪ್ರಶ್ನೆಪತ್ರಿಕೆಗಳಿಗೆ ಉತ್ತರ ಬರೆಯುತ್ತಾ ಅಭ್ಯಾಸ ಮಾಡಿದೆ. ಹಳೆಯ ಪ್ರಶ್ನೆ ಪತ್ರಿಕೆಗಳನ್ನು ಬಿಡಿಸಿದ್ದರಿಂದ (ಉತ್ತರಿಸಿದ್ದರಿಂದ) ಬಹಳ ಪ್ರಯೋಜನವಾಯಿತು. ಇದು ಕೂಡ ಪರೀಕ್ಷೆಯಲ್ಲಿ ರ‍್ಯಾಂಕ್ ಗಳಿಸಲು ಬಹಳ ಉಪಯುಕ್ತವಾಯಿತು.

• ಓದುವ ಪುಸ್ತಕಗಳ ಆಯ್ಕೆ ಹೇಗಿತ್ತು ?

ನಾನು ರಾಷ್ಟ್ರೀಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಪರಿಷತ್ತಿನ(ಎನ್‌ಸಿಇಆರ್‌ಟಿ) 6 ರಿಂದ 12ನೇ ತರಗತಿಗಳ ಪಠ್ಯಪುಸ್ತಕಗಳನ್ನು ನಿರಂತರವಾಗಿ ಓದುತ್ತಿದ್ದೆ. ಅಲ್ಲದೆ, ಮಾಡರ್ನ್ ಹಿಸ್ಟರಿಗೆ ಸ್ಪೆಕ್ಟ್ರಂ, ಭೂಗೋಳಶಾಸ್ತ್ರಕ್ಕೆ ಜಿ.ಸಿ. ಲಿಯಾಂಗ್ ಅವರ ಪುಸ್ತಕವನ್ನು ಆಯ್ಕೆ ಮಾಡಿಕೊಂಡಿದ್ದೆ. ಇದರಿಂದ ವಿಷಯಗಳ ಮೇಲೆ ಹಿಡಿತ ಸಾಧಿಸಲು ಸಾಧ್ಯವಾಯಿತು. ಮಾರುಕಟ್ಟೆಯಲ್ಲಿ ಸಾಕಷ್ಟು ಪುಸ್ತಕಗಳಿವೆ. ಆದರೆ, ಅನುಭವಿಗಳ ಮಾರ್ಗದರ್ಶನವಿದ್ದರೆ ಪುಸ್ತಕ ಆಯ್ಕೆ ಸುಲಭ.

• ಯಶಸ್ಸಿಗೆ ಸಾಮಾನ್ಯಜ್ಞಾನ ಎಷ್ಟು ಅಗತ್ಯ?

ಯುಪಿಎಸ್‌ಸಿ ಮಾತ್ರವಲ್ಲ; ಯಾವುದೇ ಸ್ಪರ್ಧಾತ್ಮಕ ಪರೀಕ್ಷೆಗೂ ಸಾಮಾನ್ಯ ಜ್ಞಾನ ಮುಖ್ಯ. ದಿನಪತ್ರಿಕೆಗಳ ನಿಯಮಿತ ಓದು ಸಾಮಾನ್ಯ ಜ್ಞಾನವನ್ನು ಹೆಚ್ಚಿಸುತ್ತದೆ. ಅದರಲ್ಲೂ 'ಪ್ರಜಾವಾಣಿ' ದಿನಪತ್ರಿಕೆಯಲ್ಲಿ ಪ್ರಕಟವಾಗುವ ಅಂಶಗಳು ಸ್ಪರ್ಧಾತ್ಮಕ ಪರೀಕ್ಷೆ ತಯಾರಿ ನಡೆಸುವವರಿಗೆ ಬಹಳ ಉಪಯುಕ್ತ. ಪದವಿಯಿಂದ ದಿನಪತ್ರಿಕೆಗಳನ್ನು ಓದುತ್ತಲೇ ಬೆಳೆದವಳು. ಇದೇ ಕಾರಣಕ್ಕೆ ನನ್ನ ಸಾಮಾನ್ಯ ಜ್ಞಾನದ ಮಟ್ಟ ಉತ್ತಮವಾಗಿದೆ.


• ತರಬೇತಿ ಬೇಕೇ ಬೇಕು ಎನಿಸುತ್ತಾ?

ಹಾಗೇನಿಲ್ಲ. ಅದು ವಿದ್ಯಾರ್ಥಿಗಳ ಜ್ಞಾನದ ಮಟ್ಟ ಆಧರಿಸಿರುತ್ತದೆ. ನಾನು ಕೋಚಿಂಗ್ ತೆಗೆದುಕೊಂಡು ಪಾಸಾಗಿದ್ದೇನೆ. ಅನೇಕ ಕೋಚಿಂಗ್ ಸೆಂಟರ್‌ಗಳಲ್ಲಿ ತರಬೇತಿ ಪಡೆಯದೆಯೇ ಆಯ್ಕೆಯಾದವರಿದ್ದಾರೆ. ಆದರೆ, ಯಾವ ಪುಸ್ತಕ ಓದಬೇಕು, ಯಾವುದನ್ನು ಓದಬಾರದೆಂದು ಎಂದು ಹೇಳಲು ಸಂಪನ್ಮೂಲ ವ್ಯಕ್ತಿಗಳ ಮಾರ್ಗದರ್ಶನ ಬೇಕೆ ಬೇಕು.

• 'ಯುಪಿಎಸ್‌ಸಿ'ಗೆ ತಯಾರಾಗುತ್ತಿರುವವರಿಗೆ ನಿಮ್ಮ ಸಲಹೆ

ಯುಪಿಎಸ್‌ಸಿ ಪೂರ್ವಭಾವಿ ಪರೀಕ್ಷೆ ಹಿಂದಿ, ಇಂಗ್ಲಿಷ್ ಭಾಷೆಯಲ್ಲಿ ಮಾತ್ರ ಇರುತ್ತದೆ. ಪರಿಪೂರ್ಣವಾಗಿ ಇಂಗ್ಲಿಷ್ ಬಾರದಿದ್ದರೂ, ಕನಿಷ್ಠ ಪಕ್ಷ ಪ್ರಶ್ನೆಗಳನ್ನು ಅರ್ಥೈಸಿಕೊಂಡು ಉತ್ತರ ಬರೆಯುವಷ್ಟಾದರೂ ಕಲಿಯಬೇಕು. ನಾವು ಕನ್ನಡ ಮಾಧ್ಯದವರು, ಹಳ್ಳಿಯವರು ಎಂಬ ಕೀಳರಿಮೆ ತೆಗೆದುಹಾಕಬೇಕು.

'ಆರ್‌ಆರ್‌ಬಿ' ನೇಮಕಾತಿ ಹೀಗಿರಲಿವೆ ಪರೀಕ್ಷೆಗಳು



ಆರ್ ಕೆ ಬಾಲಚಂದ್ರ

ದೇಶದ 43 ಪ್ರಾದೇಶಿಕ ಗ್ರಾಮೀಣ ಬ್ಯಾಂಕ್‌ಗಳಲ್ಲಿ(ಆರ್‌ಆರ್‌ಬಿ) ಖಾಲಿ ಇರುವ 8612 ಹುದ್ದೆಗಳಿಗೆ ನೇಮಕಾತಿ ಪ್ರಕ್ರಿಯೆ ಆರಂಭವಾಗಿದೆ. ಇದರಲ್ಲಿ ರಾಜ್ಯದ ಬಳ್ಳಾರಿಯ ಕರ್ನಾಟಕ ಗ್ರಾಮೀಣ ಬ್ಯಾಂಕ್ ಮತ್ತು ಧಾರವಾಡದ ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ್‌ಗಳಲ್ಲಿ ಖಾಲಿ ಇರುವ 806 ಹುದ್ದೆಗಳೂ ಸೇರಿವೆ.

ಆಫೀಸ್ ಅಸಿಸ್ಟೆಂಟ್(ಮಲ್ಟಿಪರ್ಪಸ್) ಮತ್ತು ವಿವಿಧ ಹಂತದ ಆಫೀಸರ್ ಹುದ್ದೆಗಳ ನೇಮಕಾತಿಗಾಗಿ ಬ್ಯಾಂಕ್ ಸಿಬ್ಬಂದಿ ನೇಮಕಾತಿ ಸಂಸ್ಥೆ (ಐಬಿಪಿಎಸ್) ಮೂರು ಹಂತಗಳಲ್ಲಿ ಸ್ಪರ್ಧಾತ್ಮಕ ಪರೀಕ್ಷೆ ನಡೆಸುತ್ತಿದೆ.

ಆಫೀಸರ್ ಸ್ಕೇಲ್ –I (ಪಿಒ) ಹುದ್ದೆಗೆ, ಪೂರ್ವಭಾವಿ ಪರೀಕ್ಷೆ, ಮುಖ್ಯ ಪರೀಕ್ಷೆ ಹಾಗೂ ಸಂದರ್ಶನ ಪ್ರಕ್ರಿಯೆ ನಡೆಯುತ್ತದೆ. ಆಫೀಸರ್ ಸ್ಕೇಲ್-II ಮತ್ತು III ರ ನೇಮಕಾತಿಗಾಗಿ ಮುಖ್ಯಪರೀಕ್ಷೆ(ಒಂದೇ ಬಾರಿ) ಹಾಗೂ ಸಂದರ್ಶನ ಪ್ರಕ್ರಿಯೆ ಮಾತ್ರ ನಡೆಸಲಾಗುತ್ತದೆ. ಪೂರ್ವಭಾವಿ ಮತ್ತು ಮುಖ್ಯ ಪರೀಕ್ಷೆಗಳು ಆನ್‌ಲೈನ್‌ನಲ್ಲಿ ನಡೆಯುತ್ತವೆ.

ಆಫೀಸ್ ಅಸಿಸ್ಟೆಂಟ್(ಮಲ್ಟಿಪರ್ಪಸ್)/ ಸ್ಕೇಲ್ –I ಅಧಿಕಾರಿ

ಪೂರ್ವಭಾವಿ ಪರೀಕ್ಷೆ

ಕ್ರ. ಸಂ.	ಪರೀಕ್ಷೆಗಳ ಹೆಸರು	ಪ್ರಶ್ನೆಗಳ ಸಂಖ್ಯೆ	ಗರಿಷ್ಠ ಅಂಕಗಳು	ಅವಧಿ
1	ತಾರ್ಕಿಕ ಪರೀಕ್ಷೆ(Reasoning)	40	40	ಸಂಯೋಜಿತ ಸಮಯ 45 ನಿಮಿಷಗಳು
2	ಸಂಖ್ಯಾತ್ಮಕ ಸಾಮರ್ಥ್ಯ (Numerical Ability)/ ಕ್ವಾಂಟಿಟೇಟಿವ್ ಆಪ್ಟಿಟ್ಯೂಡ್ (Quantitative Aptitude)	40	40	
	ಒಟ್ಟು	80	80	

ಗಮನಿಸಿ: ಆಫೀಸ್ ಅಸಿಸ್ಟೆಂಟ್ (ಮಲ್ಟಿಪರ್ಪಸ್) ಪರೀಕ್ಷೆ ಬರೆಯುವವರು ಗಣಿತಕ್ಕೆ ಸಂಬಂಧಿಸಿದಂತೆ ಸಂಖ್ಯಾತ್ಮಕ ಸಾಮರ್ಥ್ಯ ಪರೀಕ್ಷೆ ಬರೆಯಬೇಕು ಹಾಗೂ ಅಧಿಕಾರಿ ಸ್ಕೇಲ್-I ಹುದ್ದೆಗಾಗಿ ಪರೀಕ್ಷೆ ಬರೆಯುವವರು ಕ್ವಾಂಟಿಟೇಟಿವ್ ಆಪ್ಟಿಟ್ಯೂಡ್ ಟೆಸ್ಟ್ ಬರೆಯಬೇಕು.

ಸಮಯದ ಮಿತಿ ಅರಿಯಿರಿ

ಪೂರ್ವಭಾವಿ ಪರೀಕ್ಷಾ ಅವಧಿ ಒಟ್ಟು 45 ನಿಮಿಷಗಳು. ಹಾಗಾಗಿ 20 ನಿಮಿಷ ರೀಸನಿಂಗ್ ಪರೀಕ್ಷೆಗೂ ಹಾಗೂ 25 ನಿಮಿಷ ಗಣಿತ ಪರೀಕ್ಷೆಗೆ ನಿಗದಿಪಡಿಸಿಕೊಳ್ಳಿ. ನಿಮ್ಮ ಅಭ್ಯಾಸದ ಕ್ರಮದ ಮೇಲೆ ಹಾಗೂ ನಿಮಗಿರುವ ವಿಷಯಗಳ ಸಾಮರ್ಥ್ಯದ ಮೇಲೆ ಸಮಯವನ್ನು ಬದಲಾಯಿಸಿಕೊಳ್ಳಬಹುದು.

ಎರಡೂ ಪತ್ರಿಕೆಗಳು ಹೇಗೆ ಭಿನ್ನವಾಗಿವೆ?

ಸಂಖ್ಯಾತ್ಮಕ ಸಾಮರ್ಥ್ಯ ಪರೀಕ್ಷೆಯು ಒಂದು ಮೂಲಭೂತ ಕೌಶಲ. ಇದರ ಮೂಲಕ ಸಂಖ್ಯೆಗಳ ವಿಷಯದಲ್ಲಿ ಅಭ್ಯರ್ಥಿಗಿರುವ ವೇಗ ಹಾಗೂ ನಿಖರತೆಯನ್ನು ಪರೀಕ್ಷಿಸಲಾಗುತ್ತದೆ. ಕ್ವಾಂಟಿಟೇಟಿವ್ ಆಪ್ಟಿಟ್ಯೂಡ್ ಪರೀಕ್ಷೆಯಲ್ಲಿ, ಪ್ರಶ್ನೆ ಅರ್ಥಮಾಡಿಕೊಳ್ಳುವುದರ ಜೊತೆಗೆ ಅದನ್ನ ಬಿಡಿಸಲು ಜ್ಞಾನದ ಮೂಲವನ್ನು (Basic concept) ಅನ್ವಯಿಸುವುದು ಮುಖ್ಯ ಉದ್ದೇಶವಾಗಿದೆ.

ಕ್ವಾಂಟಿಟೇಟಿವ್ ಆಪ್ಟಿಟ್ಯೂಡ್, ಬೀಜಗಣಿತ ಮತ್ತು ಅಭಿವ್ಯಕ್ತಿಗಳನ್ನು ಒಳಗೊಂಡಿರುವ ಪ್ರಶ್ನೆಗಳನ್ನು ಹೊಂದಿದೆ. ಇದರಲ್ಲಿ ಪ್ರಶ್ನೆಗಳನ್ನು ಬಿಡಿಸಲು ಅಭ್ಯರ್ಥಿಗಳು ತರ್ಕ ಮತ್ತು ಜ್ಞಾನವನ್ನು ಅನ್ವಯಿಸುವ ಅಗತ್ಯವಿದೆ. ಸಂಖ್ಯಾತ್ಮಕ ಸಾಮರ್ಥ್ಯ ಪರೀಕ್ಷೆಯಲ್ಲಿ, ಲೆಕ್ಕಾಚಾರದ ಸಾಮರ್ಥ್ಯ ಮತ್ತು ನಿಖರತೆಯನ್ನು ಸರಳ ಸಂಖ್ಯೆಯ ಪ್ರಶ್ನೆಗಳ ಮೂಲಕ ಪರೀಕ್ಷಿಸಲಾಗುತ್ತದೆ.

ಕ್ಲಿಷ್ಟತೆಯ ಮಟ್ಟ: ಸಂಖ್ಯಾತ್ಮಕ ಸಾಮರ್ಥ್ಯ ಪರೀಕ್ಷೆಯಲ್ಲಿ ಸರಳೀಕರಣ, ಸಂಖ್ಯಾ ಸರಣಿ, ಅಂಕಗಣಿತದ ಪ್ರಶ್ನೆಗಳು, ಬೀಜಗಣಿತದ ಪ್ರಶ್ನೆಗಳಿರುತ್ತವೆ. ಈ ಪರೀಕ್ಷೆ ಮೂಲಕ ಅಭ್ಯರ್ಥಿಗೆ ಸಂಖ್ಯೆಗ ಳೊಂದಿಗೆ ವ್ಯವಹರಿಸುವ ಸಾಮರ್ಥ್ಯವನ್ನು ಪರೀಕ್ಷಿಸಲಾಗುತ್ತದೆ. ಆ ಪ್ರಶ್ನೆಗಳಲ್ಲಿ ತಾರ್ಕಿಕ ಅಂಶವಿರುವುದಿಲ್ಲ.

ಕ್ವಾಂಟಿಟೇಟಿವ್ ಆಪ್ಟಿಟ್ಯೂಡ್ ವಿಷಯದಲ್ಲಿ ತಾರ್ಕಿಕ ಅರ್ಹತೆ ಮತ್ತು ಸಂಖ್ಯೆಗ ಳೊಂದಿಗೆ ವ್ಯವಹರಿಸುವ ಸಾಮರ್ಥ್ಯವನ್ನು ಪರೀಕ್ಷಿಸಲಾಗುತ್ತದೆ. ಇದು ಎರಡೂ ವಿಷಯಗಳ ಸಂಯೋಜನೆ.

ಇದರಲ್ಲಿ ಪ್ರಶ್ನೆಗಳು ತುಂಬಾ ಕಠಿಣವಾಗಿರುವುದಿಲ್ಲ, ಆದರೆ ಇವುಗಳನ್ನು ಬಿಡಿಸಲು ಹೆಚ್ಚು ಅಭ್ಯಾಸ ಮಾಡಿರಬೇಕು. ಆದ್ದರಿಂದ ನೀವು ಪ್ರಶ್ನೆಗಳನ್ನು ಅರ್ಥ ಮಾಡಿಕೊಳ್ಳು ವುದರ ಮೂಲಕ ಸಮಯವನ್ನು ಹೇಗೆ ನಿರ್ವಹಿಸಬಹುದು ಎಂಬುದನ್ನು ಅರಿಯುವಿರಿ.

ಡೇಟಾ ಇಂಟರ್‌ಪ್ರಿಟೇಷನ್(DI) ಕುರಿತ ಪ್ರಶ್ನೆಗಳು ಸುಲಭವಾಗಿರುತ್ತವೆ. ಹಾಗಾಗಿ ಅವುಗಳಿಗೆ ಮೊದಲು ಉತ್ತರಿಸಿ. ಈ ಪ್ರಶ್ನೆಗಳು ಚಿತ್ರಾತ್ಮಕ ವಿಶ್ಲೇಷಣೆ ಆಧಾರಿತವಾಗಿವೆ. ಸಾಂದರ್ಭಿಕವಾಗಿ, ಬೇಸಿಕ್ ಕೋ-ಆರ್ಡಿನೇಟ್ ಜ್ಯಾಮಿತಿ (ರೇಖೆಗಳು ಮತ್ತು ವಲಯಗಳು), ಮಾಪನಗಳಿಂದಲೂ ಕೆಲವು ಪ್ರಶ್ನೆಗಳು ಬರಬಹುದು. ಆದರೆ ಚಕ್ರಬಡ್ಡಿ(compound interest) ಕುರಿತ ಪ್ರಶ್ನೆಗಳು ಬಿಡಿಸಲು ಸ್ವಲ್ಪ ಸಮಯ ತೆಗೆದುಕೊಳ್ಳುವುದರಿಂದ ಅವುಗಳನ್ನು ಕೊನೆಯಲ್ಲಿ ಬಿಡಿಸಬೇಕು.

ಕ್ವಾಂಟಿಟೇಟಿವ್ ಆಪ್ಟಿಟ್ಯೂಡ್ ಪರೀಕ್ಷೆಯಲ್ಲಿ, ಸಂಭವನೀಯತೆ, ಕ್ರಮಪಲ್ಲಟನೆ ಮತ್ತು ಸಂಯೋಜನೆ, ಡೇಟಾ ಸಮರ್ಪಕತೆ ಸರಾಸರಿ, ಶೇಕಡಾವಾರು, ಗುಣಾಕಾರ, ಭಾಗಾಕಾರ, ವರ್ಗಮೂಲಗಳು, ಸಮಾಂತರ ಶ್ರೇಢಿ ಮತ್ತು ಗುಣೋತ್ತರ ಶ್ರೇಢಿ (Arithmetic Progression and Geometric Progression) ಸೇರಿದಂತೆ ಸಂಖ್ಯಾ ಲೆಕ್ಕಾಚಾ ರದ ಪ್ರಶ್ನೆಗಳ ವಿಷಯದ ಮೇಲೆ ಪ್ರಶ್ನೆಗಳಿರುತ್ತವೆ. ಸರಳ ಮತ್ತು ಚಕ್ರ ಬಡ್ಡಿ, ಲಾಭ/ನಷ್ಟ ಕುರಿತ ಪ್ರಶ್ನೆಗಳೂ ಇರುತ್ತವೆ.

ಕೆಲಸದ ಸಮಯಕ್ಕೆ ಸಂಬಂಧಿಸಿದ ಪ್ರಶ್ನೆಗಳು ಉದಾ: 3 ಜನರು ಒಂದುಕೆಲಸವನ್ನು 5 ದಿನಗಳಲ್ಲಿ ಮಾಡಿದರೆ 7 ಜನರು ಆ ಕೆಲಸವನ್ನು ಮಾಡಲು ಎಷ್ಟು ಸಮಯ ತೆಗೆದುಕೊಳ್ಳುತ್ತಾರೆ ಇಂಥವೂ ಇರುತ್ತವೆ.

ಪ್ರಾದೇಶಿಕ ಗ್ರಾಮೀಣ ಬ್ಯಾಂಕ್‌ಗಳಲ್ಲಿರುವ ಖಾಲಿ ಹುದ್ದೆಗಳ ಭರ್ತಿಗಾಗಿ ಅರ್ಹರಿಂದ ಅರ್ಜಿ ಆಹ್ವಾನಿಸಲಾಗಿದೆ. ಜೂನ್ 21 ಅರ್ಜಿ ಸಲ್ಲಿಕೆಗೆ ಕೊನೆ ದಿನ. ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ಮೂರು ಹಂತಗಳಲ್ಲಿ ಪರೀಕ್ಷೆ ನಡೆಸಲಾಗುತ್ತದೆ. ಪರೀಕ್ಷೆಯ ಸ್ವರೂಪ ಹೇಗಿರುತ್ತದೆ ಎಂಬ ವಿವರಣೆ ಇಲ್ಲಿದೆ

ಮುಖ್ಯ ಪರೀಕ್ಷೆ (ಆಫೀಸ್ ಅಸಿಸ್ಟೆಂಟ್/ಸ್ಕೇಲ್ I –ಅಧಿಕಾರಿ)

ಕ್ರ.ಸಂ	ಪರೀಕ್ಷೆಗಳ ಹೆಸರು	ಪ್ರಶ್ನೆಗಳ ಸಂಖ್ಯೆ	ಅಂಕಗಳು	ಅವಧಿ
1	ತಾರ್ಕಿಕ ಪರೀಕ್ಷೆ	40	50	2 ಗಂಟೆಗಳ ಸಂಯೋಜಿತ ಸಮಯ
2	ಕಂಪ್ಯೂಟರ್ ಜ್ಞಾನ	40	20	
3	ಸಾಮಾನ್ಯ ಅರಿವು(General Awareness)	40	40	
4 a	ಆಂಗ್ಲ ಭಾಷೆ	40	40	
4 b	ಹಿಂದಿ ಭಾಷೆ	40	40	
5	ಸಂಖ್ಯಾತ್ಮಕ ಸಾಮರ್ಥ್ಯ/ ಕ್ವಾಂಟಿಟೇಟಿವ್ ಆಪ್ಟಿಟ್ಯೂಡ್ ಟೆಸ್ಟ್	40	50	
	ಒಟ್ಟು	200	200	

(*ಅಭ್ಯರ್ಥಿಗಳು 4 a ಅಥವಾ 4 b ಆಯ್ಕೆ ಮಾಡಬಹುದು)

ಕರ್ನಾಟಕದ ಅಭ್ಯರ್ಥಿಗಳು ಕನ್ನಡ, ಕೊಂಕಣಿ, ಇಂಗ್ಲಿಷ್ ಮತ್ತು ಹಿಂದಿ –ಇವುಗಳಲ್ಲಿ ಯಾವುದಾದರೊಂದು ಭಾಷೆಯ ಆಯ್ಕೆ ಮಾಡಿಕೊಳ್ಳಬಹುದು. ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವಾಗ ಭಾಷೆಯನ್ನು ಆಯ್ಕೆ ಮಾಡಿಕೊಂಡಿರಬೇಕು. ಅದೇ ಭಾಷೆಯಲ್ಲೇ ಪರೀಕ್ಷೆ ಬರೆಯಬೇಕು (ಪರೀಕ್ಷಾ ಸಂದರ್ಭದಲ್ಲಿ ಬದಲಾವಣೆಗೆ ಅವಕಾಶವಿಲ್ಲ)

ಸ್ಕೇಲ್-II ಅಧಿಕಾರಿ (ಜನರಲ್ ಬ್ಯಾಂಕಿಂಗ್)

ಏಕ ಹಂತದ ಪರೀಕ್ಷೆ

ಕ್ರ.ಸಂ.	ಪರೀಕ್ಷೆಗಳ ಹೆಸರು	ಪ್ರಶ್ನೆಗಳ ಸಂಖ್ಯೆ	ಗರಿಷ್ಠ ಅಂಕಗಳು	ಅವಧಿ
1	ತಾರ್ಕಿಕ ಪರೀಕ್ಷೆ	40	50	2 ಗಂಟೆಗಳ ಸಂಯೋಜಿತ ಸಮಯ
2	ಕಂಪ್ಯೂಟರ್ ಜ್ಞಾನ	40	20	
3	ಹಣಕಾಸಿನ ಅರಿವು(Financial Awareness)	40	40	
4 a	ಆಂಗ್ಲ ಭಾಷೆ	40	40	
4 b	ಹಿಂದಿ ಭಾಷೆ	40	40	
5	ಕ್ವಾಂಟಿಟೇಟಿವ್ ಆಪ್ಟಿಟ್ಯೂಡ್ ಮತ್ತು ಡೇಟಾ ಇಂಟರ್‌ಪ್ರಿಟೇಷನ್	40	50	
	ಒಟ್ಟು	200	200	

ಅಭ್ಯರ್ಥಿಗಳು 4 a ಅಥವಾ 4 b ಆಯ್ಕೆ ಮಾಡಬಹುದು)

ಪರೀಕ್ಷಾ ಮಾಧ್ಯಮ: ಇಂಗ್ಲಿಷ್ ಅಥವಾ ಹಿಂದಿ ಮಾತ್ರ. ಕನ್ನಡದಲ್ಲಿ ಪರೀಕ್ಷೆ ಬರೆಯಲು ಅವಕಾಶವಿಲ್ಲ.

ಋಣಾತ್ಮಕ ಮೌಲ್ಯ ಮಾಪನ ಇದೆ : ವಸ್ತು ನಿಷ್ಠ ಮಾದರಿಯ ಪರೀಕ್ಷೆಗಳಲ್ಲಿ ನೆಗೆಟಿವ್ ಕರೆಕ್ಷನ್(ಋಣಾತ್ಮಕ ಮೌಲ್ಯಮಾಪನ) ಇದೆ. ಒಂದು ತಪ್ಪು ಉತ್ತರಕ್ಕೆ, ಅದಕ್ಕೆ ನಿಗದಿಪಡಿಸಿದ ಅಂಕಗಳಲ್ಲಿ 0.25 ಅಂಕಗಳನ್ನು ಕಡಿತಗೊಳಿಸಲಾಗುತ್ತದೆ. ಪ್ರಶ್ನೆ ಖಾಲಿ ಬಿಟ್ಟರೆ, ಯಾವುದೇ ಅಂಕ ಕಳೆಯುವುದಿಲ್ಲ. ಎಲ್ಲ ಹಂತದ ಋಣಾತ್ಮಕ ಮೌಲ್ಯಮಾಪನದಲ್ಲೂ ಇದೇ ನಿಯಮ ಅನ್ವಯಿಸುತ್ತದೆ.

(**ಮುಂದಿನ ವಾರ:** ಪರೀಕ್ಷೆ ತಯಾರಿ, ಯಾವ ಯಾವ ವಿಷಯಗಳನ್ನ ಓದಬೇಕು, ಆಯ್ಕೆ ಪ್ರಕ್ರಿಯೆ ಹೇಗಿರುತ್ತದೆ)

(ಲೇಖಕರು ಬ್ಯಾಂಕಿಂಗ್ ಮತ್ತು ವ್ಯಕ್ತಿತ್ವ ವಿಕಸನ ತರಬೇತುದಾರರು ಹಾಗೂ ವೃತ್ತಿ ಮಾರ್ಗದರ್ಶಕರು, ಮಡಿಕೇರಿ)

ಜೆಸಿಬಿ ಹರಿದು ಮೂವರ ಸಾವು

ಪ್ರಜಾವಾಣಿ ವಾರ್ತೆ

ದೇವದುರ್ಗ (ರಾಯಚೂರು ಜಿಲ್ಲೆ): ತಾಲ್ಲೂಕಿನ ನಿಲವಂಜಿ ಗ್ರಾಮದಲ್ಲಿ ಮಂಗಳವಾರ ರಾತ್ರಿ ಕೊಳವೆಬಾವಿ ಕೊರೆಯುವ ಯಂತ್ರದಲ್ಲಿ ಕೆಲಸ ಮಾಡುವ ಮೂವರು ಯುವಕರು ಗಾಢ ನಿದ್ರೆಯಲ್ಲಿದ್ದಾಗ ಅವರ ಮೇಲೆ ಜೆಸಿಬಿ ಹರಿದು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಮೃತಪಟ್ಟವರನ್ನು ಛತ್ತೀಸ್‌ಗಡ ಮೂಲದ ವಿಷ್ಣು (25), ಶಿವುರಾಮ (30) ಹಾಗೂ ಬಲರಾಮ(28) ಎಂದು ಗುರುತಿಸಲಾಗಿದೆ.

ನಿಗದಿಪಡಿಸಿದ ಆಳಕ್ಕಿಂತ ಹೆಚ್ಚು ಆಳವಾಗಿ ಕೊಳವೆಬಾವಿ ಕೊರೆಯುತ್ತಿದ್ದರಿಂದ ಅಧಿಕಾರಿಗಳು ದಾಳಿ ಮಾಡಲು ಬರುತ್ತಿದ್ದಾರೆ ಎನ್ನುವ ಮಾಹಿತಿ ಸಿಕ್ಕ ತಕ್ಷಣ ವಾಹನದ ಲೈಟ್ ಆಫ್ ಮಾಡಿ ಚಾಲಕ ಜೆಸಿಬಿ ಓಡಿಸಿದ ಪರಿಣಾಮ ಯುವಕರ ತಲೆ ಮೇಲೆ ವಾಹನ ಹರಿದಿದೆ.

ಆರು ಕಾರ್ಮಿಕರ ಪೈಕಿ ಮೂವರು ಸ್ಥಳದಲ್ಲೇ ಮಲಗಿದ್ದರು. ಉಳಿದ ಮೂವರು ಬೇರೆ ಕಡೆ ಮಲಗಿದ್ದರು. ವಾಹನದ ಹಿಂದೆ ಮಲಗಿದ್ದವರು ಪ್ರಾಣ ಕಳೆದುಕೊಂಡಿದ್ದಾರೆ.

ಪ್ರಕರಣ ದಾಖಲಾಗಿದೆ.

ಮಾರ್ಯಾದೆಗೇಡು ಹತ್ಯೆ: ತಂದೆ ಸೇರಿ ಮೂವರ ಬಂಧನ

ಪ್ರಜಾವಾಣಿ ವಾರ್ತೆ

ಚೇಳೂರು (ಗುಬ್ಬಿ): ಪರಿಶಿಷ್ಟ ಜಾತಿಯ ಯುವಕನನ್ನು ಪ್ರೀತಿಸಿ, ಮದುವೆಯಾದ ಗುಬ್ಬಿ ತಾಲ್ಲೂಕಿನ ಚಿಕ್ಕಹೆಡಿಗೆಹಳ್ಳಿ ಗ್ರಾಮದ ಯುವತಿಯನ್ನು ಪೋಷಕರೇ ಹತ್ಯೆ ಮಾಡಿದ್ದಾರೆ. ಯುವತಿ ತಂದೆ ಸೇರಿದಂತೆ ಮೂವರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

ಚಿಕ್ಕಹೆಡಿಗೆಹಳ್ಳಿಯ ಪರಿಶಿಷ್ಟ ಪಂಗಡಕ್ಕೆ ಸೇರಿದ ನೇತ್ರಾವತಿ (20) ಹತ್ಯೆಯಾದ ಯುವತಿ. ನೇತ್ರಾವತಿಯ ತಂದೆ ಪರಶುರಾಮ, ಸಹೋದರ ಶಿವರಾಜು, ಚಿಕ್ಕಪ್ಪ ತುಕಾರಾಂ ಎಂಬುವರನ್ನು ಪೊಲೀಸರು ಬಂಧಿಸಿದ್ದಾರೆ.

ಶಿರಾದಲ್ಲಿ ಪದವಿ ವ್ಯಾಸಂಗ ಮಾಡುತ್ತಿದ್ದ ನೇತ್ರಾವತಿ ಹಾಸ್ಟೆಲ್‌ನಲ್ಲಿ ಇದ್ದರು. ಶಿರಾ ತಾಲ್ಲೂಕಿನ ಯುವಕನನ್ನು ಪ್ರೀತಿಸುತ್ತಿದ್ದಳು. ಎರಡು ವಾರದ ಹಿಂದೆ ಮನೆ ಬಿಟ್ಟು ಹೋಗಿದ್ದ ಯುವತಿ ತಾನು ಪ್ರೀತಿಸಿದ ಯುವಕನ ಜತೆ ಮದುವೆಯಾಗಿದ್ದಳು. ಪೋಷಕರು ಆಕೆಯನ್ನು ಹುಡುಕಿ ಕಳೆದ ಗುರುವಾರ ಮನೆಗೆ ಕರೆದುಕೊಂಡು ಬಂದಿದ್ದರು.

ಅದೇ ದಿನ ರಾತ್ರಿ ಹಗ್ಗದಿಂದ ಯುವತಿಯ ಕುತ್ತಿಗೆ ಬಿಗಿದು ಹತ್ಯೆ ಮಾಡಿದ್ದ ಮನೆಯವರು, ವಿಷ ಕುಡಿದು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ ಎಂದು ಗ್ರಾಮಸ್ಥರನ್ನು ನಂಬಿಸಿ, ಅಂತ್ಯ ಸಂಸ್ಕಾರ ನೆರವೇರಿಸಿದ್ದರು.

ಈ ಬಗ್ಗೆ ಸಂದೇಹಗೊಂಡ ಗ್ರಾಮಸ್ಥರು ವಿಷಯವನ್ನು ಚೇಳೂರು ಪೊಲೀಸರ ಗಮನಕ್ಕೆ ತಂದಿದ್ದರು. ಪೊಲೀಸರು ಸ್ಥಳ ಪರಿಶೀಲನೆ ನಡೆಸಿ, ಪ್ರಕರಣ ದಾಖಲಿಸಿಕೊಂಡು, ತನಿಖೆ ನಡೆಸಿದ್ದರು. ನೇತ್ರಾವತಿಯ ಪೋಷಕರನ್ನು ಠಾಣೆಗೆ ಕರೆಸಿ, ವಿಚಾರಣೆ ನಡೆಸಿದಾಗ ಕೊಲೆ ಮಾಡಿರುವುದು ಗೊತ್ತಾಗಿದೆ.

'ಯುವತಿಯನ್ನು ಪೋಷಕರೇ ಕೊಲೆ ಮಾಡಿದ್ದಾರೆ. ಆರೋಪಿಗಳನ್ನು ಬಂಧಿಸಲಾಗಿದೆ' ಎಂದು ಎಸ್‌ಪಿ ರಾಹುಲ್‌ಕುಮಾರ್ ಶಹಪೂರವಾಡ್ ತಿಳಿಸಿದರು.

ಎರಡು ವರ್ಷದಲ್ಲಿ 1.85 ಲಕ್ಷ ಪ್ರಕರಣಗಳಲ್ಲಿ ಸರ್ಕಾರಕ್ಕೆ ಸೋಲು; ಸಚಿವ ಎಚ್‌.ಕೆ.ಪಾಟೀಲ

'ಸರ್ಕಾರಿ ವ್ಯಾಜ್ಯ ನಿರ್ವಹಣೆಗೆ ಕಾಯ್ದೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರದ ವ್ಯಾಜ್ಯಗಳ ನಿರ್ವಹಣೆಯ ವ್ಯವಸ್ಥೆಯಲ್ಲಿ ಸುಧಾರಣೆ ತರುವ ಉದ್ದೇಶದಿಂದ 'ಸರ್ಕಾರಿ ವ್ಯಾಜ್ಯಗಳ ನಿರ್ವಹಣಾ ಕಾಯ್ದೆ' ರೂಪಿಸಲು ಮಸೂದೆ ಮಂಡಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ.

ಸುದ್ದಿಗಾರರ ಜೊತೆ ಬುಧವಾರ ಮಾತನಾಡಿದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್‌.ಕೆ. ಪಾಟೀಲ, '2 ವರ್ಷಗಳಲ್ಲಿ ನ್ಯಾಯಾಲಯಗಳಲ್ಲಿ 1.85 ಲಕ್ಷ ಪ್ರಕರಣ ಗಳಲ್ಲಿ ರಾಜ್ಯ ಸರ್ಕಾರಕ್ಕೆ ಸೋಲಾಗಿದೆ. ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ ಕಾಯ್ದೆ ರೂಪಿಸಲು ತೀರ್ಮಾನಿಸಲಾಗಿದೆ. ಅಧಿವೇಶನದಲ್ಲಿ ಮಸೂದೆ ಮಂಡಿಸಲಾಗುವುದು' ಎಂದರು.

'ಇಷ್ಟು ದೊಡ್ಡ ಸಂಖ್ಯೆಯ ಪ್ರಕರಣಗಳಲ್ಲಿ ಸೋಲು ಕಾಣಲು ಸರ್ಕಾರಿ ವ್ಯಾಜ್ಯ ನಿರ್ವಹಣೆಯಲ್ಲಿ ಲೋಪ ಇರುವುದನ್ನು ಗುರುತಿಸಬೇಕಾಗುತ್ತದೆ. ಅಂಥ ಲೋಪ ಗುರುತಿಸಿ ಮಟ್ಟ ಹಾಕಬೇಕಾಗಿದೆ. ಕಾಯ್ದೆ ರೂಪಿಸುವ ಕುರಿತು ಚರ್ಚೆಯಾಗಿದ್ದು, ಮುಂದಿನ ವಾರದ ವೇಳೆಗೆ ಪೂರ್ಣ ಸ್ವರೂಪ ಪಡೆಯಲಿದೆ' ಎಂದರು.

ಕಾಯ್ದೆ ತಿದ್ದುಪಡಿಗೆ ಚಿಂತನೆ: 'ನ್ಯಾಯಾಲಯಗಳಲ್ಲಿರುವ ಬಡವರಿಗೆ ಸಂಬಂಧಿಸಿದ ಪ್ರಕರಣಗಳನ್ನು ಆದ್ಯತೆ ಮೇರೆಗೆ 6 ತಿಂಗಳಲ್ಲಿ ಇತ್ಯರ್ಥಗೊಳಿಸುವ ವ್ಯವಸ್ಥೆ ರೂಪಿಸಬೇಕೆಂಬ ಉದ್ದೇಶದಿಂದ 'ನಾಗರಿಕ ದಂಡಸಂಹಿತೆ (ಸಿವಿಲ್ ಪ್ರೊಸಿಜರ್ ಕೋಡ್)' ಕಾಯ್ದೆಗೆ ತಿದ್ದುಪಡಿ ತರಲು ಉದ್ದೇಶಿಸಲಾಗಿದೆ' ಎಂದೂ ಅವರು ತಿಳಿಸಿದರು.

ಕೈಗಾರಿಕಾ ವಸಾಹತು ಪ್ರಸ್ತಾವನೆ: 'ರಾಜ್ಯದ ಏಳೆಂಟು ಕಡೆ ತಲಾ 50 ಎಕರೆ ಜಾಗದಲ್ಲಿ ಹೊಸತಾಗಿ ಕೈಗಾರಿಕಾ ವಸಾಹತುಗಳನ್ನು ಆರಂಭಿಸಲು ಉದ್ದೇಶಿಸಿದ್ದು, ಬಜೆಟ್‌ನಲ್ಲಿ ಸೇರಿಸಲು ಈ ಬಗ್ಗೆ ಪ್ರಸ್ತಾವ ಸಲ್ಲಿಸಲಾಗುವುದು' ಎಂದು ಸಣ್ಣ ಕೈಗಾರಿಕೆ ಸಚಿವ ಶರಣಬಸಪ್ಪ ದರ್ಶನಾಪುರ ತಿಳಿಸಿದರು.

ಸುದ್ದಿಗಾರರ ಜೊತೆ ಬುಧವಾರ ಮಾತನಾಡಿದ ಅವರು, 'ಇಲಾಖೆಗೆ ಬಜೆಟ್‌ನಲ್ಲಿ ₹ 700 ಕೋಟಿ ಅನುದಾನ ನೀಡುವಂತೆಯೂ ಮನವಿ ಸಲ್ಲಿಸಲಾಗುವುದು' ಎಂದರು.

'ಬೆಳಗಾವಿ, ಚಾಮರಾಜನಗರ, ಬೀದರ್, ರಾಯಚೂರು ಗ್ರಾಮಾಂತರ, ಹುಬ್ಬಳ್ಳಿ, ಚಿತ್ತಾಪುರ, ಮೊಳಕಾಲ್ಮುರಿನಲ್ಲಿ ಹೊಸತಾಗಿ ಕೈಗಾರಿಕಾ ಹಬ್ ಆರಂಭಿಸಲು ಉದ್ದೇಶಿಸಲಾಗಿದೆ. ಕೆಲವೆಡೆ ಜಾಗವಿದೆ. ಅದನ್ನು ಕೈಗಾರಿಕೆ ಬಳಸಲು ಯೋಗ್ಯವಾಗುವಂತೆ ಮಾಡಲಾಗುವುದು' ಎಂದೂ ತಿಳಿಸಿದರು.

ಎಪಿಎಂಸಿ ಕಾಯ್ದೆಗೆ ಹೊಸ ರೂಪ

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ (ಎಪಿಎಂಸಿ) ಕಾಯ್ದೆಯ ಮೂಲಸ್ವರೂಪ ಉಳಿಸಿಕೊಂಡು, ರೈತ ಹಿತದಿಂದ ಸೂಕ್ತ ತಿದ್ದುಪಡಿ ಮಾಡಿ ಹೊಸ ರೂಪದಲ್ಲಿ ತರಲು ರಾಜ್ಯ ಸರ್ಕಾರ ಮುಂದಾಗಿದೆ.

ಜುಲೈ 3ರಿಂದ ಆರಂಭವಾಗಲಿರುವ ವಿಧಾನ ಮಂಡಲ ಅಧಿವೇಶನದಲ್ಲಿ ಒಟ್ಟು 10 ಮಸೂದೆಗಳನ್ನು ಮಂಡಿಸಲು ಕೂಡಾ ತೀರ್ಮಾನಿಸಲಾಗಿದೆ.

'ಎಪಿಎಂಸಿ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) ಕಾಯ್ದೆಯನ್ನು ಕೇಂದ್ರ ಸರ್ಕಾರ ತಂದಿತ್ತು. ರೈತ ವಿರೋಧಿಯಾದ ಈ ಕಾಯ್ದೆಗೆ ತೀವ್ರ ವಿರೋಧ ವ್ಯಕ್ತವಾಗಿದ್ದರೂ ಈ ಹಿಂದಿನ ಬಿಜೆಪಿ ಸರ್ಕಾರ ಅದನ್ನು ರದ್ದುಪಡಿಸಿರಲಿಲ್ಲ. ನಾವು ಅದನ್ನು ರದ್ದುಪಡಿಸುವ ಜೊತೆಗೆ, ಕಾಯ್ದೆಗೆ ಹೊಸ ರೂಪ ನೀಡಲು ಮಸೂದೆ ಮಂಡಿಸುತ್ತೇವೆ' ಎಂದು ಎಚ್‌.ಕೆ. ಪಾಟೀಲ ಹೇಳಿದರು.

ಕೃಷಿ ಉತ್ಪನ್ನ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ ಇದ್ದರು.

'ಬಿಟ್ ಕಾಯಿನ್ ಹಗರಣದ ತನಿಖೆ'

ಬೆಂಗಳೂರು: 'ಬಿಟ್ ಕಾಯಿನ್ ಹಗರಣದ ಮರು ತನಿಖೆಗೆ ನಿರ್ಧರಿಸಲಾಗಿದೆ' ಎಂದು ಗೃಹ ಸಚಿವ ಜಿ. ಪರಮೇಶ್ವರ ತಿಳಿಸಿದರು.

ಸುದ್ದಿಗಾರರ ಜೊತೆ ಬುಧವಾರ ಮಾತನಾಡಿದ ಅವರು, 'ನಾವು (ಕಾಂಗ್ರೆಸ್) ಈಗ ಸರ್ಕಾರ ನಡೆಸುತ್ತಿದ್ದೇವೆ. ಈ ವಿಷಯಗಳನ್ನು ಈಗ ಮುನ್ನೆಲೆಗೆ ತರುತ್ತಿದ್ದೇವೆ. ಬಿಟ್ ಕಾಯಿನ್ ಪ್ರಕರಣವನ್ನು ಮರು ಪರಿಶೀಲಿಸುತ್ತೇವೆ' ಎಂದರು.

'ಬಿಜೆಪಿಯವರು ಈಗಲೇ ಕುಣಿದಾಡುತ್ತಿದ್ದಾರೆ. ನಮ್ಮ ಸರ್ಕಾರ ಬಂದು 20 ದಿನ ಆಗಿದೆ ಅಷ್ಟೇ. ಅವರು (ಬಿಜೆಪಿವರು) ಸ್ವಲ್ಪ ಸಮಾಧಾನವಾಗಿರುವುದು ಒಳ್ಳೆಯದು' ಎಂದರು.

ಬಳ್ಳಾರಿ: ಪಿಎಫ್‌ಐ ಶಸ್ತ್ರಾಸ್ತ್ರ ತರಬೇತುದಾರನ ಬಂಧನ

ಪ್ರಜಾವಾಣಿ ವಾರ್ತೆ



ಯೂನುಸ್

ಬಳ್ಳಾರಿ: ನಿಜಾಮಬಾದ್ ಭಯೋತ್ಪಾದನೆ ಪಿತೂರಿ ಪ್ರಕರಣದಲ್ಲಿ ಭಾಗಿಯಾದ ಆರೋಪಕ್ಕೆ ಒಳಗಾದ 'ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ' (ಪಿಎಫ್‌ಐ) ಸಂಘಟನೆಯ ಪ್ರಮುಖ ಶಸ್ತ್ರಾಸ್ತ್ರ ತರಬೇತುದಾರನನ್ನು ರಾಷ್ಟ್ರೀಯ ತನಿಖಾ ದಳ (ಎನ್‌ಐಎ) ಮಂಗಳವಾರ ಬಳ್ಳಾರಿಯ ಕೌಲ್‌ಬಜಾರ್ ಪ್ರದೇಶದಲ್ಲಿ ಬಂಧಿಸಿದೆ.

ಆಂಧ್ರಪ್ರದೇಶ ನಂದ್ಯಾಲದ ನೊಸಂ ಮಹಮ್ಮದ್ ಯೂನುಸ್ (33) ಬಂಧಿತ ಆರೋಪಿ. ಭಾರತದಲ್ಲಿ ಇಸ್ಲಾಮಿಕ್ ಆಡಳಿತ ಸ್ಥಾಪಿಸುವ ಉದ್ದೇಶದಿಂದ ಹುಟ್ಟುಹಾಕಿರುವ ನಿಷೇಧಿತ ಪಿಎಫ್‌ಐಗೆ ಕೆಲ ಯುವಕರನ್ನು ಸೇರಿಸಿಕೊಂಡು ಶಸ್ತ್ರಾಸ್ತ್ರ ತರಬೇತಿ ನೀಡುತ್ತಿದ್ದ ಪ್ರಕರಣದಲ್ಲಿ ಈತ ಎನ್‌ಐಎಗೆ ಬೇಕಾಗಿದ್ದ.

ಬಂಧಿತ ತನ್ನ ಹಿರಿಯ ಸಹೋದರನೊಂದಿಗೆ ಇನ್ವರ್ಟರ್ ವ್ಯಾಪಾರದಲ್ಲಿ ತೊಡಗಿಕೊಂಡಿದ್ದ. 2022ರ ಸೆಪ್ಟೆಂಬರ್‌ನಲ್ಲಿ ಈತನ ನಂದ್ಯಾಲದ ಮನೆಯನ್ನು ಎನ್‌ಐಎ ಅಧಿಕಾರಿಗಳು ಶೋಧಿಸಿದಾಗ ಪತ್ನಿ, ಇಬ್ಬರು ಮಕ್ಕಳ ಜತೆ ಪರಾರಿಯಾಗಿದ್ದ. ಬಳಿಕ ತನ್ನ ಕುಟುಂಬದೊಂದಿಗೆ ಬಳ್ಳಾರಿಯ ಕೌಲ್ ಬಜಾರ್ ಪ್ರದೇಶದಲ್ಲಿ ತಲೆಮರೆಸಿಕೊಂಡಿದ್ದು ಖಚಿತವಾಗಿತ್ತು. ಈತ ಹೆಸರನ್ನು ಬಷೀರ್ ಎಂದು ಬದಲಿಸಿಕೊಂಡು ನಳ ರಿಪೇರಿ ಕೆಲಸ ಮಾಡುತ್ತಿದ್ದ ಎಂದು ಎನ್‌ಐಎ ತಿಳಿಸಿದೆ.

ಪಿಎಫ್‌ಐ ಸಂಘಟನೆಗೆ ಸೇರಿಕೊಂಡಿರುವ ಅಮಾಯಕ ಯುವಕರಿಗೆ ಆರೋಪಿಯು ಶಸ್ತ್ರಾಸ್ತ್ರ ತರಬೇತಿ ನೀಡುತ್ತಿದ್ದ. ಈತ ಆಂಧ್ರ ಹಾಗೂ ತೆಲಂಗಾಣದ ರಾಜ್ಯಗಳ ಸಂಯೋಜಕ ತರಬೇತಿದಾರನಾಗಿದ್ದ. ವಿಚಾರಣೆ ಸಮಯದಲ್ಲಿ ಬಂಧಿತ ಮತ್ತೊಬ್ಬ ಆರೋಪಿ ಇಲಿಯಾಸ್ ಎಂಬುವನ ಹೆಸರನ್ನು ಬಹಿರಂಗಪಡಿಸಿದ್ದಾನೆ. ಇಲಿಯಾಸ್ ತಲೆ ಮರೆಸಿಕೊಂಡಿದ್ದು ಆತನಿಗಾಗಿ ಹುಡುಕಾಟ ನಡೆಯುತ್ತಿದೆ.

ಈ ಸಂಬಂಧ ತೆಲಂಗಾಣ ಪೊಲೀಸರು 2022ರ ಜುಲೈ 4ರಂದು ಎಫ್‌ಐಆರ್ ದಾಖಲಿಸಿಕೊಂಡಿದ್ದರು. ತನಿಖೆಯನ್ನು ಎನ್‌ಐಎಗೆ ವರ್ಗಾಯಿಸಲಾಗಿತ್ತು. ಎನ್‌ಐಎ ಮರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದು, ಈವರೆಗೆ 16 ಆರೋಪಿಗಳ ವಿರುದ್ಧ ಎರಡು ದೋಷಾರೋಪ ಪಟ್ಟಿ ಸಲ್ಲಿಸಿದ್ದಾರೆ.

ಮೆಸ್ಕಾಂ ಕಚೇರಿಗೆ ಕಲ್ಲು ತೂರಾಟ

ಪ್ರಜಾವಾಣಿ ವಾರ್ತೆ


ಶಿವಮೊಗ್ಗ: ವಿದ್ಯುತ್ ಬಿಲ್ ಹೆಚ್ಚಳ ವಿರೋಧಿಸಿ ಶಾಸಕ ಎಸ್‌.ಎನ್‌. ಚನ್ನಬಸಪ್ಪ ಅವರ ನೇತೃತ್ವದಲ್ಲಿ ಬಿಜೆಪಿ ಬುಧವಾರ ಇಲ್ಲಿ ನಡೆಸಿದ ಪ್ರತಿಭಟನೆ ಹಿಂಸೆಗೆ ತಿರುಗಿತು. ಕಿಡಿಗೇಡಿಗಳು ಮೆಸ್ಕಾಂ ಕಚೇರಿ ಮೇಲೆ ಕಲ್ಲು ತೂರಿ ಕಿಟಕಿ ಗಾಜು ಒಡೆದು ಹಾಕಿದರು.

ಪ್ರತಿಭಟನೆಯ ಭಾಗವಾಗಿ ಇಲ್ಲಿನ ರೈಲು ನಿಲ್ದಾಣದ ಬಳಿಯ ಮೆಸ್ಕಾಂ ಕಚೇರಿಗೆ ಮುತ್ತಿಗೆ ಹಾಕಲು ಬಿಜೆಪಿ ಮುಂದಾಗಿತ್ತು. ಈ ವೇಳೆ ಪ್ರತಿಭಟನಕಾರರು ಕಾಂಗ್ರೆಸ್ ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಘೋಷಣೆ ಕೂಗಿದರು. 'ಪುಕ್ಕಟ್ಟೆ ವಿದ್ಯುತ್ ಭಾಗ್ಯ ಕೊಡುತ್ತೇನೆ' ಎಂದು ಅಧಿಕಾರಕ್ಕೆ ಬಂದ ಕಾಂಗ್ರೆಸ್ ಈಗ ಹಿಂಬಾಗಿಲ ಮೂಲಕ ದರ ಹೆಚ್ಚಿಸಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಬಿಜೆಪಿ ಮುಖಂಡರ ಭಾಷಣ ಮುಗಿಯುತ್ತಿದ್ದಂತೆಯೇ ಮೆಸ್ಕಾಂ ಕಚೇರಿಗೆ ಬೀಗ ಹಾಕಲು ಮುಂದಾದ ಪ್ರತಿಭಟನಕಾರರು, ಕಚೇರಿಯ ಪ್ರವೇಶ ದ್ವಾರದ ಒಳಗೆ ನುಗ್ಗಿದರು. ಅಲ್ಲಿದ್ದ ಪೊಲೀಸರು ಅವರನ್ನು ತಡೆದರು. ಆಗ ಪರಸ್ಪರ ತಳ್ಳಾಟ ನಡೆಯಿತು. ಈ ವೇಳೆ ಕೆಲವರು ಕಚೇರಿಗೆ ಕಲ್ಲು ಹೊಡೆದರು. ಇದರಿಂದ ಕಿಟಕಿ ಗಾಜು ಪುಡಿಯಾದವು.

ಘಟನೆ ಸಂಬಂಧ ಮುರುಗೇಶ ಎಂಬುವರನ್ನು ವಶಕ್ಕೆ ಪಡೆದಿದ್ದಾರೆ.





ಶಿವಮೊಗ್ಗದಲ್ಲಿ ಬುಧವಾರ ನಡೆದ ಪ್ರತಿಭಟನೆ ವೇಳೆ ಮೆಸ್ಕಾಂ ಕಚೇರಿಯೊಳಗೆ ನುಗ್ಗಲು ಬಿಜೆಪಿ ಕಾರ್ಯಕರ್ತರು ಪೊಲೀಸ್ ತಡೆ ದಾಟಿ ಮುಂದಾದರು (ಎಡ ಚಿತ್ರ) ಪ್ರತಿಭಟನೆ ವೇಳೆ ಕಿಡಿಗೇಡಿಗಳು ಕಲ್ಲು ತೂರಿದ್ದರಿಂದ ಮೆಸ್ಕಾಂ ಕಚೇರಿಯ ಕಿಟಕಿ ಗಾಜು ಒಡೆದಿರುವುದು

ಮುಂದುವರಿದ ಪ್ರತಿಭಟನೆ

ಬೆಳಗಾವಿ: ವಿದ್ಯುತ್ ದರ ಹೆಚ್ಚಳಕ್ಕೆ ಬೆಳಗಾವಿ ಜಿಲ್ಲೆಯಲ್ಲಿ ತೀವ್ರ ವಿರೋಧ ವ್ಯಕ್ತವಾಗುತ್ತಿದ್ದು, ಸರಣಿ ಪ್ರತಿಭಟನೆ ಬುಧವಾರವೂ ಮುಂದುವರಿಯಿತು.

ಉತ್ತರ ಕರ್ನಾಟಕ ವೃತ್ತಿಪರ ನೇಕಾರ ಹೋರಾಟ ಸಮಿತಿ ಜಿಲ್ಲಾ ಘಟಕದ ನೇತೃತ್ವದಲ್ಲಿ ನೇಕಾರರು ನಗರದಲ್ಲಿ ಬೈಕ್ ರ‍್ಯಾಲಿ ನಡೆಸಿದರು. ಇಲ್ಲಿನ ಖಾಸಬಾಗದ ಬಸವೇಶ್ವರ ವೃತ್ತದಿಂದ ಹೊರಟ ನೇಕಾರರು, ಜಿಲ್ಲಾಧಿಕಾರಿ ಕಚೇರಿಯವರೆಗೆ ರ‍್ಯಾಲಿ ನಡೆಸಿದರು.

ಪ್ರತಿಭಟನೆ ಎಚ್ಚರಿಕೆ: ರಬಕವಿ ಬನಹಟ್ಟಿ (ಬಾಗಲಕೋಟೆ ಜಿಲ್ಲೆ): ವಿದ್ಯುತ್ ದರ ಹೆಚ್ಚಳದ ವಿರುದ್ಧ ಇಲ್ಲಿನ ಕಾಡಸಿದ್ಧೇಶ್ವರ ದೇವಸ್ಥಾನದ ಆವರಣದಲ್ಲಿ ನೇಕಾರರ ಮಾಲೀಕರ ಮತ್ತು ನೇಕಾರರ ಸಭೆ ನಡೆಯಿತು.

ಮಹಾಲಿಂಗಪುರದಲ್ಲೂ ಪ್ರತಿಭಟನಾ ರ‍್ಯಾಲಿ ನಡೆಯಿತು.

ಶಾಹೀನ್ ಶಾಲೆ: ಪ್ರಕರಣ ವಜಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಸರ್ಕಾರ ಜಾರಿಗೊಳಿಸಿದ ಪೌರತ್ವ ತಿದ್ದುಪಡಿ ಕಾಯ್ದೆ (ಸಿಎಎ) ಮತ್ತು ಪ್ರಜೆಗಳ ರಾಷ್ಟ್ರೀಯ ನೋಂದಣಿ (ಎನ್‌ಆರ್‌ಸಿ) ಕುರಿತು ಬೀದರ್ ಶಾಹೀನ್ ಶಾಲೆಯ ಮಕ್ಕಳು ನಾಟಕ ಪ್ರದರ್ಶಿಸಿದ್ದಕ್ಕೆ ಸಂಬಂಧಿಸಿದಂತೆ ಶಾಲೆಯ ಆಡಳಿತ ಮಂಡಳಿಯ ನಾಲ್ವರ ವಿರುದ್ಧ ದಾಖಲಿಸಲಾಗಿದ್ದ ದೇಶದ್ರೋಹ ಪ್ರಕರಣವನ್ನು ಹೈಕೋರ್ಟ್ ವಜಾಗೊಳಿಸಿದೆ.

ಈ ಸಂಬಂಧ ಶಾಹೀನ್ ಶಾಲೆಯ ಮುಖ್ಯಸ್ಥರಾದ ಅಲ್ಲಾವುದ್ದೀನ್, ಅಬ್ದುಲ್ ಖಾಲಿಕ್, ಮೊಹಮ್ಮದ್ ಬಿಲಾಲ್ ಇನಾಂದಾರ್ ಮತ್ತು ಮೊಹಮ್ಮದ್ ಮೆಹ್ತಾಬ್ ವಿರುದ್ಧ ದಾಖಲಾಗಿದ್ದ ಪ್ರಕರಣವನ್ನು ನ್ಯಾಯಮೂರ್ತಿ ಹೇಮಂತ್ ಚಂದನಗೌಡರ್ ಅವರಿದ್ದ ಕಲಬುರಗಿಯ ಏಕಸದಸ್ಯ ನ್ಯಾಯಪೀಠ ವಜಾಗೊಳಿಸಿ ಆದೇಶಿಸಿದೆ.

ಪ್ರಕರಣವೇನು?: ಶಾಹೀನ್ ಶಿಕ್ಷಣ ಸಂಸ್ಥೆಯ ನಾಲ್ಕನೇ ತರಗತಿಯ ಮಕ್ಕಳು 2020ರ ಜನವರಿಯಲ್ಲಿ ಸಿಎಎ ವಿರೋಧಿ ವಿಷಯ ಆಧರಿಸಿ ನಾಟಕ ಪ್ರದರ್ಶಿಸಿದ್ದರು. 'ಈ ನಾಟಕದಲ್ಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರನ್ನು ನಿಂದಿಸುವ ಸಂಭಾಷಣೆ ಇತ್ತು' ಎಂದು ಎಬಿವಿಪಿ ಸದಸ್ಯ ನೀಲೇಶ್ ರಕ್ಷಾಲ್ ದೂರು ದಾಖಲಿಸಿದ್ದರು.

'ಸರ್ಕಾರ ಮಾತಿನಂತೆ ನಡೆಯಲಿ'

ಪ್ರಜಾವಾಣಿ ವಾರ್ತೆ

ದಾವಣಗೆರೆ: 'ವಿದ್ಯುತ್ ದರ ಏರಿಕೆಯಿಂದ ಕೈಗಾರಿಕೆಗಳಿಗೆ ಹೊಡೆತ ಬಿದ್ದಿದ್ದು, ಅವು ಉಳಿಯುವುದೇ ಕಷ್ಟವಾಗಿದೆ. ಆದ್ದರಿಂದ ದರ ಹೆಚ್ಚಳ ನಿರ್ಧಾರ ಕೈಬಿಡಬೇಕು' ಎಂದು ಶಾಸಕ ಶಾಮನೂರು ಶಿವಶಂಕರಪ್ಪ ಸರ್ಕಾರಕ್ಕೆ ಸಲಹೆ ನೀಡಿದ್ದಾರೆ.

'ವಿದ್ಯುತ್ ದರವನ್ನು ನಾವು ಹೆಚ್ಚಿಸಿಲ್ಲ ಎಂದು ಬಿಜೆಪಿ ಹಾಗೂ ಕಾಂಗ್ರೆಸ್ ಪಕ್ಷಗಳೆರಡೂ ಹೇಳುತ್ತಿವೆ. ಬಿಜೆಪಿ ಆಡಳಿತದ ಅವಧಿಯಲ್ಲೇ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ (ಕೆಇಆರ್‌ಸಿ) ದರ ಏರಿಕೆ ಬಗ್ಗೆ ತಿಳಿಸಿತ್ತು. ಕಾಂಗ್ರೆಸ್‌ನವರು ಇದಕ್ಕೆ ಸಹಿ ಹಾಕಿದ್ದಾರೊ ಬಿಟ್ಟಿದ್ದಾರೋ ಗೊತ್ತಿಲ್ಲ. ಈ ಪ್ರಸ್ತಾವ ಒಪ್ಪಿಕೊಳ್ಳದೆ ಹಿಂದಿನ ದರವನ್ನೇ ಮುಂದುವರಿಸಬೇಕು' ಎಂದು ಬುಧವಾರ ಅವರು ಸುದ್ದಿಗಾರರೆದುರು ತಿಳಿಸಿದ್ದಾರೆ.

ಜಾಗತಿಕ ಲಿಂಗಾಯತ ಮಹಾಸಭಾ ಎಲ್ಲಿದೆ?: 'ಸಾಮಾಜಿಕ ಮತ್ತು ಆರ್ಥಿಕ ಸಮೀಕ್ಷೆಯ ಸಾಧಕ–ಬಾಧಕಗಳ ಬಗ್ಗೆ ಅಖಿಲ ಭಾರತ ವೀರಶೈವ ಮಹಾಸಭೆಯ ಪದಾಧಿಕಾರಿಗಳ ಸಭೆ ಕರೆದು ಚರ್ಚಿಸಿ ನಿರ್ಧಾರ ತೆಗೆದುಕೊಳ್ಳುತ್ತೇವೆ. ಜಾಗತಿಕ ಲಿಂಗಾಯತ ಮಹಾಸಭಾ ಎಲ್ಲಿದೆ. ಜಾಮದಾರ್ ಒಬ್ಬ ಇದ್ದಾನೆ. ಅವನನ್ನು ಹುಚ್ಚಾಸ್ಪತ್ರೆಗೆ ಕಳಿಸಬೇಕು. ಇಲ್ಲಾ ಅಂದ್ರೆ ನಾವೇ ಕಳಿಸುತ್ತೇವೆ' ಎಂದು ಅವರು ಕಿಡಿಕಾರಿದರು.

'ಸಿದ್ದೇಶ್ವರ ವಿರುದ್ಧ ಸ್ಪರ್ಧೆಗೆ ಸಿದ್ಧ'

'ಮುಂಬರುವ ಲೋಕಸಭಾ ಚುನಾವಣೆಗೆ ಸಂಸದ ಜಿ.ಎಂ. ಸಿದ್ದೇಶ್ವರ ಅವರಿಗೆ ಮತ್ತೆ ಬಿಜೆಪಿ ಟಿಕೆಟ್ ತೆಗೆದುಕೊಂಡು ಬಂದು ಸ್ಪರ್ಧಿಸಲು ಹೇಳಿ. ಕಾಂಗ್ರೆಸ್‌ನಿಂದ ಬಹಳ ಜನ ಆಕಾಂಕ್ಷಿಗಳಿದ್ದಾರೆ. ಯಾರೂ ಸ್ಪರ್ಧಿಸುವುದಿಲ್ಲ ಎಂದರೆ ನಾನೇ ಸಡ್ಡು ಹೊಡೆದು ಸ್ಪರ್ಧಿಸಲು ತಯಾರಿದ್ದೇನೆ' ಎಂದು ಶಾಮನೂರು ಶಿವಶಂಕರಪ್ಪ ಸವಾಲೆಸೆದರು.

'ಸಿದ್ದೇಶ್ವರ ಸೋಲುವುದನ್ನು ನಾನು ನೋಡಬೇಕು.ಸಿದ್ದೇಶ್ವರ ಸಹ ನನ್ನ ಅಳಿಯ. ಬೊಮ್ಮಾಯಿ ಹೇಗೆ ಸಂಬಂಧಿಯೋ ಅವನೂ ನನ್ನ ಸಂಬಂಧಿ' ಎಂದರು.

ಶಾಮನೂರು–ಬೊಮ್ಮಾಯಿ ಭೇಟಿ: ನಗರದ ಹೊರವಲಯದ ಖಾಸಗಿ ರೆಸಾರ್ಟ್‌ವೊಂದರಲ್ಲಿ ಮಂಗಳವಾರ ಸಂಜೆ ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ಶಾಸಕ ಶಾಮನೂರು ಶಿವಶಂಕರಪ್ಪ ಭೇಟಿಯಾಗಿ ಚರ್ಚೆ ನಡೆಸಿದ್ದಾರೆ.

'ಶಿವಶಂಕರಪ್ಪ ಸಂಬಂಧಿ. ಅವರ ಭೇಟಿ ಹಿಂದೆ ರಾಜಕಾರಣದ ಉದ್ದೇಶ ಇರಲಿಲ್ಲ. ಯಾವುದೇ ರಾಜಕೀಯ ವಿಷಯ ಪ್ರಸ್ತಾಪ ಆಗಿಲ್ಲ' ಎಂದು ಬೊಮ್ಮಾಯಿ ಟ್ವೀಟ್ ಮಾಡಿದ್ದಾರೆ.

ಯುಸಿಸಿ: ಅಭಿಪ್ರಾಯ ಆಹ್ವಾನಿಸಿದ ಕಾನೂನು ಆಯೋಗ

ಪ್ರಜಾವಾಣಿ ವಾರ್ತೆ

ನವದೆಹಲಿ: ಏಕರೂಪ ನಾಗರಿಕ ಸಂಹಿತೆ (ಯುಸಿಸಿ) ಕುರಿತು ಕಾನೂನು ಆಯೋಗವು ಸಾರ್ವಜನಿಕರು ಹಾಗೂ ಮಾನ್ಯತೆ ಪಡೆದಿರುವ ಧಾರ್ಮಿಕ ಸಂಘಟನೆಗಳಿಂದ ಅಭಿಪ್ರಾಯಗಳನ್ನು ಬುಧವಾರ ಆಹ್ವಾನಿಸಿದೆ.

30 ದಿನಗಳ ಒಳಗಾಗಿ ಅಭಿಪ್ರಾಯಗಳನ್ನು ತಿಳಿಸಬೇಕು ಎಂದು ನಿವೃತ್ತ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ಆಯೋಗ ತಿಳಿಸಿದೆ.

ಸಲಹೆ, ಅಭಿಪ್ರಾಯಗಳನ್ನು membersecretary-lci@gov.in ಗೆ ಈ–ಮೇಲ್ ಮಾಡಬಹುದು.

'ಸದಸ್ಯ ಕಾರ್ಯದರ್ಶಿ, ಭಾರತೀಯ ಕಾನೂನು ಆಯೋಗ, 4ನೇ ಮಹಡಿ, ಲೋಕನಾಯಕ ಭವನ, ಖಾನ್ ಮಾರ್ಕೆಟ್, ನವದೆಹಲಿ–110003' ಈ ವಿಳಾಸಕ್ಕೆ ಕೂಡ ಕಳುಹಿಸಬಹುದು ಎಂದು ಆಯೋಗ ತಿಳಿಸಿದೆ.

ಅಗತ್ಯ ಕಂಡುಬಂದಲ್ಲಿ, ಖುದ್ದಾಗಿ ಅಹವಾಲು ಆಲಿಸಲು/ಚರ್ಚಿಸಲು ವ್ಯಕ್ತಿ ಅಥವಾ ಸಂಘಟನೆಯನ್ನು ಆಹ್ವಾನಿಸಲಾಗುವುದು ಎಂದೂ ಆಯೋಗ ತಿಳಿಸಿದೆ.

ಏಕರೂಪ ನಾಗರಿಕ ಸಂಹಿತೆ ಜಾರಿಗೊಳಿಸುವುದು ಬಿಜೆಪಿಯ ಕಾರ್ಯಸೂಚಿಗಳಲ್ಲೊಂದು. ಈ ಸಂಬಂಧ ಉತ್ತರಾಖಂಡ ಸರ್ಕಾರವು ಈಗಾಗಲೇ ಸಮಿತಿಯೊಂದನ್ನು ರಚಿಸಿದ್ದು, ಸಂವಾದಕ್ಕೆ ಚಾಲನೆ ನೀಡಿದೆ.

ಈ ಸಂಬಂಧ ಸಮಿತಿಗಳನ್ನು ರಚಿಸುವುದಾಗಿ ಗುಜರಾತ್, ಮಧ್ಯಪ್ರದೇಶ ಸರ್ಕಾರಗಳು ಹೇಳಿದ್ದರೆ, ಹರಿಯಾಣ, ಅಸ್ಸಾಂ, ಉತ್ತರ ಪ್ರದೇಶ ಹಾಗೂ ಮಹಾರಾಷ್ಟ್ರ ಸರ್ಕಾರಗಳು ಸಮಿತಿ ರಚಿಸುವ ಇಂಗಿತ ವ್ಯಕ್ತಪಡಿಸಿವೆ.

ಸಂಕ್ಷಿಪ್ತ ಸುದ್ದಿ

'ಮಹಿಳಾ ಕುಸ್ತಿಪಟುಗಳಿಗೆ ನ್ಯಾಯ ದೊರಕಬೇಕು'

ನವದೆಹಲಿ (ಪಿಟಿಐ): ಭಾರತ ಕುಸ್ತಿ ಫೆಡರೇಷನ್ ಅಧ್ಯಕ್ಷ ಮತ್ತು ಬಿಜೆಪಿ ಸಂಸದ ಬ್ರಿಜ್ ಭೂಷಣ್ ಶರಣ್ ಸಿಂಗ್ ವಿರುದ್ಧ ಲೈಂಗಿಕ ದೌರ್ಜನ್ಯ ಆರೋಪ ಮಾಡುತ್ತಿರುವ ಮಹಿಳಾ ಕುಸ್ತಿಪಟುಗಳಿಗೆ ನ್ಯಾಯ ದೊರಕಬೇಕು ಎಂದು ಕಾಂಗ್ರೆಸ್ ಹೇಳಿದೆ.

ಕುಸ್ತಿಪಟುಗಳಿಗೆ ಬೆಂಬಲ ನೀಡಿ ಖಾಪ್ ಸದಸ್ಯರು ಮತ್ತು ರೈತರು ರೋಹ್ಟಕ್–ದೆಹಲಿ ರಾಷ್ಟ್ರೀಯ ಹೆದ್ದಾರಿಯನ್ನು ಎರಡು ಗಂಟೆಗಳ ಕಾಲ ತಡೆದ ಬೆನ್ನಲ್ಲೇ ಕಾಂಗ್ರೆಸ್ ಈ ಹೇಳಿಕೆ ನೀಡಿದೆ.

'ನರೇಂದ್ರ ಮೋದಿ ನೇತೃತ್ವದ ಸರ್ಕಾರವು ಪದೇ ಪದೇ ಹೆಣ್ಣುಮಕ್ಕಳ ವಿರುದ್ಧ ದೌರ್ಜನ್ಯ ನಡೆಸಿದವರ ಪರವಾಗಿ ನಿಲ್ಲುತ್ತಿದೆ. ದೇಶದ ಹೆಣ್ಣುಮಕ್ಕಳು ನ್ಯಾಯಕ್ಕಾಗಿ ಹೋರಾಡುತ್ತಿದ್ದರೆ, ಮೋದಿ ಸರ್ಕಾರ, ಸಚಿವರು ಸೇರಿದಂತೆ ಇಡೀ ಆಡಳಿತ ವರ್ಗ ಕಿರುಕುಳ ನೀಡಿದವರ ಪರವಾಗಿ ನಿಂತಿದೆ. ಮಹಿಳಾ ಕುಸ್ತಿಪಟುಗಳ ನ್ಯಾಯಸಮ್ಮತ ಬೇಡಿಕೆಯನ್ನು ಕಡೆಗಣಿಸುತ್ತಿದೆ' ಎಂದು ಎಐಸಿಸಿ ಕಾರ್ಯದರ್ಶಿ ವಿನೀತ್ ಪುನಿಯಾ ಆರೋಪಿಸಿದರು.

ಬೆಂಗಳೂರು–ಹುಬ್ಬಳ್ಳಿ ವಂದೇ ಭಾರತ್: 26ಕ್ಕೆ ಚಾಲನೆ



ನವದೆಹಲಿ (ಪಿಟಿಐ): ರೈಲ್ವೆ ಸಚಿವಾಲಯವು ಜೂನ್ 26ರಿಂದ ಬೆಂಗಳೂರು-ಹುಬ್ಬಳ್ಳಿ ಸೇರಿದಂತೆ ಇನ್ನೂ ಐದು ಮಾರ್ಗಗಳಲ್ಲಿ ವಂದೇ ಭಾರತ್ ರೈಲುಗಳ ಸಂಚಾರವನ್ನು ಆರಂಭಿಸಲಿದೆ.

ಪ್ರಧಾನಿ ನರೇಂದ್ರ ಮೋದಿ ಅವರು ವಿಡಿಯೊ ಕಾನ್ಫರೆನ್ಸ್ ಮೂಲಕ ಸೆಮಿ ಹೈಸ್ಪೀಡ್ ರೈಲುಗಳ ಸಂಚಾರಕ್ಕೆ ಚಾಲನೆ ನೀಡುವ ನಿರೀಕ್ಷೆಯಿದೆ.

ಮುಂಬೈ-ಗೋವಾ, ಬೆಂಗಳೂರು-ಹುಬ್ಬಳ್ಳಿ, ಪಟ್ನಾ-ರಾಂಚಿ, ಭೋಪಾಲ್-ಇಂದೋರ್ ಮತ್ತು ಭೋಪಾಲ್-ಜಬಲ್ಪುರ ಮಾರ್ಗಗಳಲ್ಲಿ ಈ ಐದು ರೈಲುಗಳು ಸಂಚರಿಸಲಿವೆ.

'ಮಿಲಿಟರಿ ಮೂಲಸೌಕರ್ಯ ಅಭಿವೃದ್ಧಿ ಒತ್ತು'

ನವದೆಹಲಿ (ಪಿಟಿಐ): ಗಾಲ್ವನ್ ಕಣಿವೆಯಲ್ಲಿ ಚೀನಾದೊಂದಿಗೆ ಸಂಘರ್ಷ ನಡೆದ ನಂತರ, ವಾಸ್ತವ ನಿಯಂತ್ರಣ ರೇಖೆ (ಎಲ್ಎಸಿ)ಗುಂಟ ಅಂದಾಜು 3,500 ಕಿ.ಮೀ. ಉದ್ದಕ್ಕೂ ಭಾರತವು ತನ್ನ ಸೇನಾ ಸಾಮರ್ಥ್ಯವನ್ನು ಹೆಚ್ಚಿಸಿದೆ ಎಂದು ರಕ್ಷಣಾ ಇಲಾಖೆ ಮೂಲಗಳು ಬುಧವಾರ ಹೇಳಿವೆ.

ಮಿಲಿಟರಿ ಮೂಲಸೌಕರ್ಯ, ಕಣ್ಗಾವಲು ವ್ಯವಸ್ಥೆ ಹಾಗೂ ಯುದ್ಧ ಸನ್ನದ್ಧತೆಯ ಸಾಮರ್ಥ್ಯವನ್ನು ಹೆಚ್ಚಿಸಲಾಗಿದೆ ಎಂದಿವೆ.

ಗಾಲ್ವನ್ ಕಣಿವೆಯಲ್ಲಿ 2020ರ ಜೂನ್ 15ರಂದು ಭಾರತ ಮತ್ತು ಚೀನಾ ಯೋಧರ ನಡುವೆ ಸಂಘರ್ಷ ನಡೆದಿತ್ತು. ಈ ಸಂಘರ್ಷಕ್ಕೆ ಮೂರು ವರ್ಷ ಸಂದ ಹಿನ್ನೆಲೆಯಲ್ಲಿ ಅಧಿಕಾರಿಗಳು ಈ ಮಾಹಿತಿ ನೀಡಿದ್ದಾರೆ.





ಬಿಪೊರ್‌ಜಾಯ್ ಚಂಡಮಾರುತ ಅಪ್ಪಳಿಸುವುದಕ್ಕೂ ಮುನ್ನಾದಿನವಾದ ಬುಧವಾರ ಮುಂಬೈನಲ್ಲಿ ಸಮುದ್ರ ತೀರದಲ್ಲಿರುವ ಅಂಗಡಿಗಳತ್ತ ಅಲೆಗಳು ಉಕ್ಕೇರಿದ್ದು ಕಂಡುಬಂತು –ಪಿಟಿಐ ಚಿತ್ರ (ಎಡಚಿತ್ರ) ಕಛ್ ಜಿಲ್ಲೆ ಜಖಾವು ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಸ್ಥಾಪಿಸಿರುವ ತಾತ್ಕಾಲಿಕ ಪರಿಹಾರ ಕೇಂದ್ರದಲ್ಲಿ ಜನರು ಆಶ್ರಯ ಪಡೆದಿದ್ದಾರೆ –ಎಎಫ್‌ಪಿ ಚಿತ್ರ

ಬಿಪೊರ್‌ಜಾಯ್: ತಾತ್ಕಾಲಿಕ ಪರಿಹಾರ ಕೇಂದ್ರಕ್ಕೆ 50 ಸಾವಿರ ಜನರ ಸ್ಥಳಾಂತರ

ಸೌರಾಷ್ಟ್ರ–ಕಛ್‌ನಲ್ಲಿ ಭಾರಿ ಮಳೆ

ಅಹಮದಾಬಾದ್ (ಪಿಟಿಐ): ಬಿಪೊರ್‌ಜಾಯ್ ಚಂಡಮಾರುತ ಮತ್ತಷ್ಟು ತೀವ್ರತೆ ಪಡೆದಿದ್ದು, ಗುರುವಾರ ಬೆಳಿಗ್ಗೆ ನೆಲಕ್ಕೆ ಅಪ್ಪಳಿಸುವ ಸಾಧ್ಯತೆ ಇದೆ ಎಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಹೇಳಿದೆ.

ಸೌರಾಷ್ಟ್ರ–ಕಛ್ ಪ್ರದೇಶದಲ್ಲಿ ಜೋರಾದ ಗಾಳಿ ಬೀಸುತ್ತಿದ್ದು, ಭಾರಿ ಮಳೆಯಾಗಿದೆ. ಕಛ್ ಜಿಲ್ಲೆಯ ಜಖೌ ಬಂದರ ಬಳಿ ಬಿಪೊರ್‌ಜಾಯ್ ಚಂಡಮಾರುತ ನೆಲಕ್ಕೆ ಅಪ್ಪಳಿಸುವ ಸಾಧ್ಯತೆಯ ಹಿನ್ನೆಲೆಯಲ್ಲಿ ಕರಾವಳಿಯ ಭಾಗದಲ್ಲಿನ 50 ಸಾವಿರ ಜನರನ್ನು ತಾತ್ಕಾಲಿಕ ಪರಿಹಾರ ಕೇಂದ್ರಗಳಿಗೆ ಸ್ಥಳಾಂತರಿಸಲಾಗಿದೆ ಎಂದು ಅಧಿಕಾರಿಗಳು ಬುಧವಾರ ಹೇಳಿದ್ದಾರೆ.

'ತೀವ್ರ ಸ್ವರೂಪದ ಚಂಡಮಾರುತ'ವಾಗಿ ಪರಿವರ್ತನೆಗೊಂಡಿರುವ ಬಿಪೊರ್‌ಜಾಯ್, ಗಂಟೆಗೆ 150 ಕಿ.ಮೀ. ವೇಗದಲ್ಲಿ ಮುನ್ನುಗ್ಗುತ್ತಿದೆ' ಎಂದು ಐಎಂಡಿ ಹೇಳಿದೆ.

'ಅರಬ್ಬಿ ಸಮುದ್ರದಲ್ಲಿ ಅಬ್ಬರವನ್ನುಂಟು ಮಾಡಿರುವ ಬಿಪೊರ್‌ಜಾಯ್ ಚಂಡಮಾರುತ, ಬುಧವಾರ ಗುಜರಾತ್‌ನ ಕಛ್ ಪ್ರದೇಶ, ಪಾಕಿಸ್ತಾನದ ದಕ್ಷಿಣದತ್ತ ತಿರುಗುವ ಮುನ್ಸೂಚನೆ ನೀಡಿತ್ತು. ಈ ಹಂತದಲ್ಲಿ ಮಾರುತಗಳು ಸ್ವಲ್ಪ ದುರ್ಬಲಗೊಂಡಂತೆ ಕಂಡುಬಂದಿದ್ದರೂ, ಬಿರುಗಾಳಿ, ಭಾರಿ ಮಳೆ ತರುವ ಅಪಾಯ ಇದ್ದೇ ಇದೆ' ಎಂದು ಇಲಾಖೆ ಹೇಳಿದೆ.

ಅಂಕಿ-ಅಂಶಗಳು

- **12** ಪರಿಹಾರ ಕಾರ್ಯದಲ್ಲಿ ನಿರತ ಎಸ್‌ಡಿಆರ್‌ಎಫ್ ತಂಡಗಳು
- **15** ರಕ್ಷಣಾ ಕಾರ್ಯದಲ್ಲಿ ನಿರತ ಎನ್‌ಡಿಆರ್‌ಎಫ್ ತಂಡಗಳು
- **115** ನಿಯೋಜನೆಗೊಂಡಿರುವ ಲೋಕೋಪಯೋಗಿ ಇಲಾಖೆ ತಂಡಗಳು
- **397** ಕರಾವಳಿ ಜಿಲ್ಲೆಗಳಲ್ಲಿ ನಿಯೋಜನೆಯಾಗಿರುವ ವಿದ್ಯುತ್ ಇಲಾಖೆ ತಂಡಗಳು

- 9 ತಾಲ್ಲೂಕುಗಳಲ್ಲಿ 5 ಸೆಂ.ಮೀ.ಗಿಂತ ಹೆಚ್ಚು ಮಳೆ
- ದ್ವಾರಕಾ ಜಿಲ್ಲೆ ಖಂಭಲಿಯಾ ತಾಲ್ಲೂಕಿನಲ್ಲಿ ಗರಿಷ್ಠ 12.1 ಸೆಂ.ಮೀ ಮಳೆ
- ಗುಜರಾತ್‌ನ ಉತ್ತರ ಭಾಗದ ಜಿಲ್ಲೆಗಳಲ್ಲಿ ಗುರುವಾರ ಭಾರಿ ಮಳೆ ಸಾಧ್ಯತೆ
- ಪಶ್ಚಿಮ ರೈಲ್ವೆಯು 69 ರೈಲುಗಳ ಸಂಚಾರವನ್ನು ರದ್ದು ಮಾಡಿದೆ
- ಗೋವಾದಲ್ಲಿ ಜೂನ್ 19ರಿಂದ 22ರ ವರೆಗೆ ನಡೆಯಲಿರುವ ಜಿ–20 ಶೃಂಗಸಭೆ ಮೇಲೆ ಬಿಪೊರ್‌ಜಾಯ್ ಚಂಡಮಾರುತ ಪರಿಣಾಮ ಬೀರದು– ಅಧಿಕಾರಿಗಳ ವಿಶ್ವಾಸ
- ಕಛ್ ಜಿಲ್ಲೆಯಲ್ಲಿ ಬುಧವಾರ ಸಂಜೆ 3.5 ತೀವ್ರತೆಯ ಭೂಕಂಪನ ದಾಖಲಾಗಿದೆ. ಯಾವುದೇ ಜೀವ ಹಾಗೂ ಸ್ವತ್ತುಗಳಿಗೆ ಹಾನಿಯಾದ ವರದಿಯಾಗಿಲ್ಲ
- ಎನ್‌ಡಿಆರ್‌ಎಫ್ ಸಿಬ್ಬಂದಿ ಮನವೊಲಿಸಿದ್ದರಿಂದ ಕಛ್ ಜಿಲ್ಲೆಯ ಸಲಾಯಾ ಗ್ರಾಮದ ಜನರು ತಾತ್ಕಾಲಿಕ ಪರಿಹಾರ ಕೇಂದ್ರಗಳಿಗೆ ತೆರಳಲು ಕೊನೆಗೂ ಒಪ್ಪಿದರು.

ನೆರವಿಗೆ ಭದ್ರತಾಪಡೆಗಳು ಸಿದ್ಧ: ರಾಜನಾಥ್ ಸಿಂಗ್

ನವದೆಹಲಿ (ಪಿಟಿಐ): ರಕ್ಷಣಾ ಸಚಿವ ರಾಜನಾಥ್ ಸಿಂಗ್ ಮೂರು ಭದ್ರತಾ ಪಡೆಗಳ ಮುಖ್ಯಸ್ಥರೊಂದಿಗೆ ಬುಧವಾರ ಮಾತನಾಡಿ, ಬಿಪೊರ್‌ಜಾಯ್ ಚಂಡಮಾರುತದಿಂದಾಗಿ ಕಂಡುಬರುವ ಪರಿಸ್ಥಿತಿ ಎದುರಿಸಲು ಮಾಡಿಕೊಂಡಿರುವ ಸಿದ್ಧತೆ ಕುರಿತು ಚರ್ಚಿಸಿದ್ದಾರೆ.

'ಚಂಡಮಾರುತದಿಂದಾಗಿ ಉದ್ಭವಿಸುವ ಯಾವುದೇ ಪರಿಸ್ಥಿತಿ ಎದುರಿಸುವ ಸಲುವಾಗಿ ಅಧಿಕಾರಿಗಳಿಗೆ ಸಾಧ್ಯವಿರುವ ಎಲ್ಲ ನೆರವು ನೀಡಲು ಮೂರು ಸೇನಾಪಡೆಗಳು ಸನ್ನದ್ಧವಾಗಿವೆ' ಎಂದು ಅವರು ಸಭೆ ಬಳಿಕ ಟ್ವೀಟ್ ಮಾಡಿದ್ದಾರೆ.

ಭುಜ್‌ಗೆ ಮಾಂಡವಿಯಾ ಭೇಟಿ

ಕೇಂದ್ರ ಆರೋಗ್ಯ ಸಚಿವ ಮನ್ಸುಖ್ ಮಾಂಡವಿಯಾ ಅವರು ಭುಜ್‌ನಲ್ಲಿರುವ ವಾಯುನೆಲೆಗೆ ಭೇಟಿ ನೀಡಿ, ಸಿದ್ಧತೆಯನ್ನು ಪರಿಶೀಲಿಸಿದರು.

ನಗರದಲ್ಲಿನ ಕೆ.ಕೆ.ಪಟೇಲ್ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ಭೇಟಿ ನೀಡಿ, ಸನ್ನದ್ಧತೆ ಕುರಿತು ಮಾಹಿತಿ ಪಡೆದರು.

'ವಾಯುಪಡೆಯ 'ಗರುಡ ತುರ್ತು ಸ್ಪಂದನಾ ತಂಡ'ವು ಯಾವುದೇ ಪರಿಸ್ಥಿತಿಯನ್ನು ಎದುರಿಸಲು ಸನ್ನದ್ಧವಾಗಿದೆ. ಚಂಡಮಾರುತದಿಂದ ಸ್ವತ್ತುಗಳು ಹಾಗೂ ಜನರನ್ನು ರಕ್ಷಿಸಲು ನಮ್ಮ ಯೋಧರು ಸಂಪೂರ್ಣ ಸಿದ್ಧರಾಗಿದ್ದಾರೆ' ಎಂದು ಮಾಂಡವಿಯಾ ಹೇಳಿದ್ದಾರೆ.

90 ಮೀ. ಗೋಪುರ ನೆಲಸಮಗೊಳಿಸಿದ ಆಕಾಶವಾಣಿ

ನವದೆಹಲಿ (ಪಿಟಿಐ): ಬಿಪೊರ್‌ಜಾಯ್ ಚಂಡಮಾರುತದಿಂದಾಗಿ ಆಗಬಹುದಾದ ಅವಘಡವನ್ನು ತಪ್ಪಿಸುವ ಉದ್ದೇಶದಿಂದ ಗುಜರಾತ್‌ನ ದ್ವಾರಕಾದಲ್ಲಿರುವ 90 ಮೀಟರ್ ಎತ್ತರದ ಪ್ರಸರಣ ಗೋಪುರವನ್ನು ನೆಲಸಮಗೊಳಿಸಿದ್ದಾಗಿ ಆಕಾಶವಾಣಿ ಬುಧವಾರ ಹೇಳಿದೆ.

'ಚಂಡಮಾರುತ ಗುರುವಾರ ಅಪ್ಪಳಿಸುವ ನಿರೀಕ್ಷೆ ಇದೆ. ಆಸ್ತಿ ಹಾಗೂ ಜೀವ ಹಾನಿಯನ್ನು ತಡೆಯುವ ಸಲುವಾಗಿ ಈ ಕ್ರಮ ಕೈಗೊಳ್ಳಲಾಗಿದೆ' ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಸುರಕ್ಷತೆ ದೃಷ್ಟಿಯಿಂದ ಈ ಗೋಪುರವನ್ನು ನೆಲಸಮಗೊಳಿಸುವಂತೆ ಸೂರತ್‌ನ ರಾಷ್ಟ್ರೀಯ ತಂತ್ರಜ್ಞಾನ ಸಂಸ್ಥೆಯು ಪ್ರಸಾರ ಭಾರತಿಗೆ ಕಳೆದ ಜನವರಿಯಲ್ಲಿಯೇ ಶಿಫಾರಸು ಮಾಡಿತ್ತು ಎಂದು ಮೂಲಗಳು ಹೇಳಿವೆ.

ಸುದ್ದಿ 2 ನಿಮಿಷ

ಏಕಲವ್ಯ ವಸತಿ ಶಾಲೆ: 38 ಸಾವಿರ ಶಿಕ್ಷಕರ ನೇಮಕಕ್ಕೆ ನಿರ್ಧಾರ

ನವದೆಹಲಿ (ಪಿಟಿಐ): ಮುಂದಿನ ಮೂರು ವರ್ಷಗಳಲ್ಲಿ ಏಕಲವ್ಯ ಮಾದರಿ ವಸತಿ ಶಾಲೆಗಳಿಗೆ (ಇಆರ್‌ಎಂಎಸ್) 38 ಸಾವಿರ ಶಿಕ್ಷಕರು ಮತ್ತು ಇತರ ಸಿಬ್ಬಂದಿಯನ್ನು ಕೇಂದ್ರ ಸರ್ಕಾರ ನೇಮಕ ಮಾಡಿಕೊಳ್ಳಲಿದೆ ಎಂದು ಕೇಂದ್ರ ಬುಡಕಟ್ಟು ವ್ಯವಹಾರಗಳ ಸಚಿವ ಅರ್ಜುನ್ ಮುಂಡಾ ಬುಧವಾರ ತಿಳಿಸಿದರು.



ದೇಶದಾದ್ಯಂತ ಇರುವ ಬುಡಕಟ್ಟು ಸಮುದಾಯದ ವಿದ್ಯಾರ್ಥಿಗಳಿಗಾಗಿ 1997–98ರಲ್ಲಿ ಇಂಥ ಶಾಲೆಗಳನ್ನು ಆರಂಭಿಸಲಾಗಿದೆ. ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರದ ಅವಧಿಯಲ್ಲಿ ಇಂಥ ಶಾಲೆಗಳ ಸಂಖ್ಯೆ 109ರಿಂದ 401ಕ್ಕೆ ಏರಿಕೆಯಾಗಿದೆ ಎಂದು ಅವರು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'2025–26ರ ಒಳಗಾಗಿ ದೇಶದಾದ್ಯಂತ ನಿಗದಿತ 740 ಬ್ಲಾಕ್‌ಗಳಲ್ಲಿ ಇಎಂಆರ್‌ಎಸ್ ತೆರೆಯಲು ಸರ್ಕಾರ ಚಿಂತಿಸಿದೆ. ಈಗಾಗಲೇ 693 ಶಾಲೆಗಳು ಮಂಜೂರಾಗಿವೆ' ಎಂದೂ ಅವರು ತಿಳಿಸಿದರು.

ತೆಲಂಗಾಣ: ಸಂಸದ, ಶಾಸಕರ ಸಂಸ್ಥೆಗಳಲ್ಲಿ ಐಟಿ ಶೋಧ

ಹೈದರಾಬಾದ್ (ಪಿಟಿಐ): ತೆಲಂಗಾಣದ ಬಿಆರ್‌ಎಸ್ ಶಾಸಕರಾದ ಪಿ.ಶೇಖರ್ ರೆಡ್ಡಿ, ಎಂ.ಜನಾರ್ದನ ರೆಡ್ಡಿ ಹಾಗೂ ಸಂಸದ ಕೆ.ಪ್ರಭಾಕರ ರೆಡ್ಡಿ ಅವರಿಗೆ ಸೇರಿದ ವಿವಿಧ ಸಂಸ್ಥೆಗಳಲ್ಲಿ ಆದಾಯ ತೆರಿಗೆ ಇಲಾಖೆಯ ಅಧಿಕಾರಿಗಳು ಶೋಧ ನಡೆಸಿದ್ದು, ಶಾಸಕರು–ಸಂಸದರ ತೆರಿಗೆ ಪಾವತಿ ಬಗ್ಗೆ ಪರಿಶೀಲಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ನಾಗರಕರ್ನೂಲ್ ವಿಧಾನಸಭಾ ಕ್ಷೇತ್ರ ಪ್ರತಿನಿಧಿಸುವ ಜನಾರ್ದನರೆಡ್ಡಿ ಅವರಿಗೆ ಸೇರಿದ ಶಾಪಿಂಗ್ ಮಾಲ್‌ನಲ್ಲೂ ಶೋಧ ನಡೆದಿದೆ. ಶೇಖರ್ ರೆಡ್ಡಿ ಭೋಂಗಿರ್ ವಿಧಾನಸಭಾ ಕ್ಷೇತ್ರ ಪ್ರತಿನಿಧಿಸಿದರೆ, ಪ್ರಭಾಕರ್ ರೆಡ್ಡಿ ಮೇದಕ್ ಲೋಕಸಭಾ ಕ್ಷೇತ್ರ ಪ್ರತಿನಿಧಿಸಲಿದ್ದಾರೆ.

'ರಾಜಕೀಯ ಪ್ರೇರಿತ ದಾಳಿಯಿದು. ಬಿಆರ್‌ಎಸ್ ವರ್ಚಸ್ಸು ಕುಂದಿಸಲು ಚುನಾವಣೆಗೂ ಮೊದಲು ಆದಾಯ ತೆರಿಗೆ ಇಲಾಖೆ ಅಧಿಕಾರಿಗಳಿಂದ ಶೋಧ ನಡೆಸಲಾಗುತ್ತಿದೆ. ನಮ್ಮ ಎಲ್ಲಾ ವ್ಯವಹಾರಗಳು ಮುಕ್ತ ಮತ್ತು ಸ್ವಚ್ಛವಾಗಿವೆ' ಎಂದು ಮೇದಕ್ ಸಂಸದ ಪ್ರಭಾಕರ ರೆಡ್ಡಿ ದಾಳಿ ಕುರಿತಂತೆ ಪ್ರತಿಕ್ರಿಯಿಸಿದ್ದಾರೆ.

ಮಣಿಪುರ: ಬಂಡುಕೋರರ ದಾಳಿಗೆ 9 ಮಂದಿ ಸಾವು

ಇಂಫಾಲ್ (ಪಿಟಿಐ): ಜನಾಂಗೀಯ ಸಂಘರ್ಷದಿಂದ ಪ್ರಕ್ಷುಬ್ಧಗೊಂಡಿರುವ ಇಂಫಾಲ್ ಪೂರ್ವ ಜಿಲ್ಲೆಯ ಖಾಮೆನ್‌ಲೋಕ್ ಪ್ರದೇಶದ ಗ್ರಾಮವೊಂದರಲ್ಲಿ ಶಂಕಿತ ಬಂಡುಕೋರರು ನಡೆಸಿದ ದಾಳಿಯಲ್ಲಿ 9 ಮಂದಿ ಮೃತಪಟ್ಟು, 10 ಮಂದಿ ಗಾಯಗೊಂಡಿದ್ದಾರೆ ಎಂದು ಪೊಲೀಸರು ಬುಧವಾರ ತಿಳಿಸಿದ್ದಾರೆ. ಮೈತೇಯಿ ಬುಡಕಟ್ಟು ಜನರ ಪ್ರಾಬಲ್ಯವಿರುವ ಪ್ರದೇಶದಲ್ಲಿ ಈ ಘಟನೆ ನಡೆದಿದೆ.

ಇಂಫಾಲ್ ಪೂರ್ವ ಜಿಲ್ಲೆ ಮತ್ತು ಕಾಂಗ್‌ಪೋಕ್ಪಿ ಜಿಲ್ಲೆಯ ಗಡಿ ಪ್ರದೇಶದಲ್ಲಿರುವ ಖಾಮೆನ್‌ಲೋಕ್ ಗ್ರಾಮದ ಗ್ರಾಮಸ್ಥರನ್ನು ಸುತ್ತುವರಿದ ಶಂಕಿತ ಬಂಡುಕೋರರು ನಸುಕಿನ 1 ಗಂಟೆ ಸುಮಾರಿಗೆ ಅತ್ಯಾಧುನಿಕ ಶಸ್ತ್ರಾಸ್ತ್ರಗಳಿಂದ ದಾಳಿ ನಡೆಸಿದ್ದಾರೆ. ಗುಂಡಿನ ಕಾಳಗದಲ್ಲಿ ಎರಡೂ ಕಡೆಯವರು ಗಾಯಗೊಂಡಿದ್ದು ಅವರನ್ನು ಇಂಫಾಲ್ ಆಸ್ಪತ್ರೆಗೆ ದಾಖಲಿಸಲಾಗಿದೆ. ಮೂವರು ಕಾಣೆಯಾಗಿದ್ದಾರೆ ಎಂದು ಜಿಲ್ಲಾಮಟ್ಟದ ಅಧಿಕಾರಿಗಳು ಹೇಳಿದ್ದಾರೆ.

ಸೋಮವಾರ ರಾತ್ರಿ ಖಾಮೆನ್ ಲೋಕ್ ಪ್ರದೇಶದಲ್ಲಿ ಬಂಡುಕೋರರು ಮತ್ತು ಗ್ರಾಮದ ಸ್ವಯಂಸೇವಕರ ನಡುವೆ ನಡೆದ ಗುಂಡಿನ ಚಕಮಕಿಯಲ್ಲಿ ಒಂಬತ್ತು ಮಂದಿ ಗಾಯಗೊಂಡಿದ್ದರು. ಬಿಷ್ಣುಪುರ ಜಿಲ್ಲೆಯ ಫೋಗಕ್‌ಚೋ ಇಕಾಹಿಯಲ್ಲಿ ಭದ್ರತಾ ಪಡೆ ಮತ್ತು ಕೂಕಿ ಬಂಡುಕೋರರ ನಡುವೆ ಮಂಗಳವಾರ ಗುಂಡಿನ ಚಕಮಕಿ ನಡೆದಿತ್ತು ಎಂದು ಪೊಲೀಸರು ಹೇಳಿದ್ದಾರೆ.

ಗೋರಕ್ಷಕರಿಂದ ಯುವಕನ ಹತ್ಯೆ

ಪ್ರಜಾವಾಣಿ ವಾರ್ತೆ

ಮುಂಬೈ: ನಾಸಿಕ್ ಜಿಲ್ಲೆಯಲ್ಲಿ ಗೋ ಕಳ್ಳಸಾಗಣೆ ಆರೋಪದ ಮೇಲೆ ಯುವಕನೊಬ್ಬನನ್ನು 'ಗೋರಕ್ಷಕರ' ಗುಂಪು ಥಳಿಸಿ ಕೊಂದಿದೆ.

ನಾಸಿಕ್‌ನ ಇಗತ್‌ಪುರಿಯ ಗಿರಿಧಾಮದಲ್ಲಿ ಈ ಕೃತ್ಯ ನಡೆದಿದ್ದು, ಮೃತನನ್ನು ಠಾಣೆ ಜಿಲ್ಲೆಯ ಪಡ್ಘಾ ನಿವಾಸಿ ಲುಕ್ಮಾನ್ ಸುಲೇಮಾನ್ ಅನ್ಸಾರಿ ಎಂದು ಗುರುತಿಸಲಾಗಿದೆ.

ಪೊಲೀಸರು ಚೇತನ್ ಸೋನವಾನೆ, ಪ್ರದೀಪ್ ಅಧೋಲೆ, ಭಾಸ್ಕರ್ ಭಗತ್, ಶೇಖರ್ ಗಾಯಕ್ವಾಡ್, ವಿಜಯ್ ಭಾಗ್ಡೆ ಮತ್ತು ರೂಪೇಶ್ ಜೋಶಿ ಎಂಬುವರನ್ನು ಬಂಧಿಸಿದ್ದಾರೆ.

ಜೂನ್ 8 ರಂದು ಲುಕ್ಮಾನ್ ತನ್ನ ಸ್ನೇಹಿತರಾದ ಅತೀಕ್ ಪಡ್ಡಿ ಮತ್ತು ಅಕ್ವೀಲ್ ಗವಂಡಿ ಅವರೊಂದಿಗೆ ಶಹಾಪುರದ ರೈತ ಮಹಿಳೆಯಿಂದ ಸುಮಾರು ₹ 18 ಸಾವಿರಕ್ಕೆ ಒಂದು ಎತ್ತು, ಎರಡು ಹಸುಗಳು ಮತ್ತು ಒಂದು ಕರುವನ್ನು ಖರೀದಿಸಿದ್ದರು. ಟೆಂಪೊದಲ್ಲಿ ಅವುಗಳನ್ನು ಸಾಗಿಸುತ್ತಿದ್ದ ವೇಳೆ ಶಹಪುರದ ವಿಹಿಗಾಂವ್‌ನಲ್ಲಿ ಗೋರಕ್ಷಕರ ಗುಂಪು ಅವರನ್ನು ತಡೆದಿದೆ.

ನಂತರ ಅವರನ್ನು ನಿರ್ಜನ ಸ್ಥಳಕ್ಕೆ ಕರೆದೊಯ್ದು ಥಳಿಸಿದ್ದರು. ಲುಕ್ಮಾನ್ ತೀವ್ರವಾಗಿ ಗಾಯಗೊಂಡರು. ಇಬ್ಬರು ಸ್ನೇಹಿತರು ಅಲ್ಲಿಂದ ತಪ್ಪಿಸಿಕೊಂಡು ಓಡಿ ಹೋದರು.

ಲುಕ್ಮಾನ್ ಕಮರಿಗೆ ಬಿದ್ದು ಮೃತಪಟ್ಟಿದ್ದಾರೆ ಎಂದು ಆರೋಪಿಗಳು ತಿಳಿಸಿದ್ದಾರೆ. ಆದರೆ, ಪೊಲೀಸರು ಈ ಬಗ್ಗೆ ತನಿಖೆ ನಡೆಸುತ್ತಿದ್ದಾರೆ. ಜೂನ್ 10 ರಂದು ಕಮರಿಯಲ್ಲಿ ಅವರ ಶವ ಪತ್ತೆಯಾಗಿತ್ತು.

'ಸೆಂಥಿಲ್ ಬಂಧನ: ರಾಜಕೀಯ ಕಿರುಕುಳ'

ಕೇಂದ್ರ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದ ವಿರೋಧ ಪಕ್ಷಗಳು ● ಮಲ್ಲಿಕಾರ್ಜುನ ಖರ್ಗೆ ಖಂಡನೆ

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ತಮಿಳುನಾಡಿನ ಇಂಧನ ಸಚಿವ ವಿ. ಸೆಂಥಿಲ್ ಬಾಲಾಜಿ ಅವರನ್ನು ಜಾರಿ ನಿರ್ದೇಶನಾಲಯ (ಇ.ಡಿ) ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಬಂಧಿಸಿದ ಬಳಿಕ ವಿರೋಧ ಪಕ್ಷಗಳ ನಾಯಕರು ಕೇಂದ್ರ ಸರ್ಕಾರದ ಕ್ರಮವನ್ನು ತೀವ್ರವಾಗಿ ಖಂಡಿಸಿದ್ದು, 'ಇದು ರಾಜಕೀಯ ಕಿರುಕುಳ ಮತ್ತು ದ್ವೇಷ ರಾಜಕಾರಣ' ಎಂದು ಟೀಕಿಸಿವೆ.

ಡಿಎಂಕೆ ಸರ್ಕಾರದ ಬೆನ್ನಿಗೆ ನಿಂತಿರುವ ಕಾಂಗ್ರೆಸ್, ಎಎಪಿ, ಸಮಾಜವಾದಿ ಪಕ್ಷ, ತೃಣಮೂಲ ಕಾಂಗ್ರೆಸ್, ಶಿವಸೇನಾ (ಯುಬಿಟಿ), ಜೆಡಿಯು, ಸಿಪಿಐ, ಪಿಡಿಪಿ, ಡೆಮಾಕ್ರಟಿಕ್ ಪ್ರೋಗ್ರೆಸಿವ್ ಆಜಾದ್ ಪಕ್ಷದ ನಾಯಕರು ಕೇಂದ್ರ ಸರ್ಕಾರ ಮತ್ತು ಅದರ ತನಿಖಾ ಸಂಸ್ಥೆಗಳ ವಿರುದ್ಧ ವಾಗ್ದಾಳಿ ಮಾಡಿದ್ದಾರೆ.

ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ 'ಇಂತಹ ನಿರ್ಲಜ್ಜ ನಡೆಗಳಿಗೆ ಪ್ರತಿಪಕ್ಷದ ಯಾರೂ ಹೆದರುವುದಿಲ್ಲ' ಎಂದು ಮೋದಿ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದರು.

'ಬಾಲಾಜಿ ಅವರ ಬಂಧನ ಮತ್ತು ಇ.ಡಿ ದಾಳಿ ಖಂಡನೀಯ. ಅಲ್ಲದೇ, ಬಾಲಾಜಿ ಅವರ ಆರೋಗ್ಯ ಸ್ಥಿತಿಯ ಬಗ್ಗೆ ತಿಳಿದಿದ್ದರೂ ಕೇಂದ್ರದ ತನಿಖಾ ಏಜೆನ್ಸಿ ಅವರನ್ನು ಬಂಧಿಸಿರುವುದು ಅಮಾನವೀಯ ಮತ್ತು ಆಕ್ಷೇಪಾರ್ಹವಾದುದು. ಇ.ಡಿ ಮತ್ತು ಸಿಬಿಐ ಭ್ರಷ್ಟರ ಬೆನ್ನತ್ತುತ್ತಿಲ್ಲ. ಎಲ್ಲ ಭ್ರಷ್ಟರು ಬಿಜೆಪಿಯಲ್ಲಿ ಆಶ್ರಯ ಪಡೆಯುತ್ತಿದ್ದಾರೆ. ಸಿಬಿಐ ಮತ್ತು ಇ.ಡಿಯನ್ನು ಬಿಜೆಪಿ ಸೇನೆ ಎಂದು ಮರುನಾಮಕರಣ ಮಾಡಬೇಕು' ಎಂದು ಎಎಪಿ ರಾಷ್ಟ್ರೀಯ ಸಂಚಾಲಕ ಮತ್ತು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಟೀಕಿಸಿದ್ದಾರೆ.



ತಮಿಳುನಾಡು ಸಚಿವ ವಿ. ಸೆಂಥಿಲ್ ಬಾಲಾಜಿ ಅವರಿಗೆ ಎದೆನೋವು ಕಾಣಿಸಿಕೊಂಡ ಹಿನ್ನೆಲೆಯಲ್ಲಿ ಅವರನ್ನು ಆಸ್ಪತ್ರೆಗೆ ಕರೆದೊಯ್ಯಲಾಯಿತು –ಪಿಟಿಐ ಚಿತ್ರ

> **ಸೆಂಥಿಲ್ ಅವರನ್ನು ರಾತೋರಾತ್ರಿ ಬಂಧಿಸುವ ಅಗತ್ಯ ಏನಿತ್ತು? ಅವರೇನೂ ತಲೆಮರೆಸಿಕೊಳ್ಳುವ ವ್ಯಕ್ತಿಯಾಗಿರಲಿಲ್ಲ. ತಪ್ಪು ಮಾಡಿದ್ದರೆ ಬೆಳಿಗ್ಗೆ ವಿಚಾರಣೆ ನಡೆಸಿ ಕ್ರಮ ಕೈಗೊಳ್ಳಬಹುದಿತ್ತು**
> **ಮಲ್ಲಿಕಾರ್ಜುನ ಖರ್ಗೆ,** ಎಐಸಿಸಿ ಅಧ್ಯಕ್ಷ

ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ತಮಿಳುನಾಡು ಪ್ರವಾಸದಲ್ಲಿದ್ದಾಗ ಬಿಜೆಪಿಯು 25 ಲೋಕಸಭಾ ಸ್ಥಾನಗಳನ್ನು ಗೆಲ್ಲುತ್ತದೆ ಎಂದು ಹೇಳಿಕೆ ನೀಡಿದ ಕೆಲವು ದಿನಗಳ ನಂತರ ಈ ದಾಳಿ ನಡೆದಿದೆ ಎಂದು ಸಿಪಿಐ ಪ್ರಧಾನ ಕಾರ್ಯದರ್ಶಿ ಡಿ. ರಾಜಾ ಹೇಳಿದ್ದಾರೆ.

'ಇ.ಡಿ ಮತ್ತು ಸಿಬಿಐ ದಾಖಲಿಸಿರುವ ಪ್ರಕರಣಗಳ ಪೈಕಿ ಸುಮಾರು ಶೇ 95ರಷ್ಟು ಪ್ರಕರಣಗಳು ವಿರೋಧ ಪಕ್ಷದವರ ವಿರುದ್ಧದಾಗಿವೆ ಎನ್ನುವ ಅಂಕಿಅಂಶಗಳನ್ನು ಮಾಧ್ಯಮಗಳು ವರದಿ ಮಾಡಿವೆ. ಇದರಲ್ಲಿ ಆಶ್ಚರ್ಯವೇನಿಲ್ಲ' ಎಂದು ಎನ್‌ಸಿಪಿ ಕಾರ್ಯಾಧ್ಯಕ್ಷೆ ಸುಪ್ರಿಯಾ ಸುಳೆ ಹೇಳಿದರು.

ಹಿರಿಯ ವಕೀಲ ಮತ್ತು ರಾಜ್ಯಸಭಾ ಸದಸ್ಯ ಕಪಿಲ್ ಸಿಬಲ್ 'ಇದು ಅತ್ಯಂತ ಆಘಾತಕಾರಿ. ರಾಜ್ಯ ಮತ್ತು ಕೇಂದ್ರದಲ್ಲಿ ಅವರದೇ ಸರ್ಕಾರ ಇದ್ದಾಗ ಅದು 'ಡಬಲ್ ಎಂಜಿನ್' ಸರ್ಕಾರವಾಗುತ್ತದೆ. ಆದರೆ, ಕೇಂದ್ರದಲ್ಲಿ ಬಿಜೆಪಿ ಇದ್ದು, ರಾಜ್ಯದಲ್ಲಿ ಮತ್ತೊಂದು ಪಕ್ಷ ಅಧಿಕಾರದಲ್ಲಿದ್ದರೆ ಅದು ಬಿಜೆಪಿ ಪಾಲಿಗೆ 'ಡಬಲ್ ಬ್ಯಾರೆಲ್ ಸರ್ಕಾರ'ವಾಗುತ್ತಿದೆ. ಹಾಗಾಗಿ ಅವರು (ಬಿಜೆಪಿ), ಇ.ಡಿ ಮತ್ತು ಸಿಬಿಐಯನ್ನು 'ಡಬಲ್ ಬ್ಯಾರೆಲ್' (ಜೋಡಿ ನಳಿಕೆ ಬಂದೂಕು) ಆಗಿ ಬಳಸಿಕೊಳ್ಳುತ್ತಿದ್ದಾರೆ ಎಂದು ಕಿಡಿಕಾರಿದ್ದಾರೆ.

ಇ.ಡಿ ಅಧಿಕಾರಿಗಳು ವಿಚಾರಣೆ ನೆಪದಲ್ಲಿ ನಾಟಕ ಪ್ರದರ್ಶಿಸುತ್ತಿದ್ದಾರೆ. ಬಾಲಾಜಿ ಅವರಿಗೆ ದೈಹಿಕ ಮತ್ತು ಮಾನಸಿಕವಾಗಿ ತೊಂದರೆ ನೀಡುತ್ತಿದ್ದಾರೆ ಎಂದು ತಮಿಳುನಾಡು ಮುಖ್ಯಮಂತ್ರಿ ಎಂ. ಕೆ. ಸ್ಟಾಲಿನ್ ಆರೋಪಿಸಿದ್ದಾರೆ.

ಬಿಜೆಪಿ ವಾಗ್ದಾಳಿ: ಭ್ರಷ್ಟಾಚಾರ ಪ್ರಕರಣದಲ್ಲಿ ವಿ. ಸೆಂಥಿಲ್ ಬಾಲಾಜಿ ಅವರು ಬಂಧನಕ್ಕೊಳಗಾದ ನಂತರ ತಮಿಳುನಾಡಿನ ಡಿಎಂಕೆ ಸರ್ಕಾರದ ವಿರುದ್ಧ ಬಿಜೆಪಿ ಬುಧವಾರ ವಾಗ್ದಾಳಿ ನಡೆಸಿದೆ.

ವಿರೋಧ ಪಕ್ಷಗಳು ಅಧಿಕಾರದಲ್ಲಿರುವ ರಾಜ್ಯಗಳಲ್ಲಿ ವಿವಿಧ ಉದ್ಯೋಗ ನೇಮಕಾತಿಗೆ ದರ ಪಟ್ಟಿಗಳನ್ನು ಹೊಂದಿವೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ನೀಡಿರುವ ಹೇಳಿಕೆ ಉಲ್ಲೇಖಿಸಿ, ಬಿಜೆಪಿ ವಕ್ತಾರ ಸೈಯದ್ ಜಫರ್ ಇಸ್ಲಾಮ್ ಅವರು ಬಿಜೆಪಿಯೇತರ ರಾಜ್ಯ ಸರ್ಕಾರಗಳ ಮೇಲೆ ಟೀಕಾ ಪ್ರಹಾರ ನಡೆಸಿದ್ದಾರೆ.

ವಿ.ಸೆಂಥಿಲ್ ನ್ಯಾಯಾಂಗ ವಶಕ್ಕೆ

ಒಂದನೇ ಪುಟದಿಂದ...

ಸೆಂಥಿಲ್ ಅವರು ದಾಖಲಾಗಿರುವ ಆಸ್ಪತ್ರೆಗೆ ಸೆಷನ್ಸ್ ನ್ಯಾಯಾಲಯದ ಪ್ರಧಾನ ನ್ಯಾಯಾಧೀಶರಾದ ಎಸ್. ಅಲಿ ಅವರು ಭೇಟಿ ನೀಡಿ ಪರಿಶೀಲಿಸಿದರು. ಬಳಿಕ ಎರಡೂ ಕಡೆಯವರು ಸಲ್ಲಿಸಿದ್ದ ಮೂರು ಅರ್ಜಿಗಳ ಆದೇಶವನ್ನೂ ನ್ಯಾಯಾಲಯ ಕಾಯ್ದಿರಿಸಿತು. ಸಚಿವರು ಮಧ್ಯಂತರ ಜಾಮೀನು ಮತ್ತು ಖಾಸಗಿ ಆಸ್ಪತ್ರೆಗೆ ಸ್ಥಳಾಂತರಿಸಲು ಅನುಮತಿ ಕೋರಿ ಅರ್ಜಿ ಸಲ್ಲಿಸಿದ್ದರೆ, ಸೆಂಥಿಲ್ ಅವರನ್ನು ಪೊಲೀಸ್ ವಶಕ್ಕೆ ಒಪ್ಪಿಸುವಂತೆ ಕೋರಿ ಇ.ಡಿ ಅರ್ಜಿ ಸಲ್ಲಿಸಿದೆ.

'ಉದ್ಯೋಗಕ್ಕಾಗಿ ಹಣ' ಹಗರಣಕ್ಕೆ ಸಂಬಂಧಿಸಿ ಬಾಲಾಜಿ ಅವರ ವಿರುದ್ಧ ತನಿಖೆ ನಡೆಸಲು ಕಳೆದ ತಿಂಗಳು ಸುಪ್ರೀಂ ಕೋರ್ಟ್ ಪೊಲೀಸ್ ಮತ್ತು ಇ.ಡಿಗೆ ಅನುಮತಿ ನೀಡಿತ್ತು.

ಮುಖ್ಯಮಂತ್ರಿ ಭೇಟಿ: ಆಸ್ಪತ್ರೆಯಲ್ಲಿ ದಾಖಲಾಗಿರುವ ಸಚಿವ ಸೆಂಥಿಲ್ ಬಾಲಾಜಿ ಅವರನ್ನು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಭೇಟಿಯಾಗಿ ಆರೋಗ್ಯ ವಿಚಾರಿಸಿದರು. 'ತನಿಖೆ ಹೆಸರಿನಲ್ಲಿ ಇ.ಡಿ ನಾಟಕವಾಡುತ್ತಿದೆ. ಅಧಿಕಾರಿಗಳು ಬಾಲಾಜಿ ಅವರಿಗೆ ದೈಹಿಕ ಮತ್ತು ಮಾನಸಿಕ ಹಿಂಸೆ ನೀಡಿದ್ದಾರೆ' ಎಂದು ಅವರು ಆರೋಪಿಸಿದರು.

ಬೀದಿ ನಾಯಿ ದಾಳಿ: ಸುಪ್ರೀಂ ಕೋರ್ಟ್ ಮೊರೆ ಹೋಗಲು ಕೇರಳ ನಿರ್ಧಾರ

ತಿರುವನಂತಪುರ (ಪಿಟಿಐ): ಬೀದಿ ನಾಯಿಗಳು ಜನರ ಮೇಲೆ ದಾಳಿ ನಡೆಸುತ್ತಿರುವ ಪ್ರಕರಣಗಳು ಹೆಚ್ಚುತ್ತಿರುವ ಕಾರಣ ಬೀದಿ ನಾಯಿಗಳ ನಿರ್ವಹಣೆಗೆ ಸಂಬಂಧಿಸಿದ ನಿಯಮಗಳಲ್ಲಿ ಬದಲಾವಣೆ ತರುವಂತೆ ಕೋರಿ ಸುಪ್ರೀಂಕೋರ್ಟ್ ಮೆಟ್ಟಿಲೇರುವುದಾಗಿ ಕೇರಳ ಸರ್ಕಾರ ಬುಧವಾರ ತಿಳಿಸಿದೆ.

ರಾಜ್ಯ ಸರ್ಕಾರ ಜಾರಿಗೆ ತಂದಿರುವ ಕುಟುಂಬಶ್ರೀ ಯೋಜನೆಯಲ್ಲಿ ಇರುವ ನಿರ್ಬಂಧಗಳನ್ನು ತೆರವು ಮಾಡುವಂತೆಯೂ ನ್ಯಾಯಾಲಯದ ಎದುರು ಮನವಿ ಮಾಡಲಾಗುತ್ತದೆ ಎಂದು ಸಚಿವ ಎಂ.ಬಿ.ರಾಜೇಶ್ ತಿಳಿಸಿದರು.

ಮಹಾರಾಷ್ಟ್ರ: ಶಿಂದೆ ಸರ್ಕಾರದ ಜಾಹೀರಾತಿನಲ್ಲಿ ಭಾವಚಿತ್ರ ಸಮರ

ಮುಂಬೈ (ಪಿಟಿಐ): ಪಕ್ಷದ ಸಂಸ್ಥಾಪಕ ದಿವಂಗತ ಬಾಳಾ ಸಾಹೇಬ್ ಠಾಕ್ರೆ ಅವರ ಚಿತ್ರ ಆಡಳಿತಾರೂಢ ಮೈತ್ರಿಕೂಟ ಸರ್ಕಾರದ ಜಾಹೀರಾತಿನಲ್ಲಿ ಇಲ್ಲದ ಕಾರಣ ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ್ ಶಿಂದೆ ನೇತೃತ್ವದ ಶಿವಸೇನೆಯನ್ನು 'ದೆಹಲಿಯ ಗುಲಾಮ' ಎಂದು ಬುಧವಾರ ಶಿವಸೇನಾ (ಠಾಕ್ರೆ ಬಣ) ಟೀಕಿಸಿದೆ.

ಪ್ರಧಾನಿ ನರೇಂದ್ರ ಮೋದಿ ಮತ್ತು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಭಯದಿಂದಾಗಿ ಬಾಳಾ ಠಾಕ್ರೆ ಅವರ ಚಿತ್ರ ಕಾಣೆಯಾಗಿದೆ ಎಂದು ಪಕ್ಷದ ಮುಖವಾಣಿ 'ಸಾಮ್ನಾ'ದ ಸಂಪಾದಕೀಯ ಹೇಳಿದೆ.

ಮಂಗಳವಾರ ರಾಜ್ಯದ ಪ್ರಮುಖ ಪತ್ರಿಕೆಗಳಲ್ಲಿ ಪ್ರಕಟವಾದ ಪೂರ್ಣ ಪುಟದ ಜಾಹೀರಾತಿನಲ್ಲಿ ಜನಪ್ರಿಯತೆಯಲ್ಲಿ ಉಪಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಅವರಿಗಿಂತ ಶಿಂಧೆ ಮುಂದಿದ್ದಾರೆ ಎಂದು ಸಮೀಕ್ಷೆಯನ್ನು ಉಲ್ಲೇಖಿಸಲಾಗಿದೆ. ಅದರಲ್ಲಿ ಫಡಣವೀಸ್ ಅವರ ಫೋಟೋ ಇರಲಿಲ್ಲ. ಆದರೆ, ಅದರ ಟ್ಯಾಗ್‌ಲೈನ್ 'ದೇಶದಲ್ಲಿ ಮೋದಿ, ಮಹಾರಾಷ್ಟ್ರದಲ್ಲಿ ಶಿಂದೆ' ಎಂದು ಬರೆಯಲಾಗಿತ್ತು.

'ಬಾಳಾ ಸಾಹೇಬ್ ಠಾಕ್ರೆ ಅವರನ್ನು ನಿರ್ಲಕ್ಷಿಸುವುದರ ಹಿಂದಿನ ಉದ್ದೇಶವೇನು?. ನಿಜವಾದ ಶಿವಸೇನೆ ಎಂದು ಹೇಳಿಕೊಳ್ಳುವವರು ತಮ್ಮ ಬಣವನ್ನು ಮೋದಿ ಅವರ ಪಾದದ ಬಳಿ ಇರಿಸಿದ್ದಾರೆ' ಎಂದು ಸಂಪಾದಕೀಯ ಹೇಳಿದೆ.

ಈ ಬೆಳವಣಿಗೆ ನಡುವೆ ಬಾಳಾ ಸಾಹೇಬ್ ಠಾಕ್ರೆ ಮತ್ತು ದೇವೇಂದ್ರ ಫಡಣವೀಸ್ ಅವರನ್ನು ಒಳಗೊಂಡ ಭಾವಚಿತ್ರ ಮೈತ್ರಿಕೂಟದ ಜಾಹೀರಾತು ಬುಧವಾರ ಮರಾಠಿ ದಿನಪತ್ರಿಕೆಗಳಲ್ಲಿ ಕಾಣಿಸಿಕೊಂಡಿತು.

ದ್ವೇಷ ಭಾಷಣಗಳ ವಿರುದ್ಧ ಎಫ್‌ಐಆರ್ ದಾಖಲಿಸುವಂತೆ ಕೋರಿ ಸಲ್ಲಿಸಿದ್ದ ಅರ್ಜಿ

ಮಹಾಪಂಚಾಯತ್‌ಗೆ ತಡೆ ನೀಡಲು ನಕಾರ

ನವದೆಹಲಿ (ಪಿಟಿಐ): ಉತ್ತರಾಖಂಡದಲ್ಲಿ ಹಿಂದೂ ಸಂಘಟನೆಗಳು ಕರೆ ನೀಡಿರುವ 'ಮಹಾಪಂಚಾಯತ್' ತಡೆಯಲು ಮತ್ತು ನಿರ್ದಿಷ್ಟ ಸಮುದಾಯದ ಸದಸ್ಯರನ್ನು ಗುರಿಯಾಗಿಸಿ ಮಾಡುವ ದ್ವೇಷ ಭಾಷಣಗಳ ವಿರುದ್ಧ ಎಫ್‌ಐಆರ್ ದಾಖಲಿಸುವಂತೆ ಕೋರಿ ಸಲ್ಲಿಸಿದ್ದ ಅರ್ಜಿಯನ್ನು ವಿಚಾರಣೆಗೆ ಪರಿಗಣಿಸಲು ಸುಪ್ರೀಂ ಕೋರ್ಟ್ ಬುಧವಾರ ನಿರಾಕರಿಸಿದೆ.



'ಮಹಾಪಂಚಾಯತ್' ಗುರುವಾರ ನಡೆಯಲಿದೆ.

ನ್ಯಾಯಮೂರ್ತಿಗಳಾದ ವಿಕ್ರಮ್ ನಾಥ್ ಮತ್ತು ಅಹ್ಸಾನುದ್ದೀನ್ ಅಮಾನುಲ್ಲಾ ಅವರನ್ನು ಒಳಗೊಂಡ ರಜಾ ಕಾಲದ ಪೀಠವು, ವಕೀಲ ಶಾರೂಖ್ ಆಲಂ ಅವರಿಗೆ ಕಾನೂನಿನಲ್ಲಿ ಲಭ್ಯವಿರುವ ಪರಿಹಾರ ಪಡೆಯುವಂತೆ ಹಾಗೂ ಹೈಕೋರ್ಟ್ ಅಥವಾ ಸಂಬಂಧಿತ ಇತರ ಯಾವುದೇ ಪ್ರಾಧಿಕಾರ ಸಂಪರ್ಕಿಸಲು ಸ್ವಾತಂತ್ರ್ಯ ನೀಡಿತು.

'ಹೈಕೋರ್ಟ್ ಮತ್ತು ಜಿಲ್ಲಾಡಳಿತ ಸಂಪರ್ಕಿಸಬಹುದು. ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವುದು ರಾಜ್ಯ ಸರ್ಕಾರದ ಜವಾಬ್ದಾರಿ. ಈ ವಿಷಯವನ್ನು ಅವರ ಗಮನಕ್ಕೆ ತಂದರೆ ಯಾವುದೇ ಕ್ರಮ ತೆಗೆದುಕೊಳ್ಳುವುದಿಲ್ಲ ಎಂದು ನೀವು ಏಕೆ ಭಾವಿಸುತ್ತೀರಿ. ಹೈಕೋರ್ಟ್ ಮೇಲೆ ನಿಮಗೆ ನಂಬಿಕೆ ಇರಬೇಕು' ಎಂದು ನ್ಯಾಯಪೀಠ ಹೇಳಿದೆ.

ಅರ್ಜಿ ವಿಚಾರಣೆ ಇಂದು (ನೈನಿತಾಲ್ ವರದಿ): ಉತ್ತರಕಾಶಿ ಜಿಲ್ಲೆಯ ಪುರೋಲಾದಲ್ಲಿ ಗುರುವಾರ ಹಿಂದೂ ಸಂಘಟನೆಗಳು ಕರೆ ನೀಡಿರುವ 'ಮಹಾಪಂಚಾಯತ್'ಗೆ ತಡೆ ಕೋರಿ ಸಲ್ಲಿಸಿರುವ ಅರ್ಜಿ ವಿಚಾರಣೆಯನ್ನು ಉತ್ತರಾಖಂಡ ಹೈಕೋರ್ಟ್ ನಡೆಸಲಿದೆ.

ಈ ವಿಷಯ ಕುರಿತು ಅರ್ಜಿ ಸ್ವೀಕರಿಸಲು ಸುಪ್ರೀಂ ಕೋರ್ಟ್ ನಿರಾಕರಿಸಿದ ನಂತರ ಅಸೋಸಿಯೇಷನ್ ಫಾರ್ ದಿ ಪ್ರೊಟೆಕ್ಷನ್ ಆಫ್ ಸಿವಿಲ್ ರೈಟ್ಸ್ ಹೈಕೋರ್ಟ್ ಮೊರೆ ಹೋಗಿದೆ.

ಮೇ 26ರಂದು ಪುರೋಲಾದಲ್ಲಿ ಅಪ್ರಾಪ್ತ ವಯಸ್ಸಿನ ಹಿಂದೂ ಹುಡುಗಿಯನ್ನು ಅಪಹರಿಸಲು ಪ್ರಯತ್ನಿಸಿದ ಆರೋಪದ ಮೇಲೆ ಅಲ್ಪಸಂಖ್ಯಾತ ಸಮುದಾಯದ ಒಬ್ಬರು ಸೇರಿದಂತೆ ಇಬ್ಬರನ್ನು ಬಂಧಿಸಲಾಗಿತ್ತು. ಬಳಿಕ ಈ ಪ್ರದೇಶದಲ್ಲಿ ಉದ್ವಿಗ್ನ ಸ್ಥಿತಿ ನಿರ್ಮಾಣಗೊಂಡಿದೆ.

ಸ್ಥಳೀಯ ವ್ಯಾಪಾರಿಗಳು, ಪ್ರದಾನ ಸಂಘಟನಾ, ವಿಶ್ವ ಹಿಂದೂ ಪರಿಷತ್ ಮತ್ತು ಬಜರಂಗದಳದಂತಹ ಸಂಘಟನೆಗಳು ಇದು 'ಲವ್ ಜಿಹಾದ್' ಪ್ರಕರಣ ಎಂದು ಕರೆದಿದ್ದು, ಇದರ ವಿರುದ್ಧ ಜೂನ್ 15 ರಂದು 'ಮಹಾಪಂಚಾಯತ್' ಗೆ ಕರೆ ನೀಡಿವೆ.

ಪುರೋಲಾದಲ್ಲಿ ನಿಷೇಧಾಜ್ಞೆ ಜಾರಿಗೊಳಿಸಲಾಗಿದ್ದು, ಮಹಾಪಂಚಾಯತ್‌ಗೆ ಅನುಮತಿ ನೀಡಿಲ್ಲ.

'ಹೈಬ್ರಿಡ್ ಪಿಂಚಣಿ ಯೋಜನೆ' ಶಿಫಾರಸು ಸಾಧ್ಯತೆ

ಒಂದನೇ ಪುಟದಿಂದ...

'ಖಾತರಿ ಪಿಂಚಣಿ ಯೋಜನೆ': ಆಂಧ್ರಪ್ರದೇಶ ಮುಖ್ಯಮಂತ್ರಿ ವೈ.ಎಸ್.ಜಗನ್‌ಮೋಹನ್ ರೆಡ್ಡಿ ನೇತೃತ್ವದಲ್ಲಿ ನಡೆದ ಸಚಿವ ಸಂಪುಟ ಸಭೆಯು 'ಖಾತರಿ ಪಿಂಚಣಿ ಯೋಜನೆ'ಗೆ ಕಳೆದ ವಾರ ಅನುಮೋದನೆ ನೀಡಿದೆ.

ಒಪಿಎಸ್ ಮತ್ತು ಎನ್‌ಪಿಎಸ್‌ನ ಅಂಶಗಳನ್ನು ಈ ಯೋಜನೆ ಒಳಗೊಂಡಿದೆ. ಯಾವುದೇ ಕಡಿತಗಳು ಇಲ್ಲದೆಯೇ, ರಾಜ್ಯ ಸರ್ಕಾರಿ ನೌಕರನು ಕೊನೆಯ ಮೂಲವೇತನದ ಶೇ 50ರಷ್ಟು ಮೊತ್ತ ಪಿಂಚಣಿಯಾಗಿ ಸಿಗುವ ಖಾತರಿಯನ್ನು ಈ ಯೋಜನೆ ನೀಡುತ್ತದೆ.

ಈ ಪಿಂಚಣಿ ಪಡೆಯಲು ನೌಕರರು ಪ್ರತಿತಿಂಗಳು ತಮ್ಮ ಮೂಲವೇತನದ ಶೇ 10ರಷ್ಟು ಮೊತ್ತವನ್ನು ನೀಡಬೇಕು. ಅದಕ್ಕೆ ತಕ್ಕಷ್ಟು ಮೊತ್ತವನ್ನು ರಾಜ್ಯ ಸರ್ಕಾರ ಭರಿಸುತ್ತದೆ.

ಹಳೆ ಪಿಂಚಣಿ ಯೋಜನೆಯನ್ನು ಮತ್ತೆ ಜಾರಿಗೊಳಿಸುವುದಾಗಿ ರಾಜಸ್ಥಾನ, ಛತ್ತೀಸಗಢ, ಜಾರ್ಖಂಡ, ಪಂಜಾಬ್ ಹಾಗೂ ಹಿಮಾಚಲ-ಪ್ರದೇಶ ಸರ್ಕಾರಗಳು ಈಗಾಗಲೇ ಕೇಂದ್ರಕ್ಕೆ ತಿಳಿಸಿವೆ. ಎನ್‌ಪಿಎಸ್ ಅಡಿ ಸಂಗ್ರಹಗೊಂಡಿರುವ ನಿಧಿಯನ್ನು ಮರಳಿಸುವಂತೆಯೂ ಮನವಿ ಮಾಡಿವೆ.

ವೈದ್ಯಕೀಯ ಪದವಿ ಕೋರ್ಸ್‌ಗಳ ಪ್ರವೇಶಕ್ಕೆ ನಡೆದ 'ನೀಟ್–2023'

ಎಕ್ಸ್‌ಪರ್ಟ್ ಕಾಲೇಜಿನ ಬೈರೇಶ್‌ಗೆ 48ನೇ ರ್‍ಯಾಂಕ್

ಪ್ರಜಾವಾಣಿ ವಾರ್ತೆ

ಮಂಗಳೂರು: ವೈದ್ಯಕೀಯ ಪದವಿ ಕೋರ್ಸ್‌ಗಳ ಪ್ರವೇಶಕ್ಕೆ ನಡೆದ 'ನೀಟ್–2023'ನಲ್ಲಿ ಮಂಗಳೂರಿನ ಎಕ್ಸ್‌ಪರ್ಟ್ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿ ಬೈರೇಶ್ ಎಸ್.ಎಚ್. ರಾಷ್ಟ್ರಮಟ್ಟದಲ್ಲಿ 48ನೇ ರ್‍ಯಾಂಕ್ ಪಡೆದಿದ್ದಾರೆ.

ಕೋಲಾರದ ಹರೀಶ್ ಎಸ್.ಬಿ. ಹಾಗೂ ರಾಧಮ್ಮ ಕೆ. ದಂಪತಿಯ ಪುತ್ರರಾದ ಬೈರೇಶ್, ಮಂಗಳೂರಿನ ಎಕ್ಸ್‌ಪರ್ಟ್ ಕಾಲೇಜಿನಲ್ಲಿ ವ್ಯಾಸಂಗ ಮಾಡಿದ್ದು, ನೀಟ್ ಪರೀಕ್ಷೆಯಲ್ಲಿ 720 ಅಂಕಗಳಲ್ಲಿ 710 ಅಂಕ ಗಳಿಸಿದ್ದಾರೆ.

1,307 ವಿದ್ಯಾರ್ಥಿಗಳು ಅರ್ಹ: ನೀಟ್ ಬರೆದಿದ್ದ ಎಕ್ಸ್‌ಪರ್ಟ್ ಕಾಲೇಜಿನ ಒಟ್ಟು 1,365 ವಿದ್ಯಾರ್ಥಿಗಳಲ್ಲಿ 1,307 ವಿದ್ಯಾರ್ಥಿಗಳು ವೈದ್ಯಕೀಯ ಪ್ರವೇಶಕ್ಕೆ ಅರ್ಹತೆ ಪಡೆದಿದ್ದಾರೆ. ಜನರಲ್ ಮೆರಿಟ್ ವಿಭಾಗದಲ್ಲಿ ಕಾಲೇಜಿನ ಶಾಮಿಕ್ ಅಬ್ದುಲ್ ರೆಹಮಾನ್ 180ನೇ ರ್‍ಯಾಂಕ್, ಅರ್ನವ್ ಕಾಮತ್ 307ನೇ ರ್‍ಯಾಂಕ್, ರೋಹಿತ್ ಗೆಜ್ಜೆ 868ನೇ ರ್‍ಯಾಂಕ್ ಪಡೆದಿದ್ದಾರೆ ಎಂದು ಎಕ್ಸ್‌ಪರ್ಟ್ ಸಮೂಹ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಪ್ರೊ. ನರೇಂದ್ರ ಎಲ್. ನಾಯಕ್ ತಿಳಿಸಿದ್ದಾರೆ.


ಬೈರೇಶ್ ಅವರಿಗೆ ಸಿಹಿ ತಿನಿಸುತ್ತಿರುವ ತಾಯಿ ರಾಧಮ್ಮ ಕೆ.

ಮೂವರು ವಿದ್ಯಾರ್ಥಿಗಳು 700ಕ್ಕಿಂತ ಅಧಿಕ ಅಂಕ ಪಡೆದರೆ, 8 ವಿದ್ಯಾರ್ಥಿಗಳು 675ಕ್ಕಿಂತ ಅಧಿಕ, 22 ವಿದ್ಯಾರ್ಥಿಗಳು 650 ಕ್ಕಿಂತ ಅಧಿಕ, 42 ವಿದ್ಯಾರ್ಥಿಗಳು 625ಕ್ಕಿಂತ ಅಧಿಕ, 79 ವಿದ್ಯಾರ್ಥಿಗಳು 600ಕ್ಕಿಂತ ಅಧಿಕ, 161 ವಿದ್ಯಾರ್ಥಿಗಳು 550ಕ್ಕಿಂತ ಅಧಿಕ, 275 ವಿದ್ಯಾರ್ಥಿಗಳು 500ಕ್ಕಿಂತ ಅಧಿಕ, 575 ವಿದ್ಯಾರ್ಥಿಗಳು 400ಕ್ಕಿಂತ ಅಧಿಕ ಅಂಕ ಪಡೆದಿದ್ದಾರೆ.

ವೈಬ್ರೆಂಟ್ ಅಕಾಡೆಮಿ ವಿದ್ಯಾರ್ಥಿಗಳ ಸಾಧನೆ

ಪ್ರಜಾವಾಣಿ ವಾರ್ತೆ

ಮೂಡುಬಿದಿರೆ (ದಕ್ಷಿಣ ಕನ್ನಡ): ಕಲ್ಲಬೆಟ್ಟುವಿನಲ್ಲಿರುವ ವೈಬ್ರೆಂಟ್ ಅಕಾಡೆಮಿ ನೀಟ್ ಪರೀಕ್ಷೆಯಲ್ಲಿ ಮೊದಲ ವರ್ಷದಲ್ಲೇ ಉತ್ತಮ ಫಲಿತಾಂಶ ದಾಖಲಿಸಿದೆ.

ಸಂಸ್ಥೆಯ 7 ವಿದ್ಯಾರ್ಥಿಗಳು 600ಕ್ಕಿಂತ ಹೆಚ್ಚು ಮತ್ತು 102 ವಿದ್ಯಾರ್ಥಿಗಳು 500ಕ್ಕಿಂತ ಹೆಚ್ಚು ಅಂಕ ಪಡೆದಿದ್ದಾರೆ. 150 ವಿದ್ಯಾರ್ಥಿಗಳು ಸರ್ಕಾರಿ ಕೋಟಾದಡಿ ವೈದ್ಯಕೀಯ ಪ್ರವೇಶ ಪಡೆಯಲು ಬೇಕಿರುವಷ್ಟು ಅಂಕ ಪಡೆದಿದ್ದಾರೆ.

ಸ್ವಾತಿ ಕೆ. ಸುನಧೋಳಿ 651, ಟಿ.ಆರ್. ಮನ್ವಿತಾ 629, ಡಿ.ಧನುಷ್ 614, ಯತೀಶ್ ಗೌಡ 606, ಕೆ.ಆರ್. ಲಕ್ಷ್ಮಿ 606, ವೈಷ್ಣವಿ ಡಿ.ರಾವ್ 603, ಎಸ್.ಆರ್.ಭರತ್ ಗೌಡ 602, ಎಂ. ಸಿದ್ಧಾರೂಢ 595, ಜಸ್ಟನ್ ಮೆನೇಜಸ್ 592, ವಿ.ವಿನಯ್ ಕುಮಾರ್ 588, ಬಿ.ಛಾಯಾ 587, ವಿ.ಕೆ. ಶಿವರಾಜ್ 583, ಕೆ.ಎಲ್. ಪೃಥ್ವಿ 581, ರವಿ ನಿಂಗಪ್ಪ 580, ಮಾರುತಿ ಮಹದೇವು 580, ಪ್ರಿತಮ್ ಡಿ ಅರಸ್ 579, ಬಿ.ಎನ್. ತೇಜಶ್ರೀ 577, ರಮೇಶ್ 574, ಪಿ.ಎಂ. ಪ್ರಸನ್ನ 573, ಎ.ಪಿ. ಸೋಮಶೇಖರ್ 558, ಅನಿಕೇತ್ ಸಜ್ಜನ್ 568, ಸಚಿನ್ ಅರವಿಂದ್ 567, ಉಮ್ಮೆ ಸಾನಿಯಾ 566, ಸಮಿಉಲ್ಲಾ ಶಂಶುದ್ದಿನ್ 556, ಸಾಕ್ಷಿ ಸಜ್ಜನ್ 554, ವಿ. ಸಾಗರ 552, ಕೆ.ಬಿ.ತೇಜಸ್ವಿನಿ 551 ಎಸ್.ಎಂ.ಅಪೂರ್ವ 551 ಅಂಕಗಳನ್ನು ಪಡೆದು ಉತ್ತಮ ಸಾಧನೆ ಮಾಡಿದ್ದಾರೆ.

ಕಳೆದ ಸಾಲಿನ ನೀಟ್ ಪರೀಕ್ಷೆಯಲ್ಲಿ ಕಡಿಮೆ ಅಂಕ ಪಡೆದಿದ್ದ ವಿದ್ಯಾರ್ಥಿಗಳು ವೈಬ್ರೆಂಟ್ ನೀಟ್ ಲಾಂಗ್ ಟರ್ಮ್ ತರಬೇತಿಗೆ ಸೇರಿ ತಮ್ಮ ಅಂಕಗಳನ್ನು ಉತ್ತಮ ಪಡಿಸಿಕೊಂಡಿದ್ದಾರೆ ಎಂದು ಸಂಸ್ಥೆಯ ಪ್ರಕಟಣೆ ತಿಳಿಸಿದೆ.

'ಸರ್ಕಾರಿ ಕೋಟಾ ಪ್ರವೇಶಕ್ಕೆ 684 ಮಂದಿ ಅರ್ಹ'

ಪ್ರಜಾವಾಣಿ ವಾರ್ತೆ

ಮೂಡುಬಿದಿರೆ (ದಕ್ಷಿಣ ಕನ್ನಡ): ವೈದ್ಯಕೀಯ ಪದವಿ ಪ್ರವೇಶಕ್ಕೆ ನಡೆದ ನೀಟ್-2023ರಲ್ಲಿ ಆಳ್ವಾಸ್ ಪದವಿಪೂರ್ವ ಕಾಲೇಜಿನ 1,525 ವಿದ್ಯಾರ್ಥಿಗಳು ವೈದ್ಯಕೀಯ ಮತ್ತು ದಂತ ವೈದ್ಯಕೀಯ ವಿಭಾಗದಲ್ಲಿ ಪ್ರವೇಶಕ್ಕೆ ಅರ್ಹತೆ ಪಡೆದಿದ್ದಾರೆ. ಕಾಲೇಜಿನ ಫಲಿತಾಂಶ ಶೇ 87.99ರಷ್ಟು ದಾಖಲಾಗಿದೆ.

'1,733 ವಿದ್ಯಾರ್ಥಿಗಳು ಹಾಜರಾಗಿದ್ದರು. ಒಟ್ಟು 720 ಅಂಕದಲ್ಲಿ 650ಕ್ಕಿಂತ ಹೆಚ್ಚು ಅಂಕ 5 ವಿದ್ಯಾರ್ಥಿಗಳು, 600ಕ್ಕಿಂತ ಅಧಿಕ 32 ವಿದ್ಯಾರ್ಥಿಗಳು, 500ಕ್ಕಿಂತ ಅಧಿಕ 206 ವಿದ್ಯಾರ್ಥಿಗಳು ಪಡೆದಿದ್ದು, 400ಕ್ಕಿಂತ ಅಧಿಕ ಅಂಕವನ್ನು 684 ವಿದ್ಯಾರ್ಥಿಗಳು ಗಳಿಸಿದ್ದಾರೆ. ಇವರೆಲ್ಲ ಸರ್ಕಾರಿ ಸಾಮಾನ್ಯ ಕೋಟಾದ ಅಡಿಯಲ್ಲಿ ಪ್ರವೇಶ ಪಡೆಯಲು ಅರ್ಹತೆ ಪಡೆದಿದ್ದಾರೆ' ಎಂದು ಆಳ್ವಾಸ್ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಡಾ.ಎಂ. ಮೋಹನ ಆಳ್ವ ಹೇಳಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಅಖಿಲ ಭಾರತ ಮಟ್ಟದಲ್ಲಿ ಕೆಟಗರಿ ವಿಭಾಗದಲ್ಲಿ ನಂದಿನಿ 171ನೇ ರ್‍ಯಾಂಕ್, ಪ್ರಶಾಂತ್ ಪಾಟೀಲ 249, ಚಂದ್ರು ಕುಮಾರ್ ಎಂ. 560 ಹಾಗೂ ಎನ್. ವಿನೀತ್ 1,076ನೇ ರ್‍ಯಾಂಕ್ ಪಡೆದಿದ್ದು, ಪರಿಶಿಷ್ಟ ಜಾತಿ ಕೆಟಗರಿಯಲ್ಲಿ 70 ವಿದ್ಯಾರ್ಥಿಗಳು, ಪರಿಶಿಷ್ಟ ಪಂಗಡ ಕೆಟಗರಿಯಲ್ಲಿ 44 ವಿದ್ಯಾರ್ಥಿಗಳು, ಹೈದರಾಬಾದ್ ಕರ್ನಾಟಕ ಕೆಟಗರಿಯಲ್ಲಿ 313 ವಿದ್ಯಾರ್ಥಿಗಳು, 400ಕ್ಕಿಂತ ಅಧಿಕ ಅಂಕ ಗಳಿಸಿದ್ದು, ಸರ್ಕಾರಿ ಕೋಟಾದಡಿ ಪ್ರವೇಶ ಪಡೆಯಬಹುದಾಗಿದೆ. 500 ಅಂಕಗಳಿಗಿಂತ ಅಧಿಕ ಪಡೆದ 206 ವಿದ್ಯಾರ್ಥಿಗಳಲ್ಲಿ 138 ವಿದ್ಯಾರ್ಥಿಗಳು ಸಂಸ್ಥೆಯ ದತ್ತು ಶಿಕ್ಷಣ ಸ್ವೀಕಾರದಡಿಯಲ್ಲಿ ವಿದ್ಯಾಭ್ಯಾಸ ಮಾಡಿದವರು. ಸುಮಾರು ₹2 ಕೋಟಿಯಷ್ಟು ಹಣವನ್ನು ಈ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ಸಂಸ್ಥೆಯು ಭರಿಸಿದೆ' ಎಂದು ತಿಳಿಸಿದರು.

ಆಳ್ವಾಸ್ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯ ಎಂ. ಸದಾಕತ್, ನೀಟ್ ಸಂಯೋಜಕ ಪ್ರದೀಪ್ ಕುಮಾರ್ ಹಾಗೂ ಭೌತವಿಜ್ಞಾನ ವಿಭಾಗದ ಮುಖ್ಯಸ್ಥ ವಾಸುದೇವ ರೆಡ್ಡಿ ಇದ್ದರು.

ಶ್ರೀಚೈತನ್ಯ ಇನ್‌ಸ್ಟಿಟ್ಯೂಟ್ಸ್‌ಗೆ ಹಲವು ರ್‍ಯಾಂಕ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೈದ್ಯಕೀಯ ಕೋರ್ಸ್‌ಗಳ ಪ್ರವೇಶಕ್ಕಾಗಿ ರಾಷ್ಟ್ರೀಯ ಪರೀಕ್ಷಾ ಸಂಸ್ಥೆ ನಡೆಸುವ ರಾಷ್ಟ್ರೀಯ ಅರ್ಹತಾ ಮತ್ತು ಪ್ರವೇಶ ಪರೀಕ್ಷೆಯಲ್ಲಿ (ನೀಟ್) 'ಶ್ರೀಚೈತನ್ಯ ಎಜ್ಯುಕೇಷನಲ್ ಇನ್‌ಸ್ಟಿಟ್ಯೂಟ್ಸ್'ನ ಹಲವು ವಿದ್ಯಾರ್ಥಿ ಮೊದಲ ಸ್ಥಾನ ಸೇರಿದಂತೆ ಹಲವು ವಿದ್ಯಾರ್ಥಿಗಳು ಒಂದು ಸಾವಿರ ಒಳಗಿನ ರ್‍ಯಾಂಕ್‌ಗಳಿಸಿದ್ದಾರೆ.

ಸಂಸ್ಥೆಯ ಪ್ರದೇಶದ ವಿದ್ಯಾರ್ಥಿ ವರುಣ್ ಚಕ್ರವರ್ತಿ 720ಕ್ಕೆ 720 ಅಂಕಗಳನ್ನು ಪಡೆದು ಅಖಿಲ ಭಾರತಮಟ್ಟದಲ್ಲಿ ಮೊದಲ ರ್‍ಯಾಂಕ್‌ಗಳಿಸಿದ್ದಾರೆ. ಆಕಾಶ್ ಜಿ, ಸೇಶಾ ಸಾಯಿಅಜಯ್ ತಲಾ 705, ಧನುಶ್ ಎಚ್.ಎಸ್ 690, ಆಕಾಶ್ ಗೋವಿಂದಯ್ಯ, ಎಂ.ವೆನ್ನೆಲಾ ರೆಡ್ಡಿ, ಸ್ರಹಸ್ ದಿನ್ನೆಪಲ್ಲಿ ತಲಾ 685 ಅಂಕಗಳನ್ನು ಗಳಿಸಿದ್ದಾರೆ.

ಉನ್ನತ ರ್‍ಯಾಂಕ್ ಗಳಿಸಿದ ವಿದ್ಯಾರ್ಥಿಗಳನ್ನು ಸಂಸ್ಥೆಯ ನಿರ್ದೇಶಕಿ ಸುಷ್ಮಾ ಬೊಪಣ್ಣ ಮತ್ತು ಸಂಸ್ಥೆಯ ಸಿಬ್ಬಂದಿ ಅಭಿನಂದನೆ ಸಲ್ಲಿಸಿದ್ದಾರೆ.


ವೆನ್ನೆಲ್ಲಾ ರೆಡ್ಡಿ


ಸಹಸ್ರ ದಿನ್ನೆಪಲ್ಲಿ


ಧನುಷ್


ಆಕಾಶ್ ಜಿ.


ಆಕಾಶ್ ಗೋವಿಂದಯ್ಯ


ಸೇಶ ಸಾಯಿ ಅಜಯ್

ಶೇ 50 ವೈದ್ಯಕೀಯ ಸೀಟುಗಳು ಸರ್ಕಾರಿ ಕೋಟಾ: ಶಿಫಾರಸು

ಬೆಂಗಳೂರು: ಖಾಸಗಿ ವೈದ್ಯಕೀಯ ಕಾಲೇಜುಗಳ ಶೇ 50 ಸೀಟುಗಳನ್ನು ಸರ್ಕಾರಿ ಕೋಟಾಕ್ಕೆ ತೆಗೆದುಕೊಳ್ಳುವಂತೆ ಕರ್ನಾಟಕ ವೃತ್ತಿಪರ ಕಾಲೇಜುಗಳ ಶುಲ್ಕ ನಿಯಂತ್ರಣ ಸಮಿತಿ ಸರ್ಕಾರಕ್ಕೆ ಶಿಫಾರಸು ಮಾಡಿದೆ. ಖಾಸಗಿ ವೈದ್ಯಕೀಯ ಶಿಕ್ಷಣ ಸಂಸ್ಥೆಗಳಲ್ಲಿನ ಶೇ 50ರಷ್ಟು ಸೀಟುಗಳ ಶುಲ್ಕ ಸರ್ಕಾರಿ ಕಾಲೇಜುಗಳ ಶುಲ್ಕಕ್ಕೆ ಸಮನಾಗಿರಬೇಕೆಂಬ ರಾಷ್ಟ್ರೀಯ ವೈದ್ಯಕೀಯ ಆಯೋಗದ ಆದೇಶ ಆಧರಿಸಿ ಶಿಫಾರಸು ಮಾಡಿರುವ ನ್ಯಾ. ಸುಭಾಷ್ ಬಿ.ಅಡಿ ಸಮಿತಿ ಈ ನಿರ್ಧಾರವನ್ನು ಈ ವರ್ಷದಿಂದಲೇ ಅಳವಡಿಸಿಕೊಳ್ಳಬೇಕು ಎಂದು ಹೇಳಿದೆ.

₹500 ಕೋಟಿಯ ಭೂಮಿ ಖಾಸಗಿ ಪಾಲು

ಒಂದನೇ ಪುಟದಿಂದ...

1959ರಲ್ಲಿ ಕೂಡ ಸರ್ಕಾರಿ ಖರಾಬು– ಕಲ್ಲುಗುಟ್ಟೆ ಎಂದು ಸರ್ವೆ ದಾಖಲೆಯಲ್ಲಿ ನಮೂದಾಗಿದೆ. ಮರು ಸರ್ವೆ ಕೂಡ ಆಗಿದೆ. ಸಾಗುವಳಿ ಮಾಡುತ್ತಿದ್ದು, ಭೂಮಿ ತಮ್ಮದೆಂದು ಹೇಳುವವರು ಈ ದಾಖಲೆಯನ್ನು ಪ್ರಶ್ನಿಸಿಲ್ಲ.

'ಈ ಪ್ರದೇಶವು ಕಲ್ಲುಗುಟ್ಟೆಗಳಿಂದ ಕೂಡಿದ್ದ ಖರಾಬು ಪ್ರದೇಶ ಎಂದು ಸಮಿತಿಯ ಸ್ಥಳ ಪರಿಶೀಲನೆಯಿಂದ ದೃಢಪಟ್ಟಿದೆ. ಈ ಜಮೀನು ವ್ಯವಸಾಯಕ್ಕೆ ಯೋಗ್ಯವಾದ ಭೂಮಿ ಅಲ್ಲ. ಪ್ರತಿವಾದಿಗಳಿಗೆ ಜಮೀನಿನ ಮೇಲೆ ಯಾವುದೇ ರೀತಿಯ ಸ್ವಾಧೀನದ ಹಕ್ಕು ಇಲ್ಲ. ಆದ್ದರಿಂದ ಸರ್ಕಾರ ಜಮೀನನ್ನು ವಶಕ್ಕೆ ಪಡೆದುಕೊಳ್ಳಬೇಕು' ಎಂದು 2016ರ ಜೂನ್ 29ರಂದು ಭೂ ನ್ಯಾಯಮಂಡಳಿ ಅಂದಿನ ತಹಶೀಲ್ದಾರ್‌ಗೆ ಆದೇಶಿಸಿತ್ತು.

ಎನ್. ನಾಗರಾಜ ಅಂದು ಭೂ ನ್ಯಾಯಮಂಡಳಿಯ ಅಧ್ಯಕ್ಷರಾಗಿದ್ದರು. ಕೆ.ಎಂ. ಗೋಪಾಲಕೃಷ್ಣ, ವಿಜಯಕುಮಾರ್, ಸಿ. ನರೇಂದ್ರಬಾಬು, ಉಮಾದೇವಿ ಸದಸ್ಯರಾಗಿದ್ದರು. 57 ವರ್ಷಗಳ ಕಾನೂನು ಹೋರಾಟದ ನಂತರ, ಈ ಆದೇಶದಂತೆ ಜಿಲ್ಲಾಧಿಕಾರಿ ನೇತೃತ್ವದಲ್ಲಿ ಒತ್ತುವರಿ ತೆರವುಗೊಳಿಸಿ, ಸರ್ಕಾರದ ವಶಕ್ಕೆ ಪಡೆಯಲಾಗಿತ್ತು.

ನಂತರ, ಪ್ರತಿವಾದಿಗಳು ಹೈಕೋರ್ಟ್‌ಗೆ ಮನವಿ ಸಲ್ಲಿಸಿದರು. 2019ರ ಸೆ.12ರಂದು ನ್ಯಾಯಾಲಯದ ಆದೇಶದಂತೆ ಭೂ ನ್ಯಾಯಮಂಡಳಿ ಮರುವಿಚಾರಣೆ ಆರಂಭಿಸಿತ್ತು. ಈ ಜಮೀನಿನ ಮಧ್ಯೆ ಬಿಬಿಎಂಪಿ 3 ಎಕರೆ ಪ್ರದೇಶದಲ್ಲಿ ರಸ್ತೆ ಮಾಡಿದ್ದು, 2 ಎಕರೆ 8 ಗುಂಟೆ ಪ್ರದೇಶದಲ್ಲಿ ಕಟ್ಟಡ ತ್ಯಾಜ್ಯವಿದೆ. 1 ಎಕರೆ 20 ಗುಂಟೆ ಕಲ್ಲುಬಂಡೆ ಇದ್ದು, ಉಳಿದ ಜಾಗ ಕೃಷಿ ಮತ್ತು ಹೈನುಗಾರಿಕೆ ನಡೆಸಲಾಗುತ್ತಿದೆ ಎಂಬುದು ಸ್ಥಳ ಪರಿಶೀಲನೆಯಿಂದ ಕಂಡುಬಂದಿದೆ. ಹೀಗಾಗಿ, ಬಿಬಿಎಂಪಿ ರಸ್ತೆ ಮತ್ತು ಬಂಡೆ ಪ್ರದೇಶವನ್ನು ಹೊರತುಪಡಿಸಿ ಉಳಿದ ಜಮೀನನ್ನು ಕೃಷಿ ಮಾಡುತ್ತಿದ್ದು, ಅದು ಕೃಷಿಗೆ ಯೋಗ್ಯ ಭೂಮಿ ಎಂದು ಭೂ ನ್ಯಾಯಮಂಡಳಿಯ ಸದಸ್ಯರಾದ ಎಂ. ನಾಗರಾಜ, ಉಮೇಶ, ಸಿ. ನರಸಿಂಹಮೂರ್ತಿ, ವಿ. ಸೋಮಶೇಖರ್ ಅಭಿಪ್ರಾಯಪಟ್ಟಿದ್ದಾರೆ.

ಉಪವಿಭಾಗಾಧಿಕಾರಿಯೂ ಆಗಿರುವ ಭೂ ನ್ಯಾಯಮಂಡಳಿಯ ಅಧ್ಯಕ್ಷರಾದ ಎ.ಎನ್. ರಘುನಂದನ್ ಇದಕ್ಕೆ ವ್ಯತಿರಿಕ್ತವಾಗಿ, 'ಕಂದಾಯ ದಾಖಲೆಗಳ ಪ್ರಕಾರ ಖರಾಬು ಎಂಬುದಾಗಿ ವರ್ಗೀಕರಣ ಆಗಿರುವುದರಿಂದ ಮಂಜೂರು ಮಾಡಲು ಅವಕಾಶ ಇಲ್ಲ' ಎಂದು ಅಭಿಪ್ರಾಯ ನೀಡಿದ್ದಾರೆ.

ಇಷ್ಟಾದರೂ, 2023ರ ಫೆ.27ರಂದು ಭೂ ನ್ಯಾಯಮಂಡಳಿಯು ನಾಲ್ಕು ಸದಸ್ಯರ ಬಹುಮತದೊಂದಿಗೆ, ಜಮೀನನ್ನು 'ಕೃಷಿ ನಡೆಸುತ್ತಿದ್ದ ಅರ್ಜಿದಾರರಿಗೆ' ಅದಿಭೋಗತ್ವವನ್ನು ಮಂಜೂರು ಮಾಡಲು ತೀರ್ಮಾನಿಸಿದೆ.

ಪ್ರಕರಣದ ಹಿನ್ನೆಲೆ

- 'ಖಾಸಗಿ ವ್ಯಕ್ತಿಯೊಬ್ಬರು 40 ವರ್ಷಗಳಿಂದ ಸರ್ಕಾರಿ ಖರಾಬು ಜಮೀನನ್ನು ವಾಣಿಜ್ಯ ಚಟುವಟಿಕೆಗೆ ದುರ್ಬಳಕೆ ಮಾಡುತ್ತಿದ್ದಾರೆ' ಎಂದು ವಕೀಲ ಕೆ.ದಿವಾಕರ್ ಹಾಗೂ ಸ್ಥಳೀಯ ನಿವಾಸಿ ರಾಮಣ್ಣ ಅವರಿಂದ ಜಿಲ್ಲಾಧಿಕಾರಿ, ತಹಶೀಲ್ದಾರ್‌ಗೆ ದೂರು.
- ಚಿಕ್ಕಹನುಮಯ್ಯ ಎಂಬವರು ಪಂತರಪಾಳ್ಯ ಗ್ರಾಮಕ್ಕೆ ಜೋಡಿದಾರರು ಆಗಿದ್ದರು. ಅವರಿಗೆ 100 ಎಕರೆ ಜಾಗ ಇತ್ತು. ಗ್ರಾಮವನ್ನು ಇನಾಂ ಗ್ರಾಮ ಎಂದು 1959ರಲ್ಲಿ ಘೋಷಿಸಲಾಯಿತು. ಆಗ ಜೋಡಿದಾರರೆಲ್ಲ ಜಾಗ ಕಳೆದುಕೊಂಡರು.
- ಚಿಕ್ಕಹನುಮಯ್ಯ ಅವರು ಅರ್ಜಿ ಸಲ್ಲಿಸಿ ಜಾಗ ಪಡೆದರು. ಅದರ ಜತೆಗೆ 24 ಎಕರೆ 37 ಗುಂಟೆ ಜಾಗವನ್ನೂ ವಿಶೇಷ ಜಿಲ್ಲಾಧಿಕಾರಿ ಮಂಜೂರು ಮಾಡಿದರು.
- ಇದನ್ನು ಪ್ರಶ್ನಿಸಿ ಸಾರ್ವಜನಿಕರು ಮೈಸೂರು ಕಂದಾಯ ಮೇಲ್ಮನವಿ ಪ್ರಾಧಿಕಾರಕ್ಕೆ ಮನವಿ ಸಲ್ಲಿಸಿದ್ದರು.

ರವಿಪ್ರಕಾಶ್‌ಗೆ ವಿಎಸ್‌ಕೆ ಪ್ರಶಸ್ತಿ

ಬೆಂಗಳೂರು: 'ಪ್ರಜಾವಾಣಿ' ಮುಖ್ಯ ವರದಿಗಾರ ರವಿಪ್ರಕಾಶ್ ಎಸ್. ಸೇರಿ ಆರು ಪತ್ರಕರ್ತರನ್ನು 'ವಿಶ್ವ ಸಂವಾದ ಕೇಂದ್ರ'ದ (ವಿಎಸ್‌ಕೆ) ಮಾಧ್ಯಮ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.


ರವಿಪ್ರಕಾಶ್

ರವಿಪ್ರಕಾಶ್ ಎಸ್. ಮತ್ತು ಸುವರ್ಣ ನ್ಯೂಸ್‌ನ ಜಯಪ್ರಕಾಶ್ ಶೆಟ್ಟಿ ಅವರು ತಿ.ತಾ. ಶರ್ಮ ಪತ್ರಿಕೋದ್ಯಮ ಪ್ರಶಸ್ತಿ, ಶಿವಮೊಗ್ಗದ 'ಅಜೇಯ ಪತ್ರಿಕೆ' ಎಂ. ಶ್ರೀನಿವಾಸನ್ ಅವರು ಬೆ.ಸು.ನಾ. ಮಲ್ಯ ಪತ್ರಿಕೋದ್ಯಮ ಪ್ರಶಸ್ತಿ, ಹೊಸದಿಗಂತದ ಹೆಬ್ರಿ ಬಾಲಕೃಷ್ಣ ಮಲ್ಯ ಮತ್ತು ವಿಕ್ರಮ ವಾರಪತ್ರಿಕೆಯ ಕಾ. ರಮಾನಂದ ಆಚಾರ್ಯ ಅವರು ಹೊ.ವೆ. ಶೇಷಾದ್ರಿ ಅಂಕಣಕಾರ ಪ್ರಶಸ್ತಿ, ಮೀಡಿಯಾ ಮಾಸ್ಟರ್ಸ್‌ನ ಎಂ.ಎಸ್. ರಾಘವೇಂದ್ರ ಅವರು ವಿ.ಎಸ್.ಕೆ. ಡಿಜಿಟಲ್ ಮಾಧ್ಯಮ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

ಜೂನ್ 25ರಂದು ಬಸವನಗುಡಿಯ ಬಿಎಂಎಸ್ ಎಂಜಿನಿಯರಿಂಗ್ ಕಾಲೇಜು ಸಭಾಂಗಣದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ಕುಲಪತಿ ನಿರಂಜನ ವಾನಳ್ಳಿ, ರಾಷ್ಟ್ರೀಯ ಸ್ವಯಂಸೇವಕ ಸಂಘದ ದಕ್ಷಿಣ– ಮಧ್ಯ ಕ್ಷೇತ್ರೀಯ ಕಾರ್ಯವಾಹ ನಾ. ತಿಪ್ಪೇಸ್ವಾಮಿ ಪ್ರಶಸ್ತಿ ಪ್ರದಾನ ಮಾಡುವರು ಎಂದು ಪ್ರಕಟಣೆ ತಿಳಿಸಿದೆ.

ಅನ್ನಭಾಗ್ಯ ಹತ್ತಿಕ್ಕಲು ಕೇಂದ್ರದ ಷಡ್ಯಂತ್ರ

ಒಂದನೇ ಪುಟದಿಂದ...

ಬೇರೆ ರಾಜ್ಯಗಳಿಂದ ಖರೀದಿಸಬೇಕಾಗಿದೆ. ತಮ್ಮ ಬಳಿ ಅಕ್ಕಿ ಇಲ್ಲ ಎಂದು ಪಂಜಾಬ್ ಹೇಳಿದೆ. ಛತ್ತೀಸಗಢ ಮತ್ತು ತೆಲಂಗಾಣ ರಾಜ್ಯಗಳ ಮುಖ್ಯಮಂತ್ರಿಗಳ ಜತೆ ದೂರವಾಣಿ ಮೂಲಕ ಮಾತನಾಡಿದ್ದೇನೆ. ನೋಡೋಣ ಎಂದಿದ್ದಾರೆ. ಆ ರಾಜ್ಯಗಳ ಜತೆ ಮಾತುಕತೆಗೆ ಆಹಾರ ಸಚಿವ ಕೆ.ಎಚ್. ಮುನಿಯಪ್ಪ ಅಲ್ಲಿಗೆ ತೆರಳಲಿದ್ದಾರೆ ಎಂದರು.

'ಹೆಚ್ಚುವರಿ 5 ಕೆ.ಜಿ ಅಕ್ಕಿ ನೀಡುವ ಯೋಜನೆ ಪ್ರಕಟಿಸಿದ ಬಳಿಕ ಭಾರತೀಯ ಆಹಾರ ನಿಗಮದ ಬೆಂಗಳೂರು ವಿಭಾಗದ ಉಪ ವ್ಯವಸ್ಥಾಪಕ ನಿರ್ದೇಶಕರಿಗೆ ನಮ್ಮ ಅಧಿಕಾರಿಗಳು ಪತ್ರ ಬರೆದರು. ಅದಕ್ಕೆ ಪ್ರತಿಕ್ರಿಯಿಸಿದ ನಿಗಮ ಅಧಿಕಾರಿಗಳು ನಿಗಮದ ಬಳಿ ಅಕ್ಕಿ ಇದೆ. 2.8 ಲಕ್ಷ ಟನ್ ಅಕ್ಕಿ ಕೊಡಲು ಅಭ್ಯಂತರವಿಲ್ಲ ಎಂದು ಹೇಳಿದ್ದರು. ಪ್ರತಿ ಕ್ವಿಂಟಲ್‌ಗೆ ₹3,400 ರಂತೆ, ಎಲೆಕ್ಟ್ರಾನಿಕ್ ಹರಾಜಿನಲ್ಲಿ ಭಾಗವಹಿಸದೇ ಪಡೆದುಕೊಳ್ಳಬಹುದು ಎಂದೂ ನಿಗಮದ ಪ್ರಾದೇಶಿಕ ವ್ಯವಸ್ಥಾಪಕರು ತಿಳಿಸಿದ್ದರು. ಆ ಬಳಿಕ ಇನ್ನೊಂದು ಪತ್ರ ಬರೆದು 13,189.45 ಟನ್ ಅಕ್ಕಿ ಕೊಡುವುದಾಗಿಯೂ ಹೇಳಿದ್ದರು' ಎಂದು ಸಿದ್ದರಾಮಯ್ಯ ವಿವರಿಸಿದರು.

ಅಕ್ಕಿ ಸಿಗದಿದ್ದರೆ ಬಡವರ ಖಾತೆಗೆ ಹಣ ಹಾಕಿ: ಸಿ.ಟಿ.ರವಿ

'ಸಿದ್ದರಾಮಯ್ಯ ಅವರೇ ನಿಮ್ಮ ಪ್ರಣಾಳಿಕೆ ಪ್ರಕಾರ ನೀವು ಪ್ರತಿಯೊಬ್ಬರಿಗೂ 10 ಕೆ.ಜಿ. ಅಕ್ಕಿ ನೀಡಲೇಬೇಕು. ಅಕ್ಕಿ ಹೊಂದಿಸಲು ಸಾಧ್ಯವಾಗದಿದ್ದರೆ ಅಲ್ಲಿಯವರೆಗೆ ಪ್ರತಿಯೊಬ್ಬರಿಗೂ 10 ಕೆ.ಜಿ ಅಕ್ಕಿಯ ಮಾರುಕಟ್ಟೆ ದರದ ಮೊತ್ತವನ್ನು ಬಡವರ ಖಾತೆಗೆ ಜಮೆ ಮಾಡಿ' ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಒತ್ತಾಯಿಸಿದ್ದಾರೆ.

ಈ ಕುರಿತು ಟ್ವೀಟ್ ಮಾಡಿರುವ ಅವರು, 'ರಾಜ್ಯದ ಪ್ರತಿಯೊಬ್ಬ ಬಡವರಿಗೂ ಪ್ರತಿ ತಿಂಗಳು ಐದು ಕೆ.ಜಿ.ಅಕ್ಕಿ ಕೊಡುತ್ತಿರುವುದು ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ' ಎಂದು ಹೇಳಿದ್ದಾರೆ.

'ಕೀಳು ರಾಜಕಾರಣ ನಿಲ್ಲಿಸಿ'

'ಹೆಚ್ಚುವರಿ ಐದು ಕೆ.ಜಿ.ಅಕ್ಕಿ ಕೊಡುತ್ತೇವೆ ಎನ್ನುವುದು ನಿಮ್ಮ ವಾಗ್ದಾನ. ಅದರಂತೆ ನಡೆದುಕೊಳ್ಳಿ. ಅಂಗಳ ಡೊಂಕು ಎಂದು ಕೇಂದ್ರ ಸರ್ಕಾರದತ್ತ ಬೊಟ್ಟು ಮಾಡುವ ಕೀಳು ರಾಜಕಾರಣ ನಿಲ್ಲಿಸಿ' ಎಂದು ಬಿಜೆಪಿ ಶಾಸಕ ವಿ.ಸುನಿಲ್‌ಕುಮಾರ್ ಟ್ವೀಟ್ ಮಾಡಿದ್ದಾರೆ.

'ನುಡಿದಂತೆ ನಡೆಯುತ್ತೇವೆ ಎಂದು ಪುಗಸಟ್ಟೆ ಪ್ರಚಾರ ತೆಗೆದುಕೊಂಡು ಈಗ ಕೇಂದ್ರ ಸರ್ಕಾರ ಅಕ್ಕಿ ಕೊಡುವಲ್ಲಿ ರಾಜಕಾರಣ ಮಾಡುತ್ತಿದೆ ಎಂದು ಜಾರಿಕೊಳ್ಳುವ ಪ್ರಯತ್ನ ಮಾಡುತ್ತಿದ್ದೀರಾ? ನೀವು ಮತ ರಾಜಕಾರಣಕ್ಕಾಗಿ ಪ್ರಣಾಳಿಕೆ ಸಿದ್ಧಪಡಿಸುವಾಗ ಕೇಂದ್ರ ಸರ್ಕಾರದ ಜತೆ ಚರ್ಚೆ ನಡೆಸಿದ್ದೀರಾ' ಎಂದೂ ಪ್ರಶ್ನಿಸಿದ್ದಾರೆ.

'ಸಿದ್ದರಾಮಯ್ಯ ವೈಫಲ್ಯ'

'ಅಕ್ಕಿ ಯೋಜನೆ ಜಾರಿಗೆ ತರುವಲ್ಲಿ ಅಸಹಾಯಕ ಪರಿಸ್ಥಿತಿಯಲ್ಲಿರುವ ನಿಮ್ಮ ಸರ್ಕಾರದ ವೈಫಲ್ಯ ಅನಾವರಣಗೊಳ್ಳುವ ಆತಂಕದಲ್ಲಿ ಕೇಂದ್ರದ ಮೇಲೆ ಗೂಬೆ ಕೂರಿಸುವ ನಿಮ್ಮ ದಿಕ್ಕು ತಪ್ಪಿಸುವ ತಂತ್ರ ಅರ್ಥ ಮಾಡಿಕೊಳ್ಳದೇ ಇರುವಷ್ಟು ನಮ್ಮ ಜನ ಮುಗ್ದರಲ್ಲ' ಎಂದು ಶಾಸಕ ಬಿ.ವೈ.ವಿಜಯೇಂದ್ರ ಹೇಳಿದ್ದಾರೆ. 'ಉಚಿತ ಅಕ್ಕಿ ವಿತರಿಸಲು ಕೇಂದ್ರ ಸರ್ಕಾರ ಅಕ್ಕಿ ಒದಗಿಸುತ್ತಿಲ್ಲ ಎಂದು ಆರೋಪಿಸಿದ್ದೀರಿ. ಈ ಹಿಂದೆಯೂ ನಿಮ್ಮ ಆಡಳಿತದ ಅವಧಿಯಲ್ಲಿ ಕೇಂದ್ರದಿಂದ ಅಕ್ಕಿ ತರಿಸಿ, ಅನ್ನರಾಮಯ್ಯ ಎಂದು ಕರೆಸಿಕೊಂಡಿರಿ. ಅಪ್ಪಿತಪ್ಪಿಯೂ ಕೇಂದ್ರ ಸರ್ಕಾರದ ಕೊಡುಗೆ ಕುರಿತು ಎಲ್ಲೂ ಉಲ್ಲೇಖಿಸುವ ಔದಾರ್ಯವನ್ನು ತೋರಿಸಲೇ ಎಲ್ಲ' ಎಂದು ಕುಟುಕಿದ್ದಾರೆ.

ಪಠ್ಯ ಪರಿಷ್ಕರಣೆ ವಿರುದ್ಧ ಹೋರಾಟಕ್ಕೆ ಬಿಜೆಪಿ ಚಿಂತನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಾಲಾ ಪಠ್ಯಪುಸ್ತಕ ಪರಿಷ್ಕರಣೆಗೆ ಮುಂದಾಗಿರುವ ರಾಜ್ಯ ಸರ್ಕಾರದ ವಿರುದ್ಧ ಹೋರಾಟ ನಡೆಸಲು ಬಿಜೆಪಿ ನಾಯಕರು ನಿರ್ಧರಿಸಿದ್ದಾರೆ.

ಶಾಲಾ ಶಿಕ್ಷಣದ ಮಾಜಿ ಸಚಿವರಾದ ಬಿ.ಸಿ.ನಾಗೇಶ್, ಎಸ್.ಸುರೇಶ್ ಕುಮಾರ್, ವಿಶ್ವೇಶ್ವರ ಹೆಗಡೆ ಕಾಗೇರಿ, ಉನ್ನತ ಶಿಕ್ಷಣದ ಮಾಜಿ ಸಚಿವರಾದ ಸಿ.ಟಿ.ರವಿ, ಸಿ.ಎನ್.ಅಶ್ವತ್ಥನಾರಾಯಣ ಮತ್ತಿತರ ನಾಯಕರ ನೇತೃತ್ವದಲ್ಲಿ ಈಚೆಗೆ ನಡೆದ ಬಿಜೆಪಿ ಸಭೆಯಲ್ಲಿ, ಪಠ್ಯ ಬದಲಾವಣೆ ವಿರುದ್ಧ ಹೋರಾಟ ರೂಪಿಸುವ ನಿರ್ಧಾರಕ್ಕೆ ಬರಲಾಗಿದೆ.

ಕಾಂಗ್ರೆಸ್ ಪೂರ್ವಗ್ರಹ ಪೀಡಿತವಾಗಿ ಹಿಂದಿನ ಪರಿಷ್ಕರಣೆ ಬದಲಿಸಲು ಮುಂದಾಗಿದೆ. ಹೋರಾಟ ಅನಿವಾರ್ಯ ಎಂದು ಸಭೆ ನಿರ್ಧರಿಸಿದೆ.

'ಪಠ್ಯಪುಸ್ತಕಗಳಿಂದ ಯಾವ ಪಾಠಗಳನ್ನು ತೆಗೆಯಲಾಗುತ್ತದೆ ಎಂಬ ವಿಷಯ ಖಚಿತಪಡಿಸಿಕೊಳ್ಳುತ್ತೇವೆ. ಸರ್ಕಾರ ಯಾವ ಕಾರಣಕ್ಕೆ ಯಾವ ಪಾಠ ಕೈಬಿಡಲಾಗಿದೆ ಎಂಬ ವಿವರಣೆ ನೀಡಬೇಕು. ನಂತರ ಮನೆಮನೆಗೆ ತೆರಳಿ ಪಠ್ಯಪುಸ್ತಕಗಳನ್ನು ಏಕೆ ಪರಿಷ್ಕರಿಸಿದ್ದೇವೆ' ಎಂಬ ಮಾಹಿತಿಯನ್ನು ಜನರಿಗೆ ನೀಡುತ್ತೇವೆ' ಎಂದು ಬಿ.ಸಿ.ನಾಗೇಶ್ ಹೇಳಿದ್ದಾರೆ ಎನ್ನಲಾಗಿದೆ.

ಸಭೆಯಲ್ಲಿ ಸುರ್ಜೇವಾಲಾ: ರಾಜ್ಯಪಾಲರಿಗೆ ಬಿಜೆಪಿ ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ಅಧಿಕಾರಿಗಳ ಸಭೆಯಲ್ಲಿ ಕಾಂಗ್ರೆಸ್ ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರು ಭಾಗವಹಿಸಿರುವ ಬಗ್ಗೆ ತನಿಖೆ ನಡೆಸಿ ಕ್ರಮ ತೆಗೆದುಕೊಳ್ಳಬೇಕು ಎಂದು ಬಿಜೆಪಿ ಶಾಸಕರು ಮತ್ತು ಸಂಸದರ ನಿಯೋಗ ರಾಜ್ಯಪಾಲ ಥಾವರ ಚಂದ್ ಗೆಹ್ಲೋತ್ ಅವರಿಗೆ ಮನವಿ ಮಾಡಿದೆ.

ರಾಜ್ಯಪಾಲರ ಭೇಟಿಯ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಶಾಸಕ ಆರ್.ಅಶೋಕ ಅವರು, ಬಿಬಿಎಂಪಿಯನ್ನು ಕಾಂಗ್ರೆಸ್ ಕಚೇರಿ ಮಾಡುವ ಪ್ರಯತ್ನ ನಡೆದಿದೆ. ಅಧಿಕಾರಿಗಳ ಸಭೆಯಲ್ಲಿ ಸುರ್ಜೇವಾಲಾ ಅವರು ಭಾಗವಹಿಸಲು ಯಾವ ಅಧಿಕಾರ ಹೊಂದಿದ್ದಾರೆ ಎಂದು ಪ್ರಶ್ನಿಸಿದರು.

'ನಮ್ಮ ಪಕ್ಷದ ಸಂಸದರಾದ ನಿರ್ಮಲಾ ಸೀತಾರಾಮನ್, ರಾಜೀವ್ ಚಂದ್ರಶೇಖರ್, ತೇಜಸ್ವಿ ಸೂರ್ಯ ಅವರನ್ನು ಕರೆಯದೇ ಯಾವುದೋ ರಾಜ್ಯದ ಸುರ್ಜೇವಾಲಾ ಅವರನ್ನು ಕರೆದು ಸಭೆ ನಡೆಸಿದ್ದಾರೆ. ವಾರ್ಡ್ ವಿಂಗಡಣೆ, ಅಭಿವೃದ್ಧಿ, ಚುನಾವಣೆ, ಮೀಸಲಾತಿ, ವಾರ್ಡ್‌ಗಳಿಗೆ ಅನುದಾನ ಮತ್ತಿತರ ವಿಚಾರಗಳ ಕುರಿತು ಚರ್ಚಿಸುವುದಾದರೆ ಮತದಾನ ಏಕೆ ಬೇಕು? ಚುನಾಯಿತ ಪ್ರತಿನಿಧಿಗಳು ಏಕೆ ಬೇಕು' ಎಂದು ಅವರು ಪ್ರಶ್ನಿಸಿದರು.

> **ಶಾಸಕರ ಜತೆ ಸಭೆ ನಡೆಸಿದ್ದರು. ಉಪಮುಖ್ಯಮಂತ್ರಿ ಕೂಡ ಇದ್ದರು. ಮುಂದಿನ ಚುನಾವಣೆಯ ಬಗ್ಗೆ ಚರ್ಚಿಸಿದ್ದರು. ಎಚ್.ಡಿ. ಕುಮಾರಸ್ವಾಮಿ ಸುಮ್ಮನೆ ಆರೋಪ ಮಾಡ್ತಾರೆ**
>
> **ಸಿದ್ದರಾಮಯ್ಯ,** ಮುಖ್ಯಮಂತ್ರಿ

'ಯಾರು ಸಭೆ ಮಾಡಬೇಕು ಎಂಬ ಬಗ್ಗೆ ಸರ್ಕಾರದ ಮಾರ್ಗಸೂಚಿಗಳಿವೆ. ಆಯಾ ಸಮಿತಿಯ ಕಾರ್ಯವ್ಯಾಪ್ತಿಗೆ ಒಳಪಟ್ಟು ಸಮೀಕ್ಷಾ ಸಭೆಗಳನ್ನು ನಡೆಸಬಹುದು. ಇದನ್ನು ಹೊರತುಪಡಿಸಿ ಶಾಸಕರೇ ಆಗಲಿ, ಇತರ ಖಾಸಗಿ ಪ್ರಮುಖರೇ ಆಗಲಿ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಸಮೀಕ್ಷಾ ಸಭೆಗಳನ್ನು ನಡೆಸುವಂತಿಲ್ಲ. ವಿರೋಧ ಪಕ್ಷದ ನಾಯಕರಿಗೂ ಸಹ ಅಧಿಕಾರಿಗಳ ಸಭೆ ನಡೆಸುವ ಅವಕಾಶ ಇಲ್ಲ' ಎಂದು ಆದೇಶದ ವಿವರ ನೀಡಿದರು.

'ಕಾಂಗ್ರೆಸ್ ಪಕ್ಷಕ್ಕೆ ಅಧಿಕಾರದ ಮದ, ಪಿತ್ತ ತಲೆಗೇರಿದೆ. ಇರೋದು ನಾಲ್ಕೇ ದಿನ. ಯಾರೂ ಕಾಯಂ ಅಲ್ಲ. ಕಾಂಗ್ರೆಸ್ ಪಕ್ಷ ಬೇಜವಾಬ್ದಾರಿಯಿಂದ ನಡೆದುಕೊಳ್ಳುತ್ತಿದೆ. ಸಭೆ ನಡೆಸಿದ್ದಕ್ಕೆ ದಾಖಲೆಗಳಿವೆ. ಸುಮ್ಮನೆ ಬಂದು ಹೋದರು ಎನ್ನಲು ಇದೇನು ನಾಟಕದ ಕಂಪನಿಯೇ' ಎಂದು ಅಶೋಕ ಅವರು ಪ್ರಶ್ನಿಸಿದರು.

'ಸುರ್ಜೇವಾಲಾಗೂ ಸಭೆಗೂ ಸಂಬಂಧವಿಲ್ಲ'

ಪಾವಗಡ (ತುಮಕೂರು): 'ನಮ್ಮ ಪಕ್ಷದ ಮುಖಂಡ ರಣದೀಪ್‌ಸಿಂಗ್ ಸುರ್ಜೇವಾಲಾ ಅವರಿಗೂ ಬಿಬಿಎಂಪಿ ಸಭೆಗೂ ಸಂಬಂಧವಿಲ್ಲ. ನಾನು ಯಾವುದೇ ಸಭೆ ನಡೆಸಿಲ್ಲ. ಬಿಜೆಪಿಯವರು ಯಾರಿಗೆ ಬೇಕಾದರೂ ದೂರು ನೀಡಲಿ' ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

ತಾಲ್ಲೂಕಿನ ತಿರುಮಣಿ ಸುತ್ತಮುತ್ತಲಿನ ಸೋಲಾರ್ ಪಾರ್ಕ್‌ಗೆ ಬುಧವಾರ ಭೇಟಿ ನೀಡಿ ಸುದ್ದಿಗಾರರೊಂದಿಗೆ ಮಾತನಾಡಿದರು.

'ನಾನು ಸಿಟಿ ಸುತ್ತಾಟದಲ್ಲಿ ಇದ್ದೆ. ನನ್ನನ್ನು ಕರೆದುಕೊಂಡು ಹೋಗಲು ಸುರ್ಜೇವಾಲಾ ಬಂದಿದ್ದರು. ಇಬ್ಬರು ಕುಳಿತು ಕಾಫಿ ಕುಡಿದಿದ್ದೇವೆ. ಆ ಸಮಯದಲ್ಲಿ ಬಿಡಿಎನಲ್ಲಿ ಒಂದು ಸಭೆ ಮಾಡಿಕೊಂಡು ಹೋಗೋಣ ಎಂದು ನಿರ್ಧರಿಸಿದೆವು. ಬಿಬಿಎಂಪಿ ಅಧಿಕಾರಿಗಳ ಜತೆಗೆ ಸಭೆ ನಡೆಸುವ ಅಗತ್ಯ ಬಂದಿಲ್ಲ. ಯಾರೂ ನಮ್ಮನ್ನು ಸಭೆಗೆ ಕರೆದಿರಲಿಲ್ಲ. ಬಿಜೆಪಿಯವರು ಇಂತಹ ಎಷ್ಟು ಸಭೆ ಮಾಡಿದ್ದಾರೆ ಎಂಬ ಪಟ್ಟಿಯೂ ನಮ್ಮ ಬಳಿ ಇದೆ' ಎಂದರು.

ಗೋಪ್ಯ ದಾಖಲೆಗಳನ್ನು ತಮ್ಮ ನಿವಾಸದಲ್ಲಿ ಬಚ್ಚಿಟ್ಟಿದ್ದ ಆರೋಪ

ವಿಚಾರಣೆಗೆ ಹಾಜರಾದ ಟ್ರಂಪ್

ವಾಷಿಂಗ್ಟನ್ (ಪಿಟಿಐ): ಸರ್ಕಾರದ ಗೋಪ್ಯ ದಾಖಲೆಗಳನ್ನು ಫ್ಲಾರಿಡಾದಲ್ಲಿರುವ ತಮ್ಮ ಬಂಗಲೆಯಲ್ಲಿ ಬಚ್ಚಿಟ್ಟಿದ್ದ ಆರೋಪ ಎದುರಿಸುತ್ತಿರುವ ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು, ಮಿಯಾಮಿಯ ನ್ಯಾಯಾಲಯದಲ್ಲಿ ವಿಚಾರಣೆಗೆ ಹಾಜರಾದರು.

ಟ್ರಂಪ್ ಅವರು ದೋಷಾರೋಪ ಎದುರಿಸುತ್ತಿರುವ ಅಮೆರಿಕದ ಮೊದಲ ಅಧ್ಯಕ್ಷರೆನಿಸಿದ್ದಾರೆ. ಮುಂದಿನ ವರ್ಷ ನಡೆಯುವ ಅಧ್ಯಕ್ಷೀಯ ಚುನಾವಣೆಯಲ್ಲಿ ಟ್ರಂಪ್ ಮರು ಆಯ್ಕೆ ಬಯಸಿರುವ ಕಾರಣ, ಅವರ ವಿರುದ್ಧದ ಈ ವಿಚಾರಣೆಗೆ ಮಹತ್ವ ಬಂದಿದೆ.

ಕಿಕ್ಕಿರಿದು ತುಂಬಿದ್ದ ನ್ಯಾಯಾಲಯದ ಕೊಠಡಿಯಲ್ಲಿ ಟ್ರಂಪ್ ಪರ ವಾದ ಮಂಡಿಸಿದ ವಕೀಲ ಟಾಡ್ ಬ್ಲಾಂಚ್, 'ನನ್ನ ಕಕ್ಷಿದಾರರು ಯಾವುದೇ ತಪ್ಪು ಮಾಡಿಲ್ಲ' ಎಂದು ತಿಳಿಸಿದರು.

ಆಗ, 'ಮಾಜಿ ಅಧ್ಯಕ್ಷ ಟ್ರಂಪ್ ಅವರು ಈ ಪ್ರಕರಣದಲ್ಲಿ ಸಾಕ್ಷಿಯಾಗಿರುವವರೊಂದಿಗೆ ಸಂಪರ್ಕದಲ್ಲಿ ಇರಬಾರದು ಎಂದು ಆದೇಶಿಸಲಾಗುವುದು' ಎಂದು ನ್ಯಾಯಾಧೀಶ ಜೋನಾಥನ್ ಗುಡ್‌ಮನ್ ಹೇಳಿದರು.

ಇದಕ್ಕೆ ಆಕ್ಷೇಪಿಸಿದ ಬ್ಲಾಂಚ್, 'ಸಾಕ್ಷಿಗಳಾಗಿರುವವರಲ್ಲಿ ಅನೇಕರು ಟ್ರಂಪ್ ಅವರ ಸಿಬ್ಬಂದಿ ಅಥವಾ ಭದ್ರತಾ ಕಾರ್ಯದಲ್ಲಿರುವವರು. ತಮ್ಮ ಜೀವನೋಪಾಯಕ್ಕಾಗಿ ಅವರೆಲ್ಲಾ ಟ್ರಂಪ್ ಅವರನ್ನೇ ಅವಲಂಬಿಸಿದ್ದಾರೆ' ಎಂದು ನ್ಯಾಯಾಲಯದ ಗಮನಕ್ಕೆ ತಂದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಾಧೀಶರು, ಈ ಪ್ರಕರಣಕ್ಕೆ ಸಂಬಂಧಿಸಿದ ವಿಚಾರವಾಗಿ ಸಾಕ್ಷಿಗಳು ಟ್ರಂಪ್ ಅವರೊಂದಿಗೆ ಮಾತನಾಡಬಾರದು ಎಂದು ತಾಕೀತು ಮಾಡಿದರು. ಅಲ್ಲದೇ, ಈ ನಿರ್ಬಂಧದಿಂದಾಗಿ ತೊಂದರೆಗೆ ಒಳಗಾಗುವ ಟ್ರಂಪ್ ಅವರ ನೌಕರರ ಪಟ್ಟಿಯನ್ನು ಒದಗಿಸುವಂತೆ ಪ್ರಾಸಿಕ್ಯೂಷನ್‌ಗೆ ಸೂಚಿಸಿದರು.

45 ನಿಮಿಷಗಳ ಕಾಲ ನಡೆದ ಕಲಾಪದ ವೇಳೆ ಟ್ರಂಪ್ ಮಾತನಾಡಲಿಲ್ಲ. ಆದರೆ, ಆಗಾಗ ತಮ್ಮ ವಕೀಲರಿಗೆ ಮೆಲುದನಿಯಲ್ಲಿ ಮಾಹಿತಿ ನೀಡುತ್ತಿದ್ದರು. ಪುತ್ರ ಎರಿಕ್ ಟ್ರಂಪ್ ಇದ್ದರು.

ಇದಕ್ಕೂ ಮುನ್ನ, ನ್ಯಾಯಾಲಯ ಪ್ರವೇಶಿಸುವುದಕ್ಕೆ ಮೊದಲು ಟ್ರಂಪ್ ಅವರು ತಮ್ಮ ಬೆಂಬಲಿಗರತ್ತ ಕೈಬೀಸಿ, ವಿಜಯದ ಸಂಕೇತ ತೋರಿದರು.

ವಿಚಾರಣೆ ಮುಗಿದ ನಂತರ ಕ್ಯೂಬಾದ ರೆಸ್ಟೋರೆಂಟ್‌ಗೆ ತೆರಳಿದ ಅವರಿಗೆ ಬೆಂಬಲಿಗರು ಅದ್ದೂರಿ ಸ್ವಾಗತ ಕೋರಿದರು. ಭಾರಿ ಸಂಖ್ಯೆಯಲ್ಲಿ ಬೆಂಬಲಿಗರು ಸೇರಿದ್ದರಲ್ಲದೇ, ಅದು ಚುನಾವಣಾ ಪ್ರಚಾರ ಸಭೆಯಂತೆ ಕಂಡುಬರುತ್ತಿತ್ತು.

'ಶಿಕ್ಷೆಯಾದರೂ ಟ್ರಂಪ್ ಅಧ್ಯಕ್ಷರಾಗಬಹುದು'



ಡೊನಾಲ್ಡ್ ಟ್ರಂಪ್

ಡೊನಾಲ್ಡ್ ಟ್ರಂಪ್ ವಿರುದ್ಧ ಗುರುತರ ದೋಷಾರೋಪ ಹೊರಿಸಲಾಗಿದ್ದರೂ, ಅವರು ಮುಂದಿನ ವರ್ಷ ನಡೆಯುವ ಅಧ್ಯಕ್ಷೀಯ ಚುನಾವಣೆಯಲ್ಲಿ ಸ್ಪರ್ಧಿಸಬಹುದು. ಚುನಾವಣೆಯಲ್ಲಿ ಗೆದ್ದು ಬಂದು, ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸುವುದಕ್ಕೆ ಅವರ ವಿರುದ್ಧದ ಯಾವ ಆರೋಪಗಳು ಅಡ್ಡಿಯಾಗಲಾರವು ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

'ಟ್ರಂಪ್ ವಿರುದ್ಧ ದೋಷಾರೋಪ ಹೊರಿಸಲಾಗಿದ್ದರೂ ಅಥವಾ ಅವರು ಶಿಕ್ಷೆಗೆ ಗುರಿಯಾದರು ಕೂಡ ಅವರು ಚುನಾವಣೆಗೆ ಸ್ಪರ್ಧಿಸಲು ಇವು ಅಡ್ಡಿಯಾಗಲಾರವು' ಎಂದು ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದಲ್ಲಿ ಕಾನೂನು ಪ್ರಾಧ್ಯಾಪಕರಾಗಿರುವ ರಿಚರ್ಡ್ ಹ್ಯಾಸೆನ್ ಹೇಳಿದ್ದಾರೆ.

'ಸಂವಿಧಾನದ ಪ್ರಕಾರ, ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸುವವರು ಮೂರು ನಿಬಂಧನೆಗಳನ್ನು ಪೂರೈಸಬೇಕು. ಅವರು ಅಮೆರಿಕದಲ್ಲಿಯೇ ಜನಿಸಿರುವ ಪ್ರಜೆಯಾಗಿರಬೇಕು, 35 ವರ್ಷ ತುಂಬಿರಬೇಕು ಹಾಗೂ ಕನಿಷ್ಠ 14 ವರ್ಷಗಳ ಕಾಲ ಅಮೆರಿಕ ನಿವಾಸಿಯಾಗಿರಬೇಕು ಎಂಬ ನಿಬಂಧನೆಗಳಿವೆ' ಎಂದು ಹೇಳಿದ್ದಾರೆ.

'ವ್ಯಕ್ತಿಯೊಬ್ಬ ಅಧ್ಯಕ್ಷ ಸ್ಥಾನಕ್ಕೆ ಏರದಂತೆ ತಡೆಯಲು ಇನ್ನೂ ಕೆಲ ಸಾಂವಿಧಾನಿಕ ನಿಬಂಧನೆಗಳಿವೆ. ಆದರೆ, ಅವುಗಳು ಟ್ರಂಪ್ ಅವರಿಗೆ ಅನ್ವಯಿಸುವುದಿಲ್ಲ' ಎಂದೂ ರಿಚರ್ಡ್ ಹೇಳಿದ್ದಾರೆ.

ಲಂಡನ್: ಹೈದರಾಬಾದ್ ಯುವತಿ ಹತ್ಯೆ

ಹೈದರಾಬಾದ್/ಲಂಡನ್ (ಪಿಟಿಐ): ಹೈದರಾಬಾದ್ ಮೂಲದ ಕೊಂತಂ ತೇಜಸ್ವಿನಿ (27) ಎಂಬುವರನ್ನು ಚಾಕುವಿನಿಂದ ಇರಿದು ಹತ್ಯೆ ಮಾಡಲಾಗಿದ್ದು, ಘಟನೆಗೆ ಸಂಬಂಧಿಸಿದಂತೆ ಇಬ್ಬರನ್ನು ಬಂಧಿಸಲಾಗಿದೆ.



ಕೊಂತಂ ತೇಜಸ್ವಿನಿ

ತೇಜಸ್ವಿನಿ ವಾಸವಿದ್ದ ನೀಲ್ಡ್ ಕ್ರೆಸೆಂಟ್‌ನಲ್ಲಿರುವ ಅಪಾರ್ಟ್‌ಮೆಂಟ್ ಸಮುಚ್ಚಯದ ಫ್ಲ್ಯಾಟ್‌ನಲ್ಲಿ ಮಂಗಳವಾರ ಈ ಕೃತ್ಯ ನಡೆದಿದೆ. ಘಟನೆಯಲ್ಲಿ ಮತ್ತೊಬ್ಬ ಯುವತಿ ಸಹ ಇರಿತಕ್ಕೆ ಒಳಗಾಗಿದ್ದು, ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದ್ದು ಪ್ರಾಣಾಪಾಯದಿಂದ ಪಾರಾಗಿದ್ದಾರೆ.

'23 ವರ್ಷದ ವ್ಯಕ್ತಿ ಸೇರಿದಂತೆ ಇಬ್ಬರನ್ನು ಬಂಧಿಸಲಾಗಿದೆ' ಎಂದು ಮೆಟ್ರೊಪಾಲಿಟನ್ ಪೊಲೀಸರು ತಿಳಿಸಿದ್ದಾರೆ.

'ಘಟನೆ ಬಗ್ಗೆ ಬೆಳಿಗ್ಗೆ ಗೊತ್ತಾಯಿತು. ಮೂರು ವರ್ಷಗಳ ಹಿಂದೆ ಲಂಡನ್‌ಗೆ ತೆರಳಿದ್ದ ಆಕೆ ಎಂ.ಎಸ್ ಪೂರ್ಣಗೊಳಿಸಿದ್ದಳು. ಕಳೆದ ವರ್ಷ ಆಗಸ್ಟ್‌ನಲ್ಲಿ ಹೈದರಾಬಾದ್‌ಗೆ ಬಂದಿದ್ದಳು. ಒಂದು ತಿಂಗಳ ಬಳಿಕ ಲಂಡನ್‌ಗೆ ತೆರಳಿದ್ದಳು. ಈ ವರ್ಷದ ಮೇ ತಿಂಗಳಲ್ಲಿ ವಾಪಸ್ ಬರಬೇಕಿತ್ತು' ಎಂದು ತೇಜಸ್ವಿನಿ ಅವರ ತಂದೆ ಹೇಳಿದರು. 'ಲಂಡನ್‌ನಿಂದ ಮರಳಿದ ಬಳಿಕ ಈ ವರ್ಷ ವಿವಾಹ ಆಗುತ್ತೇನೆ ಎಂದಿದ್ದಳು. ತನ್ನ ಕೆಲಸಕ್ಕೂ ರಾಜೀನಾಮೆ ನೀಡಿದ್ದ ಆಕೆ, ಇನ್ನೊಂದು ತಿಂಗಳು ಕೆಲಸ ಮಾಡಿ ಬರುವುದಾಗಿ ಹೇಳಿದ್ದಳು' ಎಂದು ತಿಳಿಸಿದರು.

ಪ್ರತಾಪ್ ಸಿಂಹಗೆ ಸವಾಲು ಹಾಕಿದ ಮುಖ್ಯಮಂತ್ರಿ

'ಹೊಂದಾಣಿಕೆ ಮಾಡಿಕೊಂಡ ಬಿಜೆಪಿಗರ ಹೆಸರು ಬಹಿರಂಗಪಡಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಾನು ವಿರೋಧಪಕ್ಷದ ಜತೆಗೆ ಯಾವುದೇ ಹೊಂದಾಣಿಕೆ ಮಾಡಿಕೊಂಡಿಲ್ಲ. ಹೊಂದಾಣಿಕೆ ಮಾಡಿಕೊಂಡಿರುವ ಬಿಜೆಪಿ ನಾಯಕರು ಯಾರು ಎಂದು ಪ್ರತಾಪ್ ಸಿಂಹ ಹೇಳಲಿ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸವಾಲು ಹಾಕಿದರು.

ಅಲಿ ಆಸ್ಕರ್ ರಸ್ತೆಯಲ್ಲಿ ಸಹಕಾರ ಸಮೃದ್ಧಿ ಸೌಧಕ್ಕೆ ಬುಧವಾರ ಭೂಮಿ ಪೂಜೆ ನೆರವೇರಿಸಿದ ಬಳಿಕ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು.

'ಪ್ರತಾಪ್ ಸಿಂಹ ಎಳಸು. ಬಾಯಿಗೆ ಬಂದಂತೆ ಮಾತನಾಡುತ್ತಾನೆ. ದಶಪಥ ರಸ್ತೆ ನಾನೇ ಮಾಡಿದ್ದು ಅಂತಾನೆ. ಅವನೇನು ಅಲ್ಲಿ ಸಂಸದನಾ? ಅವನು ಹೇಳಿದ ತಕ್ಷಣ ತನಿಖೆ ನಡೆಸಲು ಆಗುತ್ತದಾ?' ಎಂದು ಪ್ರಶ್ನಿಸಿದರು.

ಯಾರು ಹೊಂದಾಣಿಕೆ ಮಾಡಿಕೊಂಡಿರುವುದು ಎಂಬುದು ಆರೋಪ ಮಾಡಿರುವ ಪ್ರತಾಪ್‌ಗೆ ಗೊತ್ತಿರಬೇಕಲ್ಲ. ಅವರ ಹೆಸರು ಹೇಳಲಿ ಎಂದರು.

ಸಹಕಾರ ಸಮೃದ್ಧಿ ಸೌಧ: ಸಹಕಾರ ಅಭಿವೃದ್ಧಿ ನಿಧಿ ₹ 15 ಕೋಟಿ ವೆಚ್ಚದಲ್ಲಿ ಸಹಕಾರ ಸಮೃದ್ಧಿ ಸೌಧ ನಿರ್ಮಾಣಗೊಳ್ಳಲಿದೆ. ಮೂರು ಅಂತಸ್ತುಗಳಲ್ಲಿ 7,000 ಚದರ ಅಡಿ ಕಟ್ಟಡ ನಿರ್ಮಾಣಗೊಳ್ಳಲಿದೆ. ಮೊದಲನೇ ಹಂತದಲ್ಲಿ ₹ 9.85 ಕೋಟಿ, ಎರಡನೇ ಹಂತದಲ್ಲಿ ₹ 5.15 ಕೋಟಿ ವೆಚ್ಚವಾಗಲಿದೆ. ಕಾಮಗಾರಿಯನ್ನು ಕರ್ನಾಟಕ ಗೃಹ ಮಂಡಳಿಗೆ ವಹಿಸಲಾಗಿದೆ.



ಬೆಂಗಳೂರಿನ ಸಹಕಾರ ಸಂಘಗಳ ನಿಬಂಧಕರ ಕಚೇರಿಯ ಆವರಣದಲ್ಲಿ ಸಹಕಾರ ಸಮೃದ್ಧಿ ಸೌಧ ಕಟ್ಟಡಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಬುಧವಾರ ಭೂಮಿಪೂಜೆ ನೆರವೇರಿಸಿದರು. ಜವಳಿ, ಸಕ್ಕರೆ ಮತ್ತು ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ್, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ. ಪಾಟೀಲ್, ವಸತಿ ಸಚಿವ ಜಮೀರ್ ಅಹ್ಮದ್ ಖಾನ್ ಮತ್ತು ಸಹಕಾರ ಸಚಿವ ಕೆ.ಎನ್. ರಾಜಣ್ಣ ಇದ್ದರು – ಪ್ರಜಾವಾಣಿ ಚಿತ್ರ

ನೀತಿಗೆಟ್ಟ ರಾಜಕಾರಣ: ಜೆಡಿಎಸ್

ಶಿಗ್ಗಾವಿ, ವರುಣ, ಶಿಕಾರಿಪುರ, ಚಿಕ್ಕಮಗಳೂರು, ಕನಕಪುರ ಸೇರಿದಂತೆ ಹಲವು ಜಿಲ್ಲೆಗಳಲ್ಲಿ ಬಿಜೆಪಿ ಹಾಗೂ ಕಾಂಗ್ರೆಸ್ ಹೊಂದಾಣಿಕೆ ಮಾಡಿಕೊಂಡು ನೀತಿಗೆಟ್ಟ ರಾಜಕಾರಣ ಮಾಡಿದ್ದವು ಎಂದು ಜೆಡಿಎಸ್ ಟೀಕಿಸಿದೆ.

ಈ ಕುರಿತು ಬುಧವಾರ ಸರಣಿ ಟ್ವೀಟ್ ಜೆಡಿಎಸ್ ಪಕ್ಷ, 'ಬಿಜೆಪಿ ಜತೆ ಎಚ್.ಡಿ.ಕುಮಾರಸ್ವಾಮಿ ಒಳ ಒಪ್ಪಂದ ಮಾಡಿಕೊಂಡಿದ್ದರು ಎಂದು ಚುನಾವಣಾ ಸಮಯದಲ್ಲಿ ಕಾಂಗ್ರೆಸ್ ಅಪಪ್ರಚಾರ ಮಾಡಿತ್ತು. ಈಗ ಆ ಎರಡೂ ರಾಷ್ಟ್ರೀಯ ಪಕ್ಷಗಳು ಭಾಯಿ ಭಾಯಿ ಎನ್ನುವುದು ಬಯಲಾಗಿದೆ. ಲೋಕಸಭೆ ಚುನಾವಣೆಗಳಲ್ಲಿ ಕಂಡ ಅಪಮಾನಕರ ಸೋಲನ್ನು ಮರೆತು ಈಗ ಜಗತ್ತನ್ನೇ ಗೆದ್ದೆ ಎನ್ನುತ್ತಿರುವುದು ವಿಕೃತಿಯ ಪರಮಾವಧಿ' ಎಂದಿದೆ.

ಮುರುಘಾ ಮಠದ ಪೀಠಾಧಿಪತಿ ಶಿವಮೂರ್ತಿ ಶರಣರ ಪೋಕ್ಸೊ ಪ್ರಕರಣ

ವಿಚಾರಣಾ ಕೋರ್ಟ್ ಪ್ರಕ್ರಿಯೆ ಮುಂದೂಡಲು ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರೌಢಶಾಲೆಯಲ್ಲಿ ಕಲಿಯುತ್ತಿದ್ದ ಇಬ್ಬರು ಬಾಲಕಿಯರಿಗೆ ಲೈಂಗಿಕ ಕಿರುಕುಳ ನೀಡಿ ಅತ್ಯಾಚಾರ ಎಸಗಿದ ಆರೋಪ ಮತ್ತು ಅದಕ್ಕೆ ಹೊಂದಿಕೊಂಡ ವಿವಿಧ ಗುರುತರ ಅಪರಾಧಗಳ ಅಡಿ; ವಿಚಾರಣಾ ಕೈದಿಯಾಗಿ ಜೈಲಿನಲ್ಲಿರುವ ಚಿತ್ರದುರ್ಗ ಮುರುಘಾ ಮಠದ ಪೀಠಾಧಿಪತಿ ಶಿವಮೂರ್ತಿ ಶರಣರ ವಿರುದ್ಧ ಚಿತ್ರದುರ್ಗ ಜಿಲ್ಲಾ ಸೆಷನ್ಸ್ ನ್ಯಾಯಾಲಯದಲ್ಲಿ ನಡೆಯುತ್ತಿರುವ ಕ್ರಿಮಿನಲ್ ಪ್ರಕರಣಗಳ ಸಾಕ್ಷಿ ವಿಚಾರಣಾ ಪ್ರಕ್ರಿಯೆಯನ್ನು ಜುಲೈ 1ರವರೆಗೆ ಮುಂದೂಡುವಂತೆ ವಿಚಾರಣಾ ನ್ಯಾಯಾಲಯಕ್ಕೆ ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ಆರೋಪಿ ಶಿವಮೂರ್ತಿ ಶರಣರು ಸಲ್ಲಿಸಿರುವ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಆರೋಪಿ ಪರ ವಕೀಲ ಕೆ.ಬಿ.ಕೆ.ಸ್ವಾಮಿ, 'ಆರೋಪಗಳಿಗೆ ಸಂಬಂಧಿಸಿದಂತೆ ಚಿತ್ರದುರ್ಗ ಜಿಲ್ಲಾ ಎರಡನೇ ಹೆಚ್ಚುವರಿ ಸೆಷನ್ಸ್ ನ್ಯಾಯಾಲಯವು ಶರಣರ ವಿರುದ್ಧ ದೋಷಾರೋಪ ಹೊರಿಸಿ ಸಾಕ್ಷಿ ವಿಚಾರಣೆ ನಡೆಸಲು 2023ರ ಏಪ್ರಿಲ್ 20ರಂದು ಆದೇಶಿಸಿದೆ. ಈ ಆದೇಶ ದೋಷಪೂರಿತವಾಗಿದ್ದು, ಇದನ್ನು ರದ್ದುಪಡಿಸಬೇಕು' ಎಂದು ಕೋರಿದರು. ವಾದ ಆಲಿಸಿದ ನ್ಯಾಯಪೀಠ ಚಿತ್ರದುರ್ಗ ಸೆಷನ್ಸ್ ನ್ಯಾಯಾಲಯದಲ್ಲಿನ ವಿಚಾರಣೆಯ ಮುಂದಿನ ಪ್ರಕ್ರಿಯೆಯನ್ನು ಜುಲೈ 1ರವರೆಗೆ ಮುಂದೂಡಿ ಆದೇಶಿಸಿತು. ಮುಂದಿನ ವಿಚಾರಣೆ ಇದೇ 21ಕ್ಕೆ ನಿಗದಿಯಾಗಿದೆ.

ಪ್ರಕರಣವೇನು?: ಶಿವಮೂರ್ತಿ ಶರಣರ ವಿರುದ್ಧ ಪೋಕ್ಸೊ (ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ) ಕಾಯ್ದೆ–2012, ಭಾರತೀಯ ದಂಡ ಸಂಹಿತೆ–1860, ಧಾರ್ಮಿಕ ಸಂಸ್ಥೆಗಳ ದುರುಪಯೋಗ ತಡೆ ಕಾಯ್ದೆ-1988, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಮೇಲಿನ ದೌರ್ಜನ್ಯ ತಡೆ ಕಾಯ್ದೆ–1989 ಮತ್ತು ಬಾಲ ನ್ಯಾಯ (ಮಕ್ಕಳ ಸಂರಕ್ಷಣೆ ಹಾಗೂ ಆರೈಕೆ) ಕಾಯ್ದೆ–2015ರ ವಿವಿಧ ಕಲಂಗಳ ಅಡಿಯಲ್ಲಿ ಪ್ರತ್ಯೇಕ ಪ್ರಕರಣಗಳನ್ನು ದಾಖಲಿಸಲಾಗಿದ್ದು ಸೆಷನ್ಸ್ ನ್ಯಾಯಾಲಯಕ್ಕೆ ಅಂತಿಮ ವರದಿ ಸಲ್ಲಿಸಲಾಗಿದೆ.

'ಶರಣರು ನಮ್ಮ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದಾರೆ' ಎಂದು ಆರೋಪಿಸಿ ಇಬ್ಬರು ಬಾಲಕಿಯರು ಮೈಸೂರಿನ ನಜರ್‌ಬಾದ್ ಪೊಲೀಸ್ ಠಾಣೆಯಲ್ಲಿ 2022ರ ಆಗಸ್ಟ್ 26ರಂದು ದೂರು ದಾಖಲಿಸಿದ ನಂತರ ಪೊಲೀಸರು ಶರಣರನ್ನು 2022ರ ಸೆಪ್ಟೆಂಬರ್ 1ರಂದು ಚಿತ್ರದುರ್ಗದ ಬೃಹನ್ಮಠದಲ್ಲಿ ಬಂಧಿಸಿದರು. ಅಂದಿನಿಂದಲೂ ಅವರು ಚಿತ್ರದುರ್ಗದ ಜೈಲಿನಲ್ಲಿ ನ್ಯಾಯಾಂಗ ಬಂಧನದಲ್ಲಿದ್ದು (ವಿಚಾರಣಾಧೀನ ಬಂದಿ ಸಂಖ್ಯೆ: 2261) ಕಾನೂನು ವಿಚಾರಣೆಯ ವಿವಿಧ ಹಂತಗಳ ಪ್ರಕ್ರಿಯೆಯನ್ನು ಎದುರಿಸುತ್ತಿದ್ದಾರೆ.

ತನಿಖೆಗೆ ಸಹಕರಿಸದ ಬಗ್ಗೆ ಪೊಲೀಸರ ಆಕ್ಷೇಪ

ಫೇಸ್‌ಬುಕ್ ಕಾರ್ಯಚರಣೆ ಬಂದ್ ಎಚ್ಚರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸೌದಿ ಅರೇಬಿಯಾದಲ್ಲಿ ಜೈಲು ಶಿಕ್ಷೆಗೆ ಗುರಿಯಾಗಿರುವ ವ್ಯಕ್ತಿಯೊಬ್ಬರ ಪ್ರಕರಣದಲ್ಲಿ ತನಿಖೆಗೆ ಸೂಕ್ತ ಸಹಕಾರ ನೀಡುತ್ತಿಲ್ಲ ಎಂಬ ಮಂಗಳೂರು ಪೊಲೀಸರ ಆಕ್ಷೇಪವನ್ನು ಗಂಭೀರವಾಗಿ ಪರಿಗಣಿಸಬೇಕಾಗುತ್ತದೆ ಮತ್ತು ಭಾರತದಲ್ಲಿ ಫೇಸ್‌ಬುಕ್ ಕಾರ್ಯಚರಣೆ ಬಂದ್ ಮಾಡಲು ಆದೇಶ ಹೊರಡಿಸಬೇಕಾಗುತ್ತದೆ' ಎಂದು ಹೈಕೋರ್ಟ್ ಕಠಿಣ ಎಚ್ಚರಿಕೆ ನೀಡಿದೆ.

ಈ ಸಂಬಂಧ ಮಂಗಳೂರಿನ ಬಿಕರನಕಟ್ಟೆ ನಿವಾಸಿ ಶೈಲೇಶ್ ಕುಮಾರ ಪತ್ನಿ ಕವಿತಾ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

'ಫೇಸ್‌ಬುಕ್ ಸಂಸ್ಥೆಯು ಒಂದು ವಾರದಲ್ಲಿ ಘಟನೆಯ ಕುರಿತು ಸೂಕ್ತ ಮಾಹಿತಿ ಒಳಗೊಂಡ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಬೇಕು. ಭಾರತೀಯ ಪ್ರಜೆ ಸುಳ್ಳು ಪ್ರಕರಣದಲ್ಲಿ ವಿದೇಶದಲ್ಲಿ ಜೈಲು ಶಿಕ್ಷೆ ಅನುಭವಿಸುತ್ತಿರುವ ಹಿನ್ನೆಲೆಯಲ್ಲಿ ಆತನ ಬಿಡುಗಡೆಗೆ ಯಾವೆಲ್ಲಾ ಕ್ರಮ ಕೈಗೊಳ್ಳಲಾಗಿದೆ ಎಂಬ ಬಗ್ಗೆ ಕೇಂದ್ರ ಸರ್ಕಾರ ಅಗತ್ಯ ಮಾಹಿತಿ ನೀಡಬೇಕು. ಮಂಗಳೂರು ಪೊಲೀಸರೂ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಸಮರ್ಪಕ ತನಿಖೆ ಕೈಗೊಂಡು ವರದಿ ಸಲ್ಲಿಸಬೇಕು' ಎಂದು ನ್ಯಾಯಪೀಠ ನಿರ್ದೇಶಿಸಿದೆ. ವಿಚಾರಣೆಯನ್ನು ಇದೇ 22ಕ್ಕೆ ಮುಂದೂಡಲಾಗಿದೆ.

ಪ್ರಕರಣವೇನು?: ಮಂಗಳೂರಿನ ಬಿಕರನಕಟ್ಟೆಯ 45 ವರ್ಷದ ಶೈಲೇಶ್ ಕುಮಾರ್ 25 ವರ್ಷಗಳಿಂದ ಸೌದಿ ಅರೇಬಿಯಾದ ಅಲ್ ಕುಬೆರ್ ಎಂಬಲ್ಲಿ ಉದ್ಯೋಗಿಯಾಗಿದ್ದಾರೆ. ಪತ್ನಿ ಮತ್ತು ಮಕ್ಕಳು ಬಿಕರನಕಟ್ಟೆಯಲ್ಲಿ ವಾಸ ಮಾಡುತ್ತಿದ್ದಾರೆ.

ಶೈಲೇಶ್ 2019ರಲ್ಲಿ ಕೇಂದ್ರ ಸರ್ಕಾರ ರೂಪಿಸಿದ ಪೌರತ್ವ ತಿದ್ದುಪಡಿ ಕಾಯ್ದೆ (ಸಿಎಎ) ಮತ್ತು ರಾಷ್ಟ್ರೀಯ ಪೌರತ್ವ ನೋಂದಣಿ ಕಾಯ್ದೆ (ಎನ್‌ಆರ್‌ಸಿ) ಬೆಂಬಲಿಸಿ ತಮ್ಮ ಫೇಸ್‌ಬುಕ್‌ನಲ್ಲಿ ಪೋಸ್ಟ್ ಮಾಡಿದ್ದರು. ಇದರಿಂದ ಅವರಿಗೆ ಅನಾಮಿಕರಿಂದ ಬೆದರಿಕೆ ಬಂದಿತ್ತು. ಹಾಗಾಗಿ, ಅವರು ತಮ್ಮ ಫೇಸ್‌ಬುಕ್ ಖಾತೆಯನ್ನು ರದ್ದುಪಡಿಸಿದ್ದರು.

ಏತನ್ಮಧ್ಯೆ ಶೈಲೇಶ್ ಕುಮಾರ್ ಹೆಸರಿನಲ್ಲಿ 2020ರ ಫೆಬ್ರುವರಿಯಲ್ಲಿ ಅನಾಮಧೇಯ ವ್ಯಕ್ತಿಗಳು ನಕಲಿ ಫೇಸ್‌ಬುಕ್ ಖಾತೆ ತೆರೆದು ಸೌದಿ ಅರೇಬಿಯಾದ ದೊರೆ, ಅವರ ಧರ್ಮದ ಹೆಸರಿನಲ್ಲಿ ಅವಹೇಳನಕಾರಿ ಪೋಸ್ಟ್ ಮಾಡಿದ್ದರು. ಇದು ತಮ್ಮ ಗಮನಕ್ಕೆ ಬಂದಕೂಡಲೇ ಶೈಲೇಶ್ ತಮ್ಮ ಸ್ನೇಹಿತರಿಗೆ ಮತ್ತು ಮಂಗಳೂರಿನ ಸಂಬಂಧಿಕರಿಗೆ ತಿಳಿಸಿದ್ದರು.


ಇದೇ ವೇಳೆ ಸೌದಿ ಪೊಲೀಸರು ಶೈಲೇಶ್ ಅವರನ್ನು ಬಂಧಿಸಿದ್ದರು. ಈ ಕುರಿತಂತೆ ಮಂಗಳೂರಿನಲ್ಲಿ ಪತ್ನಿ ಕವಿತಾ ದೂರು ದಾಖಲಿಸಿದ್ದರು. ತನಿಖೆ ಕೈಗೆತ್ತಿಕೊಂಡಿದ್ದ ಮಂಗಳೂರು ಪೊಲೀಸರು, ಫೇಸ್‌ಬುಕ್ ಸಂಸ್ಥೆಗೆ ಪತ್ರ ಬರೆದು, ಶೈಲೇಶ್ ಹೆಸರಿನಲ್ಲಿ ನಕಲಿ ಖಾತೆ ತೆರೆದವರ ಮಾಹಿತಿ ನೀಡುವಂತೆ ಕೋರಿದ್ದರು. ಅಂತೆಯೇ, 'ನಿರಪರಾಧಿಯಾದ ನನ್ನ ಗಂಡನನ್ನು ಸೌದಿ ಜೈಲಿನಿಂದ ಬಿಡಿಸಲು ಕ್ರಮ ಜರುಗಿಸಿ' ಎಂದು ಕೋರಿ ಕೇಂದ್ರ ಸರ್ಕಾರಕ್ಕೂ ಮನವಿ ಸಲ್ಲಿಸಿದ್ದರು.

ಈ ಮನವಿ ಫಲ ನೀಡದ ಕಾರಣ ಅವರು, 'ಪೊಲೀಸರು ನಿಧಾನಗತಿಯಲ್ಲಿ ತನಿಖೆ ನಡೆಸುತ್ತಿದ್ದಾರೆ' ಎಂದು ಆಕ್ಷೇಪಿಸಿ 2021ರಲ್ಲಿ ಹೈಕೋರ್ಟ್ ಮೆಟ್ಟಿಲೇರಿದ್ದರು. ಹೈಕೋರ್ಟ್ ಈ ಹಿಂದೆ ನೀಡಿದ್ದ ನಿರ್ದೇಶನದ ಅನುಸಾರ ಮಂಗಳೂರು ನಗರ ಪೊಲೀಸ್ ಆಯುಕ್ತ ಕುಲದೀಪ್ ಜೈನ್ ಹಾಗೂ ಪ್ರಕರಣದ ತನಿಖಾಧಿಕಾರಿ ಬುಧವಾರ ವಿಚಾರಣೆಗೆ ಖುದ್ದು ಹಾಜರಾಗಿದ್ದರು.

ಮುಖ್ಯಾಂಶಗಳು

- ಕಠಿಣ ಎಚ್ಚರಿಕೆ ನೀಡಿದ ಹೈಕೋರ್ಟ್
- ವಾರದಲ್ಲಿ ವರದಿ ಸಲ್ಲಿಸಲು ಫೇಸ್‌ಬುಕ್‌ಗೆ ಸೂಚನೆ

ಷೇರುಪೇಟೆ ವಹಿವಾಟು 85



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	18,717
ಇಂದಿನ ಅಂತ್ಯ	18,756
▲	39
ದಿನದ ಗರಿಷ್ಠ	18,769

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ) ₹300-508
ದ್ವಿತಳಿ (ಬಿ.ವಿ) ₹345-626

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹570
12 ಮೊಟ್ಟೆಗೆ	₹73
ಮೈಸೂರು	
100 ಮೊಟ್ಟೆಗೆ	₹575

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1650(1640)
ಸೋಯಾ (ರಿಫೈನ್ಡ್)	₹930(910)
ಸೂರ್ಯಕಾಂತಿ (ರಿಫೈನ್ಡ್)	₹915(910)
ಪಾಮೋಲಿನ್	₹842(840)

ಈರುಳ್ಳಿ ಧಾರಣೆ (ಕ್ವಿಂಟಲ್‌ಗೆ)

ದಪ್ಪ	₹1300-1500
ಮಧ್ಯಮ	₹1000-1300
ಸಣ್ಣ	₹500-1000

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಪುತ್ತೂರು	₹4500-7300
ತಿಪಟೂರು	₹7500-8702
ತುರುವೇಕೆರೆ	₹8900-8900

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹152
ಆರ್‌ಎಸ್‌ಎಸ್-5	₹147
ಗುಡ್ ಲಾಟ್	₹128

ಸಗಟು ಹಣದುಬ್ಬರ: 7 ವರ್ಷದ ಕನಿಷ್ಠ


ಒಂದನೇ ಪುಟದಿಂದ...

ಮೇ ನಲ್ಲಿ ಚಿಲ್ಲರೆ ಹಣದುಬ್ಬರವು 25 ತಿಂಗಳ ಕನಿಷ್ಠ ಮಟ್ಟವಾದ ಶೇ 4.25ಕ್ಕೆ ಇಳಿಕೆ ಕಂಡಿದೆ.

ಮೂಲ ಲೋಹಗಳು, ಆಹಾರ ಉತ್ಪನ್ನಗಳು, ಜವಳಿ, ಆಹಾರೇತರ ವಸ್ತಗಳು, ಕಚ್ಚಾ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ, ರಾಸಾಯನಿಕ ಮತ್ತು ರಾಸಾಯನಿಕ ಉತ್ಪನ್ನಗಳ ಬೆಲೆ ಇಳಿಕೆ ಆಗಿರುವುದರಿಂದ ಹಣದುಬ್ಬರದ ದರ ಕಡಿಮೆ ಆಗಿದೆ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯವು ಬುಧವಾರ ಹೇಳಿದೆ.

ಆಹಾರ ವಸ್ತುಗಳ ಹಣದುಬ್ಬರವು ಏಪ್ರಿಲ್‌ನಲ್ಲಿ ಶೇ 3.54ರಷ್ಟು ಇದ್ದಿದ್ದು ಮೇನಲ್ಲಿ ಶೇ 1.51ಕ್ಕೆ ಇಳಿಕೆ ಕಂಡಿದೆ.

ತರಕಾರಿಗಳ ಹಣದುಬ್ಬರವು ಶೇ (-) 20.12, ಆಲೂಗಡ್ಡೆ ದರ ಶೇ (-) 18.71 ಮತ್ತು ಈರುಳ್ಳಿ ದರ ಶೇ (-) 7.25ಕ್ಕೆ ಇಳಿಕೆ ಕಂಡಿದೆ. ಆದರೆ, ಬೇಳೆಕಾಳುಗಳ ಹಣದುಬ್ಬರವು ಶೇ 5.76ರಷ್ಟು ಮತ್ತು ಗೋಧಿ ಶೇ 6.15ರಷ್ಟು ಏರಿಕೆ ಕಂಡಿದೆ.



ಇಂಧನ ಮತ್ತು ವಿದ್ಯುತ್ ಹಣದುಬ್ಬರವು ಶೇ (-) 9.17ಕ್ಕೆ ತಲುಪಿದೆ. ಏಪ್ರಿಲ್‌ನಲ್ಲಿ ಶೇ 0.93ರಷ್ಟು ಇತ್ತು.

ಭಾರತವು ರಷ್ಯಾದಿಂದ ಕಡಿಮೆ ಬೆಲೆಗೆ ತೈಲವನ್ನು ಆಮದು ಮಾಡಿಕೊಳ್ಳುವುದನ್ನು ದುಪ್ಪಟ್ಟು ಮಾಡಿಕೊಂಡಿದೆ. ಇಂಧನ ದರದ ವೆಚ್ಚವನ್ನು ಕಡಿಮೆ ಮಾಡಲು ಮತ್ತು ಹಣದುಬ್ಬರವನ್ನು ತಗ್ಗಿಸಲು ಇದು ನೆರವಾಗಿದೆ ಎಂದು ಮೂಡಿಸ್‌ನ ವಿಶ್ಲೇಷಕ ಸ್ಟೀವ್ ಕೊಕ್ರೇನ್ ಹೇಳಿದ್ದಾರೆ.

ಚಿಲ್ಲರೆ ಹಣದುಬ್ಬರವು ಅಲ್ಪಾವಧಿಯಲ್ಲಿ ಇಳಿಮುಖ ಹಾದಿಯಲ್ಲಿ ಇರುವ ನಿರೀಕ್ಷೆ ಇದೆ. ಇದರಿಂದಾಗಿ 2023–24ನೇ ಹಣಕಾಸು ವರ್ಷದಲ್ಲಿ ಹಣಕಾಸು ನೀತಿ ಸಮಿತಿಯು (ಎಂಪಿಸಿ) ಬಡ್ಡಿದರ ಹೆಚ್ಚಳ ಮಾಡದೇ ಇರುವಂತಾಗುವ ಸಾಧ್ಯತೆ ಇದೆ ಎಂದು ಬರ್ಕ್ಲೇಸ್ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ರಾಹುಲ್ ಬಜೋರಿಯಾ ತಿಳಿಸಿದ್ದಾರೆ.

ಸಗಟು ದರವು ನಕಾರಾತ್ಮಕ ಮಟ್ಟದಲ್ಲಿ ಇರುವುದರಿಂದ ಒಟ್ಟಾರೆಯಾಗಿ ವೆಚ್ಚ ತಗ್ಗಿಸಲು ನೆರವಾಗಲಿದೆ ಎಂದು ಅಸೋಚಾಂನ ಪ್ರಧಾನ ಕಾರ್ಯದರ್ಶಿ ದೀಪಕ್ ಸೂದ್ ಅಭಿಪ್ರಾಯಪಟ್ಟಿದ್ದಾರೆ.

ಸಗಟು ಹಣದುಬ್ಬರದ ಇಳಿಮುಖ ಹಾದಿ ಮುಂದುವರಿಯುವ ನಿರೀಕ್ಷೆ ಇದೆ. ಇನ್ನು ಮುಂಗಾರಿನತ್ತ ನಾವು ಗಮನ ಹರಿಸಬೇಕಿದೆ. ಏಕೆಂದರೆ ತಯಾರಾದ ವಸ್ತುಗಳಿಗಿಂತಲೂ ಆಹಾರ ವಸ್ತುಗಳ ದರದ ಮೇಲೆ ಮಳೆಯು ಸಾಕಷ್ಟು ಪ್ರಭಾವ ಬೀರುತ್ತದೆ ಎಂದು ಅವರು ಹೇಳಿದ್ದಾರೆ.

ಕ್ರೆಡಾಯ್, ಕೊಲಿಯರ್ಸ್, ಲಯಾಸಸ್ ಫೊರಸ್ ವರದಿ • ಮುಂಬೈನಲ್ಲಿ ಮಾತ್ರ ಬೆಲೆ ಇಳಿಕೆ

ಬಡ್ಡಿ ಏರಿದ್ದರೂ ಬೆಳೆದ ಮನೆ ಮಾರುಕಟ್ಟೆ

• ವಿಜಯ್ ಜೋಷಿ

ಮುಖ್ಯಾಂಶಗಳು

- ಬೆಂಗಳೂರಿನಲ್ಲಿ 3-ಬಿಎಚ್‌ಕೆ ಮನೆಗಳಿಗೆ ಬೇಡಿಕೆ ಏರಿಕೆ
- ಕೆಲವು ಅವಧಿಗೆ ಮುಂದುವರಿಯಲಿದೆ ಬೆಲೆ ಏರಿಕೆ ಪ್ರವೃತ್ತಿ

ಬೆಂಗಳೂರು: ಗೃಹಸಾಲದ ಮೇಲಿನ ಬಡ್ಡಿ ದರವು ಒಂದು ವರ್ಷದಿಂದ ಏರುಗತಿಯಲ್ಲಿ ಸಾಗಿದ್ದರೂ, ಮನೆ ಹಾಗೂ ಫ್ಲ್ಯಾಟ್‌ಗಳಿಗೆ ಬೇಡಿಕೆ ತಗ್ಗಿಲ್ಲ. ಬೆಂಗಳೂರಿನಲ್ಲಿ ಈ ವರ್ಷದ ಜನವರಿ–ಮಾರ್ಚ್ ತ್ರೈಮಾಸಿಕದಲ್ಲಿ ಹಿಂದಿನ ವರ್ಷದ ಇದೇ ಅವಧಿಗೆ ಹೋಲಿಸಿದರೆ ಮನೆ ಹಾಗೂ ಫ್ಲ್ಯಾಟ್‌ಗಳ ಬೆಲೆಯು ಸರಾಸರಿ ಶೇಕಡ 14ರಷ್ಟು ಹೆಚ್ಚಳ ಕಂಡಿದೆ.

‘ಸಾಲದ ಮೇಲಿನ ಬಡ್ಡಿ ದರವು ಗರಿಷ್ಠ ಮಟ್ಟವನ್ನು ತಲುಪಿ ಆಗಿದೆ ಎಂದು ಭಾವಿಸಲಾಗಿದೆ. ಈಗ ರೆಪೊ ದರ ಏರಿಕೆಗೆ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ವಿರಾಮ ನೀಡಿದೆ. ಇದರ ಜೊತೆಯಲ್ಲಿ, ದೇಶದ ಆರ್ಥಿಕ ಬೆಳವಣಿಗೆಯು ಆರೋಗ್ಯಕರ ಮಟ್ಟದಲ್ಲಿ ಇರುವ ನಿರೀಕ್ಷೆ ಇದ್ದು, ಮನೆ ಹಾಗೂ ಫ್ಲ್ಯಾಟ್‌ಗಳ ಮಾರುಕಟ್ಟೆಯಲ್ಲಿ ಇನ್ನಷ್ಟು ಚೇತರಿಕೆ ಇರಲಿದೆ’ ಎಂದು ಕ್ರೆಡಾಯ್, ಕೊಲಿಯರ್ಸ್ ಮತ್ತು ಲಯಾಸಸ್ ಫೊರಸ್ ಜಂಟಿಯಾಗಿ ನಡೆಸಿರುವ ಅಧ್ಯಯನ ವರದಿಯೊಂದು ಹೇಳಿದೆ.

ದೇಶದ ಎಂಟು ಪ್ರಮುಖ ನಗರಗಳಲ್ಲಿ ಮನೆ, ಫ್ಲ್ಯಾಟ್‌ಗಳ ಬೇಡಿಕೆ ಬಗ್ಗೆ ಅಧ್ಯಯನ ವರದಿಯು ಗಮನ ಹರಿಸಿದೆ. ಎಂಟೂ ನಗರಗಳನ್ನು ಪರಿಗಣಿಸಿದರೆ ಸರಾಸರಿ ಬೆಲೆ ಏರಿಕೆಯು ಶೇಕಡ 8ರಷ್ಟು ಇದೆ. ‘ಮನೆ, ಫ್ಲ್ಯಾಟ್‌ಗಳ ಬೆಲೆ ಏರಿಕೆಗೆ ಪ್ರಮುಖ ಕಾರಣ, ಸ್ಥಿರವಾದ ಬೇಡಿಕೆ ಹಾಗೂ ಅಗತ್ಯ ವಸ್ತುಗಳ ಬೆಲೆ ಹೆಚ್ಚಳ.

ನಗರ	ಸರಾಸರಿ ಮೌಲ್ಯ* (₹)	ಬದಲಾವಣೆ
ಅಹಮದಾಬಾದ್	6,324	11%
ಬೆಂಗಳೂರು	8,748	14%
ಚೆನ್ನೈ	7,395	4%
ಹೈದರಾಬಾದ್	10,410	13%
ಕೋಲ್ಕತ್ತ	7,211	15%
ಮುಂಬೈ	19,219	-2%
ದೆಹಲಿ	8,432	16%
ಪುಣೆ	8,352	11%

* 2023 ಜನವರಿ–ಮಾರ್ಚ್ ಅವಧಿಯಲ್ಲಿ ಪ್ರತಿ ಚದರ ಅಡಿಗೆ ಇರುವ ಬೆಲೆ.

ಕೋವಿಡ್ ನಂತರದಲ್ಲಿ ಗ್ರಾಹಕರು ದೊಡ್ಡ ಮನೆಗಳನ್ನು ಹೊಂದುವುದಕ್ಕೆ ಬಯಸುತ್ತಿದ್ದಾರೆ. ಹೀಗಾಗಿ ಬೇಡಿಕೆಯು ಮುಂದಿನ ದಿನಗಳಲ್ಲಿಯೂ ಹೆಚ್ಚಿರುವ ನಿರೀಕ್ಷೆ ಇದೆ’ ಎಂದು ಕ್ರೆಡಾಯ್ ಅಧ್ಯಕ್ಷ ಬೊಮನ್ ಇರಾನಿ ಹೇಳಿದ್ದಾರೆ.

ಬೆಂಗಳೂರಿನಲ್ಲಿ ಮನೆ, ಫ್ಲ್ಯಾಟ್‌ಗಳ ಬೆಲೆಯು ಚದರ ಅಡಿಗೆ ಸರಾಸರಿ ₹8,748ರಷ್ಟು ಇದೆ. ಬೆಂಗಳೂರನ್ನು ಇಡಿಯಾಗಿ ಪರಿಗಣಿಸಿದಾಗ, ಬೆಲೆಯಲ್ಲಿ ಶೇ 14ರಷ್ಟು ಏರಿಕೆ ಆಗಿದ್ದರೂ, ‘ಉತ್ತರ ಒಳಭಾಗ’ದಲ್ಲಿ ಬೇಡಿಕೆಯು ಸೀಮಿತವಾಗಿದ್ದ ಕಾರಣ ಬೆಲೆಯಲ್ಲಿ ಶೇ 13ರಷ್ಟು ಇಳಿಕೆ ಕಂಡುಬಂದಿದೆ ಎಂದು ವರದಿಯಲ್ಲಿ ಹೇಳಲಾಗಿದೆ.

ಹೆಬ್ಬಾಳ-ಸಂಜಯನಗರ, ಮಲ್ಲೇಶ್ವರ, ನಾಗವಾರ, ರಿಚರ್ಡ್ಸ್ ಟೌನ್, ಆರ್.ಟಿ. ನಗರ ಮುಖ್ಯ ರಸ್ತೆ ಪ್ರದೇಶವನ್ನು ವರದಿಯು ‘ಉತ್ತರ ಒಳಭಾಗ’ ಎಂದು ಪರಿಗಣಿಸಿದೆ. ಬೆಂಗಳೂರಿನಲ್ಲಿ 3-ಬಿಎಚ್‌ಕೆ (ಮೂರು ಬೆಡ್‌ರೂಂಗಳು ಹಾಗೂ ಒಂದು ಹಾಲ್ ಇರುವಂಥವು) ಮನೆಗಳಿಗೆ ಬೇಡಿಕೆಯು ಅತಿಹೆಚ್ಚಿನ ಪ್ರಮಾಣದಲ್ಲಿ ಏರಿಕೆ ಕಂಡಿದೆ. ಈ ವಿಭಾಗದ ಮನೆಗಳ ಬೇಡಿಕೆ ಶೇ 16ರಷ್ಟು ಹೆಚ್ಚಾಗಿದೆ. 4-ಬಿಎಚ್‌ಕೆ ಮನೆಗಳಿಗೂ ಬೇಡಿಕೆ ಹೆಚ್ಚಾಗಿದೆ. ಜನಪ್ರಿಯ 2-ಬಿಎಚ್‌ಕೆ ವರ್ಗದ ಮನೆಗಳ ಬೇಡಿಕೆಯಲ್ಲಿ ಏರಿಕೆ ಇದ್ದರೂ, 3-ಬಿಎಚ್‌ಕೆ ಮನೆಗಳಿಗೆ ಇರುವಷ್ಟಿಲ್ಲ.

‘2005ರಿಂದ 2012ರವರೆಗೆ ಮನೆ, ಫ್ಲ್ಯಾಟ್‌ಗಳ ಬೆಲೆಯಲ್ಲಿ ಭಾರಿ ಏರಿಕೆ ದಾಖಲಾಯಿತು. ಆ ಅವಧಿಯಲ್ಲಿ ಹೂಡಿಕೆಯೂ ಹೆಚ್ಚು ಆಯಿತು. ಆದರೆ, 2014ರಿಂದ 2022ರವರೆಗೆ ಬೆಲೆ ಹೆಚ್ಚಳ ಇರಲಿಲ್ಲ. ಈಗ ಬೆಲೆಯಲ್ಲಿ ಆಗುತ್ತಿರುವ ಏರಿಕೆಯು ಇನ್ನೂ ಕೆಲವು ತ್ರೈಮಾಸಿಕಗಳವರೆಗೆ ಮುಂದುವರಿಯಬಹುದು, ಬೆಲೆಯು ಶೇ 6ರವರೆಗೆ ಹೆಚ್ಚಾಗಬಹುದು’ ಎಂದು ಪ್ರಾವಿಡೆಂಟ್ ಹೌಸಿಂಗ್ ಸಿಇಒ ಮಲ್ಲಣ್ಣ ಸಾಸಲು ‘ಪ್ರಜಾವಾಣಿ’ಗೆ ತಿಳಿಸಿದರು.

‘ಮಿಲೆನಿಯಲ್‌ಗಳು ಸ್ವಂತಕ್ಕೆ ಮನೆ ಖರೀದಿ ಮಾಡುವುದಿಲ್ಲ ಎಂಬ ಮಾತು ಸುಳ್ಳಾಗಿದೆ. ಹಣದುಬ್ಬರ ನಿಯಂತ್ರಣಕ್ಕೆ ಬರುತ್ತಿದೆ. ಮುಂದೆ ಆರ್‌ಬಿಐ ರೆಪೊ ದರವನ್ನು ಇನ್ನಷ್ಟು ತಗ್ಗಿಸಿದರೆ, ಮನೆ ಮಾರುಕಟ್ಟೆಯು ಇನ್ನಷ್ಟು ಬೆಳವಣಿಗೆ ಕಾಣುತ್ತದೆ’ ಎಂದು ಅವರು ಹೇಳಿದರು. ಜನವರಿ–ಮಾರ್ಚ್ ಅವಧಿಯಲ್ಲಿ ಮುಂಬೈನಲ್ಲಿ ಮಾತ್ರ ಮನೆಗಳ ಬೆಲೆಯಲ್ಲಿ ಇಳಿಕೆ ಆಗಿದೆ.

ದೋಣಿ ಮಗುಚಿ 79 ವಲಸಿಗರ ಸಾವು

ಅಥೆನ್ಸ್ (ಎಪಿ): ದಕ್ಷಿಣ ಗ್ರೀಸ್ ಕರಾವಳಿಯಲ್ಲಿ ವಲಸಿಗರನ್ನು ಕರೆದೊಯ್ಯುತ್ತಿದ್ದ ಮೀನುಗಾರಿಕಾ ದೋಣಿ ಮಗುಚಿ ಮುಳುಗಿದ ಪರಿಣಾಮ 79 ಜನರು ಮೃತಪಟ್ಟಿದ್ದಾರೆ. ಹಲವು ಮಂದಿ ನಾಪತ್ತೆಯಾಗಿದ್ದಾರೆ ಎಂದು ಅಧಿಕಾರಿಗಳು ಬುಧವಾರ ತಿಳಿಸಿದ್ದಾರೆ.

ಶೋಧ ಮತ್ತು ರಕ್ಷಣಾ ಕಾರ್ಯಾಚರಣೆ ನಡೆಯುತ್ತಿದ್ದು, ಈವರೆಗೆ 104 ಜನರನ್ನು ರಕ್ಷಿಸಲಾಗಿದೆ. ನಾಲ್ವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. 59 ಶವಗಳು ಪತ್ತೆಯಾಗಿವೆ. ಎಷ್ಟು ಪ್ರಯಾಣಿಕರು ಕಾಣೆಯಾಗಿರಬಹುದು ಎಂಬುದು ಅಸ್ಪಷ್ಟವಾಗಿದೆ ಎಂದು ಗ್ರೀಕ್ ಕೋಸ್ಟ್ ಗಾರ್ಡ್ ತಿಳಿಸಿದೆ.

ಆರು ಕೋಸ್ಟ್ ಗಾರ್ಡ್ ಹಡಗುಗಳು, ಮಿಲಿಟರಿ ಸಾರಿಗೆ ವಿಮಾನ, ವಾಯುಪಡೆಯ ಹೆಲಿಕಾಪ್ಟರ್, ಹಲವಾರು ಖಾಸಗಿ ಹಡಗುಗಳು ಶೋಧದಲ್ಲಿ ಪಾಲ್ಗೊಂಡಿವೆ.

ಮಹೀಂದ್ರ ಎಲ್‌ಎಲ್‌ಎಂ ಮಾರಾಟ ಏರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹೀಂದ್ರ ಆ್ಯಂಡ್ ಮಹೀಂದ್ರ ಕಂಪನಿಯ ಭಾಗವಾಗಿರುವ ಮಹೀಂದ್ರ ಲಾಸ್ಟ್ ಮೈಲ್ ಮೊಬಿಲಿಟಿ (ಎಲ್‌ಎಲ್‌ಎಂ), 2022–23ನೆಯ ಹಣಕಾಸು ವರ್ಷದಲ್ಲಿ ವಿದ್ಯುತ್ ಚಾಲಿತ ತ್ರಿಚಕ್ರ ವಾಹನ ತಯಾರಿಕಾ ವಿಭಾಗದಲ್ಲಿ ನಂ. 1 ಸ್ಥಾನವನ್ನು ಪಡೆದಿದೆ.

ಈ ಅವಧಿಯಲ್ಲಿ ಕಂಪನಿಯು ಒಟ್ಟು 36,816 ಇ.ವಿ.ಗಳನ್ನು ಮಾರಾಟ ಮಾಡಿದೆ. ತ್ರಿಚಕ್ರ ಇ.ವಿ. ಮಾರುಕಟ್ಟೆಯಲ್ಲಿ ಶೇ 14.6ರಷ್ಟು ಪಾಲನ್ನು ತನ್ನದಾಗಿಸಿಕೊಂಡಿದೆ. ಕಂಪನಿಯು 2021–22ರಲ್ಲಿ 17,522 ಇ.ವಿ.ಗಳನ್ನು ಮಾರಾಟ ಮಾಡಿತ್ತು ಎಂದು ಪ್ರಕಟಣೆ ತಿಳಿಸಿದೆ.

ಕಂಪನಿಯು ದೇಶದಾದ್ಯಂತ ಹೊಂದಿರುವ 1,150 ಸಂಪರ್ಕ ಕೇಂದ್ರಗಳು, 10 ಸಾವಿರಕ್ಕೂ ಹೆಚ್ಚಿನ ಚಾರ್ಜಿಂಗ್ ಕೇಂದ್ರಗಳ ವ್ಯವಸ್ಥೆ ಹಾಗೂ ಮಹೀಂದ್ರ ಬ್ರ್ಯಾಂಡ್ ಬಗ್ಗೆ ಜನರಲ್ಲಿ ಇರುವ ವಿಶ್ವಾಸವು ಈ ಸ್ಥಾನ ಪಡೆಯಲು ನೆರವಾಗಿವೆ ಎಂದು ಕಂಪನಿ ಹೇಳಿದೆ.

ಆರ್‌ಬಿಐ ಅಧಿಸೂಚನೆ ರದ್ದತಿಗೆ ಕಾಂಗ್ರೆಸ್ ಆಗ್ರಹ

ನವದೆಹಲಿ (ಪಿಟಿಐ): ಬ್ಯಾಂಕ್‌ಗಳಲ್ಲಿನ ವಂಚನೆ ಖಾತೆಗಳು ಮತ್ತು ಉದ್ದೇಶಪೂರ್ವಕ ಸುಸ್ತಿದಾರರ (ಡೀಫಾಲ್ಟ್‌ಗಳ) ಪ್ರಕರಣಗಳನ್ನು ರಾಜೀ ಸಂಧಾನದ ಮೂಲಕ ಇತ್ಯರ್ಥಪಡಿಸಿಕೊಳ್ಳಲು ಅನುವು ಮಾಡಿಕೊಡುವಂತೆ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ (ಆರ್‌ಬಿಐ) ಹೊರಡಿಸಿರುವ ಅಧಿಸೂಚನೆ ರದ್ದುಪಡಿಸುವಂತೆ ಕಾಂಗ್ರೆಸ್ ಒತ್ತಾಯಿಸಿದೆ.

ಕೇಂದ್ರ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿರುವ ಕಾಂಗ್ರೆಸ್, ಈ ಅಧಿಸೂಚನೆ ಹೊರಡಿಸಲು ಕೇಂದ್ರ ಸರ್ಕಾರದ ಒತ್ತಡವೇನಾದರೂ ಇದೆಯೇ ಎನ್ನುವುದನ್ನು ಸ್ಪಷ್ಟಪಡಿಸುವಂತೆಯೂ ಆರ್‌ಬಿಐಗೆ ಒತ್ತಾಯಿಸಿದೆ.

ಎಐಸಿಸಿ ಪ್ರಧಾನ ಕಚೇರಿಯಲ್ಲಿ ಸುದ್ದಿಗೋಷ್ಠಿ ನಡೆಸಿದ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಂ ರಮೇಶ್ ಅವರು, ಉದ್ದೇಶಪೂರ್ವಕ ಸುಸ್ತಿದಾರರು ಮತ್ತು ಅವ್ಯವಹಾರಗಳಿಗೆ ಸಂಬಂಧಿಸಿದ ನಿಯಮಗಳನ್ನು ಏಕೆ ಬದಲಾಯಿಸಲಾಗಿದೆ ಎಂಬುದರ ಬಗ್ಗೆ ಆರ್‌ಬಿಐ ವಿವರಣೆ ನೀಡಬೇಕು ಎಂದು ಒತ್ತಾಯಿಸಿದ್ದಾರೆ.

‘ದೊಡ್ಡ ಉದ್ಯಮ ಸಮೂಹಗಳ ಸ್ನೇಹಿತರು ಪ್ರಧಾನಿ ನರೇಂದ್ರ ಮೋದಿಗೆ ಹತ್ತಿರವಾಗಿದ್ದು, ಅವರಿಗೆ ಅನುಕೂಲ ಕಲ್ಪಿಸಲು ನಿಯಮಗಳನ್ನು ಬದಲಾಯಿಸಲಾಗಿದೆ. ಇದಕ್ಕೆ ಪ್ರಮುಖ ಉದಾಹರಣೆ ಎಂದರೆ, ಅದಾನಿ ಸಮೂಹ. ಈಗಾಗಲೇ ನಮ್ಮ ಎಚ್‌ಡಿಕೆ (ಹಮ್ ಅದಾನಿ ಕೀ ಹೈ ಕೌನ್) ಸರಣಿಯಲ್ಲಿ ಪ್ರಧಾನಿ ಅವರಿಗೆ ಈ ಬಗ್ಗೆ 100 ಪ್ರಶ್ನೆಗಳನ್ನು ಕೇಳಿದ್ದೇವೆ. ಸಾರ್ವಜನಿಕರ ಹಣದೊಂದಿಗೆ ಪಲಾಯನ ಮಾಡಿರುವ ಎಲ್ಲ ಉದ್ದೇಶಪೂರ್ವಕ ಸುಸ್ತಿದಾರರು ಮತ್ತು ವಂಚನೆಗಳಿಗೆ ಕ್ಲೀನ್ ಚಿಟ್ ನೀಡಿರುವುದು ಕೂಡ ಮತ್ತೊಂದು ಉದಾಹರಣೆಯಾಗಿದೆ’ ಎಂದು ಅವರು ಆರೋಪಿಸಿದ್ದಾರೆ.

ಮುಂಬೈ ಧಾರಣೆ

ಶೇಂಗಾ

14-6-2023

ಜಾವಾ 70/80(ಹೊಸ)	11350-11400
ಜಾವಾ 80/90(ಹೊಸ)	10750-10800
ದಪ್ಪ ಮಧ್ಯಪ್ರದೇಶ(ಹೊಸ)	11200-11300
ದಪ್ಪ ಗುಜರಾತ್(ಹೊಸ)	12100-12200

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1660(1650)
ಒಂದು ವಾರದ ಡೆಲಿವರಿ	1655(1645)
ಸೋಯಾ ಕಚ್ಚಾ	882(870)
ಪಾಮ್ ವಾರದ ಡೆಲಿವರಿ	840(938)
ಸೂರ್ಯಕಾಂತಿ ಎಣ್ಣೆ ಕಚ್ಚಾ	820(815)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ 59,000(59,500)
ಬೆಳ್ಳಿ ಕೆ.ಜಿ 72,100(73,100)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಹಣ ಅಕ್ರಮ ವರ್ಗಾವಣೆ ಪ್ರಕರಣ: ಇ.ಡಿ ಕ್ರಮ

ಡಿಸಿಎಚ್‌ಎಲ್ ಮಾಜಿ ಪ್ರವರ್ತಕ ಇ.ಡಿ. ವಶಕ್ಕೆ

ನವದೆಹಲಿ (ಪಿಟಿಐ): ಬ್ಯಾಂಕ್ ವಂಚನೆ ಪ್ರಕರಣಕ್ಕೆ ಸಂಬಂಧಿಸಿದಂತೆ ಹಣ ಅಕ್ರಮ ವರ್ಗಾವಣೆಯ ತನಿಖೆಯ ಭಾಗವಾಗಿ ಡೆಕ್ಕನ್ ಕ್ರಾನಿಕಲ್ ಹೋಲ್ಡಿಂಗ್ಸ್ ಲಿಮಿಟೆಡ್‌ನ (ಡಿಸಿಎಚ್‌ಎಲ್) ಮಾಜಿ ಪ್ರವರ್ತಕನನ್ನು ಜಾರಿ ನಿರ್ದೇಶನಾಲಯ (ಇ.ಡಿ) ಬಂಧಿಸಿದೆ ಎಂದು ಮೂಲಗಳು ಮಂಗಳವಾರ ತಿಳಿಸಿವೆ.

‘ಟಿ. ವೆಂಕಟರಾಮ್ ರೆಡ್ಡಿ ಬಂಧಿತ ವ್ಯಕ್ತಿ. ಹೈದರಾಬಾದ್‌ನ ಇ.ಡಿ ಅಧಿಕಾರಿಗಳು ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆ ಅಡಿ (ಪಿಎಂಎಲ್‌ಎ) ರೆಡ್ಡಿ ಅವರನ್ನು ತಮ್ಮ ವಶಕ್ಕೆ ಪಡೆದಿದ್ದಾರೆ’ ಎಂದು ತಿಳಿಸಿವೆ.

‘ತಮ್ಮ ಕಂಪನಿಯ ಷೇರುದಾರರನ್ನು ಹಾಗೂ ಬ್ಯಾಂಕ್‌ಗಳನ್ನು ವಂಚಿಸುವ ಉದ್ದೇಶದಿಂದ ಡಿಸಿಎಚ್‌ಎಲ್‌ನ ಮೂವರು ಪ್ರವರ್ತಕರಾದ ಪಿ.ಕೆ. ಐಯ್ಯರ್, ಟಿ. ವೆಂಕಟ್‌ರಾಮ್ ರೆಡ್ಡಿ ಹಾಗೂ ಟಿ. ವಿನಾಯಕ್ ರೆಡ್ಡಿ ಅವರು ಕಂಪನಿಯ ಬ್ಯಾಲೆನ್ಸ್ ಶೀಟ್‌ಗಳಲ್ಲಿ ಲಾಭದ ಹೆಚ್ಚಳವನ್ನು ತೋರಿಸುವುದಕ್ಕೋಸ್ಕರ ಚಾಕಚಕ್ಯತೆಯಿಂದ ಸಂಚು ರೂಪಿಸಿದ್ದಾರೆ ಎಂಬುದು ತನಿಖೆಯಲ್ಲಿ ತಿಳಿದುಬಂದಿದೆ’ ಎಂದು ಇ.ಡಿ 2020ರಲ್ಲಿ ಹೇಳಿತ್ತು.

‘ಈ ಸಂಚು ನಡೆದ ಸಂದರ್ಭದಲ್ಲಿ ಕಂಪನಿಯು ಕಾರ್ಪೊರೇಟ್ ದಿವಾಳಿತನ ಪರಿಹಾರ ಪ್ರಕ್ರಿಯೆಯಲ್ಲಿತ್ತು ಎಂದು ಹೇಳಲಾಗಿದೆ. ಈ ಹಿನ್ನೆಲೆಯಲ್ಲಿ ಪರಿಹಾರ ಯೋಜನೆಗಾಗಿ ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಮಂಡಳಿ (ಎನ್‌ಸಿಎಲ್‌ಟಿ) ₹ 400 ಕೋಟಿಗೆ ಅನುಮೋದನೆ ನೀಡಿತ್ತು. ಆದರೆ, ಡಿಸಿಎಚ್‌ಎಲ್ ಹಾಗೂ ಅದರ ಪ್ರವರ್ತಕರು ಮಾಡಿದ ಒಟ್ಟು ಸಾಲದ ಮೊತ್ತ ₹ 8,180 ಕೋಟಿ’ ಎಂದು ಇ.ಡಿ ಹೇಳಿದೆ.

ಬಳಿಕ ಇ.ಡಿ ಈ ಕಂಪನಿ ಹಾಗೂ ಪ್ರವರ್ತಕರ ವಿರುದ್ಧ 2015ರಲ್ಲಿ ಪ್ರಕರಣ ದಾಖಲಿಸಿತ್ತು.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	300-350
ನಡುಗೋಲು	450-500
ರಾಶಿ	500-550
ರಾಶಿ ಉತ್ತಮ	750-800
ಜರಡಿ	1000-1050
ಹೆರಕಿದ್ದು	1200-1300
ಹಸಿರು ಸಾಧಾರಣ	800-900
ಹಸಿರು ಉತ್ತಮ	1000-1100
ಹಸಿರು ಅತಿ ಉತ್ತಮ	1600-1650
ಕಾಳು ಮೆಣಸು	480
ಏಲಕ್ಕಿ ಧಾರಣೆ	
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-40500
ಹಳತು	48000-53000
ಕಾರ್ಕಳ	
ಹೊಸತು	30000-40500
ಹಳತು	40000-53000
ಕುಮಟಾ	
ಚಿಪ್ಪು	29999-33099
ಕೋಕ	2109-33089
ಫ್ಯಾಕ್ಟರಿ	14099-23299
ಹಳೆಚಾಲಿ	36899-38889
ಹೊಸಚಾಲಿ	36509-38199
ಪುತ್ತೂರು	
ಕೋಕ	11000-25000
ಹೊಸತು	33500-40500
ಶಿವಮೊಗ್ಗ	
ಬೆಟ್ಟೆ	49899-54100
ಗೊರಬಲು	21500-38399
ರಾಶಿ	30129-52228
ಸರಕು	46000-82896
ಸಿದ್ದಾಪುರ	
ಬಿಳಿಗೋಟು	29699-32899
ಚಾಲಿ	37499-38919
ಕೋಕ	28699-32899
ಕೆಂಪುಗೋಟು	32189-32718
ರಾಶಿ	45099-49709
ತಟ್ಟಿಬೆಟ್ಟೆ	39469-43099
ಶಿರಸಿ	
ಬೆಟ್ಟೆ	38999-47099
ಬಿಳಿಗೋಟು	25882-33399
ಚಾಲಿ	35151-38707
ಕೆಂಪುಗೋಟು	26296-38199
ರಾಶಿ	45160-49359

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	15300	15300	15200	182.75 ಸೆಂಟ್ಸ್
ಎಸಿ	7980	8000	7700	
ಆರ್‌ಪಿ	10800	10850	10800	ಲಂಡನ್
ಆರ್‌ಸಿ	6230	248on OT	6125	2713 ಡಾಲರ್ಸ್

ಐಸಿಸಿ ಟೆಸ್ಟ್ ರ‍್ಯಾಂಕಿಂಗ್: ಆಸೀಸ್ ಬ್ಯಾಟರ್‌ಗಳಿಗೆ ಮೊದಲ 3 ಸ್ಥಾನ

ಅಶ್ವಿನ್ ಅಗ್ರಸ್ಥಾನ ಅಬಾಧಿತ

ದುಬೈ (ಪಿಟಿಐ): ಭಾರತದ ಸ್ಪಿನ್ನರ್ ರವಿಚಂದ್ರನ್ ಅಶ್ವಿನ್, ಇತ್ತೀಚಿನ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್‌ನಲ್ಲಿ ಆಡದಿದ್ದರೂ, ಬುಧವಾರ ಪ್ರಕಟವಾದ ಐಸಿಸಿ ಟೆಸ್ಟ್ ಬೌಲರ್‌ಗಳ ಕ್ರಮಾಂಕ-ಪಟ್ಟಿಯಲ್ಲಿ ಅಗ್ರಸ್ಥಾನ ಕಾಪಾಡಿಕೊಂಡಿದ್ದಾರೆ. ತಂಡಕ್ಕೆ ಪುನರಾಗಮನ ಮಾಡಿದ ಅಜಿಂಕ್ಯ ರಹಾನೆ ಬ್ಯಾಟರ್‌ಗಳ ವಿಭಾಗದಲ್ಲಿ 37ನೇ ಸ್ಥಾನಕ್ಕೆ ಏರಿದ್ದಾರೆ.

ಅಪರೂಪದ ಸಾಧನೆಯೊಂದರಲ್ಲಿ ಟೆಸ್ಟ್ ಬ್ಯಾಟಿಂಗ್ ವಿಭಾಗದಲ್ಲಿ ಆಸ್ಟ್ರೇಲಿಯಾದ ಮೂವರು ಬ್ಯಾಟರ್‌ಗಳು– ಮಾರ್ನಸ್ ಲಾಬುಷೇನ್, ಸ್ಟೀವನ್ ಸ್ಮಿತ್, ಟ್ರಾವಿಸ್ ಹೆಡ್ ಕ್ರಮವಾಗಿ ಮೊದಲ ಮೂರು ಸ್ಥಾನಗಳನ್ನು ಪಡೆದಿದ್ದಾರೆ.

ಕಳೆದ ವಾರ ಡಬ್ಲ್ಯುಟಿಸಿ ಫೈನಲ್‌ನಲ್ಲಿ ಭಾರತ ದೊಡ್ಡ ಅಂತರದಲ್ಲಿ ಸೋತಿದ್ದರೂ ರಹಾನೆ ಆ ಪಂದ್ಯದಲ್ಲಿ ಕ್ರಮವಾಗಿ 89 ಮತ್ತು 46 ರನ್ ಗಳಿಸಿದ್ದರು. ಇದು ಬಡ್ತಿಗೆ ಕಾರಣವಾಗಿದೆ. ಆ ಪಂದ್ಯದ ಮೊದಲ ಇನಿಂಗ್ಸ್‌ನಲ್ಲಿ ಅರ್ಧ ಶತಕ ಬಾರಿಸಿದ್ದ ಶಾರ್ದೂಲ್ ಠಾಕೂರ್ ಆರು



ರವಿಚಂದ್ರನ್ ಅಶ್ವಿನ್

ಸ್ಥಾನಗಳಷ್ಟು ಮೇಲೇರಿ 94ನೇ ಸ್ಥಾನದಲ್ಲಿದ್ದಾರೆ.

ಕಾರು ಅಪಘಾತದಲ್ಲಿ ಗಾಯಾಳಾಗಿ ಚೇತರಿಸಿಕೊಳ್ಳುತ್ತಿರುವ ವಿಕೆಟ್ ಕೀಪರ್ ರಿಷಭ್ ಪಂತ್ ಭಾರತದ ಬ್ಯಾಟರ್‌ಗಳ ಪೈಕಿ ಮುಂಚೂಣಿಯಲ್ಲಿದ್ದು 10ನೇ ಸ್ಥಾನದಲ್ಲಿದ್ದಾರೆ. ರೋಹಿತ್ ಶರ್ಮಾ ಮತ್ತು ವಿರಾಟ್ ಕೊಹ್ಲಿ ಕ್ರಮವಾಗಿ 12 ಮತ್ತು 13ನೇ ಸ್ಥಾನದಲ್ಲಿದ್ದಾರೆ.

ಟೆಸ್ಟ್ ಬೌಲರ್‌ಗಳಲ್ಲಿ ಅಶ್ವಿನ್ ಅಗ್ರಸ್ಥಾನ ಅಬಾಧಿತವಾಗಿದೆ. ಇನ್ನೊಬ್ಬ ಸ್ಪಿನ್ನರ್ ರವೀಂದ್ರ ಜಡೇಜಾ 9ನೇ ಸ್ಥಾನದಲ್ಲಿ ಮುಂದುವರಿದಿದ್ದಾರೆ. ಗಾಯಾಳಾಗಿದ್ದು, ಜುಲೈ 2022ರಿಂದ ಯಾವುದೇ ಪಂದ್ಯ ಆಡದ ವೇಗದ ಬೌಲರ್ ಜಸ್‌ಪ್ರೀತ್ ಬುಮ್ರಾ ಅವರು ಎರಡು ಸ್ಥಾನ ಕೆಳಗಿಳಿದಿದ್ದು, ಎಂಟನೇ ಕ್ರಮಾಂಕ ಪಡೆದಿದ್ದಾರೆ.

ಆಸ್ಟ್ರೇಲಿಯಾ ಆಟಗಾರರ ಸಾಧನೆ

ಟೆಸ್ಟ್ ಬ್ಯಾಟರ್‌ಗಳ ಕ್ರಮಾಂಕ ಪಟ್ಟಿಯಲ್ಲಿ ಮಾರ್ನಸ್ ಲಾಬುಷೇನ್ 903 ರೇಟಿಂಗ್ ಪಾಯಿಂಟ್‌ಗಳೊಡನೆ ಅಗ್ರಸ್ಥಾನದಲ್ಲಿದ್ದಾರೆ. ಸ್ಟೀವ್ ಸ್ಮಿತ್ (885) ಮತ್ತು ಟ್ರಾವಿಸ್ ಹೆಡ್ (884) ಅವರು ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನದಲ್ಲಿದ್ದಾರೆ. ಅವರಿಗೆ ನಿಕಟ ಪೈಪೋಟಿ ನೀಡಿರುವ ನ್ಯೂಜಿಲೆಂಡ್‌ನ ಕೇನ್ ವಿಲಿಯಮ್ಸನ್ (883) ನಾಲ್ಕನೇ ಸ್ಥಾನದಲ್ಲಿದ್ದಾರೆ.

1984ರ ನಂತರ ಇದೇ ಮೊದಲ ಬಾರಿ ಈ ರೀತಿ ಒಂದೇ ತಂಡದ ಮೂವರು ಆಟಗಾರರು ಮೊದಲ ಮೂರು ಸ್ಥಾನ ಪಡೆದಂತಾಗಿದೆ. ಆ ವರ್ಷ ವೆಸ್ಟ್ ಇಂಡೀಸ್ ತಂಡದ ಗೊರ್ಡನ್ ಗ್ರೀನಿಜ್, ಕ್ಲೈವ್ ಲಾಯ್ಡ್ ಮತ್ತು ಲ್ಯಾರಿ ಗೋಮ್ಸ್ ಅವರು ಟೆಸ್ಟ್ ಬ್ಯಾಟಿಂಗ್ ಕ್ರಮಾಂಕದಲ್ಲಿ ಮೊದಲ ಮೂರು ಸ್ಥಾನಗಳನ್ನು ಪಡೆದಿದ್ದರು.

ಕಳೆದ ವಾರ ಓವಲ್‌ನಲ್ಲಿ ನಡೆದ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್‌ನಲ್ಲಿ ಸ್ಮಿತ್ ಶತಕ ಬಾರಿಸಿದ್ದರು. ಈ ಹಿಂದೆ ಆರನೇ ಸ್ಥಾನದಲ್ಲಿದ್ದ ಹೆಡ್, ಅದೇ ಪಂದ್ಯದಲ್ಲಿ ಶತಕ ಬಾರಿಸುವ ಮೂಲಕ ಮೂರು ಸ್ಥಾನಗಳಷ್ಟು ಬಡ್ತಿ ಪಡೆದಿದ್ದಾರೆ.

ಭಾರತ ವಿರುದ್ಧ ಕಳೆದ ವಾರ ಟೆಸ್ಟ್ ಪಂದ್ಯದಲ್ಲಿ ಐದು ವಿಕೆಟ್ ಪಡೆದಿದ್ದ ಸ್ಪಿನ್ನರ್ ನಥಾನ್ ಲಯನ್ ಅವರು ಬೌಲರ್‌ಗಳ ಪಟ್ಟಿಯಲ್ಲಿ ಆರನೇ ಸ್ಥಾನಕ್ಕೇರಿದ್ದಾರೆ. ಕಾಂಗರೂ ಪಡೆಯ ನಾಯಕ ಪ್ಯಾಟ್ ಕಮಿನ್ಸ್ ಮೂರನೇ ಸ್ಥಾನದಲ್ಲಿ ಮುಂದುವರಿದಿದ್ದಾರೆ.

ಭಾರತಕ್ಕೆ ವಿಂಡೀಸ್ ಸವಾಲು

ಮೂರನೇ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ವೇಳಾಪಟ್ಟಿ ಪ್ರಕಟಿಸಿದ ಐಸಿಸಿ

ಬೆಂಗಳೂರು: ಮೂರನೇ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಇದೇ 16ರಿಂದ ಆರಂಭವಾಗಲಿದೆ. ಬದ್ಧ ಎದುರಾಳಿಗಳಾದ ಆಸ್ಟ್ರೇಲಿಯಾ ಮತ್ತು ಇಂಗ್ಲೆಂಡ್ ತಂಡವು ಆ್ಯಶಸ್ ಸರಣಿಯಲ್ಲಿ ಮುಖಾಮುಖಿಯಾಗುವ ಮೂಲಕ ಈ ಚಾಂಪಿಯನ್‌ಷಿಪ್ ಶುರುವಾಗಲಿದೆ.

ಬರ್ಮಿಂಗ್‌ಹ್ಯಾಮ್‌ನಲ್ಲಿ ಶುಕ್ರವಾರ ಆ್ಯಶಸ್ ಸರಣಿಯ ಮೊದಲ ಪಂದ್ಯ ಆರಂಭವಾಗಲಿದೆ.

ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ಡಬ್ಲ್ಯುಟಿಸಿಯ ವೇಳಾಪಟ್ಟಿಯನ್ನು ಬುಧವಾರ ಪ್ರಕಟಿಸಿದೆ. ಕಳೆದೆರಡೂ ಆವೃತ್ತಿಗಳ ರನ್ನರ್ಸ್ ಅಪ್ ಭಾರತ ತಂಡವು ವೆಸ್ಟ್ ಇಂಡೀಸ್ ಎದುರು ಜುಲೈನಲ್ಲಿ ಆಡಲಿರುವ ಟೆಸ್ಟ್ ಸರಣಿಯ ಮೂಲಕ ಅಭಿಯಾನ ಆರಂಭಿಸುವುದು. 2021ರ ಫೈನಲ್‌ನಲ್ಲಿ ಭಾರತ ತಂಡವು ನ್ಯೂಜಿಲೆಂಡ್ ಎದುರು ಹಾಗೂ 2023ರ ಫೈನಲ್‌ನಲ್ಲಿ ಆಸ್ಟ್ರೇಲಿಯಾ ವಿರುದ್ಧ ಭಾರತವು ಸೋತಿತ್ತು.

ವಿಂಡೀಸ್ ಎದುರಿನ ಸರಣಿಯಲ್ಲಿ ಭಾರತವು ಎರಡು ಟೆಸ್ಟ್‌ಗಳನ್ನು ಆಡ



ಡಬ್ಲ್ಯುಟಿಸಿ ಗದೆ

ಲಿದೆ. ಡಾಮ್ನಿಕಾ (ಜುಲೈ 12 ರಿಂದ 16) ಹಾಗೂ ಟ್ರಿನಿಡಾಡ್ (ಜುಲೈ 20 ರಿಂದ 24) ಕ್ರೀಡಾಂಗಣಗಳಲ್ಲಿ ನಡೆಯಲಿವೆ.

ಡಿಸೆಂಬರ್ ಮತ್ತು 2024ರ ಜನವರಿಯಲ್ಲಿ ದಕ್ಷಿಣ ಆಫ್ರಿಕಾ ಪ್ರವಾಸ ಕೈಗೊಳ್ಳಲಿರುವ ಭಾರತವು ಟೆಸ್ಟ್ ಸರಣಿ ಆಡಲಿದೆ. ಮುಂದಿನ ವರ್ಷದ ಜನವರಿ–ಫೆಬ್ರುವರಿಯಲ್ಲಿ ಇಂಗ್ಲೆಂಡ್ ಎದುರಿನ ಐದು ಟೆಸ್ಟ್‌ಗಳ ಸರಣಿಗೆ ಭಾರತವು ಆತಿಥ್ಯ ವಹಿಸುವರು. ಅದರ ನಂತರ ಬಾಂಗ್ಲಾದೇಶ ಹಾಗೂ ನ್ಯೂಜಿಲೆಂಡ್ ತಂಡಗಳ ವಿರುದ್ಧ ಸರಣಿಗಳೂ ನಡೆಯಲಿವೆ.

2024ರ ನವೆಂಬರ್ ಹಾಗೂ 2025ರ ಜನವರಿಯಲ್ಲಿ ಭಾರತ ತಂಡವು ಆಸ್ಟ್ರೇಲಿಯಾಕ್ಕೆ ತೆರಳಲಿದ್ದು ಬಾರ್ಡರ್–ಗಾವಸ್ಕರ್ ಟ್ರೋಫಿ ಸರಣಿಯಲ್ಲಿ ಆಡಲಿದೆ. ಇದು ಡಬ್ಲ್ಯುಟಿಸಿಯ ಕೊನೆಯ ಸರಣಿಯಾಗಲಿದೆ.

‘ಟೆಸ್ಟ್ ಕ್ರಿಕೆಟ್ ಬೆಳವಣಿಗೆಗೆ ಈ ಟೂರ್ನಿಯು ಹೊಸ ರೂಪ ನೀಡಿದೆ. ತಂಡಗಳ ನಡುವೆ ಉನ್ನತ ಗುಣಮಟ್ಟದ ಸ್ಪರ್ಧೆ ಏರ್ಪಡುತ್ತಿದೆ. ಎರಡು ವರ್ಷಗಳಲ್ಲಿ ಬೇರೆ ಬೇರೆ ತಂಡಗಳೂ ಚಾಂಪಿಯನ್ ಆಗಿವೆ. ಅದರಲ್ಲೂ ಈಚೆಗೆ ದ ಓವಲ್ ಕ್ರೀಡಾಂಗಣದಲ್ಲಿ ನಡೆದ ಫೈನಲ್‌ನಲ್ಲಿ ಅಪಾರ ಸಂಖ್ಯೆಯ ಪ್ರೇಕ್ಷಕರು ಸೇರಿದ್ದು ಟೆಸ್ಟ್ ಕ್ರಿಕೆಟ್‌ನ ಆಕರ್ಷಣೆಗೆ ನಿದರ್ಶನ’ ಎಂದು ಐಸಿಸಿ ಕ್ರಿಕೆಟ್ ವಿಭಾಗದ ಪ್ರಧಾನ ವ್ಯವಸ್ಥಾಪಕ ವಾಸೀಂ ಖಾನ್ ತಿಳಿಸಿದ್ದಾರೆ.

ಈ ಬಾರಿಯೂ ಒಂಬತ್ತು ತಂಡಗಳು ಕಣಕ್ಕಿಳಿಯಲಿವೆ. ಪ್ರತಿ ತಂಡವೂ ತವರಿನಲ್ಲಿ ಮೂರು ಸರಣಿ ಹಾಗೂ ತವರಿನಾಚೆ ಮೂರು ಸರಣಿಗಳನ್ನು ಆಡಲಿವೆ.

ಅಂಕಗಳ ಶೇಕಡಾವಾರು ಪದ್ಧತಿ ಮುಂದುವರಿಯಲಿದೆ. ಗೆಲ್ಲುವ ತಂಡಕ್ಕೆ 12, ಟೈ ತಲಾ 6 ಹಾಗೂ ಹಾಗೂ ಡ್ರಾ ಫಲಿತಾಂಶಕ್ಕೆ ಉಭಯ ತಂಡಗಳೂ ತಲಾ 4 ಅಂಕಗಳನ್ನು ಪಡೆಯಲಿವೆ.

ಡಬ್ಲ್ಯುಟಿಸಿಯ ಫೈನಲ್ ಪಂದ್ಯವು ಲಾರ್ಡ್ಸ್ ಕ್ರೀಡಾಂಗಣದಲ್ಲಿ ಆಯೋಜನೆಗೊಳ್ಳಲಿದೆ.

ಮುಖ್ಯಾಂಶಗಳು

- ಡಬ್ಲ್ಯುಟಿಸಿಗೆ ಆ್ಯಶಸ್ ಸರಣಿಯ ಮುನ್ನುಡಿ
- ಈ ಬಾರಿಯೂ ಒಂಬತ್ತು ತಂಡಗಳ ಪೈಪೋಟಿ
- ವಿಂಡೀಸ್ ಎದುರಿನ ಸರಣಿಯೊಂದಿಗೆ ಭಾರತದ ಅಭಿಯಾನ ಆರಂಭ

ಭಾರತ–ಲೆಬನಾನ್ ಮುಖಾಮುಖಿ ಇಂದು

ಫುಟ್‌ಬಾಲ್: ಫಿಫಾ ರ‍್ಯಾಂಕಿಂಗ್‌ನಲ್ಲಿ ಅಗ್ರ ನೂರರ ಮೇಲೆ ಚೆಟ್ರಿ ಬಳಗದ ಕಣ್ಣು

ಭುವನೇಶ್ವರ (ಪಿಟಿಐ): ಫಿಫಾ ರ‍್ಯಾಂಕಿಂಗ್‌ನಲ್ಲಿ ಅಗ್ರ ನೂರರೊಳಗಿನ ಸ್ಥಾನ ಗಳಿಸುವ ಛಲದಲ್ಲಿರುವ ಭಾರತ ಫುಟ್‌ಬಾಲ್ ತಂಡವು ಗುರುವಾರ ಇಂಟರ್‌ಕಾಂಟಿನೆಂಟಲ್ ಕಪ್ ಟೂರ್ನಿಯಲ್ಲಿ ಲೆಬನಾನ್ ತಂಡವನ್ನು ಎದುರಿಸಲಿದೆ.

ರೌಂಡ್ ರಾಬಿನ್ ಲೀಗ್ ಸುತ್ತಿನ ಕೊನೆಯ ಪಂದ್ಯದಲ್ಲಿ ಭಾರತವು ಆಡಲಿದೆ. ಎರಡನೇ ಪ್ರಶಸ್ತಿಯ ಮೇಲೆ ಕಣ್ಣಿಟ್ಟಿರುವ ತಂಡವು ಸುನಿಲ್ ಚೆಟ್ರಿ ನಾಯಕತ್ವದಲ್ಲಿ ಆಡಲಿದೆ. ‘ಬ್ಲ್ಯೂ ಟೈಗರ್ಸ್’ ಖ್ಯಾತಿಯ ತಂಡವು ಈ ಟೂರ್ನಿಯಲ್ಲಿ ಈಗಾಗಲೇ ಫೈನಲ್ ಪ್ರವೇಶಿಸಿದೆ. ಮಂಗೋಲಿಯಾ ಹಾಗೂ ವನವಾಟು ಎದುರಿನ ಪಂದ್ಯಗಳನ್ನು ಜಯಿಸಿತ್ತು.

ಲೆಬನಾನ್ ಎದುರಿನ ಪಂದ್ಯವು ಭಾರತದ ಮಟ್ಟಿಗೆ ಭಾನುವಾರ



ಸುನಿಲ್ ಚೆಟ್ರಿ

ನಡೆಯುವ ಫೈನಲ್‌ಗೂ ಮುನ್ನ ಪೂರ್ವ-ಸಿದ್ಧತೆಯ ವೇದಿಕೆಯಾಗಲಿದೆ.

ಆದರೆ, ಇಗೋರ್ ಸ್ಟಿಮ್ಯಾಚ್ ಕೋಚ್ ಆಗಿರುವ ಭಾರತ ತಂಡಕ್ಕೆ ಲೆಬನಾನ್ ಸವಾಲು ಸುಲಭವಲ್ಲ. ಭಾರತವು ರ‍್ಯಾಂಕಿಂಗ್‌ನಲ್ಲಿ 101 ಹಾಗೂ ಲೆಬನಾನ್ 99ನೇ ಸ್ಥಾನದಲ್ಲಿವೆ. ಇದರಿಂದಾಗಿ ಈ ಪಂದ್ಯದಲ್ಲಿ ಜಯಿಸಿದರೆ ಭಾರತ ತಂಡವು 100ರೊಳಗಿನ ಸ್ಥಾನಕ್ಕೆ ಲಗ್ಗೆ ಹಾಕುವ ಅವಕಾಶವಿದೆ.

2018ರಲ್ಲಿ ಮೊದಲ ಬಾರಿಗೆ ಇಂಟರ್‌ಕಾಂಟಿನೆಂಟಲ್ ಕಪ್ ಗೆದ್ದಿದ್ದ ಭಾರತ ತಂಡವು ನೂರರೊಳಗಿನ ಸ್ಥಾನಕ್ಕೇರಿತ್ತು. ಭಾರತವು 1996ರಲ್ಲಿ ಫಿಫಾ ರ‍್ಯಾಂಕಿಂಗ್‌ನಲ್ಲಿ 94ನೇ ಸ್ಥಾನಕ್ಕೇರಿದ್ದು ಇದುವರೆಗಿನ ಶ್ರೇಷ್ಠ ಸಾಧನೆಯಾಗಿದೆ. ಆಗ ಬೈಚುಂಗ್ ಭುಟಿಯಾ ಹಾಗೂ ಐ.ಎಂ. ವಿಜಯನ್ ಭಾರತ ತಂಡದ ಸಾಧನೆಯ ರೂವಾರಿಗಳಾಗಿದ್ದರು.

ಲೆಬನಾನ್ ತಂಡಕ್ಕೆ ಈ ಪಂದ್ಯ ‘ಮಾಡು ಇಲ್ಲವೇ ಮಡಿ’ ಎಂಬ ಸವಾಲಿನದ್ದು. ಕಳೆದ ಪಂದ್ಯದಲ್ಲಿ ತಂಡವು ಮಂಗೋಲಿಯಾ ವಿರುದ್ಧ ಸೋತಿದ್ದರಿಂದ ಭಾರತದ ಎದುರು ಕನಿಷ್ಠ ಪಕ್ಷ ಡ್ರಾ ಆದರೂ ಸಾಧಿಸಬೇಕಿದೆ. ಅಲೆಕ್ಸಾಂಡರ್ ಇಲಿಚ್ ಅವರ ತಂಡವು ಇಲ್ಲಿ ಡ್ರಾ ಅಥವಾ ಗೆಲುವು ಸಾಧಿಸಿದರೆ, ಫೈನಲ್‌ನಲ್ಲಿ ಮತ್ತೆ ಭಾರತಕ್ಕೆ ಎದುರಾಗಲಿದೆ.

‘ಪಂದ್ಯದ ಆರಂಭಿಕ ಹಂತದಲ್ಲಿಯೇ ಗೋಲು ಗಳಿಕೆ ಮಾಡುವುದು ಅಗತ್ಯವಾಗಿದೆ. ಆಟ ಮುಂದುವರಿದಂತೆ ಗೋಲು ಗಳಿಕೆಯು ಕಠಿಣವಾಗುತ್ತದೆ. ಮಂಗೋಲಿಯಾ ಎದುರಿನ ಪಂದ್ಯದಲ್ಲಿ ಲೆಬನಾನ್ ತಂಡದ ಆಟವನ್ನು ನೋಡಿದ್ದೇವೆ. ಅದರ ಕೆಲವು ಅಂಶಗಳನ್ನು ಅವಲೋಕಿಸಿ ಯೋಜನೆ ರೂಪಿಸುತ್ತೇವೆ’ ಎಂದು ಸ್ಟಿಮ್ಯಾಚ್ ಹೇಳಿದ್ದಾರೆ.

ಪಂದ್ಯ ಆರಂಭ: ರಾತ್ರಿ 7.20
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ 2

ಡೆಲ್ಲಿಗೆ ಪಾಂಟಿಂಗ್ ಮುಂದುವರಿಕೆ?

ನವದೆಹಲಿ (ಪಿಟಿಐ): ಆಸ್ಟ್ರೇಲಿಯಾ ತಂಡ ಮಾಜಿ ನಾಯಕ ರಿಕಿ ಪಾಂಟಿಂಗ್ ಅವರನ್ನು ಐಪಿಎಲ್‌ನಲ್ಲಿ ಆಡುವ ಡೆಲ್ಲಿ ಕ್ಯಾಪಿಟಲ್ಸ್ ತಂಡದ ಮುಖ್ಯ ಕೋಚ್ ಆಗಿ ಮುಂದುವರಿಸುವ ಸಾಧ್ಯತೆ ಇದೆ.

ಈಚೆಗೆ ಮುಗಿದ 16ನೇ ಆವೃತ್ತಿಯ ಐಪಿಎಲ್‌ನಲ್ಲಿ ಡೆಲ್ಲಿ ತಂಡವು ಒಂಬತ್ತನೇ ಸ್ಥಾನ ಪಡೆದಿತ್ತು. ಅದರಿಂದಾಗಿ ಮುಖ್ಯ ಕೋಚ್ ಬದಲಾವಣೆಯಾಗುವ ಮಾತುಗಳು ಕೇಳಿಬಂದಿದ್ದವು. ಆದರೆ ತಂಡದ ಸಹ ಮಾಲೀಕರಾದ ಪಾರ್ಥ್ ಜಿಂದಾಲ್ ಅವರು ಪಾಂಟಿಂಗ್ ಅವರನ್ನೇ ಮುಂದುವರಿಸುವ ಕುರಿತು ಸೂಚ್ಯವಾಗಿ ಹೇಳಿದ್ದಾರೆ.

‘ಮುಂದಿನ ವರ್ಷಗಳ ಐಪಿಎಲ್‌ಗಾಗಿ ಸಿದ್ಧತೆಗಳನ್ನು ಆರಂಭಿಸಿದ್ದೇವೆ. ಗಂಗೂಲಿ (ಸೌರವ್) ಮತ್ತು ರಿಕಿ ಪಾಂಟಿಂಗ್ ಅವರೊಂದಿಗೆ ನಾನು, ಕಿರಣ್ ಕೂಡ ತಂಡದ ಬೆಳವಣಿಗೆಗಾಗಿ ಅಪಾರ ಶ್ರಮವಹಿಸಿ ಕಾರ್ಯನಿರ್ವಹಿಸುತ್ತಿದ್ದೇವೆ. ಈ ಫ್ರ್ಯಾಂಚೈಸಿಯನ್ನು ಉನ್ನತಕ್ಕೇರಿಸಲು ಶ್ರಮಿಸುತ್ತಿದ್ದೇವೆ’ ಎಂದೂ ಜಿಂದಾಲ್ ತಿಳಿಸಿದ್ದಾರೆ.

ಇಂಡೊನೇಷ್ಯಾ ಓಪನ್: ಆಕರ್ಷಿ ಕಶ್ಯಪ್ ನಿರ್ಗಮನ

ಎರಡನೇ ಸುತ್ತಿಗೆ ಲಕ್ಷ್ಯ, ಶ್ರೀಕಾಂತ್

ಜಕಾರ್ತಾ (ಪಿಟಿಐ): ಕಾಮನ್‌ವೆಲ್ತ್ ಗೇಮ್ಸ್ ಚಾಂಪಿಯನ್, ಭಾರತದ ಲಕ್ಷ್ಯ ಸೇನ್ ಮತ್ತು ಕಿದಂಬಿ ಶ್ರೀಕಾಂತ್ ಅವರು ಬುಧವಾರ ನೇರ ಸೆಟ್‌ಗಳಲ್ಲಿ ತಮ್ಮ ಎದುರಾಳಿಗಳನ್ನು ಹಿಮ್ಮೆಟ್ಟಿಸಿ ಇಂಡೊನೇಷ್ಯಾ ಓಪನ್ ಸೂಪರ್ 1000 ಬ್ಯಾಡ್ಮಿಂಟನ್ ಟೂರ್ನಿಯ ಎರಡನೇ ಸುತ್ತಿಗೆ ಮುನ್ನಡೆದರು.

ವಿಶ್ವ ಕ್ರಮಾಂಕದಲ್ಲಿ 20ನೇ ಸ್ಥಾನದಲ್ಲಿರುವ ಲಕ್ಷ್ಯ ಕೇವಲ 32 ನಿಮಿಷಗಳ ಆಟದಲ್ಲಿ ಮಲೇಷ್ಯಾದ ಝಿ ಜಿಯಾ ಲೀ ಅವರ ಸವಾಲನ್ನು 21–17, 21–13 ರಿಂದ ಬದಿಗೊತ್ತಿದರು. ಮಲೇಷ್ಯಾ ಆಟಗಾರ ವಿಶ್ವ ಕ್ರಮಾಂಕದಲ್ಲಿ 11ನೇ ಸ್ಥಾನದಲ್ಲಿದ್ದಾರೆ.

ವಿಶ್ವದ 22ನೇ ಕ್ರಮಾಂಕದ ಆಟಗಾರ ಶ್ರೀಕಾಂತ್ ಇನ್ನೊಂದು ಪಂದ್ಯದಲ್ಲಿ ಚೀನಾದ ಗುವಾಂಗ್ ಝು ಲು ಅವರನ್ನು 21–13, 21–19 ರಿಂದ ಮಣಿಸಿದರು. ಇವರಿಬ್ಬರು ಐದು ಬಾರಿ ಮುಖಾಮುಖಿ ಆಗಿದ್ದು ಎಲ್ಲಾ ಐದೂ ಬಾರಿ ಶ್ರೀಕಾಂತ್, ಚೀನಾ ಎದುರಾಳಿ ವಿರುದ್ಧ ಜಯಗಳಿಸಿದ್ದಾರೆ.

ಮುಂದಿನ ಸುತ್ತಿನಲ್ಲಿ ಲಕ್ಷ್ಯ ಮತ್ತು ಶ್ರೀಕಾಂತ್ ಮುಖಾಮುಖಿ ಆಗಿದ್ದಾರೆ.



ಕಿದಂಬಿ ಶ್ರೀಕಾಂತ್ –ಎಪಿ ಚಿತ್ರ

ಭಾರತದ ಇನ್ನೊಬ್ಬ ಆಟಗಾರ ಪ್ರಿಯಾಂಶು ರಾಜಾವತ್‌ಗೆ ಥಾಯ್ಲೆಂಡ್‌ನ ಕುನ್ಲವುತ್ ವಿಟಿಡ್‌ಸರ್ನ್ ಅವರಿಂದ ವಾಕ್ ಓವರ್ ದೊರೆಯಿತು.

ಮಹಿಳೆಯರ ವಿಭಾಗದಲ್ಲಿ ಯುವ ಆಟಗಾರ್ತಿ ಆಕರ್ಷಿ ಕಶ್ಯಪ್ ಮೊದಲ ಸುತ್ತಿನಲ್ಲೇ ಹೊರಬಿದ್ದರು. ಎರಡನೇ ಶ್ರೇಯಾಂಕದ ಆನ್ ಸೆ ಯಂಗ್ (ಕೊರಿಯಾ) ಅವರಿಗೆ ಆಕರ್ಷಿ ಸಾಟಿಯಾಗಲಿಲ್ಲ. 21–10, 21–4ರಲ್ಲಿ ಗೆದ್ದ ಆನ್ ಸೆ ಎರಡನೇ ಸುತ್ತನ್ನು ಪ್ರವೇಶಿಸಿದರು.

ವಿಶ್ವಕಪ್ ಸ್ಕ್ವಾಷ್: ಭಾರತ ಸೆಮಿಫೈನಲ್‌ಗೆ

ಚೆನ್ನೈ (ಪಿಟಿಐ): ಎರಡನೇ ಶ್ರೇಯಾಂಕ ಹೊಂದಿರುವ ಭಾರತ ತಂಡ ಬುಧವಾರ ದಕ್ಷಿಣ ಆಫ್ರಿಕಾ ತಂಡವನ್ನು 4–0 ಅಂತರದಿಂದ ಮಣಿಸಿ ಇಲ್ಲಿ ನಡೆಯುತ್ತಿರುವ ವಿಶ್ವಕಪ್ ಸ್ಕ್ವಾಷ್ ಟೂರ್ನಿಯಲ್ಲಿ ಸೆಮಿಫೈನಲ್ ಪ್ರವೇಶಿಸಿದೆ.

ಆತಿಥೇಯ ತಂಡದ ತನ್ವಿ ಖನ್ನಾ, ಸೌರವ್ ಘೋಷಾಲ್, ಜೋಶ್ನಾ ಚಿಣ್ಣಪ್ಪ ಮತ್ತು ಅಭಯ್ ಸಿಂಗ್ ಅವರು ಎದುರಾಳಿಗಳ ಸವಾಲನ್ನು ಸಮರ್ಥವಾಗಿ ಎದುರಿಸಿದರು.

ಮೊದಲ ಪಂದ್ಯದಲ್ಲಿ 26 ವರ್ಷದ ತನ್ವಿ ಖನ್ನಾ ಅವರು ಹೇಲಿ ವಾರ್ಡ್ ಅವರನ್ನು ಹಿಮ್ಮೆಟ್ಟಿಸಿದರು. ಅವರು 7-4, 7-2, 7-3 ಅಂತರದಿಂದ ಗೆದ್ದರು.

ಬಳಿಕ ನಡೆದ ಪಂದ್ಯದಲ್ಲಿ ಭಾರತದ ಅಗ್ರ ಶ್ರೇಯಾಂಕದ ಸೌರವ್ ಘೋಷಾಲ್ ಅವರಿಗೆ ದೆವಾಲ್ಡ್ ವ್ಯಾನ್ ನಿಕರ್ಕ್ ಮೊದಲ ಗೇಮ್‌ನಲ್ಲಿ ಪ್ರಬಲ ಸವಾಲು ನೀಡಿದರು. ಅವರು 7–6, 7–4, 7–1 ಅಂತರದಿಂದ ಗೆಲುವು ಸಾಧಿಸಿದರು.

ಅನುಭವಿ ಆಟಗಾರ್ತಿ ಜೋಶ್ನಾ ಚಿಣ್ಣಪ್ಪ ಲಿಜೆಲ್ ಮುಲ್ಲರ್ ವಿರುದ್ಧ 3-1ರಿಂದ ಗೆದ್ದು ಭಾರತಕ್ಕೆ 3-0 ಮುನ್ನಡೆ ತಂದುಕೊಟ್ಟರು. ಮೊದಲ ಎರಡು ಗೇಮ್‌ಗಳಲ್ಲಿ ಉತ್ತಮ ಪ್ರದರ್ಶನ ನೀಡಿದ ಅವರು 3ನೇ ಗೇಮ್‌ನಲ್ಲಿ ಹಿನ್ನಡೆ ಅನುಭವಿಸಿದರು. ನಾಲ್ಕನೇ ಗೇಮ್‌ನಲ್ಲಿ ಮತ್ತೆ ಪುಟಿದೆದ್ದರು. 7–4, 7–3, 3–7, 7–1ರಲ್ಲಿ ವಿಜಯಿಯಾದರು.

ಅಭಯ್ ಸಿಂಗ್ ಅವರು ಜೀನ್ ಪಿಯರ್ ಬ್ರಿಟ್ಸ್ ಅವರನ್ನು 7-4, 3-7, 7-6, 7-5ರಲ್ಲಿ ಸೋಲಿಸಿದರು.

ಭಾರತ ತಂಡದವರು ಮಂಗಳವಾರ ಹಾಂಗ್‌ಕಾಂಗ್ ತಂಡವನ್ನು 4–0 ರಲ್ಲಿ ಮಣಿಸಿ ಶುಭಾರಂಭ ಮಾಡಿದ್ದರು. ‘ಬಿ’ ಗುಂಪಿನಲ್ಲಿರುವ ಭಾರತವು ಮುಂದೆ ಜಪಾನ್ ತಂಡವನ್ನು ಎದುರಿಸಲಿದೆ.

ಟೆನಿಸ್: ಸೆಮಿಫೈನಲ್‌ಗೆ ಶ್ರೇಯಾಂತ್, ಶರಣ್

ಮಂಡ್ಯ: ಎರಡನೇ ಶ್ರೇಯಾಂಕದ ಶ್ರೇಯಾಂತ್ ಎಂ., ನಾಲ್ಕನೇ ಶ್ರೇಯಾಂಕದ ಶರಣ್ ಸೊಮಾಸಿ ಜೊತೆಗೆ ಶ್ರೇಯಾಂಕರಹಿತ ಆಟಗಾರರಾದ ನಿಹಾರ್ ಸುರೇಶ್ ಕುಮಾರ್ ಮತ್ತು ಆರುಷ್ ಕೋಟೆ ಅವರು ಅಖಿಲ ಭಾರತ 16 ವರ್ಷದೊಳಗಿನವರ ರ‍್ಯಾಂಕಿಂಗ್ ಟೆನಿಸ್ ಟೂರ್ನಿಯ ಬಾಲಕರ ಸಿಂಗಲ್ಸ್ ಸೆಮಿಫೈನಲ್ ತಲುಪಿದ್ದಾರೆ.

ಪಿಇಟಿ ಟೆನಿಸ್ ಕ್ರೀಡಾಂಗಣದ ಅಂಕಣದಲ್ಲಿ ಬುಧವಾರ ನಡೆದ ಕ್ವಾರ್ಟರ್‌ಫೈನಲ್ ಪಂದ್ಯಗಳಲ್ಲಿ ನಿಹಾರ್ 6–4, 6–2 ರಿಂದ ಅಗ್ರ ಶ್ರೇಯಾಂಕದ ನಿಖಿತ್ ಕೋಡಿಶೆಟ್ಟರ್ ವಿರುದ್ಧ ಜಯಗಳಿಸಿದರೆ, ಆರುಷ್ 6–7, 6–2, 6–0 ಯಿಂದ ಲಿಖಿತ್ ಎಸ್.ಗೌಡ ವಿರುದ್ಧ ಗೆಲುವನ್ನು ದಾಖಲಿಸಿದರು. ಶರಣ್ ಸೊಮಾಸಿ 6–3, 5–7, 6–1ರಿಂದ ಅನಂತ ಕೃಷ್ಣನ್ ವಿರುದ್ಧ, ಶ್ರೇಯಾಂತ್ ಎಂ. 6–3, 6–2 ರಿಂದ ತೇಜಸ್ ಆರ್. ವಿರುದ್ಧ ಜಯಗಳಿಸಿದರು.

ಬಾಲಕಿಯರ ವಿಭಾಗದ ಕ್ವಾರ್ಟರ್‌ಫೈನಲ್ ಪಂದ್ಯಗಳಲ್ಲಿ ಕಶ್ವಿ ಸುನೀಲ್ 6–3, 6–1 ರಿಂದ ಅದಿತಿ ಖಾನಾಪುರೆ ವಿರುದ್ಧ, ಗೌರಿ ವೈ. 6–2, 6–4ರಿಂದ ತೀಕ್ಷ್ಣಾ ನಾಗೇಂದ್ರ ವಿರುದ್ಧ, ನಯನಾ ಪಾರ್ಥಸಾರಥಿ 6–0, 6–3 ರಿಂದ ಶ್ರೀಯಾ ವಿರುದ್ಧ ಗೆಲುವನ್ನು ದಾಖಲಿಸಿದರು. ಇನ್ನೊಂದು ಕ್ವಾರ್ಟರ್‌ಫೈನಲ್‌ನಲ್ಲಿ ಕೇರಳದ ನೇಹಲ್ ಮರಿಯಾ ಮ್ಯಾಥ್ಯು 6–0, 6–0 ಯಿಂದ ವಿಧಿ ವಿರುದ್ಧ ಜಯಗಳಿಸಿದರು.


20 ಯುವ ಆಟಗಾರರಿಗೆ ಅವಕಾಶ

ಎನ್‌ಸಿಎ ಶಿಬಿರಕ್ಕೆ ಅರ್ಜುನ್ ತೆಂಡೂಲ್ಕರ್

ನವದೆಹಲಿ (ಪಿಟಿಐ): ಯುವ ಕ್ರಿಕೆಟ್ ಆಲ್‌ರೌಂಡರ್‌ಗಳಿಗಾಗಿ ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿಯಲ್ಲಿ ವಿಶೇಷ ಶಿಬಿರವನ್ನು ಆಯೋಜಿಸಲಾಗಿದೆ. ಮುಂಬೈನ ಅರ್ಜುನ್ ತೆಂಡೂಲ್ಕರ್ ಸೇರಿದಂತೆ 20 ಮಂದಿ ಯುವ ಆಲ್‌ರೌಂಡರ್‌ಗಳನ್ನು ಈ ಶಿಬಿರಕ್ಕೆ ಆಯ್ಕೆ ಮಾಡಲಾಗಿದೆ.

ಬೆಂಗಳೂರಿನಲ್ಲಿರುವ ಎನ್‌ಸಿಎನಲ್ಲಿ ಮೂರು ವಾರಗಳ ಕಾಲ ಈ ಶಿಬಿರವು ನಡೆಯಲಿದೆ. ದಿಗ್ಗಜ ಸಚಿನ್ ತೆಂಡೂಲ್ಕರ್ ಅವರ ಪುತ್ರ ಅರ್ಜುನ್ ಕೂಡ ಭಾಗವಹಿಸುವರು. ಅವರು ಹೋದ ರಣಜಿ ಋತುವಿನಲ್ಲಿ ಗೋವಾ ತಂಡದಲ್ಲಿ ಆಡಿದ್ದರು. ಐಪಿಎಲ್‌ನಲ್ಲಿ ಮುಂಬೈ ಇಂಡಿಯನ್ಸ್ ತಂಡದಲ್ಲಿದ್ದಾರೆ.

‘ಇದೇ ವರ್ಷ ಏಷ್ಯಾ ಕಪ್ (23 ವರ್ಷದೊಳಗಿನವರು) ಕ್ರಿಕೆಟ್ ಟೂರ್ನಿ ನಡೆಯಲಿದೆ. ಈ ಟೂರ್ನಿಯಲ್ಲಿ ಆಡುವ ತಂಡ ಕಟ್ಟಲು ಪ್ರತಿಭಾನ್ವಿತ ಆಟಗಾರರ ಶೋಧ ಆರಂಭವಾಗಿದೆ. ಅದರ ಭಾಗವಾಗಿ ಆಲ್‌ರೌಂಡರ್‌ಗಳ ಶಿಬಿರ ಆಯೋಜಿಸಲಾಗುತ್ತಿದೆ. ಎನ್‌ಸಿಎ ಮುಖ್ಯಸ್ಥರಾಗಿರುವ ವಿವಿಎಸ್ ಲಕ್ಷ್ಮಣ್ ಅವರು ಈ ಕುರಿತು ಬಹಳ ಆಸಕ್ತಿಯಿಂದ ಕಾರ್ಯನಿರ್ವಹಿಸುತ್ತಿದ್ದಾರೆ. ಬಹುಕೌಶಲ ಇರುವವರನ್ನು ಬೆಳೆಸುವತ್ತ ಚಿತ್ತ ನೆಟ್ಟಿದ್ದಾರೆ’ ಎಂದು



ಅರ್ಜುನ್ ತೆಂಡೂಲ್ಕರ್

ಬಿಸಿಸಿಐನ ಮೂಲಗಳು ತಿಳಿಸಿವೆ.

ರಾಷ್ಟ್ರೀಯ ಸೀನಿಯರ್ ಆಯ್ಕೆ ಸಮಿತಿ ಮುಖ್ಯಸ್ಥ ಶಿವಸುಂದರ್ ದಾಸ್ (ಹಂಗಾಮಿ) ಈ ಶಿಬಿರಕ್ಕೆ ಆಟಗಾರರನ್ನು ಆಯ್ಕೆ ಮಾಡಿದ್ದಾರೆನ್ನಲಾಗಿದೆ.

‘ಅಪ್ಪಟ ಆಲ್‌ರೌಂಡರ್‌ಗಳಿಗಾಗಿಯೇ ಶಿಬಿರ ಆಯೋಜಿಸಲಾಗಿದೆ. ಅದರಲ್ಲಿ ಕೆಲವರು ಬೌಲಿಂಗ್ ಆಲ್‌ರೌಂಡರ್‌ಗಳು ಇನ್ನುಳಿದವರು ಬ್ಯಾಟಿಂಗ್ ಆಲ್‌ರೌಂಡರ್‌ಗಳಾಗಿದ್ದಾರೆ. ಈ ಪ್ರತಿಭಾನ್ವಿತರಲ್ಲಿರುವ ಸಾಮರ್ಥ್ಯವನ್ನು ಗುರುತಿಸಿ ಪ್ರೋತ್ಸಾಹ ನೀಡುವುದು ಮುಖ್ಯ ಉದ್ದೇಶವಾಗಿದೆ. ಮುಂದಿನ ಹಂತಕ್ಕೆ ಸಿದ್ಧಗೊಳಿಸುವುದಾಗಿದೆ’ ಎಂದೂ ಮೂಲಗಳು ತಿಳಿಸಿವೆ.

ಸೌರಾಷ್ಟ್ರದ ಎಡಗೈ ಮಧ್ಯಮವೇಗಿ ಮತ್ತು ಬಿರುಸಿನ ಹೊಡೆತಗಳ ಬ್ಯಾಟರ್ ಆಗಿರುವ ಚೇತನ್ ಸಕಾರಿಯಾ, ಪಂಜಾಬ್ ತಂಡದ ಅಭಿಷೇಕ್ ಶರ್ಮಾ, ಗೋವಾದ ಆಫ್‌ಸ್ಪಿನ್ ಆಲ್‌ರೌಂಡರ್ ಮೋಹಿತ್ ರೇಡ್ಕರ್, ರಾಜಸ್ಥಾನದ ಮಾನವ್ ಸುತಾರ್, ದೆಹಲಿಯ ವೇಗದ ಬೌಲರ್ ಹರ್ಷಿತ್ ರಾಣಾ ಹಾಗೂ ಮಧ್ಯಮವೇಗಿ ದಿವಿಜ್ ಮೆಹ್ರಾ ಅವರು ಈ ಶಿಬಿರದಲ್ಲಿದ್ದಾರೆ.

‘ಈಚೆಗೆ ಇಂಗ್ಲೆಂಡ್‌ನಲ್ಲಿ ನಡೆದ ಡಬ್ಲ್ಯುಟಿಸಿ ಫೈನಲ್‌ನಲ್ಲಿ ಭಾರತ ತಂಡದ ನೆಟ್ ಬೌಲರ್ ಆಗಿ ಹರ್ಷಿತ್ ತೆರಳಬೇಕಿತ್ತು. ಅವರ ಪ್ರವಾಸಿ ವೀಸಾ ಮತ್ತಿತರ ದಾಖಲೆಗಳನ್ನು ಸಿದ್ಧಗೊಳಿಸಲಾಗಿತ್ತು. ಆದರೆ ಕೊನೆಯ ಹಂತದಲ್ಲಿ ಆಂಧ್ರದ ಯರಾ ಪೃಥ್ವಿರಾಜ್ ಅವರನ್ನು ಕಳುಹಿಸಲಾಯಿತು. ಹರ್ಷಿತ್ ಉತ್ತಮ ಬ್ಯಾಟರ್ ಕೂಡ ಹೌದು. ಅವರನ್ನು ಆಯ್ಕೆಗಾರರು ಗುರುತಿಸಿರುವುದು ಉತ್ತಮ ಸಂಗತಿ’ ಎಂದು ಡಿಡಿಸಿಎ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಆರ್ಚರಿ: ಅರ್ಹತಾ ಸುತ್ತಿನಲ್ಲಿ ಅದಿತಿ ದಾಖಲೆ

ಮೆಡೆಲಿನ್, ಕೊಲಂಬಿಯಾ (ಪಿಟಿಐ): ಭಾರತದ ಅದಿತಿ ಸ್ವಾಮಿ ಇಲ್ಲಿ ನಡೆದ 18 ವರ್ಷದೊಳಗಿನವರ ಆರ್ಚರಿ ವಿಶ್ವಕಪ್ ಮೂರನೇ ಸ್ಟೇಜ್‌ನಲ್ಲಿ ವಿಶ್ವದಾಖಲೆ ನಿರ್ಮಿಸಿದರು.

705 ಅಂಕಗಳನ್ನು ಕಲೆಹಾಕಿದ ಅದಿತಿ ಅವರು ಹೋದ ತಿಂಗಳಷ್ಟೇ ಲಿಕೊ ಅರೆಯೊಲಾ (698) ನಿರ್ಮಿಸಿದ್ದ ದಾಖಲೆಯನ್ನು ಮುರಿದರು.

16 ವರ್ಷದ ಅದಿತಿ ಹೋದ ಡಿಸೆಂಬರ್‌ನಲ್ಲಿ ನಡೆದಿದ್ದ ಏಷ್ಯಾ ಕಪ್ ಲೆಗ್ 3 ಸ್ಪರ್ಧೆಯಲ್ಲಿ ಬೆಳ್ಳಿ ಪದಕ ಜಯಿಸಿದ್ದರು. ಮಂಗಳವಾರ ಇಲ್ಲಿ ನಡೆದಿದ್ದ ಮಹಿಳೆಯರ ಕಂಪೌಂಡ್ ವಿಭಾಗದಲ್ಲಿ 711 ಅಂಕಗಳನ್ನು ಗಳಿಸಿದರು.

’ಇದೊಂದು ಅದ್ಭುತ ಅನುಭವ ಹಾಗೂ ಅಪಾರ ಸಂತಸವಾಗುತ್ತಿದೆ. ಈ



ಅದಿತಿ ಸ್ವಾಮಿ

ಮೊತ್ತವನ್ನು ಗಳಿಸುವ ಯೋಚನೆಯೇ ನನ್ನಲ್ಲಿ ಇರಲಿಲ್ಲ. ಈ ರೀತಿಯ ಶೂಟ್ ಮಾಡಿರುವುದು ಆತ್ಮವಿಶ್ವಾಸ ಹೆಚ್ಚಿಸಿದೆ. ನನಗಿನ್ನೂ 16 ವರ್ಷವಷ್ಟೇ’ ಎಂದು ಅದಿತಿ ಹೇಳಿದರು.

50 ಮೀಟರ್ಸ್ 72 ಆ್ಯರೊ ವಿಭಾಗದಲ್ಲಿ ಕಠಿಣ ಸ್ಪರ್ಧೆ ನಡೆಯಿತು. ವಿಶ್ವಕಪ್ ಸ್ಪರ್ಧೆಯಲ್ಲಿ ಎರಡು ಚಿನ್ನ ಗೆದ್ದಿರುವ ಜ್ಯೋತಿ ಸುರೇಖಾ ವೆನ್ನಂ ಮತ್ತು ಆತಿಥೇಯ ತಂಡದ ಸಾರಾ ಲೊಪೆಜ್ ಅವರ ಕಠಿಣ ಸ್ಪರ್ಧೆಯನ್ನು ಅದಿತಿ ಎದುರಿಸಿದರು. ಮಹಿಳಾ ವಿಭಾಗದಲ್ಲಿ ಪರನೀತ್ ಕೌರ್ (700) ಕೂಡ ಮಿಂಚಿದರು.

ಅನುಭವಿ ಆರ್ಚರ್ ಅಭಿಷೇಕ್ ವರ್ಮಾ (707) ಎಂಟನೇ ಸ್ಥಾನ ಪಡೆದರು. ಒಜಸ್ ಡಿಯೊಟೆಲ್ 13ನೇ ಸ್ಥಾನ ಹಾಗೂ ಪ್ರಥಮೇಶ್ ಸಮಾಧಾನ್ ಜಾವಕರ್ 19ನೇ ಸ್ಥಾನ ಗಳಿಸಿದರು. ಭಾರತದ ಕಂಪೌಂಡ್ ಪುರುಷರ ತಂಡವು 2112 ಅಂಕ ಗಳಿಸಿ ಎರಡನೇ ಸ್ಥಾನಕ್ಕೇರಿತು.

ಸ್ಕೇಟಿಂಗ್: ಏಕಾಂತ್‌ಗೆ ನಾಲ್ಕು ಪದಕ

ಬೆಂಗಳೂರು: ಕರ್ನಾಟಕದ ಎನ್. ಏಕಾಂತ್ ಕುಮಾರ್, ಭಾರತ ರೋಲರ್ ಸ್ಕೇಟಿಂಗ್ ಫೆಡರೇಷನ್ ಈಚೆಗೆ ರಾಂಚಿಯಲ್ಲಿ ಆಯೋಜಿಸಿದ್ದ ರಾಷ್ಟ್ರ ಮಟ್ಟದ ರೋಲರ್ ಸ್ಕೇಟಿಂಗ್ ಚಾಂಪಿಯನ್ ಷಿಪ್‌ನಲ್ಲಿ ಮೂರು ಸ್ವರ್ಣ ಸೇರಿದಂತೆ ನಾಲ್ಕು ಪದಕ ಗೆದ್ದಿದ್ದಾರೆ.

14ರಿಂದ 17 ವರ್ಷ ವಯೋಮಾನದ ವಿಭಾಗದಲ್ಲಿ ಇನ್‌ಲೈನ್ ಸ್ಕೇಟಿಂಗ್ ಜೂನಿಯರ್ ವಿಭಾಗದಲ್ಲಿ ಸ್ಪರ್ಧಿಸಿದ್ದ ಏಕಾಂತ್, 1000 ಮೀ ರೋಡ್ ರೇಸ್, ಎಲಿಮಿನೇಷನ್ ರೋಡ್ ರೇಸ್, ಪಾಯಿಂಟ್ ಟು ಪಾಯಿಂಟ್ ರೇಸ್‌ನಲ್ಲಿ ಸ್ವರ್ಣ ಪದಕ ಮತ್ತು ಮ್ಯಾರಥಾನ್ 42 ಕಿ.ಮೀ. ರೇಸ್‌ನಲ್ಲಿ ಕಂಚಿನ ಪದಕ ಗಳಿಸಿದ್ದಾರೆ.

ಬೆಂಗಳೂರಿನ ಫೋರ್ಸ್ ಒನ್ ಸ್ಕೇಟಿಂಗ್ ಕ್ಲಬ್‌ನ ಪ್ರತೀಕ್‌ರಾಜ್ ಅವರಿಂದ ತರಬೇತಿ ಪಡೆಯುತ್ತಿರುವ ಅವರು, ಅಪೊಲೊ ನ್ಯಾಷನಲ್ ಪಬ್ಲಿಕ್ ಸ್ಕೂಲ್‌ನ 10ನೇ ತರಗತಿ ವಿದ್ಯಾರ್ಥಿ. ಹೊಸಕೆರೆಹಳ್ಳಿಯ ನವೀನ್ ಕುಮಾರ್ ಮತ್ತು ಟಿ.ಆರ್. ಸೌಮ್ಯಾ ದಂಪತಿಯ ಪುತ್ರ.

ದೈಹಿಕ ಶಿಕ್ಷಣ ಶಿಕ್ಷಕರಿಗೆ ಚೆಸ್ ಕಾರ್ಯಾಗಾರ

ಬೆಂಗಳೂರು: ಶಿವಮೊಗ್ಗದ ಯಾದವ ಸ್ಕೂಲ್ ಆಫ್ ಚೆಸ್ ಸಂಸ್ಥೆಯಿಂದ ರಾಜ್ಯದ ಶಾಲಾ– ಕಾಲೇಜುಗಳ ದೈಹಿಕ ಶಿಕ್ಷಣ ಶಿಕ್ಷಕರಿಗೆ ಜಿಲ್ಲೆಗಳಲ್ಲಿ ಒಂದು ದಿನದ ಚೆಸ್ ಕಾರ್ಯಾಗಾರ ನಡೆಯಲಿದೆ.

ಕಾರ್ಯಾಗಾರದಲ್ಲಿ ಚೆಸ್ ಆಟದ ನಿಯಮಾವಳಿಗಳ ಬಗ್ಗೆ, ತಳಕು (ಪೇರಿಂಗ್), ಟೈಬ್ರೇಕ್ ನಿಯಮಾವಳಿಗಳ ಬಗ್ಗೆ ತಿಳಿಸಿಕೊಡಲಾಗುವುದು. ಆಸಕ್ತರು ಮಾಹಿತಿಗೆ ಮೊ: 9242401702 ಸಂಪರ್ಕಿಸಬಹುದು ಎಂದು ಆರ್ಬಿಟರ್ ಪ್ರಾಣೇಶ್ ಯಾದವ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಜ್ಮುಲ್ ಹುಸೇನ್ ಬಿರುಸಿನ ಶತಕ

ಢಾಕಾ (ಎಎಫ್‌ಪಿ): ನಜ್ಮುಲ್ ಹುಸೇನ್ ಅವರ ಭರ್ಜರಿ ಶತಕದ ನೆರವಿನಿಂದ ಬಾಂಗ್ಲಾದೇಶ ತಂಡ, ಢಾಕಾದಲ್ಲಿ ಅಫ್ಗಾನಿಸ್ತಾನ ವಿರುದ್ಧ ನಡೆಯುತ್ತಿರುವ ಏಕೈಕ ಟೆಸ್ಟ್ ಪಂದ್ಯದ ಮೊದಲ ದಿನವಾದ ಬುಧವಾರ ಮೇಲುಗೈ ಸಾಧಿಸಿತು. ಶೇರ್–ಇ–ಬಾಂಗ್ಲಾ ನ್ಯಾಷನಲ್ ಕ್ರೀಡಾಂಗಣದಲ್ಲಿ ದಿನದಾಟ ಮುಗಿದಾಟ ಆತಿಥೇಯ ತಂಡ 5 ವಿಕೆಟ್‌ಗೆ 362 ರನ್ ಗಳಿಸಿತು

24 ವರ್ಷದ ನಜ್ಮುಲ್ ಹುಸೇನ್ 175 ಎಸೆತಗಳಲ್ಲಿ 146 ರನ್ ಬಾರಿಸಿದರು. ಇದರಲ್ಲಿ 23 ಬೌಂಡರಿಗಳಿದ್ದವು. ಎರಡನೇ ವಿಕೆಟ್‌ಗೆ ಮಹ್ಮದುಲ್ ಹಸನ್ (76) ಜೊತೆಗೆ ಅವರು 212 ರನ್‌ಗಳ ದೊಡ್ಡ ಜೊತೆಯಾಟದಲ್ಲಿ ಭಾಗಿಯಾದರು.

ನಜ್ಮುಲ್ ಅವರಿಗೆ ಇದು ಟೆಸ್ಟ್‌ಗಳಲ್ಲಿ 3ನೇ ಶತಕ. ಹಸನ್ ಅವರಿಗೆ ಇದು ಮೂರನೇ ಅರ್ಧ ಶತಕ.

ಮುಷ್ಫಿಕುರ್ ರಹೀಂ 41 ರನ್ ಗಳಿಸಿದ್ದು, ಅವರ ಜೊತೆ ಮೆಹಿದಿ ಹಸನ್ ಮಿರಾಜ್ 43 ರನ್‌ಗಳೊಡನೆ ಎರಡನೇ ದಿನದಾಟ ಮುಂದುವರಿಸಲಿದ್ದಾರೆ.

ಅನುಭವಿ ಸ್ಪಿನ್ನರ್ ರಶೀದ್ ಖಾನ್ ಅವರ ಅನುಪಸ್ಥಿತಿಯಲ್ಲಿ ಅಫ್ಗಾನಿಸ್ತಾನದ ಬೌಲಿಂಗ್ ದಾಳಿಯನ್ನು ಬಾಂಗ್ಲಾ ಬ್ಯಾಟರ್‌ಗಳು ಆರಂಭದಿಂದಲೇ ದಂಡಿಸಿದರು. ಟೆಸ್ಟ್‌ಗೆ ಪದಾರ್ಪಣೆ ಮಾಡಿದ ಮಧ್ಯಮ ವೇಗದ ಬೌಲರ್ ನಿಜತ್ ಮಸೂದ್ 67 ರನ್ನಿಗೆ 2 ವಿಕೆಟ್ ಪಡೆದು ಯಶಸ್ವಿ ಎನಿಸಿದರು.


ರಾಷ್ಟ್ರೀಯ ಅಂತರ ರಾಜ್ಯ ಅಥ್ಲೆಟಿಕ್ಸ್ ಇಂದಿನಿಂದ ● ಏಷ್ಯನ್ ಗೇಮ್ಸ್‌ಗೆ ಆಯ್ಕೆ ಟ್ರಯಲ್ಸ್

ದೇಶದ ಪ್ರಮುಖ ಅಥ್ಲೀಟುಗಳಿಗೆ ಸತ್ವಪರೀಕ್ಷೆ

ಭುವನೇಶ್ವರ (ಪಿಟಿಐ): ನಿರೀಕ್ಷೆಯಂತೆ ಒಲಿಂಪಿಕ್ ಜಾವೆಲಿನ್ ಚಾಂಪಿಯನ್ ನೀರಜ್ ಚೋಪ್ರಾ ಅವರನ್ನು ಬಿಟ್ಟು ದೇಶದ ಪ್ರಮುಖ ಅಥ್ಲೀಟುಗಳೆಲ್ಲರೂ ಗುರುವಾರ ಆರಂಭವಾಗುವ ರಾಷ್ಟ್ರೀಯ ಅಂತರ ರಾಜ್ಯ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ನಲ್ಲಿ ಭಾಗವಹಿಸಲಿದ್ದು, ಏಷ್ಯನ್ ಗೇಮ್ಸ್‌ಗೆ ಸ್ಥಾನ ಕಾದಿರಿಸಲು ಪ್ರಯತ್ನಿಸಲಿದ್ದಾರೆ.

ಚೀನಾದ ಹಾಂಗ್‌ಜೌನಲ್ಲಿ ಸೆಪ್ಟೆಂಬರ್ 23 ರಿಂದ ಅಕ್ಟೋಬರ್ 8ರವರೆಗೆ ನಡೆಯಲಿರುವ ಏಷ್ಯನ್ ಕ್ರೀಡಾಕೂಟಕ್ಕೆ ಅರ್ಹತೆ ಪಡೆಯಲು ಕಳಿಂಗ ಕ್ರೀಡಾಂಗಣದಲ್ಲಿ ನಡೆಯುವ ಈ ಚಾಂಪಿಯನ್‌ಷಿಪ್ ಕೊನೆಯ ಅವಕಾಶವಾಗಿದೆ.

ಚೋಪ್ರಾ ಅವರು ಸ್ನಾಯುನೋವಿನಿಂದ ಚೇತರಿಸಿಕೊಳ್ಳುತ್ತಿದ್ದಾರೆ. ಒಂದೊಮ್ಮೆ ಸ್ಪರ್ಧೆಗೆ ಅರ್ಹರಾದ್ದರೂ ಅವರಿಗೆ ವಿನಾಯಿತಿ ಸಿಗುತಿತ್ತು. ಆಗಸ್ಟ್‌ನಲ್ಲಿ ಬುಡಾಪೆಸ್ಟ್‌ನಲ್ಲಿ ನಡೆಯಲಿರುವ ವಿಶ್ವ ಚಾಂಪಿಯನ್‌ಷಿಪ್‌ಗೆ ಮುನ್ನ ವಿಶ್ವದ ಪ್ರಮುಖ ಕೂಟಗಳಲ್ಲಿ ಪಾಲ್ಗೊಳ್ಳಲು ಅವರು ತರಬೇತಿ ಪಡೆಯಬೇಕಾಗುತಿತ್ತು. 3,000 ಮೀ. ಸ್ಟೀಪಲ್‌ಚೇಸ್‌ನಲ್ಲಿ ಕೆನ್ಯಾ ಅಥ್ಲೀಟುಗಳ ಪಾರಮ್ಯಕ್ಕೆ ಸಡ್ಡು ಹೊಡೆದ ಕಾಮನ್‌ವೆಲ್ತ್ ಗೇಮ್ಸ್ ಬೆಳ್ಳಿ ಪದಕ ವಿಜೇತ ಅವಿನಾಶ್ ಸಾಬ್ಳೆ ಅವರಿಗೂ



ಶೈಲಿ ಸಿಂಗ್

ವಿನಾಯಿತಿ ನೀಡಲಾಗಿದೆ.

ಏಷ್ಯನ್ ಗೇಮ್ಸ್ ಆಯ್ಕೆಗೆ ಪರಿಗಣಿಸಬೇಕಾದರೆ ಅಂಥ ಅಥ್ಲೀಟುಗಳೆಲ್ಲರೂ ರಾಷ್ಟ್ರೀಯ ಅಂತರ ರಾಜ್ಯ ಅಥ್ಲೆಟಿಕ್ಸ್‌ನಲ್ಲಿ ಪಾಲ್ಗೊಳ್ಳುವುದು ಕಡ್ಡಾಯ ಎಂದು ಭಾರತ ಅಥ್ಲೆಟಿಕ್ ಫೆಡರೇಷನ್ ಈ ವರ್ಷದ ಆರಂಭದಲ್ಲೇ ಸ್ಪಷ್ಟಪಡಿಸಿತ್ತು.

ಚೋಪ್ರಾ ಮತ್ತು ಸಾಬ್ಳೆ ಅನುಪಸ್ಥಿತಿಯಲ್ಲಿ ಲಾಂಗ್‌ಜಂಪ್ ಪಟು ಮುರಳಿ ಶ್ರೀಶಂಕರ್ ಅವರು ಪ್ರಮುಖ ಆಕರ್ಷಣೆಯಾಗಿದ್ದಾರೆ. ಕಳೆದ ವಾರ ಪ್ಯಾರಿಸ್‌ನಲ್ಲಿ ನಡೆದ ಡೈಮಂಡ್ ಲೀಗ್‌ನಲ್ಲಿ 8.09 ಮೀಟರ್ ದೂರ ಜಿಗಿತದ ಪ್ರಯತ್ನಕ್ಕೆ ಅವರಿಗೆ ಮೂರನೇ ಸ್ಥಾನ ಒಲಿದಿತ್ತು.

ಅವರ ಮತ್ತು ಜೆಸ್ವಿನ್ ಆಲ್ಡ್ರಿನ್ ಪೈಪೋಟಿ ಇಲ್ಲಿ ಪುನರಾರಂಭವಾಗಲಿದೆ. ಈ ವರ್ಷದ ಆರಂಭದಲ್ಲಿ ಆಲ್ಡ್ರಿನ್ 8.42 ಮೀ. ಜಿಗಿಯುವ ಮೂಲಕ ಶ್ರೀಶಂಕರ್ ಹೆಸರಿನಲ್ಲಿದ್ದ ರಾಷ್ಟ್ರೀಯ ದಾಖಲೆಯನ್ನು ‘ಕಸಿದು’ಕೊಂಡಿದ್ದರು. ಆದರೆ ನಂತರದ ಸ್ಪರ್ಧೆಗಳಲ್ಲಿ ಅವರು ಸ್ವಲ್ಪ ಹಿನ್ನಡೆ ಕಂಡಿದ್ದು ಎರಡು ಬಾರಿ ಎಂಟು ಮೀಟರ್ ಒಳಗೆ ಜಿಗಿದಿದ್ದಾರೆ. ಒಮ್ಮೆ ಎಂಟು ಮೀ. ದಾಟಿದ್ದಾರೆ.

ಪುರುಷರ ವಿಭಾಗದಲ್ಲಿ ಪ್ರಮುಖ ಹೆಸರುಗಳೆಂದರೆ ಅಮ್ಲನ್ ಬೊರ್ಗೊಹೇನ್ (200 ಮೀ. ಓಟ), ತೇಜಸ್ವಿನ್ ಶಂಕರ್ (ಡೆಕಾಥ್ಲಾನ್), ತೇಜಿಂದರ್‌ಪಾಲ್ ಸಿಂಗ್ ತೂರ್ (ಷಾಟ್‌ಪಟ್), ಪ್ರವೀಣ್ ಚಿತ್ರವೇಲ್ ಮತ್ತು ಎಲ್ದೋಸ್ ಪಾಲ್ (ಟ್ರಿಪಲ್ ಜಂಪ್). ತೇಜಸ್ವಿನ್ 2022ರ ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ ಹೈಜಂಪ್‌ನಲ್ಲಿ ಕಂಚಿನ ಪದಕ ಗೆದ್ದರೂ, ಈಗ ಡೆಕಾಥ್ಲಾನ್‌ನಲ್ಲಿ ಪಾಲ್ಗೊಳ್ಳುತ್ತಿದ್ದಾರೆ.

ಮಹಿಳೆಯರ ವಿಭಾಗದಲ್ಲಿ ಹಿಮಾ ದಾಸ್ ಮತ್ತು ಸ್ಪ್ರಿಂಟರ್ ದ್ಯುತಿ ಚಾಂದ್ ಅವರು ಭಾಗವಹಿಸುತ್ತಿಲ್ಲ. 400 ಮೀ. ಓಟಗಾರ್ತಿ ಹಿಮಾ ಅವರು ಗಾಯದಿಂದ ಚೇತರಿಸಿಕೊಳ್ಳುತ್ತಿದ್ದರೆ, ದ್ಯುತಿ ಅವರು ಉದ್ದೀಪನ ಮದ್ದುಸೇವನೆಗಾಗಿ ಅಮಾನತು ಶಿಕ್ಷೆ ಅನುಭವಿಸುತ್ತಿದ್ದಾರೆ.

ಹೀಗಾಗಿ ಎಲ್ಲರ ಗಮನ ಹರ್ಡಲ್ಸ್ ಓಟಗಾರ್ತಿ ಜ್ಯೋತಿ ಯೆರ್ರಾಜಿ (100 ಮೀ. ಮತ್ತು 100 ಮೀ. ಹರ್ಡಲ್ಸ್), ದೂರ ಅಂತರದ ಓಟಗಾರ್ತಿ ಪಾರುಲ್ ಚೌಧರಿ (5,000 ಮೀ. ಮತ್ತು 3,000 ಮೀ. ಸ್ಟೀಪಲ್‌ಚೇಸ್), ಲಾಂಗ್ ಜಂಪರ್ ಶೈಲಿ ಸಿಂಗ್, ಜಾವೆಲಿನ್ ಎಸೆತಗಾರ್ತಿ ಅನ್ನುರಾಣಿ ಅವರ ಮೇಲಿದೆ.

ಮೊದಲ ದಿನ ನಾಲ್ಕು ಫೈನಲ್‌ಗಳು– ಪುರುಷರ ಮತ್ತು ಮಹಿಳೆಯರ 20 ಕಿ.ಮೀ. ನಡಿಗೆ, ಪುರುಷರ ಮತ್ತು ಮಹಿಳೆಯರ 10,000 ಮೀ. ರೇಸ್– ನಿಗದಿಯಾಗಿವೆ. ಸಂಜೆಯ ನಂತರ ಸ್ಪರ್ಧೆಗಳು ನಡೆಯುತ್ತಿಲ್ಲ. ಕಳಿಂಗ ಕ್ರೀಡಾಂಗಣದಲ್ಲಿ ಭಾನುವಾರದವರೆಗೆ ಅದೇ ವೇಳೆ ಇಂಟರ್ ಕಾಂಟಿನೆಂಟಲ್ ಕಪ್ ಫುಟ್‌ಬಾಲ್ ಟೂರ್ನಿ ಪಂದ್ಯಗಳು ನಡೆಯುವ ಕಾರಣ ಈ ನಿರ್ಧಾರಕ್ಕೆ ಬರಲಾಗಿದೆ.

ಪುರುಷರ 20 ಕಿ.ಮೀ. ರೇಸ್‌ವಾಕ್‌ನಲ್ಲಿ ಅನುಭವಿ ಸಂದೀಪ್ ಕುಮಾರ್ ಅವರು ರಾಷ್ಟ್ರೀಯ ದಾಖಲೆ ಹೊಂದಿರುವ ಆಕಾಶ್ ಸಿಂಗ್ ಗೈರಿನಲ್ಲಿ ಗೆಲ್ಲುವ ನೆಚ್ಚಿನ ಸ್ಪರ್ಧಿ ಎನಿಸಿದ್ದಾರೆ.

ಈ ಚಾಂಪಿಯನ್‌ಷಿಪ್, ಎಎಫ್‌ಐ ವೇಳಾಪಟ್ಟಿ ಪ್ರಕಾರ ಸರಿಯಾಗಿ ಒಂದು ತಿಂಗಳು ನಂತರ (ಜುಲೈ 15ರಿಂದ) ನಿಗದಿಯಾಗಿತ್ತು. ಆದರೆ ನಂತರ ಮೊದಲೇ ನಡೆಸಲು ನಿರ್ಧರಿಸಲಾಯಿತು.

ಈ ಬಾರಿ ಏಷ್ಯಾ ಒಲಿಂಪಿಕ್ ಕೌನ್ಸಿಲ್ ತನ್ನ ಸದಸ್ಯ ರಾಷ್ಟ್ರಗಳಿಗೆ, ಏಷ್ಯನ್ ಗೇಮ್ಸ್ ಆರಂಭಕ್ಕೆ 75 ದಿನ ಮೊದಲೇ ತಂಡಗಳ ಪಟ್ಟಿ ಕಳುಹಿಸಿಕೊಡುವಂತೆ ಕೇಳಿದೆ. ಆ ಗಡುವು ಜುಲೈ 15ಕ್ಕೆ ಅಂತ್ಯಗೊಳ್ಳುತ್ತದೆ.

ಏಷ್ಯನ್ ಗೇಮ್ಸ್‌ಗೆ ಹಿಮಾ ಇಲ್ಲ

ಭುವನೇಶ್ವರ (ಪಿಟಿಐ): ಕಳೆದ ಏಪ್ರಿಲ್‌ನಲ್ಲಿ ಮಂಡಿರಜ್ಜು ನೋವಿಗೆ ಒಳಗಾದ ಭಾರತದ ಸ್ಪ್ರಿಂಟರ್ ಹಿಮಾ ದಾಸ್ ಅವರು ಚೀನಾದಲ್ಲಿ ನಡೆಯಲಿರುವ ಏಷ್ಯನ್ ಕ್ರೀಡಾಕೂಟಕ್ಕೆ ಅಲಭ್ಯರಾಗಿದ್ದಾರೆ ಎಂದು ಭಾರತ ತಂಡದ ಚೀಫ್ ಕೋಚ್ ರಾಧಾಕೃಷ್ಣನ್ ನಾಯರ್ ಬುಧವಾರ ಇಲ್ಲಿ ತಿಳಿಸಿದರು.

23 ವರ್ಷದ ಹಿಮಾ 2018ರ ಜಕಾರ್ತಾ ಏಷ್ಯನ್ ಕ್ರೀಡಾಕೂಟ 400 ಮೀ. ಓಟದಲ್ಲಿ ಬೆಳ್ಳಿಯ ಪದಕ ಗೆದ್ದುಕೊಂಡಿದ್ದರು. ಅವರು ಚಿನ್ನ ಹಾಗೂ ರಜತ (ಕ್ರಮವಾಗಿ) ಗೆದ್ದ ಮಹಿಳೆಯರ 4x400 ಮೀ. ರಿಲೇ ಹಾಗೂ 4x400 ಮೀ. ಮಿಕ್ಸೆಡ್ ರಿಲೆ ತಂಡದಲ್ಲಿದ್ದರು.

ಬೆಂಗಳೂರಿನಲ್ಲಿ ಏ. 15ರಂದು ನಡೆದ ಇಂಡಿಯನ್ ಗ್ರ್ಯಾನ್‌ಪ್ರಿ 4 ಕೂಟದ ಒಂದು ದಿನ ಮೊದಲು ಮಂಡಿರಜ್ಜು ನೋವಿಗೆ ಒಳಗಾಗಿದ್ದರು.

...Continued from Page 02

Name	NEET Score	Ap. No.
Abhilash N S	567	230410113270
Siddana Gouda	566	230410227113
Ankush Shetty	566	230410170968
Jyothika R N	566	230410147706
Hemanth S Ganavee	566	230411164870
S Likitha Reddy	566	230410286367
Arun Ravi	565	230410238505
Nesara G	565	230410251235
Aniketana	565	230410088499
Vijaykumar S K	564	230410278034
Akash K S	564	230410216234
Parveen Fathima	563	230410397195
Sneha M	563	230410259528
Vaibhavi S	562	230320200854
Yashas S	562	230410073095
Apeksha K V	561	230410158939
Pavan Patel G B	561	230410186331
Kiranraj P D	560	230410891993
Prajwal Magadum	560	230410168710
Preetham R	559	230410116627
Akhilesh Y V	557	230410166835
Koushik B	557	230410240415
Kruthik Jain K N	557	230410160177
Dhanush N Murthy	557	230410172065
Hashmath Afreen	556	230410282639
Arya P R	556	23041036597
Dhanush G T	556	230410265944
M Veena P	556	230410230701
Ananya Madhukar	556	230410126298
Akshata T S	556	230410132125
Mallikarjuna M	555	230410153785
Prajwal B S	555	230410097230
Deepak Patil K N	555	230410154568
Srujana K S	554	230410285799
Anusri Sukale	554	230410248153
Neha G Patil	553	230410086136
Amrutsagar R K	553	230410129214
Nagashree A L	553	230410280770
Arjun G V	552	230410257373
Kowshik M P	552	230410337489
Manavi K Patel	552	230410356350
Yathish H L	551	230410310573
Sanjana H S	551	230411700626
Punya M Raj	551	230410226402
Soumya V K	551	230410173937
B R Mokshith M	551	230410275383
Vishal Y T	550	230410187974
Harshitha Reddy P	550	230410259393
Harshitha Gowda N U	550	230411283558
Vishesh S	549	230410202667
Pratheeksha C S	549	230411678831
Rachana M N	549	230410216617
Harshitha B C	549	230410246584
Nithyananda K	548	230410226340
Syed Amanullah	548	230410256291
Sinchana C	548	230410156520
Sahana	547	230410229959
Nitheesh R V	547	230410159356
Punith A P	547	230410229994
Pushkar L	546	230410088061
P Nithyashree	546	230410146385
Monica S V	546	230410172744
Puneeth Chandra	546	230410208664
Gandharv Sachin P	545	230410135338
Vivek R	545	230410079907
C M Abhishek Gowda	545	230410206474
Varsha R R	543	230410134074
Pushpalatha B	542	230410298867
Vidhyashree K	542	230410024452
Shwetha V	542	230410283876
Adnan Abbas	542	230410075377
Soumya Kumbar	542	230410231123
Arpitha K	541	230410330386
Hamsaveni C	541	230410207283
Deeksha R	541	230410131377
Bhavana M Angadi	541	230410162880
Srusti R	540	230410109036
Aditya Dhanush	539	230410143087
Sania M	539	230411266032
Geetha L	538	230410195744
Abhilash Itagi	538	230410141219
Chandini T R	538	230410172410
Vasudevamurthy G	538	230410174846
Keerthan P	537	230410247788
Bharath Patel	537	230410108433
Abhijnya S N	537	230410212736
Vanaja Biradar	537	230410176230
Mahima C S	536	230410536856
Vijay Kumar A	535	230410182960
Tushara C Shekar	535	230410354099
Kushal R	535	230410144630
K S Sakshi	534	230410229243
Basavaraj Ashok M	534	230410278338
Vijaydhawaja	534	230410198158
Spoorti Patil	534	230410126051
B Anusha	533	230410175792
Gagana H C	533	230410092840
Sathvik C Nadar	533	230410284065
Chinmay C M	532	230411562136

Ap. No. (Application Number)

PARISHRAMA NEET ACADEMY ಪರಿಶ್ರಮ ನೀಟ್ ಅಕಾಡೆಮಿ

ಇನ್ನೂ ಹಲವು ವಿದ್ಯಾರ್ಥಿಗಳು 500ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದಿದ್ದಾರೆ. ಸ್ಥಳಾವಕಾಶ ಇಲ್ಲದ ಕಾರಣ ಕಡಿಮೆ ಭಾವಚಿತ್ರಗಳನ್ನು ಇಲ್ಲಿ ತೋರಿಸಿದ್ದೇವೆ. ಹೆಚ್ಚಿನ ಮಾಹಿತಿಗಾಗಿ ನಮ್ಮ ವೆಬ್‌ಸೈಟ್‌ಗೆ ಭೇಟಿ ನೀಡಿ

www.parishramaneetacademy.com

Parishrama NEET Academy | parishramaneet

080-45912222 / 080-24413400 / 97314 04974

Name	NEET Score	Ap. No.
Pawan Kumar K	NEET SCORE-532	Ap. No. 230410199851
Mahantesh N D	NEET SCORE-530	Ap. No. 230410348361
Dhanush Kote M G	NEET SCORE-532	Ap. No. 230410312120
Khushi N V	NEET SCORE-532	Ap. No. 230410029517
H Vinay Kumar	NEET SCORE-532	Ap. No. 230410235641
K M Mounika	NEET SCORE-532	Ap. No. 230410098755
Bhoomika A	NEET SCORE-531	Ap. No. 230410155138
Varshini J	NEET SCORE-530	Ap. No. 230410310633
Mohammed T P	NEET SCORE-529	Ap. No. 230410204089
Suhas K H	NEET SCORE-529	Ap. No. 230410248936
Shrusthi R	NEET SCORE-529	Ap. No. 230410230558
R Anusha	NEET SCORE-529	Ap. No. 230410141794
Madhusudhan	NEET SCORE-529	Ap. No. 230410214635
Sneha	NEET SCORE-528	Ap. No. 230410196648
Rakshitha M	NEET SCORE-528	Ap. No. 230410326757
Shwetha S D	NEET SCORE-528	Ap. No. 230410276402
Faman M Taskeen	NEET SCORE-528	Ap. No. 230410097936
Manoj H Jadar	NEET SCORE-527	Ap. No. 230410281891
Darshan K H	NEET SCORE-527	Ap. No. 230410193192
Chithrashree S P	NEET SCORE-527	Ap. No. 230410207801
Shreya B	NEET SCORE-527	Ap. No. 230410194954
Reetu S Bakale	NEET SCORE-527	Ap. No. 230410255617
Kushal Gowda M	NEET SCORE-526	Ap. No. 23041037824
Shivaraj N G	NEET SCORE-526	Ap. No. 230410281869
Supritha R Mathad	NEET SCORE-526	Ap. No. 230410092873
Chandana V	NEET SCORE-525	Ap. No. 230410185874
Fayaz Hussain	NEET SCORE-525	Ap. No. 230410270408
Shashank P	NEET SCORE-525	Ap. No. 230410224790
Chinnu S G	NEET SCORE-525	Ap. No. 230410097724
Priya A Hallur	NEET SCORE-525	Ap. No. 230410152458
Nandeesh HB	NEET SCORE-525	Ap. No. 230410235283
V Suresh Gowda	NEET SCORE-524	Ap. No. 230410277534
Chirag H Gowda	NEET SCORE-524	Ap. No. 230410200331
Ahana B A	NEET SCORE-524	Ap. No. 230410080742
Sheetal Konnur	NEET SCORE-524	Ap. No. 230410289711
Sphurti S	NEET SCORE-524	Ap. No. 230410112750
Rakshitha A	NEET SCORE-524	Ap. No. 230410200960
Arpita Ashok Wali	NEET SCORE-523	Ap. No. 230410280879
Shashank P N	NEET SCORE-523	Ap. No. 230410286928
Vaishnavi Desai	NEET SCORE-523	Ap. No. 230410188809
Anusha M Upase	NEET SCORE-523	Ap. No. 230410160235
Aditya Jay Pillai	NEET SCORE-522	Ap. No. 230410102775
Anusha K	NEET SCORE-522	Ap. No. 230410028277
Sandeep S	NEET SCORE-522	Ap. No. 230410245982
Nishanth R	NEET SCORE-522	Ap. No. 230410234213
Harshitha S	NEET SCORE-522	Ap. No. 230410277284
Poorvi Patil	NEET SCORE-522	Ap. No. 230410184351
Varsha M S	NEET SCORE-521	Ap. No. 230410107108
Shreyas M M	NEET SCORE-521	Ap. No. 230410174002
Apoorva R Hadli	NEET SCORE-521	Ap. No. 230410321114
Champashree S	NEET SCORE-521	Ap. No. 230410293458
Sangamesh M Mali	NEET SCORE-521	Ap. No. 230410155247
Keerthana N	NEET SCORE-521	Ap. No. 230410113830
Mallikarjun V H	NEET SCORE-520	Ap. No. 230410301985
Anusha C K	NEET SCORE-520	Ap. No. 230410196650
Keerthana M	NEET SCORE-519	Ap. No. 230410109435
Prajwal C M	NEET SCORE-519	Ap. No. 230410229347
G Thanushree	NEET SCORE-519	Ap. No. 230410206232
Thoshith Raj S G	NEET SCORE-518	Ap. No. 230410332901
Aditya N	NEET SCORE-518	Ap. No. 230410304938
Sakshi A K	NEET SCORE-518	Ap. No. 230410195462
Aishani Shankar	NEET SCORE-518	Ap. No. 230410107002
Monisha M R	NEET SCORE-517	Ap. No. 230410171083
Vivekananda S	NEET SCORE-517	Ap. No. 230410178488
Anjana M Bellad	NEET SCORE-517	Ap. No. 230410253997
Rajashree S B	NEET SCORE-517	Ap. No. 230410237921
Vinutha K H	NEET SCORE-516	Ap. No. 230410145006
R Roshan	NEET SCORE-515	Ap. No. 2304010099013
Likhitha M	NEET SCORE-515	Ap. No. 230410119028
Nikhita S C	NEET SCORE-515	Ap. No. 230410234706
Vikas Patil	NEET SCORE-514	Ap. No. 230410147582
Manoj Dandin	NEET SCORE-514	Ap. No. 230410193686
Shruddha Pattar	NEET SCORE-514	Ap. No. 230410177749
Preksha K N	NEET SCORE-514	Ap. No. 230410099434
Chethan Kumar H P	NEET SCORE-513	Ap. No. 230410230147
Bhojanagouda A P	NEET SCORE-513	Ap. No. 230410117660
Sharanya D S	NEET SCORE-513	Ap. No. 230410061205
Pavan Kumar P	NEET SCORE-513	Ap. No. 230410244511
Abhishek D Kamble	NEET SCORE-513	Ap. No. 230410224600
Manoj Kumar	NEET SCORE-513	Ap. No. 230410152716
Rakshita Desai	NEET SCORE-513	Ap. No. 230410197503
Chandana M	NEET SCORE-512	Ap. No. 230410164398
Shivanand S B	NEET SCORE-511	Ap. No. 230410246844
Divya S	NEET SCORE-511	Ap. No. 230410155732
Keerthana M J	NEET SCORE-511	Ap. No. 230410177985
Maruthi M	NEET SCORE-511	Ap. No. 230410309740
Pradnya S K	NEET SCORE-511	Ap. No. 230410166117
Mahesh G M	NEET SCORE-511	Ap. No. 230410642781
Monish U	NEET SCORE-510	Ap. No. 230410262537
Akanksha R	NEET SCORE-510	Ap. No. 230410142570

Ap. No. (Application Number)

PARISHRAMA NEET ACADEMY ಪರಿಶ್ರಮ ನೀಟ್ ಅಕಾಡೆಮಿ

Our Esteemed Faculties

The Faculty is the most integral part of our system. They are the pillars on which our success rests.



ಇನ್ನೂ ಹಲವು ವಿದ್ಯಾರ್ಥಿಗಳು 500ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದಿದ್ದಾರೆ. ಸ್ಥಳಾವಕಾಶ ಇಲ್ಲದ ಕಾರಣ ಕಡಿಮೆ ಭಾವಚಿತ್ರಗಳನ್ನು ಇಲ್ಲಿ ತೋರಿಸಿದ್ದೇವೆ. ಹೆಚ್ಚಿನ ಮಾಹಿತಿಗಾಗಿ ನಮ್ಮ ವೆಬ್‌ಸೈಟ್‌ಗೆ ಭೇಟಿ ನೀಡಿ

Due to space constraint we are displaying limited photos of our rank holders. Please visit our website for more details.

www.parishramaneetacademy.com

Parishrama NEET Academy | parishramaneet

080-45912222 / 080-24413400 / 97314 04974